ವಿಜಯನಗರ ಕಾಲದಲ್ಲಿ ಮಹಿಳೆಯರ ಕೊಡುಗೆಗಳು

ಇತಿಹಾಸ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ

ಮಾರ್ಗದರ್ಶಕರು
ಶ್ರೀಮತಿ ಶೈಲಾನಾಗರಾಜ್
ಇತಿಹಾಸ ಉಪನ್ಯಾಸಕರು
ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು ವಾಣಿಜ್ಯ
ಪ್ರಥಮ ದರ್ಜೆ ಕಾಲೇಜು
ಮೈಸೂರು.

ನಿಬಂಧಕಾರರು
ಶ್ರೀಮತಿ ತ್ರಿವೇಣಿ
ಎಂ.ಫಿಲ್.ವಿದ್ಯಾರ್ಥಿನಿ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2008–2009

ವಿಜಯನಗರ ಕಾಲದಲ್ಲಿ ಮಹಿಳೆಯರ ಕೊಡುಗೆಗಳು

ಇತಿಹಾಸ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ ನಿಬಂಧ

ಮಾರ್ಗದರ್ಶಕರು
ಶ್ರೀಮತಿ ಶೈಲಾನಾಗರಾಜ್
ಇತಿಹಾಸ ಉಪನ್ಯಾಸಕರು
ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು ವಾಣಿಜ್ಯ
ಪ್ರಥಮ ದರ್ಜೆ ಕಾಲೇಜು
ಮೈಸೂರು.

ನಿಬಂಧಕಾರರು
ಶ್ರೀಮತಿ ತ್ರಿವೇಣಿ
ಎಂ.ಫಿಲ್.ವಿದ್ಯಾರ್ಥಿನಿ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)
2008–2009

ದೃಢೀಕರಣ ಪತ್ರ

ವಿಜಯನಗರ **ಕಾಲದಲ್ಲಿ ಮಹಿಳೆಯರ ಕೊಡುಗೆಗಳು** ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್. ಪದವಿಗಾಗಿ ಶ್ರೀಮತಿ ತ್ರಿವೇಣಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ, ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ :- ಮೈಸೂರು.

ದಿನಾಂಕ :- 20-09-09

ಶೈಲಾನಾಗರಾಜ್

(ಶ್ರೀಮತಿ ಶೈಲಾನಾಗರಾಜ್)
ಇತಿಹಾಸ ವಿಭಾಗ,
ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು
ವಾಣಿಜ್ಯ ಪ್ರಥಮ ದರ್ಜೆ ಕಾಲೇಜು,
ಮೈಸೂರು

ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2008-2009ನೇ ಸಾಲಿಗೆ ಇತಿಹಾಸ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **ವಿಜಯನಗರ ಕಾಲದಲ್ಲಿ ಮಹಿಳೆಯರ ಕೊಡುಗೆಗಳು** ವಿಷಯವನ್ನು ಆಯ್ಕೆ ಮಾಡಿಕೊಂಡು ಶ್ರೀಮತಿ ಶೈಲಾನಾಗರಾಜ್ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ

ದಿನಾಂಕ : 20/09/2009

(ಶ್ರೀಮತಿ ತ್ರಿವೇಣಿ)
ಸಂಶೋಧಕ, ಚರಿತ್ರೆ ವಿಭಾಗ
ಕರ್ನಾಟಕ ಸಂಘ (ರಿ), ಮಂಡ್ಯ.
ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

ವಿಜಯನಗರ ಕಾಲದಲ್ಲಿ ಮಹಿಳೆಯರ ಕೊಡುಗೆಗಳು

ವಿಷಯಾನುಕ್ರಮಣಿಕೆ

ಅಧ್ಯಾಯ -1

ಪೀಠಿಕೆ

1. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ:

ಸಾಮ್ರಾಜ್ಯ ಹಾಗೂ ರಾಜಧಾನಿಗಳೆರಡರಲ್ಲೂ ವಿಜಯನಗರದ ಹೆಸರು ಪ್ರತಿಧ್ವನಿತವಾಗಿದೆ. ಸಾಮ್ರಾಜ್ಯಗಳ ತವರಾಗಿ ದಕ್ಷಿಣ ಭಾರತವು ವಿಜಯನಗರದ ಮೂಲಕ ತನ್ನ ಇತಿಹಾಸವನ್ನು ವೈಭವೀಕರಿಸಿದೆ. ಅದೇ ರೀತಿಯಲ್ಲಿ ಭಾರತದ ಇತಿಹಾಸ ವೃತ್ತಾಂತವನ್ನು ಶ್ರೀಮಂತಗೊಳಿಸಿದೆ. ಸಾಂಪ್ರದಾಯಿಕವಾದ ವಿಜಯನಗರ ಸಾಮ್ರಾಜ್ಯವು ಮುಸ್ಲಿಂ ದಾಳಿಕೋರರ ವಿರುದ್ಧದ ಸವಾಲಾಗಿ ಹಿಂದೂಭಾರತ ಎಂಬುದಾಗಿ ನಿರ್ಮಿಸಲ್ಪಟ್ಟಿತು ಎಂಬ ಅಂಶವನ್ನು ಹಲವಾರು ವಿದ್ವಾಂಸರು ಪ್ರಶ್ನಿಸಿದ್ದಾರೆ. ಈ ವಿಜಯನಗರ ಸಾಮ್ರಾಜ್ಯವನ್ನು ಹಿಂದೂ ಧರ್ಮಸಾಮ್ರಾಜ್ಯವೆಂದು ಪರಿಗಣಿಸಲಾಗದು. ಆದರೆ ಪರ್ಯಾಯ ದ್ವೀಪವಾದ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ನಿರ್ದಿಷ್ಟವಾದ ಐಹಿಕ ಸನ್ನಿವೇಶಗಳಿಂದ ಉಗಮಿಸಿದ ಲೌಕಿಕಸಾಮ್ರಾಜ್ಯ ಎಂದು ಪರಿಗಣಿಸಬಹುದು.

ದಕ್ಷಿಣ ಭಾರತ ಇತಿಹಾಸದಲ್ಲಿ ಅತ್ಯಂತ ರಮಣೀಯ ಯುಗಗಳಲ್ಲಿ ವಿಜಯನಗರ ಇತಿಹಾಸವು ಒಂದಾಗಿದೆ. ಜ್ಞಸಾಮ್ರಾಜ್ಯವನ್ನು ಖ್ಯಾತಿವೆತ್ತ ಸಂಗಮ ಸಹೋದರರಾದ ಹರಿಹರ ಮತ್ತು ಬುಕ್ಕರು ತುಂಗಭದ್ರಾನದಿಯ ದಂಡೆಯ ಮೇಲೆ ಕ್ರಿ.ಶ.1336ರಲ್ಲಿ ಸ್ಥಾಪಿಸಿದರು ಹಾಗೂ ಈ ಸಾಮ್ರಾಜ್ಯವನ್ನು ನಾಲ್ಕು ವಿವಿಧ ಸಂತತಿಗಳಾದ ಸಂಗಮ, ಸಾಳುವ, ತುಳುವ ಮತ್ತು ಅರವೀಡು ಆಳಿದವು. ದಕ್ಷಿಣ ಭಾರತದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ವಿಜಯನಗರ ಕಾಲವು ಒಂದು ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಈ ದ್ವೀಪಕಲ್ಪ ಪ್ರದೇಶವನ್ನೊಳಗೊಂಡಂತೆ ಒಂದು ರಾಜಕೀಯ ನೆಲೆಯನ್ನು ಸೃಷ್ಟಿಸಲಾಯಿತು. ವಿಜಯನಗರ ಆಡಳಿತಗಾರರು ಒಂದು ಬಲವಾದ ಆರ್ಥಿಕ ತಳಹದಿಯನ್ನು ಹಾಕಿಕೊಟ್ಟರು ಹಾಗೂ ಕಾನೂನು ಮತ್ತು ಸುವ್ಯವಸ್ಥೆಯ ಒಂದು ಸಮರ್ಥ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಸಾಮಾಜಿಕ ಇತಿಹಾಸದ ದೃಷ್ಟಿಕೋನದಿಂದ ಇದು ಸಮಾಜ ಜೀವನದ ಹಲವಾರು ರೂಪಗಳನ್ನು ಪ್ರದರ್ಶಿಸುತ್ತದೆ. ಹಿಂದೂ ಧರ್ಮವನ್ನು ಅದರ ಎಲ್ಲಾ ಪ್ರವೃತ್ತಿಗಳಲ್ಲೂ ರಕ್ಷಿಸಿ, ಪೋಷಿಸಿ, ಉತ್ತೇಜಿಸುವ ಮಹೋನ್ನತ ಆದರ್ಶದಿಂದ ಈ ಸಾಮ್ರಾಜ್ಯವನ್ನು ನಿರ್ಮಿಸಲಾಯಿತು. ಹಿಂದೂ ಧರ್ಮದ ಪುನರುಜ್ಜೀವನವು ದಕ್ಷಿಣ ಭಾರತದ ಸಾಮಾಜಿಕ ಗುಂಪುಗಳ ಮೇಲೆ ಪರಿಣಾಮವನ್ನು ಬೀರಿತ್ತು. ಸಮಾಜದಲ್ಲಿ ಧರ್ಮ ಹಾಗೂ ಧರ್ಮ ವಿರುದ್ಧದ ಎರಡೂ ಚಳುವಳಿಗಳನ್ನು ನಾವು ಕಾಣುತ್ತೇವೆ. ಮುಸ್ಲಿಮರು ಸಾಂಸ್ಕೃತಿಕ ಶಕ್ತಿಯಾಗಿ ದಕ್ಷಿಣ ಭಾರತಕ್ಕೆ ಬಂದದ್ದೂ ಒಂದು ಪ್ರಮುಖವಾದ ಬೆಳವಣಿಗೆಯಾಗಿತ್ತು. 1498ರಲ್ಲಿ

ಪೋರ್ಚುಗೀಸರ ಆಗಮನದೊಂದಿಗೆ ಕ್ರಿಶ್ಚಿಯನ್ ಧರ್ಮವು ಸಾಂಸ್ಕೃತಿಕ ಶಕ್ತಿಯಾಗಿ ದಕ್ಷಿಣ ಭಾರತದ ಹಲವಾರು ಭಾಗಗಳಲ್ಲಿ ಕಾಣಿಸಿಕೊಂಡಿತು. ಈ ಎಲ್ಲಾ ಬೆಳವಣಿಗೆಗಳು ದಕ್ಷಿಣ ಭಾರತದ ಸಮಾಜ ನಿರ್ಮಾಣದ ಮೇಲೆ ಪ್ರಭಾವವನ್ನು ಬೀರಿದವು. ಇವುಗಳ ಪ್ರಭಾವದಿಂದ ಮಹಿಳೆಯರೇನೂ ಹೊರತಾಗಿರಲಿಲ್ಲ. ಈ ಕಾಲದ ಸಾಮಾಜಿಕ ಸಾಂಸ್ಕೃತಿಕ ಬೆಳವಣಿಗೆಗೆ ಮಹಿಳೆಯರ ಕೊಡುಗೆಗಳು ಬಹಳ ಅಸಮಾನ್ಯವಾಗಿದ್ದವು. ಇವರು ಜೀವನದ ವಿವಿಧ ರಂಗಗಳಲ್ಲಿ ಪ್ರಮುಖವಾದ ಸ್ಥಾನವನ್ನು ವಹಿಸಿದರು. ಒಂದು ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನವು ಅದರ ಸಂಸ್ಕೃತಿಯ ಪ್ರಬುದ್ಧತೆ ಮತ್ತು ನಾಗರೀಕತೆಯ ವೈಶಿಷ್ಟತೆಯ ಸೃಷ್ಟಿ ಕುರುಹಾಗಿರುತ್ತದೆಂದು ಪರಿಗಣಿಸಲಾಗುತ್ತದೆ. ಸಾಮಾನ್ಯವಾಗಿ ಭಾರತೀಯ ಸಂಪ್ರದಾಯವು ಸ್ತ್ರೀತನವನ್ನು ಗೌರವಿಸಿದೆ. ಪ್ರೊ. ಮಾರ್ಗರೇಟ್ ಮ್ಯಾಕ್‌ನಿಕಲ್ ಹೇಳುತ್ತಾರೆ, *"ಶಾಂತಿ ಮತ್ತು ಆನಂದದಿಂದ ಕೂಡಿದ ಆ ಕಾಲದಲ್ಲಿ ಮಹಿಳೆಯರನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಬಹುದು. ಅವಳು ಒಂದು ಪವಿತ್ರ ಕಮಲ. ಚಿತ್ರದಲ್ಲಿರುವಂತೆ ಸೌಂದರ್ಯವತಿ, ಮಾಟಗಾತಿಯೆಂದು ಕರೆಯಲ್ಪಡುವವಳೂ ಇವಳೇ"* ಕೌಟಿಲ್ಯನ ಪ್ರಕಾರ "ಸ್ತ್ರೀಯರು ಗೌರವಿಸಲ್ಪಡುವ ಸೀಮೆಯಲ್ಲಿ ದೇವತೆಗಳು ಸುತ್ತಾಡುತ್ತಾರೆ" ಕೌಟಿಲ್ಯನೂ ಕೂಡ ತನ್ನ ರಾಜ್ಯಕಾನೂನಿನಲ್ಲಿ ಮಹಿಳೆಯರ ರಕ್ಷಣೆಯು ಒಂದು ಪ್ರಮುಖವಾದ ಅಂಶ ಎಂದು ಪರಿಗಣಿಸಿದ್ದಾನೆ. ಮನುವಿನ ಪ್ರಕಾರ ಎಲ್ಲಿ ಮಹಿಳೆಯರನ್ನು ಗೌರವದಿಂದ ಆದರಿಸಲಾಗುವುದೋ ಅಲ್ಲಿ ದೇವರು ಸಂತೃಪ್ತಿಗೊಳ್ಳುತ್ತಾನೆ" ಮಹಿಳೆಯರು ಸಂಕಷ್ಟಕ್ಕೊಳಗಾದ ಕುಟುಂಬವು ವಿನಾಶಹೊಂದುತ್ತದೆ. ಅವರನ್ನು ಗೌರವಿಸುವುದರಿಂದ ಕುಟುಂಬಕ್ಕೆ ಸುಖ ಸಂಪತ್ತು ಲಭಿಸುತ್ತದೆ. ಮನು ಹೇಳುವುದೇನೆಂದರೆ ಈ ಇಳೆಯ ಮೇಲೆ ಮಹಿಳೆಯರನ್ನು ರಕ್ಷಿಸಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದ ವಿಜಯನಗರ ಕಾಲದ ಮಹಿಳೆಯರ ಸ್ಥಾನಮಾನವನ್ನು ವ್ಯಾಪಕವಾಗಿ ಅಭ್ಯಸಿಸುವುದು ಕೇವಲ ಕುತೂಹಲಕಾರಿಯಾಗಿರುವುದಲ್ಲದೆ ಬಹಳ ಮಾಹಿತಿಯನ್ನೂ ಪಡೆಯಲು ಸಾಧ್ಯವಿದೆ. ವಿಜಯನಗರ ಇತಿಹಾಸಕಾರರಾದ ಸಾಲತೊರೆ, ಬಿ.ಎ., ಮಹಾಲಿಂಗಂ ಟಿ.ವಿ. ಮತ್ತು ವೆಂಕಟರಮಣಯ್ಯ ಇವರುಗಳು ವಿಜಯನಗರ ಕಾಲದಲ್ಲಿ ಮಹಿಳೆಯರ ಪಾತ್ರದ ಬಗ್ಗೆ ಬರೆಯುವ ಪ್ರಯತ್ನ ಮಾಡಿರುವುದಾದರೂ ವಿಜಯನಗರ ಕಾಲದ ಮಹಿಳೆಯರ ಚಿತ್ರಣವು ಬಹಳ ವಿವರಣಾತ್ಮಕವೂ ಹಾಗೂ ವರ್ಣನಾತ್ಮಕವೂ ಆಗಿದೆ. ಆದ್ದರಿಂದ ವಿದೇಶೀ ಬರಹಗಳು ಸಮಕಾಲೀನ ಸಾಹಿತ್ಯ ಮತ್ತು ಶಾಸನಗಳನ್ನಾಧರಿಸಿದ ವಿಜಯನಗರ ಕಾಲದ ಮಹಿಳೆಯರ ಪಾತ್ರದ ಆಳವಾದ ಅಧ್ಯಯನವು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಒಂದು ಪ್ರಯತ್ನವಾಗಿದೆ.

ಇದಕ್ಕೂ ಹೆಚ್ಚಿನದಾಗಿ ಸಾಂಸ್ಕೃತಿಕ ಸಂಪ್ರದಾಯವನ್ನು ಕಾಪಾಡುವಲ್ಲಿ ಹಾಗೂ ಸಾಮಾಜಿಕ ಸ್ಥಿರತೆಯನ್ನು ಸ್ಥಾಪಿಸುವಲ್ಲಿ ಮಹಿಳೆಯರ ಪಾತ್ರವು ಅಮೋಘವಾಗಿದೆ. ಸಮಾಜದ ಮೂಲ ಕೇಂದ್ರವಾಗಿದ್ದ ಇವರು ಕುಟುಂಬ ಜೀವನದ ಆಧಾರವಾಗಿದ್ದರು. ಲಲಿತ ಕಲೆಗಳಾದ ಸಂಗೀತ, ನೃತ್ಯ, ಸಾಹಿತ್ಯ, ಜಾನಪದ ಕಲೆಗಳಲ್ಲಿನ ಎಲ್ಲಾ ರೀತಿಯ ಗಹನವಾದ,

ಶ್ರೇಷ್ಠವಾದ ಮತ್ತು ಸುಂದರವಾದ ಆಲೋಚನೆಗಳು ಮಹಿಳೆಯರ ಮೂಲಕವೇ ಬಂದುವು. ಆದ್ದರಿಂದ ಇವರ ಬಗ್ಗೆ ವಿಶಾಲ ಅಧ್ಯಯನದ ಅವಶ್ಯಕತೆಯಿದೆ.

ಈ ಅಧ್ಯಯನದ ಪ್ರಮುಖ ಉದ್ದೇಶವು ವಿಜಯನಗರ ಕಾಲದಲ್ಲಿ ಮಹಿಳೆಯರ ಕೊಡುಗೆಗಳನ್ನು ಪರಿಶೀಲಿಸುವುದಾಗಿದೆ. ಭಾರತದ ಇತರ ಪ್ರಾಂತ್ಯಗಳಿಗೆ ವಿಜಯನಗರದ ಮಹಿಳೆಯರ ಸ್ಥಾನವನ್ನು ಹೋಲಿಸಿ ನೋಡಿದಾಗ ನಿಜವಾಗಲೂ ಬಹಳ ವಿಶಿಷ್ಟವಾಗಿ ಕಂಡುಬರುತ್ತದೆ. ಆಡಳಿತಗಾರರಾಗಿ, ಕವಿಯತ್ರಿಯಾಗಿ, ಸಾಹಿತ್ಯಶ್ರೇಷ್ಠರಾಗಿ, ಕುಸ್ತಿಪಟುಗಳಾಗಿ, ಯೋಧರಾಗಿ, ಧರ್ಮಪ್ರವರ್ತಕರಾಗಿ ಹಾಗೂ ಕಲೆ, ವಾಸ್ತುಶಿಲ್ಪ, ವಿದ್ಯಾಭ್ಯಾಸ, ಸಂಗೀತ ಮತ್ತು ನೃತ್ಯದ ಆರಾಧಕರಾಗಿ ಮಹಿಳೆಯರ ಪಾತ್ರವನ್ನು ಇದು ಪರಿಶೀಲಿಸುತ್ತದೆ.

2. ಅಧ್ಯಾಯ ವಿಂಗಡಣೆಗಳು:

ಈ ಪ್ರಸ್ತುತ ಅಧ್ಯಯನವನ್ನು ಐದು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಮೊದಲ ಅಧ್ಯಾಯವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗವು ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿಯನ್ನು ವಿವರಿಸುತ್ತದೆ. ಎರಡನೇ ಭಾಗವು ಅಧ್ಯಯನದ ಅಧ್ಯಾಯ ವಿಂಗಡಣೆಗಳನ್ನು ಚರ್ಚಿಸುತ್ತದೆ. ಮೂರನೇ ಭಾಗವು ಈ ಅಧ್ಯಯನವು ಮುಖ್ಯವಾಗಿ ಆಧರಿಸಿರುವ ಆಧಾರಗಳ ಸಮೀಕ್ಷೆಯ ಬಗ್ಗೆ ವಿವರಿಸುತ್ತದೆ.ಮೂರನೇ ಅಧ್ಯಾಯವು ಮಹಿಳೆಯರನ್ನು ದೇವಾಲಯಗಳು, ಚಿತ್ರಗಳು, ಬ್ರಾಹ್ಮಣರು, ಜಂಗಮರು, ಶಿಕ್ಷಣ ಸಂಸ್ಥೆಗಳು ಮತ್ತು ನಾಗರೀಕರಿಗೆ ಉಪಯುಕ್ತವಾದ ಇತರೆ ಕಾರ್ಯಗಳಿಗೆ ನೆರವನ್ನು ನೀಡಿದ ದಾನಿಗಳನ್ನಾಗಿ ವಿವರಿಸುತ್ತದೆ.

ಎರಡನೆಯ ಅಧ್ಯಾಯವನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಒಂದನೇ ಭಾಗವು ರಾಜಮನೆತನದ ಮಹಿಳೆಯರು ದಾನಿಗಳಾಗಿದ್ದುದರ ಬಗ್ಗೆ ವಿವರಣೆಯನ್ನು ನೀಡುತ್ತದೆ. ಎರಡನೇ ಭಾಗವು ಸಾಮಾನ್ಯ ಮಹಿಳೆಯರು ದಾನಿಗಳಾಗಿದ್ದುದರ ಬಗ್ಗೆ ವಿವರಣೆ ನೀಡುತ್ತದೆ. ಮೂರನೆಯ ಭಾಗವು ಕುಟುಂಬದ ಸೌಖ್ಯಕ್ಕಾಗಿ ದಾನ ಮಾಡಲಾದ ದಾನಿಗಳ ಬಗ್ಗೆ ಹೇಳುತ್ತದೆ. ಹಾಗೂ ನಾಲ್ಕನೇ ಭಾಗವು ಅವರ ಹೆಣ್ಣು ಮಕ್ಕಳು ಮತ್ತು ಸಹೋದರಿಯರ ಒಳಿತಿಗಾಗಿ ಮಾಡಿದ ದಾನದ ಬಗ್ಗೆ ಪ್ರಸ್ತಾಪವನ್ನು ಮಾಡುತ್ತದೆ. ದಾನಿಗಳು ತಮ್ಮ ಹಲವಾರು ಧಾರ್ಮಿಕ ಉದ್ದೇಶಗಳಿಂದ ದಾನವನ್ನು ನೀಡುತ್ತಿದ್ದರು.

ಮೂರನೆಯ ಅಧ್ಯಾಯವು ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಈ ಅಧ್ಯಾಯವನ್ನು ಹದಿಮೂರು ವಿಭಾಗಗಳಾಗಿ ವಿಂಗಡಿಸಲಾಗಿದ್ದು, ಒಂದನೇ ಭಾಗವು ಶಿಕ್ಷಣದ ಬಗ್ಗೆ ಹೇಳುತ್ತದೆ. ಎರಡನೇ

ಭಾಗವು ಮಹಿಳೆಯರು ಸಂಸ್ಕೃತ ಮತ್ತು ತೆಲಗು ಸಾಹಿತ್ಯಕ್ಕೆ ನೀಡಿರುವ ಅಮೋಘ ಕೊಡುಗೆಯನ್ನು ಒಳಗೊಂಡಂತೆ ಸಾಹಿತ್ಯದ ಪ್ರಸ್ತಾಪವನ್ನು ಮಾಡುತ್ತದೆ. ಮೂರನೇ ಭಾಗವು ಧರ್ಮವನ್ನೊಳಗೊಂಡಿದೆ. ನಾಲ್ಕನೆಯ ಭಾಗವು ದೇವಸ್ಥಾನ ಮತ್ತು ಮಹಿಳೆಯರ ನಡುವಿನ ಸಂಬಂಧವನ್ನು ವಿವರಿಸುತ್ತದೆ. ದೇವಾಲಯಗಳು ಬಹಳಷ್ಟು ಸಂಖ್ಯೆಯ ಮಹಿಳೆಯರನ್ನು ನೇಮಿಸಿಕೊಂಡಿತ್ತು. ಇವರು ನರ್ತಕಿಯರಾಗಿ, ಗಾಯಕಿಯರಾಗಿ, ಸಂಗೀತಗಾರರಾಗಿ ಮತ್ತು ಕೆಳದರ್ಜೆಯ ಸೇವಕರಾಗಿ ಅನೇಕ ಹಂತಗಳಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿದರು. ಐದನೆಯ ಭಾಗವು ದೇವದಾಸಿ ಪದ್ಧತಿಯ ಬಗ್ಗೆ ವಿವರಣೆಯನ್ನು ನೀಡುತ್ತದೆ. ವಿಮರ್ಶೆಯಡಿಯಲ್ಲಿರುವ ಅವರ ಕಾಲದಲ್ಲಿ ದೇವದಾಸಿ ಪದ್ಧತಿಯು ಸಾಕಷ್ಟು ಗಣನೀಯ ಖ್ಯಾತಿಯನ್ನು ಗಳಿಸಿತ್ತು. ದೇವದಾಸಿಯಾಗಿ ಮಹಿಳೆಯರ ಸ್ಥಾನಮಾನವು ಬಹಳ ಗೌರವಯುತವಾಗಿತ್ತು. ಆರನೆಯ ಭಾಗವು ಮಹಾನವಮಿ, ನವರಾತ್ರಿ, ಹೋಳಿ, ರಥೋತ್ಸವ ಮತ್ತು ಸಿಡಿ ಆಡುವ ಹಬ್ಬಗಳ ಬಗ್ಗೆ ಚರ್ಚೆಯನ್ನು ಮಾಡುತ್ತದೆ. ಏಳನೆಯ ಭಾಗವು ವಿವಾಹದ ಬಗ್ಗೆ ವಿವರಣೆಯನ್ನು ನೀಡುತ್ತದೆ. ನಾಗರೀಕ ಪ್ರಪಂಚದ ಸಾಮಾಜಿಕ ಸಂಸ್ಥೆಗಳಲ್ಲಿ ಹಿಂದೂ ವಿವಾಹ ಸಂಸ್ಥೆಯ ಒಂದು ಪ್ರಮುಖವಾದ ಸ್ಥಾನವನ್ನು ಅಕ್ರಮಿಸಿಕೊಂಡಿದೆ. ಎಂಟನೆಯ ಭಾಗವು ವರದಕ್ಷಿಣೆಯ ಅಸ್ತಿತ್ವದ ಬಗ್ಗೆ ಪ್ರಸ್ತಾಪ ಮಾಡುತ್ತದೆ. ಒಂಬತ್ತನೆಯ ಭಾಗವು ಸತಿ ಪದ್ಧತಿಯ ಬಗ್ಗೆ ವಿವರಣೆಯನ್ನು ನೀಡುತ್ತದೆ. ಸಮಕಾಲೀನ ಸಾಹಿತ್ಯಿಕ ಹಾಗೂ ಶಾಸನ ದಾಖಲೆಗಳು ಸತಿಪದ್ಧತಿಯು ಅಸ್ತಿತ್ವದಲ್ಲಿದ್ದುದರ ಬಗ್ಗೆ ಸಾಕ್ಷಿಯನ್ನು ನೀಡುತ್ತವೆ. ಹತ್ತನೆಯ ಭಾಗವು ವೇಶ್ಯಾವಾಟಿಕೆ ಸಂಸ್ಥೆಯ ಬಗ್ಗೆ ವಿವರಣೆಯನ್ನು ನೀಡುತ್ತದೆ. ಸಮಾಜದಲ್ಲಿ ವೇಶ್ಯೆಯರಿಗೆ ಹೆಚ್ಚು ಗೌರವಾದರಗಳಿದ್ದವು. ಯಾವುದೇ ವ್ಯಕ್ತಿಯೊಬ್ಬನು ನಿಸ್ಸಂಕೋಚದಿಂದ ಇವರ ಮನೆಗಳಿಗೆ ಹೋಗಬಹುದಿತ್ತು. ಹನ್ನೊಂದನೇ ಭಾಗವು ಅಂತಃಪುರದ ಬಗ್ಗೆ ಪ್ರಸ್ತಾಪವನ್ನು ಮಾಡುತ್ತದೆ. ಹನ್ನೆರಡನೇ ಭಾಗವು ವಾರಾಂಗನೆಯರ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಹದಿಮೂರನೇ ಭಾಗವು ಗುಲಾಮಗಿರಿಯ ಅಸ್ತಿತ್ವದ ಬಗ್ಗೆ ಉಲ್ಲೇಖವನ್ನು ಮಾಡುತ್ತದೆ. ಹದಿನಾಲ್ಕನೆಯ ಆಧ್ಯಾಯವು ನೃತ್ಯದ ಬಗ್ಗೆ ವರ್ಣನೆಯನ್ನು ನೀಡುತ್ತದೆ.

3. ಮೂಲಾಧಾರಗಳ ಸಮೀಕ್ಷೆ:

ವಿಜಯನಗರ ಇತಿಹಾಸದ ಆಳವಾದ ಅಧ್ಯಯನಕ್ಕೆ ಹಲವಾರು ಬಗೆಯ ಮಾಹಿತಿಗಳ ಆಧಾರಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿರಬೇಕು ಹಾಗೂ ಇವುಗಳ ಸಮರ್ಪಕ ಪರಿಶೀಲನೆಯು ನಡೆಯಬೇಕು. ಕರ್ನಾಟಕ ಹಾಗೂ ಅದರ ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ ಇತ್ಯಾದಿಗಳಲ್ಲಿ ಹರಡಿಕೊಂಡಿರುವ ಸಂಪದ್ಭರಿತವಾದ ಆಧಾರಗಳಿಂದ ಇತಿಹಾಸದ ಮಾಹಿತಿಗಳನ್ನು ಬಹಳ ಚಾಕಚಕ್ಯತೆಯಿಂದ ಮತ್ತು ತಾಳ್ಮೆಯಿಂದ ಸಂಗ್ರಹಿಸಬೇಕು. ಇತಿಹಾಸವು ಮನುಷ್ಯನ ಹಿಂದಿನ ಆಲೋಚನೆಗಳು ಕಾರ್ಯಗಳು, ಕೆಲಸಗಳು ಮತ್ತು ಘಟನೆಗಳ ಒಂದು ದಾಖಲೆಯಾಗಿದೆ, ಇತಿಹಾಸವು ಆಧಾರಗಳನ್ನಾಧರಿಸಿದೆ. ಆಧಾರಗಳಿಲ್ಲದೆ ಹಿಂದಿನ ಇತಿಹಾಸವನ್ನು ಪುನರ್‌ನಿರ್ಮಾಣ ಮಾಡುವುದ ಬಲು ಕಷ್ಟಸಾಧ್ಯವಾದ ಮಾತು.

ಎ. ಪುರಾತತ್ವ ಆಧಾರಗಳು:

ಶಾಸನಗಳ ಸಮೃದ್ಧತೆಯಲ್ಲಿ ಭಾರತವು ಬಹಳ ಶ್ರೀಮಂತವಾಗಿದೆ. ಹಾಗೂ ವಿಶಾಲವಾದ ಶಾಸನ ಸಂಗ್ರಹವು ಪ್ರಾಚೀನ ಇತಿಹಾಸದ ಪುನರ್‌ನಿರ್ಮಾಣಕ್ಕೆ ನಿರ್ಧಿಷ್ಟವಾದ ಆಧಾರವಾಗಿದೆ.[1] ಶಾಸನ ಶಾಸ್ತ್ರವು ಶಾಸನಗಳ ಬಗ್ಗೆ ಅಧ್ಯಯನ ಮಾಡುತ್ತದೆ. ಶಾಸನಗಳು ಆಧಾರ ಸಂಗ್ರಹದ ಪ್ರಮುಖ ಅಂಗವಾಗಿವೆ. ಮೊದಲು ಈ ಶಾಸನಗಳನ್ನು ಹೊರಡಿಸುತ್ತಿದ್ದುದರ ಮೂಲ ಉದ್ದೇಶವು ನಮಗೆ ಐತಿಹಾಸಿಕ ಮಾಹಿತಿಯನ್ನು ಒದಗಿಸುವುದಾಗಿರಲಿಲ್ಲ ಎಂಬ ವಿಷಯವನ್ನು ಒಪ್ಪಿಕೊಳ್ಳಬೇಕು. ರಾಜರು ಅವರ ಮಂತ್ರಿಗಳು ಸೇನಾದಂಡನಾಯಕರು ಆಸ್ಥಾನಿಕರು ಅಥವಾ ಖಾಸಗೀ ವ್ಯಕ್ತಿಗಳು ದೇವಸ್ಥಾನಗಳಿಗೆ ಅಥವಾ ಅಗ್ರಹಾರಗಳಿಗೆ ಬ್ರಾಹ್ಮಣರಿಗೆ ಕಾಣಿಕೆಗಳನ್ನು ನೀಡುತ್ತಿದ್ದುದರ ಬಗ್ಗೆ, ಭೂಮಿಯನ್ನು ಅಥವಾ ಹಣವನ್ನು ನೀಡಿದುದರ ಬಗ್ಗೆ ಈ ಶಾಸನಗಳು ತಿಳಿಸುತ್ತವೆ. ಈ ಕೆಲವು ಶಾಸನಗಳು ದೇವಾಲಯಗಳ ನಿರ್ಮಾಣ ಅಥವಾ ದೇವಾಲಯಗಳಿಗೆ ಮಾಡಲಾದ ದುರಸ್ಥಿಯನ್ನು ದಾಖಲಿಸುತ್ತವೆ. ಹಾಗೂ ಮೂರ್ತಿಗಳನ್ನು ಪ್ರತಿಷ್ಠಾಪಿಸುವುದು ಮತ್ತು ದೇವಾಲಯದಲ್ಲಿ ದಿನನಿತ್ಯದ ಆರಾಧನೆಯನ್ನು ಕೈಗೊಳ್ಳುವುದರ ಬಗ್ಗೆ ದಾಖಲೆಯನ್ನು ಒದಗಿಸುತ್ತವೆ. ಈ ಶಾಸನಗಳು ಸಾಮಾನ್ಯವಾಗಿ ದಾನ ನೀಡುತ್ತಿದ್ದ ಸಂದರ್ಭದಲ್ಲಿ ಸ್ಥಳದ ಮೇಲೆ ಅಧಿಕಾರವನ್ನು ಚಲಾಯಿಸುತ್ತಿದ್ದ ರಾಜ ಅಥವಾ ಅವನ ಸೇನಾಧಿಪತಿಯ ಹೆಸರನ್ನು ಉಲ್ಲೇಖಿಸುತ್ತವೆ. ಜೊತೆಗೆ ದಾನವನ್ನು ನೀಡಲಾದ ನಿರ್ದಿಷ್ಟ ದಿನಾಂಕದ ಬಗ್ಗೆ ಸಂಪೂರ್ಣವಾದ ಮಾಹಿತಿಗಳನ್ನು ನೀಡುತ್ತವೆ. ಈ ಕೊಡುಗೆಗಳು ಹಾಗೂ ದಾನಗಳ ಪರಿಚಯಿಕ ಭಾಗವನ್ನು ಪ್ರಶಸ್ತಿಯೆಂದು ಕರೆಯಲಾಗಿದ್ದು ಸಾಮಾನ್ಯವಾಗಿ ದಾನಿಗಳು ರಾಜರಾಗಿದ್ದರೋ, ಮಂತ್ರಿಗಳಾಗಿದ್ದರೋ, ಸೇನಾ ದಂಡನಾಯಕರಾಗಿದ್ದರೆಂಬುದರ ದಾನಿಗಳ ಪೂರ್ವ ವೃತ್ತಾಂತವನ್ನು ಇದು ಹೊಂದಿದೆ. ಈ ಶಾಸನಗಳು ರಾಜರ ವಂಶಾನುಕ್ರಮ ಹಾಗೂ ಕಾಲಾನುಕ್ರಮದ ಬಗ್ಗೆ ತಿಳಿಯಲು ನಮಗೆ ಬಹಳ ಸಹಾಯಕವಾಗಿವೆ.

ವಿಜಯನಗರ ಇತಿಹಾಸದ ಮೇಲಿನ ಶಾಸನಗಳು ಸಾಮಾನ್ಯವಾಗಿ ತಾಮ್ರದ ಹಾಳೆಗಳ ಮೇಲೆ ಕೆತ್ತಲಾಗಿದ್ದು ಹಾಗೂ ಸಂಸ್ಕೃತ, ತಮಿಳು, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ರಚಿಸಲಾಗಿದೆ. ಈ ಶಾಸನಗಳು ಆ ಕಾಲದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳ ಬಗ್ಗೆ ವಿವರಣೆಯನ್ನು ನೀಡುತ್ತವೆ; ಆಳ್ವಿಕೆ ನಡೆಸಿದ ಆಯಾಯ ಸಂತತಿಗಳ ಶಾಸನಗಳು ಅತ್ಯಂತ ಪ್ರಮುಖ ಆಧಾರವಾಗಿವೆ. ಶಾಸನಗಳು ಸಾಮಾಜಿಕ ಸ್ಥಿತಿಗತಿಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಜಾತಿ ಮತ್ತು ಉಪಜಾತಿಗಳಾಗಿ ಸಮಾಜದ ವಿಂಗಡಣೆ, ಜನರ ಕಸುಬು, ಶಿಕ್ಷಣ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ಪ್ರಸಿದ್ಧ ಹಬ್ಬಗಳು, ಧಾರ್ಮಿಕ ಆಚರಣೆಗಳು ಮತ್ತು ವಿಧಿಗಳು ಹಾಗೂ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಇನ್ನಿತರ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ.

ತಾಮ್ರದ ಹಾಳೆಗಳ ಮೇಲೆ ಬರೆಯಲಾಗಿರುವ ಶಾಸನಗಳು ಸಾಮಾನ್ಯವಾಗಿ ವೇದಾಧ್ಯಯನ ಮತ್ತು ಶಾಸ್ತ್ರಗಳಲ್ಲಿ ಪರಿಣತರಾಗಿದ್ದ ಬ್ರಾಹ್ಮಣರಿಗೆ ಅಗ್ರಹಾರ ಅಥವಾ ಭೂದಾನ ಮಾಡಿದುದರ ಬಗ್ಗೆ ದಾಖಲೆಯನ್ನು ಹೊಂದಿದೆ. ಈ ತಾಮ್ರದ ಹಾಳೆಯ ಶಾಸನಗಳು ಕನ್ನಡ, ತೆಲಗು, ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ಕಾಣಸಿಗುತ್ತವೆ. ಪ್ರತೀ ತಾಮ್ರ ಹಾಳೆಯ ಶಾಸನಗಳ ಜೋಡಿಯು ಸಂದರ್ಭಕ್ಕೆ ಅನುಸಾರವಾಗಿ ಮೂರು,[2] ನಾಲ್ಕು ಅಥವಾ ಐದು ಹಾಳೆಗಳನ್ನು[3] ಹೊಂದಿರಬಹುದು. ಶಿಲಾಶಾಸನಗಳು ರಾಜರು ಅಥವಾ ಅವರ ಅಧಿಕಾರಿಗಳು ಅಥವಾ ಖಾಸಗೀ ವ್ಯಕ್ತಿಗಳು ದೇವಸ್ಥಾನಗಳಿಗೆ ಹಣದ ರೂಪದಲ್ಲಿ ಅಥವಾ ಧಾನ್ಯದ ರೂಪದಲ್ಲಿ ನೀಡುತ್ತಿದ್ದ ಕೊಡುಗೆಗಳ ಬಗ್ಗೆ ದಾಖಲೆಯನ್ನು ಒದಗಿಸುತ್ತವೆ. ಶಾಸನಗಳ ಆಳವಾದ ಹಾಗೂ ವಿಸ್ತಾರವಾದ ಅಧ್ಯಯನಕ್ಕೆ ಬುನಾದಿ ಹಾಕಿದ ಹಿರಿಮೆಯು ಇಬ್ಬರು ಶಾಸನಶಾಸ್ತ್ರಜ್ಞರಾದ ಡಾ. ಫ್ಲೀಟ್, ಜೆ.ಎಫ್ ಮತ್ತು ಬಿ.ಎಲ್. ರೈಸ್‌ರವರಿಗೆ ಸೇರುತ್ತದೆ. ಬಿ.ಎಲ್. ರೈಸ್‌ರವರು ಪ್ರಕಟಿಸಿರುವ ಹನ್ನೆರಡು ಸಂಪುಟಗಳ ಎಪಿಗ್ರಾಫಿಯಾ ಕರ್ನಾಟಕವು ಬಹಳ ಪ್ರಮುಖವಾಗಿದೆ. ಇವುಗಳ ಜೊತೆಗೆ ಟಿಪ್ಪಣಿಗಳನ್ನೊಳಗೊಂಡಂತೆ ಹಲವಾರು ಶಾಸನಗಳ ಗ್ರಂಥಗಳನ್ನು ಪ್ರಕಟಿಸಲಾಗಿದೆ. ಇವುಗಳಲ್ಲಿ "ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್"ನಲ್ಲಿ (1906-1956) ಇಂಗ್ಲೀಷ್ ಭಾಷಾಂತರದಲ್ಲಿ" ಎಪಿಗ್ರಾಫಿಯಾ ಇಂಡಿಕಾ (1887 ರಿಂದೀಚೆಗೆ) ಹಾಗೂ ದಕ್ಷಿಣ ಭಾರತ ಶಾಸನಗಳ ಮಾಲಿಕೆಯಲ್ಲಿ ಇವುಗಳನ್ನು ಪ್ರಕಟಿಸಲಾಗಿದೆ. ಧಾರವಾಡ ಕನ್ನಡ ಸಂಶೋಧನಾ ಸಂಸ್ಥೆಯು **ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್** ಎಂಬ ಶೀರ್ಷಿಕೆಯಡಿಯಲ್ಲಿ ಐದು ಸಂಪುಟಗಳನ್ನು ಹೊರತಂದಿದೆ. ಇವುಗಳಲ್ಲಿ ಹಿಂದಿನ ಬಾಂಬೆ, ಕರ್ನಾಟಕ ಪ್ರದೇಶಗಳಿಗೆ ಸೇರಿದ ಸಾಕಷ್ಟು ಸಂಖ್ಯೆಯ ಶಾಸನಗಳು ಸೇರಿವೆ. ಆಂಧ್ರಪ್ರದೇಶ, ಮದ್ರಾಸು ಮತ್ತು ಟ್ರಾವಂಕೂರ್ ರಾಜ್ಯಗಳು ಅವುಗಳ ಶಾಸನ ಮಾಲಿಕೆಯಲ್ಲಿ ಬೃಹತ್‌ಗಾತ್ರದ ಸಂಖ್ಯೆಯ ಶಾಸನಗಳನ್ನು ಪ್ರಕಟಿಸಿವೆ. ಇಷ್ಟೊಂದು ಗ್ರಂಥಗಳು ಮತ್ತು ಉಪಯುಕ್ತ ಟಿಪ್ಪಣಿಗಳನ್ನೊಳಗೊಂಡ ಹಲವಾರು ಶಾಸನಗಳು ಉತ್ತಮ ವರ್ತಮಾನ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳಲ್ಲಿ ಗಮನಾರ್ಹವಾಗಿ **ರಾಯಲ್ ಏಷಿಯಾಟಿಕ್ ಸೊಸೈಟಿ, ಇಂಡಿಯನ್ ಆಂಟಿಕ್ವರಿ** ಇವುಗಳ ಶಾಖೆಗಳ ಕೆಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಬಾದಾಮಿಯ ಒಂದು ಶಾಸನವು ಕ್ರಿ.ಶ. 1340ರಲ್ಲಿ ಒಂದನೇ ಹರಿಹರನು ತುಂಗಭದ್ರದ ಉತ್ತರಕ್ಕಿದ್ದ ಬಾದಾಮಿ ಪ್ರದೇಶದ ಮೇಲೆ ತನ್ನ ಪ್ರಭುತ್ವವನ್ನು ಹೊಂದಿದ್ದ ಹಾಗೂ ಅವನನ್ನು "ಪೂರ್ವಪಶ್ಚಿಮ ಸಮುದ್ರಾದಿಪತಿ" ಎಂದು ವರ್ಣಿಸಲಾಗಿತ್ತು ಎಂಬ ವಿಷಯವನ್ನು ಪ್ರದರ್ಶಿಸುತ್ತದೆ. ಕ್ರಿ.ಶ. 1346ರ ಶೃಂಗೇರಿ ಶಾಸನವು ಸಂಗಮ ಸಹೋದರರು ತಮ್ಮ ಶತ್ರುಗಳನ್ನು ಸದೆಬಡಿದ ಸಾಧನೆಯನ್ನಾಚರಿಸುವ ಉದ್ದೇಶದಿಂದ ಈ ಧಾರ್ಮಿಕ ಕ್ಷೇತ್ರಕ್ಕೆ ಭೇಟಿಕೊಟ್ಟ ಬಗ್ಗೆ ವರ್ಣನೆಯನ್ನು ನೀಡುತ್ತದೆ. ಇದೊಂದು ಬಹಳ ಬೆಲೆಬಾಳುವಂತದ್ದಾಗಿದೆ. ಏಕೆಂದರೆ ಈ ಮುಖ್ಯ ನಾಯಕರು ಈ ವೇಳೆಗಾಗಲೇ ಹೊಸ ಸಾಮ್ರಾಜ್ಯವನ್ನು ಕಟ್ಟುವ ಕಾರ್ಯವನ್ನು ಮುಗಿಸಿದ್ದರು ಎಂಬ ಅಂಶವನ್ನು ಸಾಬೀತುಪಡಿಸುತ್ತದೆ.

1368ರ ಒಂದನೇ ಬುಕ್ಕನ ಕಾಲದ ಶ್ರವಣಬೆಳಗೊಳದ ಶಾಸನವು ಆಡಳಿತಗಾರರು ಉತ್ತೇಜಿಸಿದ ಧಾರ್ಮಿಕ ವ್ಯಾಪಕತೆ ಹಾಗೂ ಆ ಸಾಮ್ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ನೀಡಿದ ಬೆಂಬಲದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. **ಬಟರ್ ವರ್ತ್‌ರ್ ನಲ್ಲೂರ್ ಡಿಸ್ಟ್ರಿಕ್ಟ್ ಇನ್‌ಸ್ಕ್ರಿಪ್ಷನ್ಸ್, ಇನ್‌ಸ್ಕ್ರಿಪ್ಷನ್ಸ್ ಆಫ್ ತಿರುಮಲೈ ತಿರುಪತಿ ದೇವಸ್ಥಾನಂ ಮೇಲಿನ ಸುಬ್ರಮಣ್ಯಶಾಸ್ತ್ರಿಯವರ ವರದಿ, ಮದರಾಸು ಗೆಜೆಟಿರ್, ಮೈಸೂರು ಗೆಜೆಟಿರ್, ಹೈದರಾಬಾದ್ ಗೆಜೆಟಿರ್ ಈ** ಎಲ್ಲಾ ಆಧಾರಗಳಿಂದ ಈ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಇತಿಹಾಸಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಪಡೆಯಬಹುದು.

ಬಿ. ನಾಣ್ಯಶಾಸ್ತ್ರ:

ನಮ್ಮ ಜ್ಞಾನವನ್ನು ಹೆಚ್ಚಿಸುವಲ್ಲಿ ನಾಣ್ಯಶಾಸ್ತ್ರವು ಅತ್ಯಂತ ಅಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತದೆ. ವಿಜಯನಗರದ ಅಪಾರ ಸಂಖ್ಯೆಯ ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಆ ಸಾಮ್ರಾಜ್ಯದ ಸಂಪನ್ಮೂಲಗಳು ಸಂಪತ್ತು ಹಾಗೂ ಅಭ್ಯುದಯಕ್ಕೆ ಸಾಕ್ಷಿಯನ್ನು ನೀಡುತ್ತವೆ. ಗದ್ಯಾಣ, ವರಾಹ, ಹಣ, ಪಣ ಇವುಗಳು ವಿಜಯನಗರ ರಾಜರು ಹೊರಡಿಸುತ್ತಿದ್ದ ಚಿನ್ನದ ನಾಣ್ಯಗಳಾಗಿದ್ದವು. ಈ ನಾಣ್ಯಗಳ ಮೇಲ್ಭಾಗವು ಬಸವ, ಆನೆ, ಸಿಂಹ, ಕರಡಿ ಮತ್ತು ದೇವತೆಗಳಾದ ಹನುಮಾನ್, ಗರುಡ, ಉಮಾಮಹೇಶ್ವರ, ಲಕ್ಷ್ಮೀನಾರಾಯಣ, ಕೃಷ್ಣ ಮತ್ತು ವೆಂಕಟೇಶ್ವರ ಇವರ ಲಾಂಛನವನ್ನು ಹೊಂದಿದೆ. ನಾಣ್ಯದ ಹಿಂಭಾಗವು ಆಳ್ವಿಕೆ ನಡೆಸುತ್ತಿದ್ದ ರಾಜರ ಹೆಸರುಗಳನ್ನು ಹೊಂದಿದೆ, ಇವುಗಳು ಕನ್ನಡ, ತೆಲುಗು ಅಥವಾ ನಾಗರಿಲಿಪಿಗಳಲ್ಲಿ ಇವೆ. ಈ ನಾಣ್ಯಗಳು ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತವೆ.

ಸಿ. ಸ್ಮಾರಕಗಳು:

ನಾಡಿನ ಕಲೆಯು ಅದರ ಸಂಸ್ಕೃತಿಯ ಪ್ರತಿಬಿಂಬ ಎಂದು ಸಾಮಾನ್ಯವಾಗಿ ಪರಿಗಣಿಸಲ್ಪಟ್ಟಿದೆ. ಅದು ನಾಗರೀಕತೆಯ ಶ್ರೇಷ್ಠ ಅಂಶಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಸ್ಮಾರಕಗಳನ್ನು ಹೆಚ್ಚಾಗಿ ತುಂಗಭದ್ರಾ ನದೀ ತೀರದ ಉದ್ದಕ್ಕೂ ಕಮಲಾಪುರಂ ಮತ್ತು ಹಂಪಿಯ ಹಳ್ಳಿಗಳ ಮಧ್ಯ ಕಾಣಬಹುದು. ಅರಮನೆಯ ಕಟ್ಟಡಗಳು ಮತ್ತು ಬಹಳ ಸಂಖ್ಯೆಯ ದೇವಾಲಯಗಳು, ಅವಶೇಷಗಳು ಕೋಟೆಯ ಒಳಭಾಗದಲ್ಲಿವೆ. ಹಂಪೆಯು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೋಕಿನಲ್ಲಿರುವ ತುಂಗಭದ್ರಾನದಿಯ ಉತ್ತರದ ತೀರದಲ್ಲಿರುವ ಒಂದು ಕುಗ್ರಾಮವಾಗಿದೆ. ಪುರಾತತ್ವ ಚಟುವಟಿಕೆಗಳ ಕೇಂದ್ರವಾಗಿರುವ ಹಂಪೆಯು ವಿಜಯನಗರ ಇತಿಹಾಸದ ಪ್ರಾಥಮಿಕ ಮಾಹಿತಿಯ ಮೂಲವಾಗಿದೆ. ಈ

ಪ್ರದೇಶದಲ್ಲಿ ಉತ್ಖನನ ಮಾಡಿ ತೆಗೆಯಲಾದ ಹಲವಾರು ಸ್ಮಾರಕಗಳು ನಮಗೆ ಸಿಗುತ್ತವೆ. ಹಂಪೆ ಅವಶೇಷಗಳು ಎಂದೇ ಪ್ರಸಿದ್ಧಿಯಾದ ಈ ಸ್ಮಾರಕಗಳು ಮುಖ್ಯವಾಗಿ ದಕ್ಷಿಣದ ಕಮಲಾಪುರಂ ಮತ್ತು ಉತ್ತರದ ಹಂಪೆಯ ಮಧ್ಯದ ಹಳ್ಳಿಗಳಲ್ಲಿ ಕಾಣಸಿಗುತ್ತವೆ. ಕಮಲಾಪುರಂ ಹೊಸಪೇಟೆಯಿಂದ 13 ಕಿ.ಮೀ.ಗಳ ಅಂತರದಲ್ಲಿದೆ. ಕಮಲಾಪುರಂನಿಂದ ಹಂಪೆಯವರೆಗಿನ ರಸ್ತೆಯುದ್ದಕ್ಕೂ ಭೂಗತ ಶಿವದೇವಾಲಯ ಕೃಷ್ಣದೇವಾಲಯ ಏಕಶಿಲಾ ಮೂರ್ತಿಗಳಾದ ಲಕ್ಷ್ಮೀನರಸಿಂಹ ಮತ್ತು ಗಣೇಶನಂತಹ ಹತ್ತು ಹಲವಾರು ಮೂರ್ತಿಗಳು ಮತ್ತು ಸ್ಮಾರಕಗಳು ಕಾಣಸಿಗುತ್ತವೆ. ಹಂಪೆ ಗ್ರಾಮವು ಪ್ರಾಚೀನ ದೇವಾಲಯಗಳಾದ ವಿರೂಪಾಕ್ಷ, ಅಚ್ಯುತರಾಯ ದೇವಸ್ಥಾನ ಮತ್ತು ವಿಜಯವಿಠಲ ದೇವಸ್ಥಾನಗಳನ್ನು ಹೊಂದಿದೆ. ರಾಣಿಯರ ಸ್ನಾನಗೃಹ, ಮಹಾನವಮಿದಿಬ್ಬ, ರಾಜನ ಸಭಾಮಂದಿರ, ಹಜಾರ ರಾಮದೇವಾಲಯ, ಮಹಿಳಾ-ರಕ್ಷಕಿಯರ ವಸತಿಗೃಹಗಳು, ಲೋಟಸ್, ಮಹಲ್ ಇವುಗಳೆಲ್ಲವು ವಿಜಯನಗರ ಇತಿಹಾಸವನ್ನು ಪುನರ್‌ನಿರ್ಮಾಣ ಮಾಡಲು ಬಹಳ ಸಹಾಯಕಾರಿಯಾಗಿವೆ. ಈ ರೀತಿಯಾಗಿ ಪುರಾತತ್ವ ಆಧಾರಗಳು ವಿಜಯನಗರ ಕಾಲದ ಇತಿಹಾಸವನ್ನು ಪುನರ್‌ರಚಿಸಲು ಹೆಚ್ಚು ಸಹಾಯವಾಗಿವೆ.

ಡಿ. ಶಿಲ್ಪಕಲೆ:

ಗೋಯೆಟ್ಸ್ ಪ್ರಕಾರ "ವಿಜಯನಗರದ ಸ್ವದೇಶೀ ಶಿಲ್ಪಕಲೆಯು ಪಶ್ಚಿಮ ಚಾಲುಕ್ಯರ ಕಾಲದ ಗೋರಿಯ ಕಲ್ಲುಗಳು (ವೀರಕಲ್ಲು ಮತ್ತು ಸತೀಕಲ್ಲು) ಮತ್ತು ನಾಗರಕಲ್ಲುಗಳಿಂದ ಅಭಿವೃದ್ಧಿಯನ್ನು ಹೊಂದಿತು. ಕೃಷ್ಣದೇವರಾಯನಡಿಯಲ್ಲಿ ಅಧಿಕೃತ ಕಲೆಯು ಅವಿಭಾಜ್ಯ ಅಂಗವಾಗಿ ಉಳಿಯಿತು. ಪವಿತ್ರ ಮೂರ್ತಿಗಳು ಬಹುಪಾಲು ಸಾಮಾನ್ಯವಾಗಿ ದೇವಸ್ಥಾನದ ಪಡಸಾಲೆಗಳಲ್ಲಿನ ಕಂಭಗಳ ಮೇಲೆ ಕಾಣಸಿಗುವುವು. ಇವುಗಳನ್ನು ಗರ್ಭಗೃಹದ ಹೊರಗೋಡೆಗಳ ಮೇಲೆ ಪ್ರವೇಶದ ಸುತ್ತ ಮಹಾದ್ವಾರಗೋಪುರ ಮತ್ತು ದ್ವಾರಗಳ ಮೇಲೆ ಕಾಣಬಹುದು."[4]

ವಿಜಯನಗರದ ಶಿಲ್ಪಿಯು ಕಲ್ಲಿನ ಕುಸುರಿ ಕೆತ್ತನೆಯಲ್ಲಿ ಬಹಳ ಪ್ರತಿಭಾವಂತನಾಗಿದ್ದನು. ಶಿಲ್ಪಕಲೆಯಲ್ಲಿ ಬಳಸಿರುವ ಬಹುಪಾಲು ಶಿಲೆಯು ಕಪ್ಪುಶಿಲೆಯಾಗಿದೆ. ಈ ಶಿಲ್ಪಕಲೆಯಲ್ಲಿ ಮುನಿಗಳು, ಯೋಧರು, ಬೇಟೆಗಾರರು, ನರ್ತಕಿಯರು, ಕಾಮೋದ್ರೇಕಿತ ಜೋಡಿಗಳು, ಪುರಾಣಮೃಗಗಳು, ಕ್ಷೀರಗಳು, ಆನೆಗಳು ಮತ್ತು ಕುದುರೆಗಳು, ಕಮಲದ ಪದಕಗಳು, ಸ್ವಸ್ತಿಕ ಚಿಹ್ನೆಗಳು ಹಾಗೂ ಇತರ ಶುಭ ಸೂಚಕ ಚಿಹ್ನೆಗಳು ಮೂಡಿಬರುತ್ತವೆ. ಇಲ್ಲಿನ ಮಹಾಸತಿಕಲ್ಲುಗಳು ಬಹಳ ಖ್ಯಾತಿಯಾಗಿವೆ.

ವಿಠಲಸ್ವಾಮಿ ದೇವಸ್ಥಾನದಲ್ಲಿನ ಕಲ್ಯಾಣ ಮಂಟಪದಲ್ಲಿ ಕೃಷ್ಣದೇವರಾಯನು ನೃತ್ಯವನ್ನು ವೀಕ್ಷಿಸುತ್ತಿರುವಂತೆ ಚಿತ್ರಿಸಲಾಗಿದೆ. ಅವನ ಹಿಂದೆ ಅವನ ಇಬ್ಬರು ಅರಸಿಯರು ಕುಳಿತಿದ್ದಾರೆ. ವಿಜಯನಗರದ ನಾಗರೀಕರನ್ನು ಹಲವಾರು ರೀತಿಗಳಲ್ಲಿ ಅವರ ಶಿಲ್ಪಕಲೆಗಳಲ್ಲಿ ಪ್ರತಿನಿಧಿಸಲಾಗಿದೆ. ಅವರು ಸವಾರಿ ಮಾಡುವಂತೆ, ಬಾಣ ಬಿಡುವಂತೆ, ನರ್ತಿಸುವಂತೆ,

ಹೊಡೆದಾಡುವಂತೆ, ಕುಸ್ತಿ ಮಾಡುವಂತೆ ಒಂಟೆಗಳನ್ನು ಮತ್ತು ಕುದುರೆಗಳನ್ನು ಕರೆದೊಯ್ಯುವಂತೆ ಹಾಗೂ ಅವರ ವಿರಾಮವನ್ನು ಸಂಪೂರ್ಣವಾಗಿ ವಾಸ್ತವದ ರೀತಿಯಲ್ಲಿಯೇ ಕಳೆಯುವಂತೆ ರಮಣೀಯವಾಗಿ ಚಿತ್ರಿಸಲಾಗಿದೆ.

ನಿಕೋಲೋ-ಡಿ-ಕೊಂಟಿ ಹೇಳಿರುವಂತೆ ವಿಜಯನಗರದ ಮಹಿಳೆಯರು ಸೌಂದರ್ಯವತಿಯಾಗಿದ್ದರು. ಜೊತೆಗೆ ಕುದುರೆ ಸವಾರಿಯನ್ನು ಕಲಿತಿದ್ದರು ಎಂಬ ಅಂಶವನ್ನು ಪುರಾವೆಗಳ ಮೂಲಕ ಸಾಕ್ಷೀಕರಿಸಲಾಗಿದೆ. ವಿಜಯನಗರ ಮತ್ತು ಶ್ರೀಶೈಲಂನಲ್ಲಿನ ಶಿಲ್ಪಕಲೆಗಳು ಮಹಿಳೆಯರು ಕುದುರೆ ಸವಾರಿ ಮಾಡುತ್ತಿರುವುದನ್ನು ತೋರಿಸುತ್ತವೆ. ವಿಜಯನಗರದ ತಾರಸಿಯ ಕೆಳಗಿನ ಅಲಂಕಾರಪಟ್ಟಿಯ ಮೇಲೆ ಮಹಿಳೆಯರು ಹಲವಾರು ಭಂಗಿಗಳಲ್ಲಿರುವುದನ್ನು ಕಾಣುತ್ತೇವೆ. ತಾಯಿಯು ಮಗುವನ್ನು ಸೊಂಟದ ಮೇಲೆತ್ತಿಕೊಂಡಿರುವ ಚಿತ್ರವಂತೂ ಮನೋಹರವಾಗಿದ್ದು ಬಹಳ ಸಹಜವಾದ ಮನುಷ್ಯನ ವಿಶಿಷ್ಟವಾದ ಕೌಟುಂಬಿಕ ಜೀವನವನ್ನು ವರ್ಣಿಸುತ್ತದೆ. ತಮ್ಮ ಗಂಡಂದಿರ ಚಿತೆಯೊಂದಿಗೆ ತಾವೂ ದಹನಗೊಳ್ಳುತ್ತಿದ್ದ ಧೀರ ಮಹಿಳೆಯರನ್ನು ಚಿತ್ರಗಳ ಪ್ರಾತಿನಿಧಿತ್ವದ ಮೂಲಕ ಸ್ಮಾರಕ ಕಲ್ಲುಗಳು ಸ್ಮರಿಸುತ್ತಿದ್ದವು. ಈ ರೀತಿಯಾದ ಹಲವಾರು ನಮೂನೆಯ ಕಲ್ಲುಗಳಿದ್ದವು. ಕೆಲವನ್ನು 'ಮಹಾಸತಿಕಲ್ಲು' ಎಂದು ಕರೆಯಲಾಗುತ್ತಿತ್ತು. ಈ ರೀತಿಯಾಗಿ ವಿಜಯನಗರ ಕಾಲದಲ್ಲಿನ ಶಿಲ್ಪಕಲೆಯು ಉಡುಪುಗಳು, ಸೌಂದರ್ಯ ವರ್ಧಕಗಳು, ಆಭರಣಗಳು, ಆಯುಧಗಳು, ನರ್ತಿಸುವ, ಸಂಗೀತದ ಸಾಧನಗಳು, ಬೇಟೆಗಾರ್ತಿಯರು, ಪ್ರಾಣಿಗಳು ಇತ್ಯಾದಿಗಳನ್ನು ವರ್ಣಮಯವಾಗಿ ಚಿತ್ರಿಸುತ್ತದೆ.

ಜಿ. ಕೈಫಿಯತ್‌ಗಳು:

ಕರ್ನಲ್ ಮೆಕೆಂಜಿಯು ಮಧ್ಯಕಾಲೀನ ಇತಿಹಾಸದ ಆಧಾರ ವಸ್ತುವಾಗಿ ಪ್ರಾಚೀನ ದಾಖಲೆಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದಿದ್ದಾನೆ. ಅವನ ಗುಮಾಸ್ತರು ಜಿಲ್ಲೆಗಳಲ್ಲೆಲ್ಲಾ ಸುತ್ತುತ್ತಿದ್ದರು ಹಾಗೂ ಕಮಾಮರ (ಗ್ರಾಮಲೆಕ್ಕಿಗರು) ಬಳಿಯಿದ್ದ ಕವಿಲೆಗಳು ಅಥವಾ ದಂಡಗಳನ್ನು ಸಂಗ್ರಹಿಸುತ್ತಿದ್ದರು.

ಹೆಚ್. ಸಾಹಿತ್ಯಿಕ ಆಧಾರಗಳು:

ಹೆಚ್ಚೆಂದರೆ ಪುರಾತತ್ವ ದಾಖಲೆಗಳು ಇತಿಹಾಸದ ಒಣಗಿದ ಅಸ್ಥಿಗಳನ್ನು ನೀಡಬಹುದು. ಆದರೆ ನಿಜವಾಗಿ ಸಮಾಜವನ್ನು ಅದರ ಎಲ್ಲಾ ಅವಶ್ಯಕತೆಗಳಿಂದಲೂ ಪುನರ್‌ನಿರ್ಮಾಣ ಮಾಡಲು ಬೇಕಾಗಿರುವುದು ಸಾಹಿತ್ಯ; ಸಾಹಿತ್ಯವು ರಕ್ತ ಮತ್ತು ಮಾಂಸವನ್ನು ನೀಡುತ್ತದೆ. ಶಾಸನಗಳ ದಾಖಲೆಯಿಂದ ಸಂಗ್ರಹಿಸಿದ ನಮ್ಮ ಜ್ಞಾನಕ್ಕೆ ಸಾಹಿತ್ಯ ಆಧಾರವು ಹೆಚ್ಚು ಪುಷ್ಠಿಯನ್ನು ನೀಡುತ್ತದೆ. ಇದು ಐತಿಹಾಸಿಕ ಪುರುಷೋತ್ತಮರು ಜೀವಿಸಿದ ಅವಧಿಯಲ್ಲಿನ ಹಲವಾರು ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ತಿಳಿಯಲು ಬಹಳ ಸಹಾಯಕವಾಗುತ್ತದೆ.[5] ಸಾಹಿತ್ಯವು ಕೆಲವೊಮ್ಮೆ ವಾಸ್ತವವಾಗಿಲ್ಲದಿದ್ದರೂ ಹೆಚ್ಚು ಆದರ್ಶಾತ್ಮಕವಾದ ರೀತಿಯಲ್ಲಿ ಜನಗಳ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಅಮೂಲ್ಯ ನೋಟವನ್ನು

ನೀಡುತ್ತದೆ.[6] ಸಾಹಿತ್ಯಾಧಾರಗಳು ಎರಡು ವರ್ಗಗಳಿಗೆ ಬರುತ್ತವೆ. ಮೊದಲನೆಯ ವರ್ಗವು ತನ್ನಲ್ಲಿ ಸಂಸ್ಕೃತ, ಕನ್ನಡ ಮತ್ತು ತೆಲುಗು ಕೃತಿಗಳನ್ನು ಒಳಗೊಂಡಿದೆ. ಪರ್ಶಿಯನ್ ವಿದ್ವಾಂಸರು ಬರೆದಿರುವ ಬಹಳ ಸಂಖ್ಯೆಯ ದಾಖಲೆಗಳ ಜೊತೆಗೆ ಇತರೆ ಮುಸ್ಲಿಂ ಪ್ರಯಾಣಿಕರು ಮತ್ತು ಯೂರೋಪ್ ಪ್ರವಾಸಿಗರ ಬರವಣಿಗೆಗಳು ಎರಡನೆ ವರ್ಗವನ್ನು ಸೇರುತ್ತವೆ.

ವಿಜಯನಗರ ಇತಿಹಾಸಕ್ಕೆ ಸಂಬಂಧಿಸಿದಂತೆ ಭಾರತದ ಸಾಹಿತ್ಯಿಕ ದಾಖಲೆಯು ಮದರಾಸು ವಿಶ್ವವಿದ್ಯಾನಿಲಯವು ಹೊರತಂದಿರುವ ಆಯ್ದ ಆಧಾರಗಳ ಎರಡು ಸಂಗ್ರಹಗಳಲ್ಲಿ ಲಭ್ಯವಿದೆ. ಅವರ ಶಾಸನಗಳಲ್ಲಿ ವಿಜಯನಗರದ ಅರಸರನ್ನು ಪೂರ್ವದ ಮರ್ಯಾದೆಯ ಅನುಯಾಯಿಗಳು ಎಂದು ಉಲ್ಲೇಖಿಸಿರುವುದರಿಂದ ಪೂರ್ವ ವಿಜಯನಗರ ಕಾಲದ ಕೃತಿಗಳೂ ಕೂಡ ಬಹಳ ಮೌಲ್ಯಯುತ.[7] ವಾಗಿವೆ. ಅವುಗಳಲ್ಲಿ **ವಿಘ್ನೇಶ್ವರನ ಮಿತಾಕ್ಷರ ಸಂಹಿತೆ, ಕೌಟಿಲ್ಯನ ಅರ್ಥಶಾಸ್ತ್ರ,** ಮನುವಿನ **ಧರ್ಮಶಾಸ್ತ್ರ ಮತ್ತು ಶುಕ್ರನೀತಿ** ಇವುಗಳ ಉಲ್ಲೇಖವನ್ನು ಮಾಡಬಹುದು. ಇವುಗಳು ಜನರ ಹಲವಾರು ವಿಷಯಗಳಿಗೆ ಸಂಬಂಧಿಸಿರುವ ಜೊತೆಗೆ, ಜನರ ಆರ್ಥಿಕ ಚಟುವಟಿಕೆಗಳು ಹಾಗೂ ಈ ಚಟುವಟಿಕೆಗಳನ್ನು ಪ್ರೋತ್ಸಾಹಿಸುವಲ್ಲಿ ರಾಜಾಶ್ರಯದ ಪಾತ್ರ ಬಗ್ಗೆಯೂ ವಿವರಣೆಯನ್ನು ನೀಡುತ್ತವೆ. ವಿಜಯನಗರದ ಜೀವನದ ಬಗೆಗಿನ ಉತ್ತಮ ತಿಳುವಳಿಕೆಗಾಗಿ ಹೆಚ್ಚು ಸಂಖ್ಯೆಯ ಸಂಸ್ಕೃತ, ಕನ್ನಡ ಮತ್ತು ತೆಲುಗಿನಲ್ಲಿರುವ ಕೃತಿಗಳನ್ನು ಅಭ್ಯಸಿಸಬಹುದಾಗಿದೆ.

ಸಂಸ್ಕೃತ ಕೃತಿಗಳು:

ಒಂದನೇ ಬುಕ್ಕನ ಮಗನಾದ ಕಂಪಣ್ಣನ ಹೆಂಡತಿಯಾದ ಗಂಗಾದೇವಿಯು ರಚಿಸಿದ ಮಧುರಾವಿಜಯಂ ಅಥವಾ ಕಂಪರಾಯಚರಿತಂ ಎಂಬ ಕೃತಿಯು ಬಹಳ ಶ್ರೇಷ್ಠ ಕೃತಿಯಾಗಿದೆ. ಅದು ಆ ಕಾಲದ ಸಂಸ್ಕೃತ ಸಾಹಿತ್ಯದಲ್ಲಿನ ಶ್ರೇಷ್ಠ ಕಾವ್ಯವಾಗಿತ್ತು. ತನ್ನ ಗಂಡನ ಯಶಸ್ವೀ ದಂಡೆಯಾತ್ರೆಗಳನ್ನು ಬಹಳ ಮನಮೋಹಕವಾದ ಮತ್ತು ಸರಳಶೈಲಿಯಲ್ಲಿ ನಿರೂಪಿಸುತ್ತಾಳೆ. ಈ ಗ್ರಂಥವು ಲಭ್ಯವಿರುವ ಹಸ್ತಪ್ರತಿಗಳ ಮೇಲೆ ಆಧಾರಿತವಾಗಿದೆ. ಮಧುರಾವಿಜಯಂ ನಮಗೆ ಎರಡು ಪ್ರಮುಖ ಘಟನೆಗಳನ್ನು ಪರಿಚಯಿಸುತ್ತದೆ. ಯಾವುವೆಂದರೆ: ತೊಂಡೈಮಂಡಲಾ ಸಾಂಬುವರಾಜನ ಆಳ್ವಿಕೆಯ ಪತನ ಮತ್ತೊಂದು ಮಧುರೈ ಸುಲ್ತಾನನ ವಿನಾಶ. ಈ ಗ್ರಂಥವು ಜನರ ಸಾಮಾಜಿಕ ಜೀವನದ ಮೇಲೆ-ಜಾತಿ ಪದ್ಧತಿ, ಚಟಗಳು, ಸ್ತ್ರೀಯರ ಕಸುಬು ಮತ್ತು ಆಟಗಳ ಬೆಳಕನ್ನು ಚೆಲ್ಲುತ್ತದೆ. ಗಂಗಾದೇವಿಯು ಉಚ್ಚಮಟ್ಟದ ಕವಿಯಿತ್ರಿಯಾಗಿದ್ದಳು.

ಇನ್ನೋರ್ವ ಬರಹಗಾರಳೆಂದರೆ ತಿರುಮಲಾಂಬ. ಇವಳು 'ವರದಾಂಬಿಕಾಪರಿಣಯಂ' ಎಂಬ ಚಂಪೂ ಕಾವ್ಯವನ್ನು ಬರೆದಳು. ಇದರಲ್ಲಿ ಅಚ್ಯುತರಾಯನೊಂದಿಗೆ ಅವನ ರಾಣಿಯಾದ ವರದಾಂಬಿಕೆಯ ವಿವಾಹವನ್ನು ವಿವರಿಸುತ್ತಾಳೆ. ತಿರುಮಲಾಂಬಳು ಸಂಸ್ಕೃತ ಕವಿಯಿತ್ರಿಯಾಗಿದ್ದಳು. ಅವಳ ಗ್ರಂಥವು ಸಂಪೂರ್ಣವಾಗಿ ಲಭ್ಯವಿದೆ. ಇವಳು ವಿಜಯನಗರ ರಾಜಮನೆತನಕ್ಕೆ ಸೇರಿದ್ದಳು. ಹದಿನಾರನೇ ಶತಮಾನದ ಮೊದಲಾರ್ಧದಲ್ಲಿ ಆಳಿದ ರಾಜನಾದ ಅಚ್ಯುತರಾಯನ ಹೆಂಡತಿಯಾಗಿದ್ದಳು. ತಿರುಮಲಾಂಬಳು ಒಬ್ಬ ಕವಿಯಿತ್ರಿಯಾಗಿದ್ದು, ಅವಳ ಸಾಹಿತ್ಯಿಕ ಸಾಧನೆಗಳನ್ನು ಅಚ್ಯುತರಾಯನ

ಆಸ್ಥಾನದಲ್ಲಿದ್ದ ಪ್ರತಿಯೋರ್ವರೂ ಪ್ರಶಂಸಿಸಿದ್ದರು. ಈ ಕೃತಿಯು ಜನಗಳ ಸಾಮಾಜಿಕ ಜೀವನದ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ.

ಅಭಿರಾಮ ಕಾಮಕಾಶಿ, ಇವನ ಸಹೋದರನಾದ ಸ್ವಯಂಬು ಒಂದನೇ ಅರುಣಗಿರಿನಾಥನ ಅಳಿಯನಾಗಿದ್ದನು. ಇವನು ಬಹಳ ಆಕರ್ಷಕವಾದ ಚರಣಗಳಲ್ಲಿ ಅಭಿನವರಾಮಾಭ್ಯುದಯವನ್ನು ಬರೆದನು. ಇದು ರಾಮಾಯಣದ ಕಥೆಯನ್ನು ನಿರೂಪಿಸುತ್ತದೆ.

ಒರಿಯನ್ ರಾಜಕುಮಾರಿಯಾದ ತುಕ್ಕಳು ಕೃಷ್ಣದೇವರಾಯನ ಪತ್ನಿಯಾಗಿದ್ದಳು. 'ತುಕ್ಕ-ಪಂಚಕಮ್' ಇದು ಅವಳಿಗೆ ಸೇರಿದುದಾಗಿದೆ. ಕೃಷ್ಣದೇವರಾಯನ ಮಗಳು ಹಾಗೂ ಮೋಹನಾಂಗಿ ಎಂಬ ಹೆಸರನ್ನು ಊಹಿಸಲಾಗಿದ್ದು ಮತ್ತು ರಾಮರಾಯನ ಹೆಂಡತಿಯಾಗಿ ಉಪನಾಮವಾದ ತಿರುಮಲಾಂಬ ಎಂದು ಕರೆಯಲ್ಪಟ್ಟ ಇವಳು 'ಮಾರೀಚ ಪಾರಿಣಯಂ' ಎಂಬ ಪ್ರೇಮ ಪ್ರಣಯ ಕಥೆಯನ್ನು ಬರೆದಳು.

ಅಚ್ಯುತರಾಯಾಭ್ಯುದಯವು ಐತಿಹಾಸಿಕ ಕವಿತೆಯಾಗಿದ್ದು, ವಿಜಯನಗರದ ಸಾಮ್ರಾಟನಾದ ಅಚ್ಚುತರಾಯನ ಆರಂಭಿಕ ಜೀವನ, ಜೀವನಕ್ರಮ ಮತ್ತು ಸಾಧನೆಗಳನ್ನು ವಿವರಿಸುತ್ತದೆ. ಇದು ಹನ್ನೆರಡು ಚರಣಗಳಲ್ಲಿರುವ ಕಾವ್ಯವಾಗಿದೆ. ಐತಿಹಾಸಿಕ ದಾಖಲೆಯಾಗಿ ಇದರ ಮೌಲ್ಯವು ಅದ್ವಿತೀಯವಾಗಿದೆ. ಇದನ್ನು ರಾಜನಾಥ ಡಿಂಡಿಮನು ಬರೆದಿದ್ದಾನೆ.

ಅಚ್ಯುತರಾಯಾಭ್ಯುದಯವು ಅಚ್ಯುತರಾಯನನ್ನು ಕಾಪಾಡಬೇಕೆಂಬ ಉದ್ದೇಶಕ್ಕಾಗಿ ತಿರುಪತಿಯ ವೆಂಕಟೇಶ್ವರ ದೇವರನ್ನು ಪ್ರಸನ್ನಗೊಳಿಸುವ ಭಕ್ತಿಪೂರ್ವಕ ಬಯಕೆಯೊಂದಿಗೆ ಆರಂಭಗೊಳ್ಳುತ್ತದೆ. ಅಚ್ಚುತರಾಯನು ಪಾಂಡ್ಯ ರಾಜಕುಮಾರಿಯೋರ್ವಳನ್ನು ಮದುವೆಯಾದನು. ಅಚ್ಚುತನ ಸಿಂಹಾಸನಾರೋಹಣದ (ಎರಡನೇ ಪದ್ಯ 28-32) ಸಮಯದಲ್ಲಿ ವಿಜಯನಗರ ರಾಜಧಾನಿಯು ಸರ್ವಾಲಂಕೃತಗೊಳ್ಳುತ್ತಿದ್ದ ಹಂತದಲ್ಲಿನ ಕೆಲವು ಕುತೂಹಲಭರಿತವಾದ ಆಚರಣೆಗಳು ಮತ್ತು ಸತ್ಯಸಂಗತಿಗಳು ದಾಖಲಾಗಿವೆ. ವೀಣೆಯ ಮಂಜುಳ ಸಂಗೀತವನ್ನು ಕೇಳಲು ವ್ಯಕ್ತಿಯೋರ್ವನು ಅರತ್ತ ಸೀಮೆಯ ಸ್ತ್ರೀಯರ ಮೊರೆ ಹೋಗಬೇಕು. ಕೊಂಕಣ ದೇಶದ ಸ್ತ್ರೀಯರು ಉತ್ತಮವಾಗಿ ಮೃದಂಗವನ್ನು ನುಡಿಸುತ್ತಿದ್ದರು ಹಾಗೂ ಅವರ ಕಂಕಣದ ಸದ್ದು ಮೃದಂಗವಾದ್ಯದ ಜೊತೆ ಸಮ್ಮಿಳಿತವಾಗಿ ಬೆರೆತುಹೋಗಿತ್ತು. ಕಳಿಂಗ ದೇಶದ ಕಸ್ತೂರಿಯು ಅತ್ಯುತ್ತಮ ಮಿಶ್ರಣವನ್ನು ತಯಾರಿಸಿತು ಹಾಗೂ ಲತಾದೇಶದ ಸ್ತ್ರೀಯರು ಗಂಧದ ಹಿಟ್ಟನ್ನು ತಯಾರಿಸುವಲ್ಲಿ ಅದನ್ನು ಕರ್ಪೂರದೊಂದಿಗೆ ಬೆರೆಸಿದರು. ತಾಂಬೂಲ ಕಾರಂಡಕ ಅಥವಾ ವೀಳ್ಯದ ಎಲೆಯ ಪಟ್ಟಿಗೆಯ ಉತ್ತಮ ಮಾದರಿಗಳನ್ನು ವಿರಾಟ ಮತ್ತು ಸೌರಾಷ್ಟ್ರ ದೇಶದ ಸ್ತ್ರೀಯರು ತಯಾರಿಸಿದ್ದರು. ಮಂಗಳಾರತಿಯ ಅತೀ ಸುಂದರ ಹಾಗೂ ಮನಮೋಹಕವಾದ ಪ್ರದರ್ಶನವನ್ನು ತ್ರಿಗರ್ತರ ಕೋಮಲಾಂಗಿಯರು ಕೈಗೊಳ್ಳುತ್ತಿದ್ದರು. ಹಾರಗಳನ್ನು ಕಟ್ಟುವ ಕಲೆಯು ಅವಂತಿ, ಕುಂತಿ ಮತ್ತು ಆಂಧ್ರದೇಶದ ಮಹಿಳೆಯರಿಗೆ ಸಿದ್ಧಿಯಾಗಿತ್ತು. ಕೇಶಾಲಂಕಾರ ಕಲೆಯಲ್ಲಿ ವಿದರ್ಭ ಮಹಿಳೆಯರು ಪ್ರಗತಿಯನ್ನು ಸಾಧಿಸಿದ್ದರು. ಅಚ್ಚುತರಾಯನು ಈ ಮಹಿಳೆಯರನ್ನು ಹಲವಾರು ಸಂದರ್ಭಗಳಲ್ಲಿ ಆಹ್ವಾನಿಸಿದ್ದನು.

ತೆಲುಗು ಕೃತಿಗಳು:

ವಿಜಯನಗರ ಇತಿಹಾಸದ ಸಾಹಿತ್ಯಿಕ ಮೂಲಗಳಲ್ಲಿ ಶ್ರೇಷ್ಠ ಕೃತಿಗಳಲ್ಲಿ **ಅಮುಕ್ತ**ಮಾಲ್ಯದ ಒಂದಾಗಿದೆ. ಇದು ಆಡಳಿತ ಸಿದ್ಧಾಂತಗಳ ಮೇಲೆ ಬರೆದುದ್ದಾಗಿದೆ. ಕೃಷ್ಣದೇವರಾಯನ ರಾಜಕೀಯ ಸಿದ್ಧಾಂತದ ಕೃತಿಯಾಗಿದೆ. ಇದು ವಿಜಯನಗರ ಇತಿಹಾಸವನ್ನು ಪುನರ್ ನಿರ್ಮಾಣ ಮಾಡಲು ಉಪಯುಕ್ತ ಕೃತಿಯಾಗಿದೆ.

ಶೃಂಗಾರ ಶಾಕುಂತಲಂ ಅನ್ನು ಪಲ್ಲಲಾಮರಿ ಪಿಣ ವೀರಭದ್ರನು ಬರೆದಿದ್ದು, ಅವನನ್ನು 'ವಾಣಿ ಈ ನಾರಾಣಿ' ಎಂದು ಹೊಗಳಲಾಗಿದೆ. ಇವನು ಸಾಳುವ ನರಸಿಂಹನ ಆಸ್ಥಾನವನ್ನು ಅಲಂಕರಿಸಿದ್ದನು. ಈ ಕೃತಿಯನ್ನು ಸಿಲಾರವಣ್ಣ ಮಂತ್ರಿಗೆ ಸಮರ್ಪಿಸಿದನು. ಈ ಗ್ರಂಥವು ಸಾಮಾಜಿಕ ಸ್ಥಿತಿಗಳಾದ ಜಾತಿ ವ್ಯವಸ್ಥೆ, ಸ್ತ್ರೀಯರ ಕಸುಬು ಈ ಕಾಲದ ಜನರ ನಡೆ ನುಡಿಗಳನ್ನು ತಿಳಿಸಿಕೊಡುತ್ತದೆ.

ಕೃದಾಭಿರಾಮಂ ಎಂಬುದೊಂದು ಎರಡನೇ ದೇವರಾಯನ ಮುಖ್ಯಸ್ಥನಾದ ಪೆನುಕೊಂಡಾದ ವಲ್ಲಭಾಮತ್ಯ ಎಂಬುವವನು ತೆಲುಗಿನಲ್ಲಿ ಬರೆದ ಭಾಷಾಂತರ ಕೃತಿಯಾಗಿದೆ . ಇದು ಸಮಕಾಲೀನ ಸಮಾಜವನ್ನು ಪ್ರತಿಬಿಂಬಿಸುತ್ತದೆ. ಇದೊಂದು ಬೀದಿ ನಾಟಕವಾಗಿದೆ. ದೋರಸಮುದ್ರದ ಕಲಾವಿದರು ಈ ನಾಟಕವನ್ನು ಅಭಿನಯಿಸುತ್ತಿದ್ದರು. ಹಾವಾಡಿಗರು ನರ್ತಕಿಯರು ಕೋಳಿಜಗಳ ಟಗರಿನ-ಕಾಳಗ, ಇವೆಲ್ಲವನ್ನೂ ಈ ಪುಸ್ತಕದಲ್ಲಿ ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ.

ಸಿಂಹಾಸಂದ್ಯಾತ್ರಿಮ್ಯಕ ಎಂಬುದೊಂದು ಪ್ರಶಂಸನೀಯ ಕಾವ್ಯವಾಗಿದೆ. ಕೊರವಿ ಗೋಪರಾಜನು ಈ ಕಾವ್ಯದ ಕವಿಯಾಗಿರುವನು. ಇವನು ತೆಲಂಗಾಣದ ನಿವಾಸಿಯಾಗಿದ್ದನು. ಇವನು ಕ್ರಿ. ಶ. 15ನೇ ಶತಮಾನದ ಉತ್ತರಾರ್ಧಭಾಗದಲ್ಲಿ ಅಭ್ಯುದಯವನ್ನು ಸಾಧಿಸಿದನು. ಇದೊಂದು ಸಮಕಾಲೀನ ತೆಲಗು ಕೃತಿಯಾಗಿದೆ. 15ನೇ ಶತಮಾನದ ಶ್ರೇಷ್ಠ ಹಾಗೂ ಅತ್ಯುತ್ತಮ ಬರಹಗಾರನಾದ ಶ್ರೀನಾಥನು **ಪಾನತಿವೀರ ಚರಿತ್ರ ಹರಿಲಾಸಂ, ಭೀಮೇಶ್ವರ ಪುರಾಣಂ, ಕಾಶಿಕಾಂಡಮು ಮತ್ತು ಶಿವರಾತ್ರಿ ಮಹಾತ್ಮೆಮ್** ಇವುಗಳನ್ನು ಬರೆದನು. ಇವನು ದೇಶದುದ್ದಗಲಕ್ಕೂ ಸಂಚರಿಸಿದನು ಹಾಗೂ ಇವನ ವಿದ್ವತ್ತಿಗಾಗಿ ಇವನನ್ನು ಎಲ್ಲಡೆಯಲ್ಲೂ ಗೌರವಿಸಲಾಯಿತು. ಇವುಗಳು ರೂಢಿ, ಆಚರಣೆಗಳು, ಆಭರಣಗಳು, ಬಿಡುವಿನಕಾಲ, ಹಾಗೂ ಆಂಧ್ರ ಪ್ರದೇಶದಲ್ಲಿನ ಧಾರ್ಮಿಕ ನಂಬಿಕೆಗಳ ಮೇಲೆ ಅಪಾರ ಬೆಳಕನ್ನು ಚೆಲ್ಲುತ್ತದೆ.

ಕನ್ನಡ ಕೃತಿಗಳು:-

ಭೀಮ ಕವಿಯಿಂದ ಭಾಷಾಂತರಗೊಂಡ ಬಸವಪುರಾಣವು ಈ ಕಾಲದ ಅತ್ಯುತ್ತಮ ಪ್ರಸಿದ್ಧ ಕೃತಿ. ಲಕ್ಷ್ಮಣ ದಂಡನಾಥನ **ಶಿವ ತತ್ವಚರಿತಾಮಣಿ** ಇದೊಂದು ವೇದಾಂತ ಕೃತಿಯಾಗಿದೆ. ಚಾಮರಸನು ಪ್ರಭುಲಿಂಗಲೀಲವನ್ನು ಬರೆದನು. ಕಲ್ಲರಸನು **ಜಾನವಾಸ್ಯ** ಇನ್ನೊಂದು ರೀತಿಯಲ್ಲಿ ಹೆಸರಾದ ಮಲ್ಲಿಕಾರ್ಜುನವಿಜಯ ಎಂಬ ಕೃತಿಯನ್ನು ಬರೆದನು. ಕಲಿಯ ಪ್ರಕಾರ ಈ ಕೃತಿಯು ತನ್ನ ರಾಣಿಗೆ (ಹೆಂಡತಿಗೆ) ಮಲ್ಲಿಕಾರ್ಜುನನ ಬೋಧನೆಯನ್ನು ಸುಪ್ತವಾಗಿ ತಿಳಿಯಲು ಸಹಾಯ ಮಾಡಿತು. ಹೆಂಗೆಳೆಯರು ಹೇಗೆ ಪುರುಷರನ್ನು ಪ್ರೇಮಪಾಶದಲ್ಲಿ ಸಿಗಿಸಬಹುದೆಂಬುದರ ಬಗ್ಗೆ ಬರೆದುದಾಗಿದೆ. ತಿಮ್ಮಣಕವಿಯು ಭಾರತವನ್ನು ಬರೆದನು. ರತ್ನಾಕರವರ್ಣಿಯು ಭರತೇಶವೈಭವವನ್ನು ಬರೆದನು. ಇದೊಂದು ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಲು ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಗಳಲ್ಲಿ ಒಂದಾಗಿದೆ. ಕನಕದಾಸರು ಮೋಹನ ತರಂಗಿಣಿಯನ್ನು ಬರೆದರು. ಶ್ರೀಪಾದರಾಜ, ವ್ಯಾಸರಾಜ, ಪುರಂದರದಾಸ ಇವರುಗಳೆಲ್ಲ ಈ ಕಾಲದ ಕೆಲವು ಪ್ರಮುಖ ಬರಹಗಾರರು. ಇವರೆಲ್ಲರ ಕೃತಿಗಳು ವಿಜಯನಗರದ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಅಂಶಗಳಾದ ಕೆಟ್ಟ ಆಚರಣೆಗಳು ಹಾಗೂ ಜನರ ರೂಢಿ ಮತ್ತು ಹವ್ಯಾಸಗಳ ಮೇಲೆ ಬರೆದುದಾಗಿದೆ.

ಐ. ವಿದೇಶೀ ಬರವಣಿಗೆಗಳು:-

ಅನಾದಿ ಕಾಲದಿಂದಲೂ ಭಾರತವು ಪರಕೀಯರನ್ನು ಆಕರ್ಷಿಸಿದೆ. ಅನೇಕ ವಿದೇಶೀ ಪ್ರವಾಸಿಗರು ವ್ಯಾಪಾರಿಗಳು ಮತ್ತು ರಾಯಭಾರಿಗಳು ಭಾರತಕ್ಕೆ ಭೇಟಿ ಕೊಟ್ಟಿದ್ದಾರೆ ಹಾಗೂ ಅವರ ಅನುಭವಗಳನ್ನು ದಾಖಲಿಸಿದ್ದಾರೆ.

ಕ್ರಿ.ಶ.1443ರಲ್ಲಿ ವಿಜಯನಗರಕ್ಕೆ ಪರ್ಶಿಯನ್ ರಾಜನ ರಾಜತಾಂತ್ರಿಕನಾಗಿ ಭೇಟಿಯಿತ್ತ ಅಬ್ದುಲ್‌ರಜಾಕ್ ವಿಜಯನಗರದ ಸುಂದರ ಬಣ್ಣನೆ, ಅದರ ಭವ್ಯತೆ, ಮತ್ತು ಜನಗಳ ಸಂಪತ್ತಿನ ಬಗ್ಗೆ ವರ್ಣನೆಯನ್ನು ನೀಡುತ್ತಾನೆ. ಕ್ರಿ.ಶ. 1413ರಲ್ಲಿ ಷಾ ರೂಯಿ ಇಂದ ಪ್ರಮುಖ ಉದ್ದೇಶದ ಸಲುವಾಗಿ ಜಾಮೊರಿನ್ ಕಳುಹಿಸಲ್ಪಟ್ಟ ಅಬ್ದುಲ್ ರಜಾಕನು ಕ್ರಿ. ಶ. 1442ರಲ್ಲಿ ಒರ್ಮುಜ್‌ನಿಂದ ಕಲ್ಲಿಕೋಟೆಗೆ ಪ್ರಯಾಣಿಸಿದನು ಅಲ್ಲಿನ ಅವನ ವಿಶ್ರಾಂತಿಗೆ ವಿಜಯನಗರ ರಾಜನಿಂದ ಭಂಗವಾಯಿತು. ರಾಜನು ಅವನನ್ನು ತಕ್ಷಣವೇ ರಾಜಧಾನಿಗೆ ಕಳುಹಿಸುವಂತೆ ಕೇಳಿಕೊಂಡನು. ಅಬ್ದುಲ್ ರಜಾಕ್‌ನು ಮಂಗಳೂರಿನ ಮೂಲಕ ವಿಜಯನಗರಕ್ಕೆ ಹೋದನು ಹಾಗೂ ಅವನನ್ನು ಬರಮಾಡಿಕೊಳ್ಳಲಾಯಿತು. ಇವನು ಮಹಾನವಮಿ ಹಬ್ಬವನ್ನು ವೀಕ್ಷಿಸಿದನು ಇವನು **ಮಾಲ್ತ-ಉಸ್-ಸಲಾತಿನ್** ಎಂಬ ಗ್ರಂಥವನ್ನು ಬರೆದಿದ್ದಾನೆ. **ಈ** ಪುಸ್ತಕದ ಶ್ರೇಷ್ಠ ಮೌಲ್ಯವನ್ನು ಸಾಮಾನ್ಯವಾಗಿ ಪರಿಗಣಿಸಲಾಗಿದೆ. ಅವನ ಬರವಣಿಗೆಯಿಂದ ವಿಜಯನಗರ ಇತಿಹಾಸದ ಇಣುಕು ನೋಟವನ್ನು ಪಡೆಯಬಹುದು.

ದಕ್ಷಿಣ ಭಾರತಕ್ಕೆ ಪ್ರವಾಸಿಯಾಗಿ ಬಂದ ಮತ್ತೊಬ್ಬ ವ್ಯಾಪಾರೀ ಪ್ರವರ್ತಕನೆಂದರೆ ವೆನೀಸ್‌ನ ಉಚ್ಚ ಕುಲೀನನಾದ ನಿಕೋಲೋ-ಡಿ-ಕೊಂಟಿ. ಇವನು ಭೇಟಿ ಇತ್ತ ಮೊತ್ತಮೊದಲ ಭಾರತದ ನಗರವು ಕ್ಯಾಂಬೆ, ಇದನ್ನು ಕ್ರಿ.ಶ.1420ರಲ್ಲಿ ಭೇಟಿಮಾಡಿದನು. ಇಲ್ಲಿ ಎರಡು ಪಟ್ಟೆಗಳನ್ನೊಳಗೊಂಡ ಸಾರ್ಡೋನಿಕ್ಸ್ ಎಂಬ ಬಹಳ ಸಂಖ್ಯೆಯ ಬೆಲೆಬಾಳುವ ಹರಳುಗಳನ್ನು ನೋಡುತ್ತಾನೆ, ಅದೇರೀತಿಯಲ್ಲಿ ಸತಿಪದ್ಧತಿಯ ಅಸ್ತಿತ್ವವನ್ನು ವೀಕ್ಷಿಸಿದನು ಕೊಂಟಿಯು ವಿಜಯನಗರ ಆಸ್ಥಾನ ಹಬ್ಬಗಳು, ನಾಣ್ಯ ಮತ್ತಿತ್ತರ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ವರ್ಣನೆಯನ್ನು ನೀಡುತ್ತಾನೆ.

ರಷ್ಯಾದ ವ್ಯಾಪಾರಿಯಾದ ಅಥನ್ಸೀನ್ ನಿಕಿಟಿನ್ (ಕ್ರಿ. ಶ. 1468)ಎಂಬಾತನು ಭಾರತದ ಪ್ರವಾಸ ಕೈಗೊಂಡನು. ವಿಜಯನಗರದ ಮನಸೆಳೆಯುವ ಸ್ಪಷ್ಟ ದಾಖಲೆಯನ್ನು ತನ್ನ ಹಿಂದೆ ಬಿಟ್ಟು ಹೋದ ಪೋರ್ಚುಗೀಸ್ ಪ್ರವಾಸಿಯಾದ ವಾರ್ತೇಮನು 1503ರಲ್ಲಿ ಭಾರತ ಪ್ರವಾಸ ಕೈಗೊಂಡಿದ್ದು ಇವನೂ ತನ್ನ ಹಿಂದೆ ತನ್ನ ಅನುಭವಗಳಿಂದ ಕೂಡಿದ ದಾಖಲೆಯನ್ನು ಬಿಟ್ಟು ಹೋಗಿರುತ್ತಾನೆ. ವಿಜಯನಗರದ ಇವನ ವರ್ಣನೆಯು ಸ್ವಾರಸ್ಯವು ಹಾಗೂ ಬೆಲೆಬಾಳುವಂತಹದೂ ಆಗಿರುತ್ತದೆ. ಡ್ಯೂರೇಟ್ ಬಾರ್ಬೋಸನು ಕ್ರಿ.ಶ.1500 ರಿಂದ1516ರವರೆಗೆ ಭಾರತದಲ್ಲಿದ್ದ ಪೋರ್ಚುಗೀಸ್ ಸರ್ಕಾರದಲ್ಲಿ ಸೇವೆ ಸಲ್ಲಿಸಿದನು. ತನ್ನ ಇರುವಿಕೆಯ ಅವಧಿಯಲ್ಲಿ ಮಲಯಾಳಂ ಭಾಷೆಯನ್ನು ಚೆನ್ನಾಗಿ ಕಲಿತನು. ಇವನು ವಿಜಯನಗರದ ಸ್ಫುಟವಾದ ವಿವರಣೆಯನ್ನು ನೀಡುತ್ತಾನೆ.

ಸೀವೆಲ್ ರಾಬರ್ಟ್‌ನು ಬರೆದ ಅಮೋಘವಾದ ಗ್ರಂಥವಾದ **'ಮರೆತ ಸಾಮ್ರಾಜ್ಯ'** (ಫರ್ಗಾಟನ್ ಎಂಪೈರ್) (1900)ಇದು ಡಮಿಂಗೋ ಪಯಸ್‌ನ ಹಲವು ಚಾರಿತ್ರಿಕ ದಾಖಲೆಗಳ ಭಾಷಾಂತರವನ್ನೊಳಗೊಂಡಿದೆ. ಇದು ಕೃಷ್ಣದೇವರಾಯನ ವ್ಯಕ್ತಿತ್ವದ ಬಗ್ಗೆ ನಮಗೆ ತಿಳಿಸುವುದಲ್ಲದೆ ವಿಜಯನಗರದ ಜನರ ನಡವಳಿಕೆಗಳು, ಅಲ್ಲಿನ ಹಬ್ಬಗಳು, ಆಚರಣೆಗಳು, ಮುಂತಾದ ಅಂಶಗಳನ್ನು ತಿಳಿಸಿಕೊಡುತ್ತದೆ. ಕ್ರಿ.ಶ. 1537ರಲ್ಲಿ ರಚಿತವಾದ ನ್ಯೂನಿಜ್ ದಾಖಲೆಯು ವಿಜಯನಗರದ ಆಡಳಿತಗಾರರ ಬಗ್ಗೆ ಈತನೇ ಸಂಗ್ರಹಿಸಿದ ಮಾಹಿತಿಯನ್ನೊಳಗೊಂಡಿದೆ ಇವನು ಕ್ರಿ.ಶ.1520 ಹಾಗೂ ಕ್ರಿ.ಶ.1540ರ ನಡುವೆ ಒಂದಕ್ಕಿಂತ ಹೆಚ್ಚು ಬಾರಿ ವಿಜಯನಗರಕ್ಕೆ ಭೇಟಿ ನೀಡಿದನು.

ತಾಳಿಕೋಟೆ ಯುದ್ಧದ (ಕ್ರಿ.ಶ. 1565) ನಂತರದ ಹಲವು ವರ್ಷಗಳ ತರುವಾಯ ವಿಜಯನಗರಕ್ಕೆ ಭೇಟಿ ಇಟ್ಟ ಸೀಸರ್ ಫೆಡ್ರಿಕ್‌ನು ವಿಜಯನಗರದ ಸಾಮ್ರಾಜ್ಯ ನಗರದ ಶ್ರೇಷ್ಠತೆಯ ಮೇಲೆ ಹೇಳಿಕೆಯನ್ನು ನೀಡಿದ್ದಾನೆ.

ಪ್ರವಾಸಿಗರ ಮನಸ್ಸನ್ನು ಸೆಳೆದ ಮತ್ತೊಂದು ವಸ್ತುವೆಂದರೆ ಅಂತಃಪುರ, ಇದನ್ನು ವಿಜಯನಗರ ಸಾಮ್ರಾಟರು ಜೋಪಾನಮಾಡುತ್ತಿದ್ದರು. ಪೆಟ್ರೊ-ಡೆಲ್ಲಾ-ವೆಲ್ಲಾ ಎಂಬ ಇಟಲಿಯ ಪ್ರವಾಸಿಗನು ಕೆಳದಿ ರಾಜಧಾನಿಯ ಪ್ರವಾಸ ಮಾಡಿದನು ಮತ್ತು ತೀರ ಪ್ರದೇಶದಲ್ಲಿನ ಇಕ್ಕೇರಿ ಹಾಗೂ ಇತರ ಸ್ಥಳಗಳಿಗೆ ಭೇಟಿ ನೀಡಿದನು. ಇವನು ಸಮಾಜ ಪದ್ಧತಿಗಳು ಮತ್ತು ಜನಗಳ ನಡೆನುಡಿಗಳ ಆಕರ್ಷಕವಾದ ವರ್ಣನೆಯನ್ನು ನೀಡಿದ್ದಾನೆ.

ಅಡಿ ಟಿಪ್ಪಣಿಗಳು

1. ಫ್ಲೀಟ್ ಜೆ.ಎಫ್. ಇಂಪೀರಿಯಲ್ ಗೆಜೆಟಿಯರ್, ನಂ.11 ಪುಟ 8

2. ಎ.ಇಂ. ಸಂಪುಟ 17 ನಂ.8 ಪುಟ110-177

3. ಎಪಿಗ್ರಾಫಿಯಾ ಆಂಧ್ರಪ್ರದೇಶ ಸಂ.11 ಪುಟ 73-87

4. ಸಾಲತೊರೆ.ಆರ್.ಎನ್. ವಿಜಯನಗರ ಆರ್ಟ್ ಪುಟ 186

5. ಶಾಸ್ತ್ರಿ ಕೆ.ಎ.ಎನ್. ಸೋರ್ಸಸ್ ಆಫ್ ಇಂಡಿಯನ್ ಹಿಸ್ಟರಿ ಪು. 64

6. ಗುರುರಾಜಾಚಾರ್.ಎಸ್. ಸಂ. ಆಸ್ಪೆಕ್ಟ್ ಆಫ್ ಸೋಸಿಯಲ್ ಅಂಡ್ ಎಕನಾಮಿಕಲ್ ಲೈಫ್ ಇನ್ ಕರ್ನಾಟಕ, ಪು. 8

7. ಎರಾಸರ-ಮದುಮಿಯನಮ್, ಸೆಲೆಕ್ಟಡ್ ಬೈ ವೆಂಕಣ್ಣ, ಕೋಟೆಡ್ ಬೈ ವೆಂಕಟರತ್ನಂ, ಎ.ವಿ. ಲಾಯಲ್, ಸೆಲ್ಫ್ ಗೌರ್ನಮೆಂಟ್ ಇನ್ ದಿ ವಿಜಯನಗರ ಎಂಪೈರ್, ಮೈಸೂರು 1972 ಪುಟ 2

ಅಧ್ಯಾಯ-2

ದಾನಿಗಳಾಗಿ ಮಹಿಳೆಯರು

1. ರಾಜಮನೆತನದ ಮಹಿಳೆಯರು:

ಈ ಕಾಲದ ಶಾಸನಗಳಲ್ಲಿ ಐಹಿಕ ಸಂಪತ್ತು ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಹೊಂದಿದ್ದ ಮಹಿಳೆಯರು ಉದಾರ ದಾನಿಗಳಾಗಿ ಕಂಡುಬರುತ್ತಾರೆ. ದೇವಾಲಯಗಳು ಸಾಮಾಜಿಕ ಆರ್ಥಿಕ ಜೀವನದ ದಾರಿದೀಪಗಳಾಗಿ ನಿಂತಿದ್ದರಿಂದ ಈ ರೀತಿಯಾದ ಹೆಚ್ಚಿನ ದಾನವು ಭೂಮಿಯ ಮುಖಾಂತರವಾಗಿಯೋ ಅಥವಾ ಹಣದ ರೂಪದಲ್ಲಿಯೋ ದೇವಾಲಯಗಳಿಗೆ ಹರಿಯಿತು. ಈ ರೀತಿಯಾಗಿ ಹರಿದುಬಂದ ಆದಾಯವನ್ನು ಧಾರ್ಮಿಕ (ಆಚರಣೆಗಳಿಗಾಗಿ)ಸೇವೆಗಳಿಗಾಗಿ ಹಾಗೂ ದೇವಾಲಯದ ಸೇವಕರನ್ನು ನೋಡಿಕೊಳ್ಳುವುದಕ್ಕಾಗಿ ಉಪಯೋಗಿಸಲಾಗುತ್ತಿತ್ತು. ಅವರ ಸಹಾಯಕ್ಕೆ ಪ್ರತಿಯಾಗಿ ದಾನಿಗಳನ್ನು "ದೇವಾಲಯದ ಗೌರವ"ವನ್ನು ನೀಡಿ ಆದರಿಸಲಾಗುತ್ತಿತ್ತು. ಅವುಗಳೆಂದರೆ ಪ್ರಸಾದ ಮುಂತಾದ ಪೂಜೆಪುನಸ್ಕಾರಗಳಲ್ಲಿ ಪಾಲನ್ನು ನೀಡುವುದಾಗಿತ್ತು. ತಿರುಮಲೈತಿರುಪತಿ ದೇವಸ್ಥಾನಗಳ ಶಾಸನಗಳಿಂದ ಇದಕ್ಕೆ ನಿದರ್ಶನವನ್ನು ನೀಡಬಹುದು. ವಿಜಯನಗರ ಕಾಲದ ಪ್ರಧಾನ ದೇವಾಸ್ಥಾನಗಳಾದ ತಿರಮಲೈ ತಿರುಪತಿ ದೇವಲಾಯಗಳು ಅತಿಹೆಚ್ಚಿನ ಧನಸಹಾಯ ಹಾಗೂ ಸಾರ್ವಜನಿಕ ಧನಸಹಾಯವನ್ನು ಸ್ವೀಕರಿಸಿದವು.

ದೇವಸ್ಥಾನಗಳಿಗೆ ಕೊಡುಗೆಗಳು ಭೂಮಿ, ಹಳ್ಳಿಗಳು, ಹಳ್ಳಿಗಳ ಆದಾಯ, ತೆರಿಗೆಗಳಿಂದ ಸಂದಾಯವಾದ ಆದಾಯ, ಒಡವೆಗಳು, ಬಟ್ಟೆ, ಸಾಮಾನುಗಳು ಹಾಗೂ ಇತ್ಯಾದಿಗಳ ಮೂಲದಿಂದ ಬರುತ್ತಿದ್ದವು. ಇವುಗಳನ್ನು ದೇವಾಲಯಗಳಲ್ಲಿನ ದೇವತೆಗಳಿಗೆ ಹಲವಾರು ಧಾರ್ಮಿಕ ಉದ್ದೇಶಗಳಿಂದ ರಾಜರು, ಅಧಿಕಾರಿಗಳು, ಮುಖ್ಯಸ್ಥರು ಮಹಾಮಂಡಲೇಶ್ವರ ರಾಣಿಯರು, ಸಾಮಾನ್ಯ ಮಹಿಳೆಯರು, ಅಥವಾ ಕೆಳವರ್ಗದ ಮಹಿಳೆಯರು ನೀಡುತ್ತಿದ್ದರು. ದಾನ ಹಾಗೂ ಉಂಬಳಿಯನ್ನು ಸಾಮಾನ್ಯವಾಗಿ ದೇವರ ನಿತ್ಯದಪೂಜೆಗಾಗಿ, ನಂದಾದೀಪವನ್ನು ಉರಿಸುವುದಕ್ಕಾಗಿ, ದೇವಾಲಯದ ಹಬ್ಬಗಳನ್ನು ಆಚರಿಸುವುದಕ್ಕಾಗಿ ಹಾಗೂ ದೇವಸ್ಥಾನದ ಸೇವೆಗಾಗಿ ಅಲ್ಲಿನ ಸೇವಕರಿಗಾಗಿ ಭತ್ಯೆಯನ್ನು ನೀಡುವ ಉದ್ದೇಶದಿಂದಾಗಿ ಈ ದೇವಸ್ಥಾನದ ಮೇಲ್ವಿಚಾರಕರಿಗೆ (ಸ್ಥಾನಿಕರು)ನೀಡಲಾಗುತ್ತಿತ್ತು. ಅವರು ಧಾರ್ಮಿಕ ಉದ್ದೇಶದಿಂದ ಧನಸಹಾಯವನ್ನು ನೀಡಿದರು. ಸಾಮಾನ್ಯವಾಗಿ ಮಹಿಳೆಯರು ದೇವಾಸ್ಥಾನಗಳಿಗೆ ತಾವು ಇತ್ತ ಭೇಟಿಯ ಸ್ಮರಣಾರ್ಥವಾಗಿ ಬಲಿಷ್ಟವಾದ ಸಾಮ್ರಾಜ್ಯವನ್ನು ಪಡೆಯಲು ಶ್ರೇಯಸ್ಸನ್ನು ಹೊಂದಲು, ತಮ್ಮ ಜನ್ಮದಿನವನ್ನು ಆಚರಿಸಲು ಹಾಗೂ ಮಾನವನ ನಾಲ್ಕು ಪುರುಷಾರ್ಥಗಳಾದ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಹೊಂದುವ ಸಲುವಾಗಿ ದೇವಸ್ಥಾನಗಳಿಗೆ ಧಾರಾಳವಾಗಿ ಧನಸಹಾಯವನ್ನು ಮಾಡುತ್ತಿದ್ದರು.

ನಾವು ಮೊದಲ ಅಧ್ಯಾಯದಲ್ಲಿ ಮಹಿಳೆಯರು ತಮ್ಮ ಖಾಸಗೀ ಹಾಗೂ ಸಾರ್ವಜನಿಕ ಜೀವನದಲ್ಲಿ ಅನುಭವಿಸಿದ ಸ್ಥಾನಮಾನದ ಬಗ್ಗೆ ಬಹಳ ಧೀರ್ಘವಾದ ಚರ್ಚೆಯನ್ನು ಮಾಡಿದ್ದೇವೆ. ಬಹಳ ಪ್ರಮುಖವಾದ ರಾಜಕೀಯ ನಿರ್ಣಯಗಳಲ್ಲಿ ಅವರು ಪಾಲ್ಗೊಂಡಿರುವುದನ್ನು ನಾವು ನೋಡಿದ್ದೇವೆ. ಅವರಲ್ಲಿ ಕೆಲವರು ತಮ್ಮ ಪ್ರಜೆಗಳಿಗೆ ಶೌರ್ಯದಿಂದ ಕೂಡಿದ ನಾಯಕತ್ವವನ್ನು ನೀಡಿದರೆ ಇನ್ನು ಕೆಲವರು ಸೈನಿಕರನ್ನು ರಣರಂಗಕ್ಕೆ ಕರೆದೊಯ್ದರು, ಈ ವಿವಿಧ ಪಾತ್ರಗಳ ಜೊತೆಗೆ

ಅವರಲ್ಲಿ ಕೆಲವರು ದಾನಿಗಳಾಗಿ, ಸಂಚಾಲಕರಾಗಿ, ದೇವಾಲಯಗಳು ಹಾಗೂ ಇತರೆ ಧಾರ್ಮಿಕ ಸಂಸ್ಥೆಗಳ ಪೋಷಕರಾಗಿ ತಮ್ಮ ಶ್ರೇಷ್ಠತೆಯನ್ನು ಮೆರೆದರು. ಸಮಕಾಲೀನ ಶಾಸನಗಳು ಹಾಗೂ ಸಾಹಿತ್ಯಿಕ ಗ್ರಂಥಗಳು ಈ ವಿಷಯಕ್ಕೆ ಸಂಬಂಧಿಸಿದಂತೆ ಸಾಕಷ್ಟು ನಿದರ್ಶನವನ್ನು ನೀಡುತ್ತವೆ.

ಎ. ತಿರುಮಲಾದೇವಿ ಅಮ್ಮನ್:-

ಶ್ರೀರಂಗಪಟ್ಟಣದ ನಾಯಕನ ಕುಟುಂಬವು ಕೃಷ್ಣದೇವರಾಯನ ರಾಣಿ[1] ಯಾದ ತಿರುಮಲಾಂಬಳೊಂದಿಗೆ ರಾಜಕುಟುಂಬದ ವೈವಾಹಿಕ ಸಂಬಂಧವನ್ನು ಬೆಳೆಸಿತ್ತೆಂದು ಹೇಳಲಾಗಿದೆ. ತಿರುಮಲಾಂಬಳು ಶ್ರೀರಂಗಪಟ್ಟಣದ ಮುಖ್ಯಸ್ಥನಾದ ಕುಮಾರ-ವೀರ, ಸ್ವಾಮುರಾಯನ ಮಗಳಾಗಿದ್ದಳು. ಇವನು ರಾಯಚೂರು ಯುದ್ಧದಲ್ಲಿ ಭಾಗವಹಿಸಿದ್ದನು.[2]

ಕ್ರಿ.ಶ.1509ರಲ್ಲಿ ವಿಜಯನಗರ ಸಿಂಹಾಸನವನ್ನೇರಿದ ಕೃಷ್ಣದೇವರಾಯನೊಂದಿಗೆ ಇದ್ದ ಮೊದಲ ಹಾಗೂ ಪ್ರಥಮ ಪಟ್ಟದರಿಸಿಯಾಗಿದ್ದಳು ಹಾಗೂ ಅವನ ಆಳ್ವಿಕೆಕಾಲದುದ್ದಕ್ಕೂ ಅವನೊಂದಿಗಿದ್ದಳು ಹಾಗೂ ಅವನೊಂದಿಗೆ ಎಲ್ಲೆಡೆಯಲ್ಲೂ ಇರುತ್ತಿದ್ದಳು. ಕೃಷ್ಣದೇವರಾಯನ ಇಬ್ಬರು ರಾಣಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರನ್ನು ಸಾಮಾನ್ಯವಾಗಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವರಿಬ್ಬರಲ್ಲಿ ತಿರುಮಲಾದೇವಿಯು ಹಿರಿಯ ಅರಸಿಯಾಗಿದ್ದು ಅವನು ಸಿಂಹಾಸನವೇರುವುದಕ್ಕೆ ಮುಂಚಿತವಾಗಿ ಅವಳನ್ನು ವಿವಾಹವಾಗಿದ್ದನೆಂಬುದು ಚೋಳಸಮುದ್ರದಿಂದ 1912ರ ಸಂಖ್ಯೆ 87ರಿಂದ ತಿಳಿಯುತ್ತದೆ. ಇದು ಕೃಷ್ಣರಾಯನು ತನ್ನ ರಾಣಿ ತಿರುಮಲಾಂಬಿಕಳೊಂದಿದೆ ಕರ್ನಾಟಕ ಸಿಂಹಾಸನವನ್ನೇರಿದನು ಎಂದು ಹೇಳುತ್ತದೆ.[3]

ಇವರಿಬ್ಬರು ರಾಣಿಯರು ಆ ಕಾಲದ ತೆಲಗುಕಾವ್ಯಗಳಲ್ಲೂ ಪ್ರಸಿದ್ಧಿಯಾಗಿದ್ದಾರೆ. ವಿವಾಹಿತರಾಣಿಯರೆಂಬ ಗೌರವದಿಂದ (ದೇವರುಳು)ಇವರಿಬ್ಬರನ್ನು ಪ್ರಶಂಸಿಸಲಾಗಿದೆ. ತಿರುಮಲದಲ್ಲಿರುವ ಶ್ರೀವೆಂಕಟೇಶ ದೇವಾಲಯದಲ್ಲಿ ಒಂದು ಗುಂಪಿನಲ್ಲಿ ಕೃಷ್ಣದೇವರಾಯನ ಪಕ್ಕದಲ್ಲಿರುವ ಎರಡು ಶಿಲ್ಪಗಳಲ್ಲಿ ಇವರೀರ್ವರನ್ನು ಪ್ರತಿನಿಧಿಸಲಾಗಿದೆ. ತಿರುಮಲಾಂಬಳು ರಾಜನ ಬಲಭಾಗಕ್ಕಿರುವಳು, ರಾಜನ ಪ್ರಧಾನ ರಾಣಿಯಾಗಿದ್ದ ಅವಳು ಆ ಕಾಲದಲ್ಲಿ ಪ್ರಭಾವಶಾಲಿಯಾದ ಪಾತ್ರವನ್ನುವಹಿಸಿದ್ದಳು. ಇವಳು ರಾಜನ ಎಲ್ಲಾ ದಂಡೆಯಾತ್ರೆಗಳಲ್ಲೂ ಅವನ ಜೊತೆ ಇರುತ್ತಿದ್ದಳು. ಕೃಷ್ಣದೇವರಾಯನ ಉತ್ತರಾಧಿಕಾರಿಯಾಗಿ ಅಚ್ಚುತನನ್ನು ಇವಳು ಸ್ವೀಕರಿಸಿದಳು ಕಾವ್ಯದಲ್ಲಿ ಬಹಳ ಆಸಕ್ತಿಯನ್ನು ಹೊಂದಿದ್ದಳು ತನ್ನದೇ ಆದ ಸ್ವಂತ ಖಜಾನೆಯನ್ನು ಹೊಂದಿದ್ದಳು. ಸೇವಕಿಯರನ್ನು ಹೊಂದಿದ್ದಳು ಸಂಪೂರ್ಣಸ್ವಾತಂತ್ರ್ಯವನ್ನು ಅವಳು ಹೊಂದಿದ್ದಳು ಶ್ರೇಷ್ಠಭಕ್ತೆ ಹಾಗೂ ದಾನಿಯಾಗಿದ್ದಳು. ಇವಳು ಕೃಷ್ಣದೇವರಾಯನ ಆತ್ಮೀಯಳಾಗಿದ್ದರಿಂದ ಆಸ್ಥಾನದಲ್ಲಿ ಎಲ್ಲರೀತಿಯ ಅಧಿಕಾರ ಹಾಗೂ ವಿಶೇಷ ಹಕ್ಕುಗಳನ್ನು ಹೊಂದಿದ್ದಳು, ಇವಳ ಸ್ಮರಣಾರ್ಥವಾಗಿ ಕೃಷ್ಣದೇವರಾಯನು ದೇವಾಲಯಗಳು ಹಾಗೂ ನಗರಗಳಿಗೆ ಉದಾರವಾದ ಧನಸಹಾಯವನ್ನು ಮಾಡಿದನು. ಇವುಗಳೆಲ್ಲವನ್ನು ತಿರುಲಾದೇವಿಯ ಹೆಸರಿನಲ್ಲಿ ಮಾಡಿದನು.

ಶ್ರೀರಂಗಪಟ್ಟಣದ ನಾಯಕನ ಮಗಳಾದ ತಿರುಮಲಾದೇವಿಯ ಮದುವೆಯು ಕ್ರಿ.ಶ. 1510ರಲ್ಲಿ ನೆಡೆಯಿತು. ತಿರುಮಲಾದೇವಿಯ ಪಟ್ಟಣವನ್ನು ಈಗ 'ಹೊಸಪೇಟೆ'ಎಂದು ಕರೆಯಲಾಗಿದೆ. ಕ್ರಿ.ಶ.1513ರಲ್ಲಿ ತಿರುಮಲಾದೇವಿ ಅಮ್ಮನ್ ರಾತ್ರಿ ಪೂಜೆಯಲ್ಲಿ ಹಾಲನ್ನು ಒದಗಿಸುವುದಕ್ಕಾಗಿ ಶ್ರೀವೆಂಕಟೇಶ್ವರನಿಗೆ ಚಿನ್ನದ ಲೋಟವೊಂದನ್ನು ನೀಡಿದಳು.[4] ಕ್ರಿ.ಶ.1513ರಲ್ಲಿ ವಿಶೇಷ ಪೂಜೆ ಹಾಗೂ ಸೇವೆಗಾಗಿ 3742ತೂಗುವ ಚಿನ್ನದ ಪಾತ್ರೆ ಹಾಗೂ ಹೂವಿಗಾಗಿ 102 ತೂಗುವ ಚಿನ್ನದ ತಟ್ಟೆಯನ್ನು ತಿರುವೆಂಗಲನಾಥ ದೇವರಿಗೆ ತಿರುಮಲಾದೇವಿಯು ನೀಡಿದಳು[5]

ಕ್ರಿ.ಶ.1514ರಲ್ಲಿ ಕೃಷ್ಣದೇವರಾಯನ ಹಿರಿಯರಾಣಿಯಾದ ತಿರುಮಲಾದೇವಿಯು ವೆಂಕಟೇಶ್ವರನಿಗೆ ಬಹಳ ದುಬಾರಿಯಾದ ಚಕ್ರಪದಕವನ್ನು ಕೊಡುಗೆಯಾಗಿ ನೀಡಿದಳು ಹಾಗೂ ದಿನನಿತ್ಯದ ತಿರಪೋನಕಮ್ ಪೂಜೆಗಾಗಿ ವೆರತ್ತಿಕೊಲತ್ತೂರ್ ಗ್ರಾಮವನ್ನು ನೀಡಿದಳು.[6] ಕ್ರಿ.ಶ. 1515ರಲ್ಲಿ ರಾಣಿ ತಿರುಮಲಾದೇವಿಯು ತಿರುವೆಂಕಟ ಮುದ್ದೈಯನ್‌ಗೆ ತೊಂಡೈಮಂಡಲಾ ಬಳಿಯ ವೆರತ್ತಿಕಲಾತ್ತೂರ್ ಎಂಬ ಗ್ರಾಮವನ್ನು ಹಾಗೂ ಚಕ್ರಪದಕವನ್ನು ಕೊಡುಗೆಯಾಗಿ ನೀಡಿದಳು. ಆದರೆ ಲೋಲಕವು 132 ವಜ್ರಗಳು, 85 ಹವಳಗಳು, 83ರತ್ನಗಳು ಮತ್ತು 66 ಮುತ್ತುಗಳನ್ನು ಹೊಂದಿತ್ತು. ಒಟ್ಟಾರೆ ಅದು 255,1/2ಯೂನಿಟ್ ತೂಕವಿತ್ತು.[7] ಕ್ರಿ.ಶ. 1515ರಲ್ಲಿ ತಿರುಮಲಾದೇವಿಯು ಹಾಲನ್ನು ನೀಡುವುದಕ್ಕಾಗಿ 374ಯೂನಿಟ್ ತೂಗುವ ಚಿನ್ನದ ಬಟ್ಟಲು ಹಾಗೂ ತಿರುವೆಂಗಲಿನಾಥದೇವರಿಗೆ ಪರಿಮಳಗಳನ್ನಿಡಲು 10 ಯುನಿಟ್ ತೂಕದ ಒಂದು ಚಿನ್ನದ ಹರಿವಾಣವನ್ನು ಕೊಟ್ಟಳು.[8]

ತಿರುಮಲಾದೇವಿಯು ರಾಜನೊಂದಿಗೆ ತಿರಮಲೈಯಲ್ಲಿರುವ ಶ್ರೀವೆಂಕಟೇಶ ದೇವಸ್ಥಾನಕ್ಕೆ ಭೇಟಿನೀಡಿದಳು ಹಾಗೂ ಕ್ರಿ.ಶ.1515ರಲ್ಲಿ ತಿರುಮಲೈಯಲ್ಲಿರು ಶ್ರೀವೆಂಕಟೇಶ ದೇವಾಲಯಕ್ಕೆ ಮಹಾದಾನವನ್ನು ಮಾಡಿದಳು. ಹೊಳೆಸರಸೀಪುರ ತಾಲ್ಲೋಕಿನ ತಾಮ್ರಶಾಸನದ ಸಂಖ್ಯೆ 8 ಕ್ರಿ.ಶ. 1515 ಜುಲೈ 25ರಲ್ಲಿ ಕೃಷ್ಣದೇವರಾಯನು ಮಾಡಿದ ದಾನದ ಬಗ್ಗೆ ದಾಖಲೆಯನ್ನು ನೀಡುತ್ತದೆ. ಇದನ್ನು ಗ್ರಾಮದಲ್ಲಿ ನೀಡಲಾಯಿತು. ಹಾಸನದಲ್ಲಿ ಕೆಲವು ಹೊಯ್ಸಳ ರಾಜಧಾನಿಯನ್ನು ಕೃಷ್ಣದೇವರಾಯನು ತಿರುಮಲಾಂಬೆಯ ಹೆಸರಿನಲ್ಲಿ ತಿರುಮಲಾಪುರ ಎಂದು ಹೆಸರಿಸಿದನು.[9]

ಕ್ರಿ. ಶ. 1515ರಲ್ಲಿ ಶಾಸನವೊಂದು ಕೃಷ್ಣದೇವರಾಯನ ಕೋಟೆಗಳನ್ನು ವಶಪಡಿಸಿಕೊಂಡ ಮೇಲೆ ಧರಣೀಕೋಟದ ಬಳಿಯ ಅಮರೇಶ್ವರಕ್ಕೆ ಭೇಟಿನೀಡಿದನು ಮತ್ತು ಆ ದೇವಸ್ಥಾನದ ದೇವರಿಗೆ ತುಳುಪುರುಷ ಪೂಜೆಯನ್ನು ಮಾಡಿಸಿದನು. ಕೃಷ್ಣವೇಣಿನದಿಯ ದಂಡೆಯ ಮೇಲೆ ತನ್ನ ರಾಣಿಯರಾದ ಕ್ರಮವಾಗಿ ಚಿನ್ನಾದೇವಿ ಮತ್ತು ತಿರುಮಲಾದೇವಿಯರಿಂದ ರತ್ನಧೇನು ಮತ್ತು ಸಪ್ತ-ಸಾಗರ ಮಹಾದಾನವನ್ನು ಮಾಡಿಸಿದನು.[10] ಕ್ರಿ.ಶ.

1517ರಲ್ಲಿ ತನ್ನ ರಾಣಿಯರಾದ ಚಿನ್ನದೇವಿ ಮತ್ತು ತಿರುಮಲಾದೇವಿಯರಿಂದ ಸಿಂಹಾದ್ರಿ ಪುತ್ತೂರಿನ ಬಳಿಯಲ್ಲಿ ಮಹಾದಾನವನ್ನು ಮಾಡಿಸಿದನು ಹಾಗೆಯೇ ವಿಷ್ಣು ಕಂಚಿಯಲ್ಲಿನ ವರದರಾಜು ದೇವರಲ್ಲಿದೆ ತನ್ನ ರಾಣಿಯರೊಂದಿಗೆ ಭೇಟಿಯನ್ನಿತ್ತನು ಅನಂತರ ಒಂದು ಸಾವಿರ ವರಹಗಳ ಕಾಣಿಕೆಯನ್ನು ನೀಡಿದನು.[11]

ಕ್ರಿ. ಶ. 1518ರಲ್ಲಿ ಒಂದು ಶಾಸನವು ಉಲ್ಲೇಖಿಸುವಂತೆ ತಿರುಮಲಾದೇವಿಯು ವಿಜಯನಗರದ ಪಟ್ಟಣದ ಚಿಕ್ಕರಾಯಕೆರೆಯ ಅಂಜನಗಿರಿಯ ಹತ್ತಿರದ ಕಿರಿಯತಿರುವೆಂಗಲನಾಥ ದೇವರ ಸೇವೆಗಾಗಿ ವಿಜಯನಗರಪಟ್ಟಣದಲ್ಲಿ ಕುಂಬಾರ ಕುಂಟೆಯೆಂದು ಕರೆಯಲ್ಪಡುತ್ತಿದ್ದ ಭೂಮಿಯನ್ನು ಕೊಟ್ಟಳು ಎಂದು ಹೇಳಲಾಗಿದೆ. ಈ ಕೊಡುಗೆಯನ್ನು ತುಂಗಭದ್ರಾನದಿಯ [12] ದಂಡೆಯ ಮೇಲೆ ವಿಠಲೇಶ್ವರ ದೇವರ ಸಮ್ಮುಖದಲ್ಲಿ ತಿರುಮಲರಾಯನ ಶ್ರೇಯಸ್ಸಿಗೋಸ್ಕರ ನೀಡಲಾಯಿತು.

ಕ್ರಿ.ಶ. 1521ರಲ್ಲಿ ಕೃಷ್ಣದೇವರಾಯನು ತನ್ನರಾಣಿಯಾದ ತಿರುಮಲಾದೇವಿಯ ಮುಖಾಂತರ ಒಂಬತ್ತು ವಿಧದ ರತ್ನಗಳನ್ನೊಳಗೊಂಡ ಒಂದು ಜೊತೆ ಪೀತಾಂಬರ ಒಂದು ಬಟ್ಟಲು ಹಾಗೂ ನವರತ್ನಪದಕವನ್ನು ತಿರುಮಲೈನ ತಿರವೆಂಗಲನಾಥ ದೇವರಿಗೆ ಕೊಡುಗೆಯಾಗಿ ಕೊಡಿಸಿದಳು.[13]

ಈ ರೀತಿಯಾಗಿ ಮೇಲಿನ ಶಾಸನಗಳು ಕೃಷ್ಣದೇವರಾಯನ ಹಿರಿಯರಾಣಿಯಾದ ತಿರುಮಲಾದೇವಿಯ ಮೇಲೆ ಶ್ರೇಷ್ಠದಾನಿಯಾಗಿ ಬೆಳಕನ್ನುಚೆಲ್ಲುತ್ತವೆ. ತನ್ನ ಮಗನಾದ 'ತಿರುಮಲಾರಾಯನ'ಶ್ರೇಯಸ್ಸಿಗೊಸ್ಕರವಾಗಿಯೂ ಅವಳು ದಾನವನ್ನು ನೀಡಿದಳು. ರತ್ನಧೇನು, ಸಪ್ತಸಾಗರ, ಮಹಾದಾನಗಳನ್ನು ಮಾಡಿಸಿದಳು. ಚಿನ್ನದ ಆಭರಣಗಳು ಹವಳಗಳು, ವಜ್ರಗಳು ಮತ್ತು ಬೆಲೆಬಾಳುವ ಹರಳುಗಳು, ಚಿನ್ನ ಮತ್ತು ಬೆಳ್ಳಿಯ ಬಟ್ಟಲುಗಳು ಮತ್ತು ಹರಿವಾಣಗಳು ಹಾಗೂ ದೇವಾಲಯಗಳಿಗೆ ಗ್ರಾಮಗಳನ್ನೂ ಕೊಡುಗೆಯಾಗಿ ನೀಡಿದಳು. ಆದ್ದರಿಂದ ಕೃಷ್ಣದೇವರಾಯನ ಹಿರಿಯರಾಣಿಯಾದ ತಿರುಮಲಾದೇವಿಯು ಈ ಕಾಲದಲ್ಲಿ ಒಂದು ಗೌರವಯುತವಾದ ಸ್ಥಾನವನ್ನು ಹೊಂದಿದ್ದಳು ಎಂದು ಹೇಳಬಹುದು.

ಬಿ. ಚಿನ್ನದೇವಿ ಅಮ್ಮನ್:-

ಕೃಷ್ಣದೇವರಾಯನು ನಿಜವಾಗಿ ಎಷ್ಟು ಜನರನ್ನು ವಿವಾಹವಾಗಿದ್ದನೆಂಬುದನ್ನು ಖಚಿತವಾಗಿ ಹೇಳುವುದು ಪ್ರಸ್ತುತದಲ್ಲಿ ನಮಗೆ ಕಷ್ಟವಾಗಿ ಕಂಡುಬರುತ್ತದೆ. ನ್ಯೂನಿಜ್ ಹೇಳುವಂತೆ ಕೃಷ್ಣದೇವರಾಯನು ನಾಲ್ಕುಜನ ಸ್ತ್ರೀಯರನ್ನು ವಿವಾಹವಾಗಿದ್ದನು ಹಾಗೂ ಅವರೆಲ್ಲರಲ್ಲಿ ಚಿನ್ನದೇವಿಯು ಅವನಿಗೆ ಬಹಳ ಹೆಚ್ಚು ಪ್ರೀತಿಪಾತ್ರಳಾದವಳಾಗಿದ್ದಳು. ಪಯೆಸ್‌ನ ಪ್ರಕಾರ ಕೃಷ್ಣದೇವರಾಯನು ಹನ್ನೆರಡುಜನ ನ್ಯಾಯಯುತವಾದ ಹೆಂಡತಿಯರನ್ನು ಹೊಂದಿದ್ದನು. ಅವರಲ್ಲಿ ನಾಲ್ವರು ಪ್ರಮುಖರಾಗಿದ್ದರು. ಅವರೆಂದರೆ ಚಿನ್ನಾದೇವಿ, ತಿರುಮಲಾದೇವಿ, ಜಗನ್ಮೋಹಿನಿ ಮತ್ತು ಅನ್ನಪೂರ್ಣದೇವಿ. ಚಿನ್ನದೇವಿಯು ಹಂಪೆಯಲ್ಲಿರುವ ವಿರೂಪಾಕ್ಷ ದೇವಾಲಯದಲ್ಲಿ ದೇವದಾಸಿಯಾಗಿದ್ದಳು. ಚಿನ್ನಾದೇವಿಯು ಅವಳ

ಅಪ್ರತಿಮ ಸೌಂದರ್ಯ ಹಾಗೂ ಅನುಪಮ ನೃತ್ಯಕ್ಕಾಗಿ ಹೆಸರುವಾಸಿಯಾಗಿದ್ದಳು ಈ ಕಾರಣದಿಂದಾಗಿಯೇ ಅವಳ ಮೋಹದಪಾಶದಲ್ಲಿ ಕೃಷ್ಣದೇವರಾಯನು ಬಿದ್ದದ್ದು. ಕೃಷ್ಣದೇವರಾಯನ ಇಬ್ಬರು ರಾಣಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರನ್ನು ಆಗಾಗ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಸಿಂಹಾಸನವನ್ನೇರಿದ ನಂತರ ಕೃಷ್ಣದೇವರಾಯು ಚಿನ್ನಾದೇವಿಯನ್ನು ವಿವಾಹವಾದನು ಇದರ ಪರಿಣಾಮದಿಂದಾಗಿ ಮೊದಲ ಪತ್ನಿಯ ಗೌರವ ಘನತೆ ಆದರಗಳನ್ನು ಹೊಂದಲು ವಿಫಲವಾದ ಇವಳು ಕೇವಲ ಕಿರಿಯರಾಣಿಯಾಗಿ ಮಾತ್ರ ಉಳಿದಳೆಂದು ತೋರುತ್ತದೆ.[14] ಆಗಿನ ತೆಲಗು ಕಾವ್ಯದಲ್ಲಿ ಇವರನ್ನು ದೇವೆರಲು ಎಂದು ಉಲ್ಲೇಖಿಸಲಾಗಿದೆ. ತಿರುಮಲೈನಲ್ಲಿರುವ ಶ್ರೀವೆಂಕಟೇಶ್ವರ ದೇವಸ್ಥಾನದಲ್ಲಿರುವ ಕೃಷ್ಣದೇವರಾಯ ಪಕ್ಕದಲ್ಲಿರುವ ಎರಡು ವಿಗ್ರಹಗಳಲ್ಲಿ ಇವರನ್ನು ಪ್ರತಿನಿಧಿಸಲಾಗಿದೆ. ಚಿನ್ನಾದೇವಿಯು ಎಡಭಾಗಕ್ಕೆ, ಕೃಷ್ಣದೇವರಾಯನು ಮಧ್ಯಭಾಗದಲ್ಲಿಯೂ ಹಾಗೂ ತಿರುಮಲಾದೇವಿಯು ಬಲಭಾಗಕ್ಕಿದ್ದಾಳೆ. ಅವರ ಹೆಸರುಗಳನ್ನು ಅವರವರ ತೋಳುಗಳ ಮೇಲೆ ಕೆತ್ತಲಾಗಿದೆ. ಆದರೆ ಕೃಷ್ಣದೇವರಾಯನು ತನ್ನ 'ಅಮುಕ್ತಮೌಲ್ಯದ'ದಲ್ಲಿ (ಮೊದಲ ಕಾವ್ಯ 33ನೇ ಪದ್ಯ) ತನಗೆ ಅರ್ಪಿತವಾಗಿ ಬರೆದ ಅಲ್ಲಸಾನಿ ಪೆದ್ದಣ್ಣನ 'ಮನುಚರಿತಮು'ವಿನ ಭವ್ಯ ಕವಿತೆಗಳನ್ನು ಉದಾಹರಿಸುವಾಗ ತನ್ನರಾಣಿಯ ಹೆಸರನ್ನು ಸ್ವಲ್ಪ ಬದಲಾಯಿಸುತ್ತಾನೆ. ಚಿನ್ನದೇವಿಯ ಹೆಸರಿಗೆ ಪರ್ಯಾಯವಾಗಿ 'ಅನ್ನಪೂರ್ಣದೇವಿ'ಎಂಬ ಹೆಸರನ್ನು ನೀಡುತ್ತಾನೆ ಹಾಗೂ ತಿರುಮಲಾದೇವಿಗೆ ಪ್ರಾಧಾನ್ಯತೆಯನ್ನು ನೀಡುತ್ತಾನೆ. ಚಿನ್ನಾದೇವಿಯು ಕ್ರಿ. ಶ. 1517ರ ಧಾರ್ಮಿಕ ಪ್ರವಾಸವನ್ನು ಮುಗಿಸಿದ ಸ್ವಲ್ಪ ಸಮಯದ ನಂತರ ಸತ್ತಳು. ತರುವಾಯ ಅವಳ ಸ್ಥಾನವನ್ನು ಅನ್ನಪೂರ್ಣದೇವಿಯು ಆಕ್ರಮಿಸಿದಳು.

ಕೆಲವು ವಿದ್ವಾಂಸರು ಚಿನ್ನಾದೇವಿಯನ್ನು ಪ್ರತಾಪರುದ್ರಗಜಪತಿಯ ಮಗಳೆಂದು ಪರಿಗಣಿಸಿದರೆ, ಇನ್ನು ಕೆಲವು ವಿದ್ವಾಂಸರು ಕೃಷ್ಣದೇವರಾಯನಿಗೆ ಕಾನೂನುಬದ್ಧವಾಗಿ ಇವಳನ್ನು ವಿವಾಹಮಾಡಿರಲಿಲ್ಲ ಎಂದು ಹೇಳಿದ್ದಾರೆ. ಆದರೆ ಆಸ್ಥಾನಕವಿಗಳು ರಾಜನು ಮದುವೆಯಾದ ಹೆಂಡತಿಯರಲ್ಲಿ ಇವಳೂ ಒಬ್ಬಳು ಎಂದು ಪರಿಗಣಿಸಿದ್ದರು. ಇದು ಕೃಷ್ಣದೇವರಾಯನ್ನೊಂದಿಗಿನ ಅವಳ ನ್ಯಾಯಭದ್ಧವಾದ ಮದುವೆಗೆ ಇನ್ನಷ್ಟು ಪುಷ್ಠಿಯನ್ನು ನೀಡುತ್ತದೆ. ಈ ಅಂಶವನ್ನು ಆ ಕಾಲದಲ್ಲಿ ನಾಡಿನುದ್ದಕ್ಕೂ ಸಿಕ್ಕಿರುವ ಶಿಲಾಶಾಸನಗಳು ಹಾಗೂ ತಿರುಮಲೈನ ಬಳಿ ಪ್ರತಿಷ್ಠಾಪಿಸಿರುವ ಅವಳ ಪ್ರತಿಮೆಯ ಮೂಲಕ ಬಲಪಡಿಸಲಾಗಿದೆ. ಆದ್ದರಿಂದ ನಮಗೆ ದೊರೆತಿರುವ ಸ್ಥಳೀಯ ಸ್ಪಷ್ಟಮಾಹಿತಿಗಳ ಸಮ್ಮುಖದಲ್ಲಿ ಅವಳನ್ನು ಕೀಳುಜನ್ಮವೆತ್ತಿದ ಮೆಚ್ಚಿನಕನ್ಯೆ ಎಂದಾಗಲೀ ಹಾಗೂ ಅಸ್ಪಷ್ಟವಂಶವನ್ನು ಹೊಂದಿದ್ದಳೆಂದಾಲೀ ಹೇಳುವುದು ತಪ್ಪಾಗುತ್ತದೆ. ಹಾಗೂ ವಿದೇಶೀಯರಾದ ನ್ಯೂನಿಜ್ ಮತ್ತು ಪಯೆಸ್‌ರವರ ಹೇಳಿಕೆಯನ್ನು ನಂಬುವುದು ಹಿತಕರವಾಗಿದೆ. ಆದಾಗ್ಯೂ ಅವಳು ಕೃಷ್ಣದೇವರಾಯನ ಅಚ್ಚುಮೆಚ್ಚಿನ ರಾಣಿಯಾಗಿದ್ದಳು. ಧಾರ್ಮಿಕ ಕೇಂದ್ರಗಳಲ್ಲಿ ದಾನನೀಡುವ ಸಂದರ್ಭಗಳಲ್ಲಿ ಹೆಸರುಗಳನ್ನು ನಮೂದಿಸುತ್ತಿದ್ದ ದಾಖಲೆಗಳಲ್ಲಿ ಹಿರಿಯರಾಣಿಗಿಂತ ಇವಳಿಗೆ ಪ್ರಾಧಾನ್ಯತೆಯನ್ನು ನೀಡಲಾಗುತ್ತಿತ್ತು. ಆದರೆ ಚಿನ್ನದೇವಿಯು ಪ್ರತಾಪರುದ್ರನ ಮಗಳಲ್ಲವೆಂದು ನಾವು ಹೇಳಬಹುದು ಏಕೆಂದರೆ ಚಿನ್ನಾದೇವಿಯು ಗಜಪತಿ ರಾಜಕುಮಾರಿಗಿಂತ ಮೊದಲೇ ಕೃಷ್ಣದೇವರಾಯನೊಂದಿಗೆ ವಿವಾಹವಾಗಿದ್ದಳು. ಚಿನ್ನಾದೇವಿಯು ಇವನ ಕಿರಿಯ

ರಾಣಿಯಾಗಿದ್ದಳು. ಇವನು ಸಿಂಹಾಸನವನ್ನೇರಿದ ನಂತರ ಮದುವೆಯಾದನು ಹಾಗೂ ಕ್ರಿ.ಶ.1517ರಲ್ಲಿ ಇವಳು ಕಾಲವಾಗುವವರೆಗೂ ಐದು ಅಥವಾ ಆರು ವರ್ಷಗಳ ಕಾಲ ರಾಜ ಕೃಪಾಕಟಾಕ್ಷವನ್ನು ಅನುಭವಿಸಿದಳು. ಚಿನ್ನಾದೇವಿಯ ಕುಲವು ಯಾವುದೆಂದು ತಿಳಿಯದಾಗಿದೆ.

ಕ್ರಿ.ಶ.1512ರ ದಿನಾಂಕದ ನಾಗಮಂಗಲದಲ್ಲಿನ ಫಲಕಗಳಾದ ದೊಡ್ಡ ಲಿಖಿತವು ಕೃಷ್ಣದೇವರಾಯನು ತನ್ನ ಮೆಚ್ಚಿನ ರಾಣಿಯರಲ್ಲಿ ಒಬ್ಬಳಾದ ಚಿನ್ನದೇವಿಯ ಗೌರವಾರ್ಥವಾಗಿ ಶಿವಗಂಗೆಯ ಗಂಗಾಧರ ಎಂಬ ಬ್ರಾಹ್ಮಣ ಪಂಡಿತನಿಗೆ ಹಿರಿಜಟ್ಟಿಗ ಎಂಬ ಗ್ರಾಮದ ಹೆಸರನ್ನು ಚಿನ್ನಾದೇವಿಪುರ ಎಂದು ಬದಲಾಯಿಸಿ ಅದರ ಪಕ್ಕದ ನಾಲ್ಕು ಸಣ್ಣ ಗ್ರಾಮಗಳೊಂದಿಗೆ ಕೊಡುಗೆಯಾಗಿ ನೀಡಿದುದನು ದಾಖಲಿಸುತ್ತದೆ.[15]

ನ್ಯೂನಿಜ್ ಪ್ರಕಾರ: 'ಈ ಹೆಂಗಸಿನ ಗೌರವಾರ್ಥವಾಗಿ ಈ ರಾಜನು ಒಂದು ನಗರವನ್ನು ನಿರ್ಮಿಸಿದನು. ಅವಳ ಮೇಲಿದ್ದ ಪ್ರೀತಿಗಾಗಿ ಅದನ್ನು ಕಟ್ಟಿಸಿದನು. ಅದನ್ನು ನಾಗಲಾಪುರ ಎಂದು ಕರೆದನು. ಅದರ ಸುತ್ತಲೂ ಇರುವ ನಿರ್ಮಾಣವು ಇವನ ರಾಜ್ಯದಲ್ಲೇ ಅತ್ಯಂತ ಉತ್ತಮವಾದ ನಿರ್ಮಾಣವಾಗಿದೆ. ಮನೆಗಳಿಂದ ಕೂಡಿದ ಕಲ್ಲುಕಟ್ಟಡಗಳಿಂದ ಕೂಡಿದ ಉದ್ದವಾದ ಮತ್ತು ದೊಡ್ಡದಾದ ಬೀದಿಯನ್ನು ಮಾಡಿಸಿದನು. ತನ್ನರಾಜ್ಯದ ಎಲ್ಲಾಮುಖ್ಯಸ್ಥರಿಗೂ ಅವರವರಿಗೆ ಅರಮನೆಗಳನ್ನು ಕಟ್ಟಿಕೊಳ್ಳಲು ಆಜ್ಞೆಯಿತ್ತನು ಹಾಗೂ ಅವರು ಆ ರೀತಿ ನೆಡೆದುಕೊಂಡರು. ಅದು ಅದರ ಕೆಳಗೆ ಇದ್ದ ನೀರಾವರಿಭೂಮಿಯ ಉದ್ದೇಶಕ್ಕೆ ಭಾಗಶಃ ಉಪಯೋಗವಾಗಬೇಕಿತ್ತು ಹಾಗೂ ಹೊಸನಗರ ನಾಗಲಾಪುರಕ್ಕೆ ನೀರು ಸರಬರಾಜಿನ ಉದ್ದೇಶಕ್ಕೆ ಉಪಯುಕ್ತವಾಯಿತು.ಇದರಿಂದ ನೀರಾವರಿ ಹೊಂದಿದ ಜಮೀನಿನಿಂದ ಬಂದ ಆದಾಯವು ನುನಿಜ್‌ನ ಕಾಲದಲ್ಲಿ ಹದಿನೈದು ವರ್ಷಗಳೊಳಗೆ 20.000 ಪಗೋಡಗಳಾದವು. ಆದರೆ ನಾವು ಇದನ್ನು ಒಪ್ಪಲಾಗುವುದಿಲ್ಲ.ಕಾರಣವೇನೆಂದರೆ ನಾಗಲಾದೇವಿಯು ಕೃಷ್ಣದೇವರಾಯ ತಾಯಿಯಾಗಿದ್ದಳು ಹಾಗೂ ಚಿನ್ನಾದೇವಿಯಾಗಿರಲಿಲ್ಲ.

ಚಿನ್ನಾದೇವಿಯು ರಾಜನೊಂದಿಗೆ ದೇವಾಲಯ ಮತ್ತು ರಂಗಭೂಮಿಗೆ ಹೋಗುತ್ತಿದ್ದಳು. ಅವಳು ತನ್ನದೇಆದ ಸ್ವಂತಖಜಾನೆ ಮತ್ತು ಸ್ವಂತ ಸೇವಕರನ್ನು ಹೊಂದಿದ್ದಳು. ಇವಳು ಸ್ವಾತಂತ್ರ್ಯವನ್ನು ಅನುಭವಿಸಿದ್ದಳು. ದೇವಾಲಯಗಳಿಗೆ ಧನ ಹಾಗೂ ಆಭರಣಗಳನ್ನು ದಾರಾಳವಾಗಿ ದಾನಮಾಡಿದಳು ವಿಜಯನಗರ ಜನತೆಯಯು ಇವಳನ್ನು ಪ್ರೀತಿಸುತ್ತಿದ್ದರು.

ಕೆಳಗಿನ ಶಾಸನಗಳು ಚಿನ್ನದೇವಿಯನ್ನು ಕೃಷ್ಣದೇವರಾಯ ಕಿರಿಯರಾಣಿಯಾಗಿ ದೊಡ್ಡದಾನಿಯಾಗಿ ಹೊರಹೊಮ್ಮಿರುವ ಅಂಶವನ್ನು ದಾಖಲಿಸುತ್ತವೆ. ಕ್ರಿ.ಶ. 1513ರಲ್ಲಿ ಒಂದು ಶಾಸನವು ತಿರುವೆಂಗಲನಾಥ ದೇವರ ವಿಶೇಷಪೂಜೆ ಹಾಗೂ ಸೇವೆಗಾಗಿ ರಾಣಿ ಚಿನ್ನಮಾಜಿಯವರು 374ಯೂನಿಟ್‌ಗಳಷ್ಟು ತೂಕದ ಚಿನ್ನದ ಪಾತ್ರೆಯನ್ನು ಕಾಣಿಕೆಯಾಗಿ ನೀಡಿದಳೆಂದು ದಾಖಲಿಸುತ್ತದೆ. ಕ್ರಿ.ಶ.1513ರ ಒಂದು ಶಾಸನವು ತಿರುವೆಂಗಲನಾಥದೇವರಿಗೆ ರಾತ್ರಿ ಪೂಜೆಯಾದ ನಂತರ ಹಾಲಿನ ನೈವೇದ್ಯವನ್ನು ನೀಡಲು ಚಿನ್ನಾಜಿಯಮ್ಮಳು 374 ಯೂನಿಟ್‌ಗಳಷ್ಟು ತೂಕದ ಚಿನ್ನದ

ಪಾತ್ರೆಯನ್ನು ನೀಡಿದಳೆಂದು ಬರೆಯುತ್ತದೆ.[16] ಕ್ರಿ.ಶ.1514ರ ಶಿಲಾಶಾಸನವೊಂದು ಕೃಷ್ಣದೇವರಾಯನು ಗಜಪತಿ ಅರಸನನ್ನು ಸೋಲಿಸಿದ ನಂತರ ತನ್ನ ರಾಣಿಯಾದ ಚಿನ್ನಾದೇವಿಯೊಂದಿಗೆ ತಿರುಪತಿಗೆ ಭೇಟಿ ನೀಡಿದನೆಂದು ಹೇಳುತ್ತದೆ. ಚಿನ್ನಾದೇವಿಯು ಒಂದು ಪದಕಂ ಮತ್ತು ಕಥಾ ಮೂಲವನ್ನು ನೀಡಿದಳು ಹಾಗೂ ತೊಂಡೈ-ಮಂಡಲದ ಮುಡಿಯಾರ್ ಗ್ರಾಮವನ್ನು ಅವಳಿಂದ ನಿರ್ದೇಶಿಸಲ್ಪಟ್ಟ ದಿನನಿತ್ಯದ ಪೂಜೆಗಾಗಿ ನೀಡಿದಳು.[17]

ಕ್ರಿ.ಶ. 1514ರ ಶಾಸನವೊಂದು ಹೇಳುವಂತೆ ಕೃಷ್ಣದೇವರಾಯ ಮತ್ತು ಅವನ ಇಬ್ಬರು ರಾಣಿಯರು ಗೋಪುರವನ್ನು ಪ್ರತಿಷ್ಠಾಪಿಸಿದರು ಹಾಗೂ 25 ಬೆಳ್ಳಿ ದೀಪಗಳೊಂದಿಗೆ 991 ಪಗೋಡಗಳ ಜಿಲ್ಲೆಯುಳ್ಳ ಒಂದು ಚಿನ್ನದ ತಟ್ಟೆ, 20 ಆಕಳು ಮತ್ತು 4 ಹಳ್ಳಿಗಳನ್ನು ವಿಠಲದೇವನ ಪೂಜೆಗಾಗಿ ಕೊಡುಗೆ ನೀಡಿದರು.[18] ಕ್ರಿ.ಶ.1514ರ ಶಾಸನವೊಂದು ಕೃಷ್ಣದೇವರಾಯನ ಕಿರಿಯ ರಾಣಿಯಾದ ಚಿನ್ನಮಾಜಿದೇವಿಯು ಶ್ರೀವೆಂಕಟೇಶನಿಗೆ ಬಹಳ ದುಭಾರಿಯಾದ ಕಂಠೀಹಾರವನ್ನು ಕಾಣಿಕೆಯಾಗಿ ನೀಡಿದಳು ಹಾಗೂ ದೈನಂದಿನ ಐದು ತಿರುಪ್ಪೋನಕಂ ಪೂಜೆಗಾಗಿ ಮುದಿಯಾರ್ ಗ್ರಾಮವನ್ನು ದಾನ ಮಾಡಿದಳು ಎಂದು ಉಲ್ಲೇಖಿಸುತ್ತದೆ.[19] ಕ್ರಿ.ಶ. 1515ರ ಶಾಸನವೊಂದು ಚಿನ್ನಾದೇವಿಯು ರಾಜನೊಂದಿಗೆ ಧರಣಿಕೋಟದ ಅಮರೇಶ್ವರಕ್ಕೆ ಭೇಟಿ ನೀಡಿದಳು ಹಾಗೂ ದೇವರಸಮ್ಮುಖದಲ್ಲಿ ನದಿಯ ದಂಡೆಯ ಮೇಲೆ ತುಲಪುರುಷ ಆಚರಣೆಯನ್ನು ಆಚರಿಸಿದಳೆಂದು ಹೇಳುತ್ತದೆ. ಅವನು ರತ್ನಧಮ ಮತ್ತು ಸಪ್ತಸಾಗರ ಮಹಾದಾನಗಳನ್ನು ತನ್ನರಾಣಿಯಾದ ಚಿನ್ನಾದೇವಿಯಿಂದ ಮಾಡಿಸಿದನು.[20]

ಕ್ರಿ.ಶ.1515ರ ಶಾಸನವೊಂದು ಹೇಳುವಂತೆ ಕೃಷ್ಣದೇವರಾಯನು ತನ್ನರಾಣಿಯಾದ ಚಿನ್ನಾದೇವಿಯೊಂದಿಗೆ ತಿರುಮಲೈಗೆ ಮಹಾದಾನವನ್ನು ಮಾಡಿದನು. 1517ರಲ್ಲಿ ಚಿನ್ನದೇವಿಯು ತಿರುಪತಿಗೆ ಮಹಾದಾನವನ್ನು ಮಾಡಿದಳು.[21] ಕ್ರಿ.ಶ.1517ರ ಶಾಸನವೊಂದು ಇವನು ಸಿಂಹಾದ್ರಿ ಪೊರ್ಟುನೂರಿನ ಬಳಿ ಚಿನ್ನಾದೇವಿಯಿಂದ ಮಹಾದಾನವನ್ನು ಮಾಡಿಸಿದನು. ಹಾಗೂ ತನ್ನರಾಣಿಯೊಂದಿಗೆ ವಿಷ್ಣುಕಂಚಿಯಲ್ಲಿನ ವರದರಾಜು ದೇವಾಲಯಕ್ಕೆ ಭೇಟಿನೀಡಿ ಕಾಣಿಕೆಯಾಗಿ ಒಂದು ಸಾವಿರ ವರಹಗಳನ್ನು ನೀಡಿದನೆಂದು ಹೇಳುತ್ತದೆ.

ಕ್ರಿ. ಶ. 1515ರ ಶಾಸನವೊಂದು ಕೃಷ್ಣದೇವರಾಯನು ಉದಯಗಿರಿಯನ್ನು ವಶಪಡಿಸಿಕೊಂಡ ನಂತರ ರಾಜಧಾನಿಗೆ ಮರಳುತ್ತಿದ್ದಾಗ ತಿರುಮಲದೇವಾಲಯಕ್ಕೆ ಭೇಟಿನೀಡಿದನು. ಆ ಸಂದರ್ಭದಲ್ಲಿ ಇವನ ರಾಣಿಯಾದ ಚಿನ್ನಾಜಿದೇವಿಅಮ್ಮನಳು ಶ್ರೀವೆಂಕಟೇಶನ ಪೂಜೆಗೆಂದು ಒಡವೆಗಳು ಹಾಗೂ ತೊಂಡೈಮಂಡಲನ ಗ್ರಾಮವೊಂದನ್ನು ಕಾಣಿಕೆಯಾಗಿ ನೀಡಿದುದು ದಾಖಲಿಸುತ್ತದೆ. ಆಭರಣಗಳೆಂದರೆ 111 ಮುತ್ತುಗಳನ್ನೊಳಗೊಂಡ ಒಂದು ಲೋಲಕ, ಅದರ ಮಧ್ಯೆ ಪಚ್ಚೆ, 2 ರತ್ನಗಳು ಮತ್ತು ನಾಲ್ಕು ವಜ್ರಗಳು ಎಲ್ಲವೂ ಸೇರಿ 200ಯೂನಿಟ್‌ಗಳಷ್ಟು ತೂಕವಿತ್ತು.[22]

ಈ ರೀತಿಯಾಗಿ ಮೇಲಿನ ಶಾಸನಗಳು ಕೃಷ್ಣದೇವರಾಯನ ಕಿರಿಯ ರಾಣಿಯಾದ ಚಿನ್ನಾದೇವಿಯನ್ನು ಶ್ರೇಷ್ಠದಾಯಳನ್ನಾಗಿ ಅವಳ ಮೇಲೆ (ಪ್ರಶಂಸಿಸುತ್ತವೆ) ಬೆಳಕನ್ನು ಚೆಲ್ಲುತ್ತವೆ. ಅವಳು ರತ್ನಧೇನು, ಸಪ್ತಸಾಗರ ಮಹಾದಾನಗಳನ್ನು ಮಾಡಿಸಿದಳು ಮತ್ತು ಚಿನ್ನದ ಆಭರಣಗಳು ರತ್ನಗಳು, ವಜ್ರಗಳು ಬೆಲೆಬಾಳುವ ಹರಳುಗಳು, ಚಿನ್ನ ಹಾಗೂ ಬೆಳ್ಳಿಯ ಬಟ್ಟಲುಗಳು ಮತ್ತು ಹರಿವಾಣಗಳು ಹಾಗೂ ಗ್ರಾಮಗಳನ್ನು ದೇವಾಲಯಗಳಿಗೆ ದಾನಮಾಡಿದಳು. ಆದ್ದರಿಂದ ಕೃಷ್ಣದೇವರಾಯನ ರಾಣಿಯಾದ ಚಿನ್ನಾದೇವಿಯು ದೇವಾಲಯಗಳಿಗೆ ದಾನದ ಹೊಳೆಯನ್ನೇ ಹರಿಸುವಷ್ಟು ಶ್ರೀಮಂತಳಾಗಿದ್ದಳು ಎಂದು ಹೇಳಬಹುದು.

ಸಿ. ವರದಾಜಿ-ದೇವಿ-ಅಮ್ಮನ್:-

ಸಲಾಕರಾಜುವಿನ ಮಗಳಾದ ವರದಾಂಬಿಕ ಅಥವಾ ವರದಾದೇವಿ ಅಮ್ಮನ್‌ಳು ಅಚ್ಚುತರಾಯನಿಗೆ ವಿವಾಹವಾದವರಲ್ಲಿ ಮೊದಲನೆಯವಳಾಗಿದ್ದಳು. ಪ್ರತಿಭಾವಂತ ಸುಸಂಸ್ಕೃತ ಕವಿಯತ್ರಿಯಾದ ತಿರುಮಲಾಂಬಳು ರಚಿಸಿದ 'ವರದಾಂಬಿಕ-ಪರಣಯಂ'ಎಂಬ ಶೀರ್ಷಿಕೆಯನ್ನು ಹೊಂದಿದ ಸಂಸ್ಕೃತ ಕೃತಿಯು ಅಚ್ಚುತರಾಯನೊಂದಿಗಿನ ವರದಾಂಬಿಕೆಯ ವಿವಾಹಕ್ಕೆ ಸಮರ್ಪಿಸಲಾಗಿದೆ.

ಸಲಾಕ ವಂಶದ ಸದಸ್ಯರೊಂದಿಗೆ ವರದಾಂಬಿಕರಾಣಿಯ ಸಂಬಂಧವನ್ನು ಸ್ಪಷ್ಟಪಡಿಸುವಲ್ಲಿ ಶಾಸನಗಳು ನಮಗೆ ಸಹಾಯಕವಾಗಿದೆ. (1) 1463 ನೇ ಶಕಷ್ಲವ (ಕ್ರಿ. ಶ. 21-12-154) ದಿನಾಂಕದ ಶಿಲಾಶಾಸನವೊಂದು ವರದರಾಜಿಯಮ್ಮನ ತಾಯಿಯಾದ ಸಲಾಕರಾಜ ತಿರುಮಲಳು ತಿರುಮಲೈನ ಪಶ್ಚಿಮಬೀದಿಯಲ್ಲಿ 120 ಪಾನ್‌ಗೆ ಒಂದು ತುಂಡು ಭೂಮಿಯನ್ನು ಕೊಂಡುಕೊಂಡು ಅಚ್ಯುತ ಮಹಾರಾಯನ ಪಟ್ಟಮಹಾದೇವಿಯರ್ ಆದ ವರದಜಿಅಮ್ಮನ್ ಶ್ರೇಯಸ್ಸಿಗೊಸ್ಕರವಾಗಿ ಅರಗಿಣಿ-ತಿರುವೀಧಿಯನ್ನು (ಅಂದರೆ ಮಧ್ಯದಲ್ಲಿ ವಿಶಾಲವಾದ ಜಾಗವನ್ನು ಹೊಂದಿದ ಹಾಗೂ ಅದರ ಸುತ್ತ ಕಟ್ಟಲಾದ ಮನೆಗಳ ಒಂದು ಸಾಲು)ಮಾಡಿಸಿದಳು.[22]

ವರದಾಂಬಿಕೆಳು ರಾಣಿಯಾಗಿ ಧಾರ್ಮಿಕ ಹಾಗೂ ಇತರೆ ಚಳುವಳಿಗಳಲ್ಲಿ ಅಚ್ಚುತರಾಯ ಸಾಮ್ರಾಟನಿಗೆ ಆಪ್ತ ಸಹಚರಳಾಗಿದ್ದಳು. ಅಚ್ಚುತರಾಯನ ದಕ್ಷಿಣ ದಂಡೆಯಾತ್ರೆಯನ್ನು ಮಾಡುವ ಮೊದಲು ತನ್ನ ರಾಣಿ ವರದಾಂಬಿಕೆ ಮತ್ತು ಮಗ ವೆಂಕಟಾದ್ರಿಯೊಂದಿಗೆ ತಿರುಪತಿ, ಕಾಳಹಸ್ತಿ, ಕಂಚಿ, ತಿರುಮಲೈ ಮತ್ತು ಶ್ರೀರಂಗರಿಗೆ ಇಲ್ಲಿನ ದೇವತೆಗಳಿಗೆ ಪೂಜೆಯನ್ನು ಮಾಡಿಸಲು ಹೋಗಿರುವನೆಂದು ಕಂಡುಬರುತ್ತದೆ. ಈ ದಂಡೆಯಾತ್ರೆಯು ಅವನಿಗೆ ದೊಡ್ಡ ವಿಜಯಮಾಲಿಕೆಯ ತಂದುಕೊಟ್ಟಿತು. ತನ್ನ ದಕ್ಷಿಣದ ದಿಗ್ವಿಜಯವನ್ನು ಆಚರಿಸಲು ಅಚ್ಚುತರಾಯನು ಜನವರಿ 13 ಕ್ರಿ.ಶ.1533ರ ಶಾಸನವೊಂದು ಹೇಳಿರುವಂತೆ ತನ್ನ ರಾಣಿ ವರದಾಜಿ ಅಮ್ಮನ್ ಮತ್ತು ಮಗ ಕುಮಾರ ವೆಂಕಟಾದ್ರಿಯೊಂದಿಗೆ ತಿರುಪತಿ ದೇವಾಲಯಕ್ಕೆ ಭೇಟಿನೀಡಿದರು.[23]

ಈ ರೀತಿಯ ರಾಣಿಯ ಜೀವನದ ಅಂಶಗಳ ಮೇಲೆ ಶಾಸನ ಹಾಗೂ ಸಾಹಿತ್ಯಿಕ ಕೃತಿಗಳು ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಜನವರಿ 20 ಕ್ರಿ.ಶ. 1533ಮತ್ತು ಆಗಸ್ಟ್ 17 ಕ್ರಿ.ಶ.1533ರ ಒಂದೆರಡು ಶಾಸನಗಳು ಅಚ್ಯುತರಾಯ ತನ್ನ ಹೆಂಡತಿಯಾದ ವರದಾಂಬಿಕಾದೇವಿ ಮತ್ತು ಮಗನಾದ ಕುಮಾರ ವೆಂಕಟಾದ್ರಿಉದಯರ್‌ನೊಂದಿಗೆ ಮುತ್ತುಗಳಿಗೆ ವಿರುದ್ಧವಾಗಿ ಮುಕ್ತತುಲಾಪುರುಷದಾನವನ್ನು ಮಾಡಿಸಿದನು ಹಾಗೂ ವಿಶೇಷಪೂಜೆಗಾಗಿ 17 ಗ್ರಾಮಗಳ ಆದಾಯವನ್ನು ಅರುಲಾಳಪೆರುಮಾಳ್ ದೇವಾಲಯಕ್ಕೆ ಕೊಡಿಸಿದನು ಹಾಗೂ 1.000 ಆಕಳುಗಳನ್ನು ದಾನಮಾಡಿದನು.[24]

ಏಪ್ರಿಲ್ 5, ಕ್ರಿ.ಶ. 1534ರ ಶಾಸನವೊಂದು 920 ರಕ್ಷಪಗಳ ವಾರ್ಷಿಕ ಆದಾಯವನ್ನು ಕಲ್ಪಿಸಿಕೊಡುವ 6ಹಳ್ಳಿಗಳನ್ನು ವರದಾಜಿದೇವಿಅಮ್ಮನಳು ಶ್ರೀಭಂಡಾರಂನ (ತಿರುಮಲೈ ದೇವಸ್ಥಾನದ ಖಜಾನೆ) ಉಪಯೋಗಕ್ಕಾಗಿ ತಿರುಮಲೈನ ಬಳಿ ಕೃಷ್ಣದೇವರಾಯನ ಅವನಾರಂ ಮತ್ತು ಅಚ್ಯುತರಾಯನ ಅವಸರಂಗಳನ್ನು ಏರ್ಪಡಿಸಿದ ನಂತರ ವರದಾಜಿದೇವಿ ಅಮ್ಮನ್ ಅವಸರಂ ಎಂದು ಕರೆಯಲ್ಪಡುತ್ತಿದ್ದ ಅವಳ ಉಭೈಯಂನ್ನು ಆಚರಿಸುವುದಕ್ಕಾಗಿ ಶ್ರೀವೆಂಕಟೇಶನನ್ನು 20 ತಿರುಪ್ಪೋೇಕಂ (ವ.ಣ. ಪೊಂಗಲ್ ತಿಳಿಗೈ)ಎಂಬ ದಿನನಿತ್ಯದ ಪೂಜೆಯಿಂದ ಆರಾಧಿಸುವ ಉದ್ದೇಶದಿಂದಾಗಿ ನೀಡಿದಳೆಂದು ಹೇಳುತ್ತದೆ. ಆರು ಹಳ್ಳಿಗಳಲ್ಲಿ ಎರಡು ಹಳ್ಳಿಗಳು ಗ್ರಂಡಿಕೊಟ್ಟ ನೆರಮೈನಲ್ಲಿದ್ದವು. ಮೂರು ಹಳ್ಳಿಗಳು ಕೊಂಡವೀಡು ಶ್ರೀಮೈನಿಂದ ಬಂದಿದ್ದವು ಹಾಗೂ ಮತ್ತೊಂದು ನಾರಾಯಣಪುರಂನಿಂದ ಬಂದಿತ್ತು.[25]

ಈ ರೀತಿಯಾಗಿ ರಾಣಿಯು ತಾನು ಸ್ವಂತ ಧನದಾನವನ್ನು ಮಾಡಿರುವುದಾಗಿಯೂ ಹಾಗೂ ತನ್ನ ಪತಿ ಸಾಮ್ರಾಟನಾದ ಅಚ್ಯುತರಾಯನೊಂದಿಗೆ ಧಾರ್ಮಿಕ ವಿಧಿಗಳನ್ನು ಹಂಚಿಕೊಂಡಿರುವುದಾಗಿ ಕಂಡುಬರುತ್ತಾಳೆ. ಸಮಕಾಲೀನ ಸಂಸ್ಕೃತ ಕೃತಿಯಾದ **ವರದಾಂಬಿಕ ಪರಿಣಯಂ**ನಲ್ಲಿ ತಿರುಪತಿ ದೇವರದಯೆಯಿಂದಾಗಿ ಅಚ್ಯುತರಾಯ ಮತ್ತು ವರದಾಂಬಿಕೆಯರಿಗೆ ಗಂಡುಮಗು ಜನನವಾಯಿತೆಂದೂ ಆದ ಕಾರಣ ಆ ಮಗುವಿಗೆ ತಿರುಮಲೈ ದೇವರ ಹೆಸರಿನಲ್ಲಿ ವೆಂಕಟಾದ್ರಿ ಎಂದು ನಾಮಕರಣಮಾಡಲಾಯಿತು ಎಂದು ಹೇಳಲಾಗಿದೆ. ರಾಜಮನೆತನದವರು ವಿಷ್ಣುದೇವರ ಮೇಲೆ ಹೊಂದಿದ್ದ ಅಪಾರ ನಂಬಿಕೆಯನ್ನು ಸ್ಪಷ್ಟವಾಗಿ ಹೊರತುಪಡಿಸುತ್ತದೆ ಅಚ್ಯುತರಾಯ ಅವನ ರಾಣಿ ವರದಾಂಬಿಕೆ ಹಾಗೂ ಅವರ ಮಗನಾದ ವೆಂಕಟಾದ್ರಿಯ ಧಾರ್ಮಿಕ ಶ್ರೇಯಸ್ಸಿಗೋಸ್ಕರ ರಾಜನ ಅಧಿಕಾರಿಗಳು ಅವರ ಸ್ವಂತ ಸಾಮರ್ಥ್ಯದಲ್ಲೇ ಹೊರಡಿಸಿದ ಹಲವಾರು ಶಾಸನಗಳಿವೆ. ಈ ರೀತಿಯಾಗಿ ಪಡವೀಡು ತುಳುವ ವರಗಲು ನಾಯಕರ್‌ನ ಮಗನಾದ ಸೇನಾಧಿಕಾರಿಯಾದ ಶ್ರೀರಂಗನಾಯಕನು ಒಂದು ಶಾಸನವನ್ನು ಹೊರಡಿಸಿದನು ಸ್ವಾಮಿ ಅಚ್ಯುತರಾಯ ಮಹಾರಾಯ ವರದಾಜಿ ಅಮ್ಮನ್ ಅವರುಗಳ ಮತ್ತು ಚಿಕ್ಕವೆಂಕಟಾದ್ರಿ ಉದಯರ್ ಇವರ ಶ್ರೇಯಸ್ಸಿಗಾಗಿ ಡಿಸೆಂಬರ್ 14, ಕ್ರಿ.ಶ.1536ಕ್ಕೆ ಹೊಂದಾಣಿಕೆಯಾಗುವ 1458ರ ಶಕದಂದು 650 ನರ್ಪಣಂ ಠೇವಣಿಯ ಮುಖಾಂತರ ಪೂಜೆಗಾಗಿ ಏರ್ಪಾಟುಮಾಡಿದನು. ನಾವು ಇದುವರೆಗೂ ರಾಣಿಯರು ರಾಜರೊಂದಿಗೆ ಹಲವಾರು ಕ್ಷೇತ್ರಗಳಲ್ಲಿ ಅವರ ಬಲಗೈಯಾಗಿ ಕ್ರಿಯಾಶೀಲ ಸಹಭಾಗಿತ್ವವನ್ನು ಹೊಂದಿರುವ ಉದಾಹರಣೆಗಳನ್ನು ನೋಡಿದ್ದೇವೆ.[26] ಇದಕ್ಕೆ ಪ್ರತಿಯಾಗಿ ಅರಸರೂ

ಸ್ಮಾರಕಗಳು, ಕಟ್ಟಡಗಳು, ನಗರಗಳ ನಿರ್ಮಾಣದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿದರು. ಉದಾಹರಣೆಗೆ ಶಾಸನದ ಸಂಖ್ಯೆ544ರಲ್ಲಿ ಎಂಟು ಮಂಟಪಗಳನ್ನು ಉಲ್ಲೇಖಿಸಲಾಗಿದೆ.[27] ಅವುಗಳಲ್ಲೆರಡನ್ನು ಅಚ್ಯುತರಾಯರು ಸ್ವಾಮಿಯ ಹೆಸರಿನಲ್ಲಿ ಎರಡನ್ನು ಅವನ ರಾಣಿ ವರದಾಜಿ ಅಮ್ಮನ್ ಹೆಸರಿನಲ್ಲಿ ನಾಮಕರಣ ಮಾಡಲಾಗಿದೆ.[28] ನಗರಗಳನ್ನು ವರದಾಜಿ ಅಮ್ಮನ ಹೆಸರಿನಲ್ಲಿ ವರದಾಜಿವರಪಟ್ಟಣ ಎಂದು ಹೆಸರಿಸಲಾಯಿತು. ಕಮಲಾಪುರದ ವರದಾಜಿಯವರ ಪಟ್ಟಣವನ್ನು ತನ್ನ ಪತ್ನಿಯ ಗೌರವಾರ್ಥವಾಗಿ ನಿರ್ಮಿಸಿದನು.

2. ದಾನಿಗಳಾಗಿ ಸಾಮಾನ್ಯ ಮಹಿಳೆಯರು:-

ರಾಜ್ಯದ ಆರ್ಥಿಕ ಚಟುವಟಿಕಗಳಿಗೆ ಸಂಬಂಧಿಸಿದಂತೆ ನಾವು ಎರಡು ವಿಧವಾದ ಸ್ತ್ರೀಪಂಗಡಳನ್ನು ನೋಡಬಹುದು ಅವುಗಳೆಂದರೆ ಉತ್ತಮ ಕುಲದ ಮಹಿಳೆಯರು ಹಾಗೂ ಸಾಮಾನ್ಯ ಮಹಿಳೆಯರೂ ದೇವಾಲಯಗಳಿಗೆ ದಾನನೀಡುವುದರಲ್ಲಿ ಪ್ರಮುಖಪಾತ್ರವನ್ನು ನಿರ್ವಹಿಸಿದರು ಎಂಬುದನ್ನು ಸಾಬೀತುಪಡಿಸಲು ಹಲವಾರು ಶಾಸನಗಳಿವೆ. ದೇವಾಲಯಗಳು ಉಡುಗೊರೆ ಹಾಗೂ ಕೆಲವು ಆಗಾಧವಾದ ಹಣವನ್ನು ಪಡೆದವು. ಹಣವನ್ನು ಕೊಡುತ್ತಿದ್ದ ದಾನಿಗಳು ದೇವರಿಗೆ ಅರ್ಪಿಸುತ್ತಿದ್ದ ಪ್ರಸಾದದಲ್ಲಿ ಆಗಿನ ಕಾಲದ ಭಕ್ತಿ ದೇವಾಲಯದ ಆಚರಣೆಯ ಪರವಾಗಿ ಪಾಲನ್ನು ಹೊಂದುವ ಫಲಾನುಭವಿಗಳಾಗುತ್ತಿದ್ದರು. ಸಾಮಾನ್ಯ ಮಹಿಳೆಯರು ದೇವಾಲಯಗಳಿಗೆ ಹಣವನ್ನು ದಾನಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದರು. ಈ ಕೆಳಗಿನ ಶಾಸನಗಳು ಸಾಮಾನ್ಯ ಮಹಿಳೆಯರು ದಾನಿಗಳಾಗಿದ್ದುದರ ಬಗ್ಗೆ ವಿವರಣೆಯನ್ನು ನೀಡುತ್ತವೆ.

ಕ್ರಿ.ಶ. 1390ರಲ್ಲಿ ಮುಕ್ಕಣ್ಣ ಕದಂಬವನ ಮಗಳಾದ ಪದುಮಲಾದೇವಿಯು ಓಮಂಜಾರು ಬಳಿಯಲ್ಲಿರುವ ಅಮೃತನಾಥದೇವರಿಗೆ ಪೂಜೆ ಹಾಗೂ ಪುನಸ್ಕಾರಕ್ಕಾಗಿ ಹಾಗೂ ಛತ್ರದಲ್ಲಿನ ಅನ್ನಸಂತರ್ಪಣೆಯನ್ನು ಏರ್ಪಡಿಸುವುದಕ್ಕಾಗಿ ಭೂಮಿಯನ್ನು ದಾನಮಾಡಿದಳು.ಈಗ ಒಂದು ಉದಾಹರಣೆಯನ್ನು ಉಲ್ಲೇಖಿಸುವುದಾದರೆ ಕ್ರಿ.ಶ.1458ರ 19ನೇ ಗುರುವಾದ ಪ್ರಧಾನ ದೇವರಾಯಮಹರಾಯನ ಆಳ್ವಿಕೆಯಲ್ಲಿ ಅರಮನೆಯ ವಾಚಕಳಾದ ಹೊನ್ನಮ್ಮವ್ವಳು ಒಂದು ಭೂಪ್ರದೇಶವನ್ನು ಕೊಂಡುಕೊಂಡು ಮಲ್ಲಿಕಾರ್ಜನ ದೇವರ ಪೂಜೆಪುನಸ್ಕಾರಕ್ಕಾಗಿ ಹಾಗೂ ಆ ದೇವಸ್ಥಾನದಲ್ಲಿ ಐದು ಜಂಗಮರಿಗೆ ಅನ್ನಸಂತರ್ಪಣೆಯನ್ನು ಮಾಡಲು ಆ ಭೂಮಿಯನ್ನು ದಾನಮಾಡಿದಳು ಎಂದು ಒಂದು ಶಾಸನವು ಹೇಳುತ್ತದೆ.[30]

ಕ್ರಿ.ಶ. 1417ರ ಒಂದು ಶಾಸನವು ತಮ್ಮಣ್ಣ ಡಣ್ಣಾಯಕನ ಹೆಂಡತಿಯಾದ ನಾಚರಮ್ಮಳು ಮೇಲುಕೋಟೆಯ ಐವತ್ತೆರಡು ವೈಷ್ಣವರಿಗೆ ಕೊಡುಗೆಯೊಂದನ್ನು ನೀಡಿದಳು ಎಂದು ಹೇಳುತ್ತದೆ.[31] ವಿಜಯನಗರವನ್ನು ಆಳುತ್ತಿದ್ದ ಭುಜಬಲನರಸಿಂಗ ಮಹಾರಾಯನ ಹೆಸರಿನಲ್ಲಿ ಜನವರಿ 10 ಕ್ರಿ.ಶ.1510ರಲ್ಲಿ ಚೆಮ್ಮಣ್ಣ ಭಂಡಾರಿಯ ಮಗಳಾದ ಸಂಕಮ್ಮ ಮೊದಲಿಲೆಯು 60 ವರಹಗಳ ಕೊಡುಗೆಯನ್ನು ನೀಡಿದಳು ಹಾಗೂ ಮಹಾದೇವದೇವರ ಸೇವೆಗಾಗಿ

ವಾರ್ಷಿಕವಾಗಿ ನಿರ್ದಿಷ್ಟಪಡಿಸಿದ ಪ್ರಮಾಣದಲ್ಲಿ ಅಕ್ಕಿಯನ್ನು ನೀಡಿದಳು ಎಂದು ದಾಖಲಾಗಿದೆ.[32] ಕ್ರಿ.ಶ.1510ರಲ್ಲಿ ಎಕ್ಕಡಿ ತಿಮ್ಮಣ್ಣನ ಮಗಳಾದ ನಲ್ಲಗಂಗಮ್ಮನ್ನಳು ಕ್ರಿ.ಶ.1510ರಲ್ಲಿ ಕೃಷ್ಣದೇವರಾಯನ ಹಿತಕ್ಕೋಸ್ಕರವಾಗಿ ತಿರುಮಲೈಯ ಶ್ರೀವೆಂಕಟೇಶ್ವರನಿಗೆ ದಿನನಿತ್ಯದ ತಿರುಪೋಣಕಂ ಪೂಜೆಯನ್ನು ನೆರವೇರಿಸಲು 1.500 ನರ್‌ಪಣಂ ನಗದನ್ನು ಠೇವಣಿ ಇಟ್ಟಳು.[33]

ಕ್ರಿ. ಶ. 1513ರ ಒಂದು ಶಾಸನವು ತಿಮ್ಮರಾಯನ ಹೆಂಡತಿಯಾದ ವಿರೂಪ ಜಯಮ್ಮನಳು ತನ್ನ ಪೋಷಕರು ಹಾಗೂ ತನ್ನ ಏಳಿಗೆಗೋಸ್ಕರ ನಾಯನರ್ ತಿರುಕ್ಕಳಟ್ಟಿ ಉದ್ಯೆಯ ನಾಯನಾರನ ಮುಂಜಾನೆಯ ಸೇವೆಯ ಪೂಜೆಗಾಗಿ ಚಿನ್ನದಪಾತ್ರೆ, ಮುತ್ತು ಹಾಗೂ ಬೆಲೆಬಾಳುವ ಹರಳುಗಳು ಹಾಗೂ 1000 ಪಣಂ ಅನ್ನೂ ನೀಡಿದಳೆಂದು ದಾಖಲಿಸುತ್ತದೆ.[34] ಒಂದು ಶಾಸನವು ಅಸ್ಪಷ್ಟವಾಗಿ ಕ್ರಿ.ಶ.1513ರಲ್ಲಿ ಕೃಷ್ಣರಾಯನ ಒಳಿತಿಗಾಗಿ ಒಬ್ಬ ಸ್ತ್ರೀಯು (ಹೆಸರು ಕಳೆದು ಹೋಗಿದೆ)ಒಂದು ಭಾವಿಯನ್ನು ಕಟ್ಟಿಸಿರುವುದನ್ನು ಉಲ್ಲೇಖಿಸುತ್ತದೆ. ಇದರ ಪಕ್ಕದಲ್ಲೇ ಶಂಖ ಮತ್ತು ಚಕ್ರದ ಚಿತ್ರಗಳು ಕೆತ್ತಲ್ಪಟ್ಟಿವೆ.[35]

ವೆಂಕಟಪತಿರಾಯನ ಅರಮನೆಯಲ್ಲಿನ ಇಬ್ಬರು ಸೇವಕಿಯರಾದ ಕೃಷ್ಣವೇಣಿ ಮತ್ತು ವೆಂಗಯಮ್ಮನ್ ವರ್ಷದ ಕಡೆಯದಿನದಲ್ಲಿನ ಪೂಜೆಗಾಗಿ ಪ್ರತೀತಿಂಗಳ ಜನನದ ದಿನದಂದು ಕ್ರಿ.ಶ.1518ರಲ್ಲಿ ತಿರುಮಂಗೈ ಆಳ್ವರ್‌ಗೆ 40 ವರಹಗಳನ್ನು ನೀಡಲಾಯಿತು.[36] ಕ್ರಿ.ಶ.1518ರಲ್ಲಿ ಪಡುವಕೇರೆಯ ನಾರಾಯಣಶೆಟ್ಟಿಯ ಪತ್ನಿಯಾದ ತಿರುಮಕ್ಕಶೆಟ್ಟಿಯು ಕ್ರಿ.ಶ.1518ರಲ್ಲಿ ಮಠವೊಂದನ್ನು ಕಟ್ಟಿಸಿ ಅದರ ನಿರ್ವಹಣೆಗಾಗಿ ಭೂಉಂಬಳಿಯನ್ನು ನೀಡಿದಳು.[37]

ತಿರುಮಕ್ಕ-ರಾವಲತಿಯು ಮಕ್ಕಳಿಲ್ಲದಿದ್ದರೂ ಶ್ರೇಷ್ಠದಾನಿಯಾಗಿದ್ದಳು. ತಮ್ಮ ಹತ್ತಿರವಿದ್ದ ಚಿನ್ನವನ್ನು ತನ್ನ ತಾತನಾದ ಶಂಕರಶೆಟ್ಟಿಯು ಮಠವೊಂದನ್ನು ಕಟ್ಟಿಸುವುದಕ್ಕಾಗಿ ಸಹಾಯಮಾಡಿದಳು. ಅದರೊಂದಿಗೆ ಜಮೀನನ್ನು ನೀಡಿದಳು.[38] ಹಾಗೆಯೇ ಏಪ್ರಿಲ್11ನೇ ಭಾನುವಾರ ಕ್ರಿ.ಶ.1520ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಾಸ್ರೂರಿನಲ್ಲಿ ನಕರೇಶ್ವರ ದೇವರ ಸೇವೆಗಾಗಿ ಕಾಣಿಕೆಯನ್ನೂ ನೀಡಿದಳು.[39] ಕ್ರಿ.ಶ.1524ರಲ್ಲಿ ಪಗೇರಿ-ಅಮ್ಮನ್‌ನ ಮಗಳಾದ ವೆಂಗಳಮ್ಮನ್ನಳು ಅವಳ ಹೆಸರಿನಲ್ಲಿ ಶ್ರೀವೆಂಕಟೇಶನಿಗೆ ದೈನಂದಿನ ತಿರುಪ್ಪೋಕಂಗಾಗಿ ಕೊಡಲು 1.500 ಪಣಂ ಅನ್ನು ಕೊಡುಗೆಯಾಗಿ ನೀಡಿದಳು.[40] ಶಂಕರಶೆಟ್ಟಿಯ ಎರಡನೇ ಹೆಂಡತಿಯಾದ ಸಂಕಮ್ಮನಾಯಕಿತ್ತಿಯು ತನ್ನ ಮಲಮಗನಾದ ಮಲ್ಲಪ್ಪಶೆಟ್ಟಿ ಮತ್ತು ಅವಳ ಕಿರಿಯ ಸಹೋದರಿ ದೇಕುಲದೇವಿತಿಯೊಂದಿಗೆ ಅವಳ ಗಂಡ ಕಟ್ಟಿಸಿದ ಮಠಗಳ ನಿರ್ವಹಣೆಯ ಉದ್ದೇಶದಿಂದಾಗಿ ಅಕ್ಟೋಬರ್ 14ನೇ ಬುಧವಾರ ಕ್ರಿ.ಶ. 1528ರಲ್ಲಿ ಭೂಮಿಯನ್ನು ನೀಡಿದಳು.[41]

ಕ್ರಿ.ಶ.1529ರಲ್ಲಿ ಸುಬ್ಬರಾಯನ ಪತ್ನಿಯಾದ ಲಕ್ಷ್ಮಮ್ಮಳು ಚೆನ್ನಕೇಶವಸ್ವಾಮಿನ್ ದೇವಾಲಯದಲ್ಲಿ ಧ್ವಜಸ್ತಂಭವನ್ನು ನೆರವೇರಿಸಿದಳು ಹಾಗೂ ದೇವರ ಗರುಡೋತ್ಸವ ಆಚರಿಸಿದಳು.[42] ಕ್ರಿ.ಶ.1531ರಲ್ಲಿ ಜೈನ ಶಾಸನದ ಹಿರಿಮೆಯ ಪ್ರತೀಕವಾಗಿ ಜಿನಸೇನದೇವನ ಶಿಷ್ಯನಾದ ಮಾಣಿಕ್ಯಲಜ್ಜಿನಾಥರನು ಭೂಮಿಯನ್ನು ದಾನನೀಡಿದನು. ಹಾಗಯೇ ದಣಿಮ್ಮೆಯನ ಹೆಂಡತಿಯಾದ ವಾಯಮಳು ದೇವತೆಯ ಆಹಾರ ನೈವೇದ್ಯಕ್ಕಾಗಿ 20 ಗಟ್ಟಿ ಗದ್ಯಾರಣಗಳನ್ನು ಹಾಗೂ ಮಲ್ಲಿಕೀರ್ತಿಯ ಅತಿಥಿಗಳ[43] ಊಟೋಪಚಾರಕ್ಕಾಗಿ ನೀಡಿದಳು. ಕ್ರಿ.ಶ. 1532ರಲ್ಲಿ ಸಲಕ್ಕರಾಜನ ಹೆಂಡತಿಯಾದ ವಲ್ಲಭಾಮ್ಮನಳು ವಾಲಗರಿ ಸೇದನ ಗುಡಿಯಲ್ಲಿ ತೈ ತಿಂಗಳಲ್ಲಿ ನಡೆಯುವ ದೇವರ ಹಬ್ಬದಂದು ಶ್ರೀರಂಗನಾಥನ ಮೂರ್ತಿಗೆ ಪೂಜೆ ಹಾಗೂ ನೈವೇದ್ಯಗಳನ್ನು ಅರ್ಪಿಸಲು ಭೂಮಿಯ ದಾನವನ್ನು ಮಾಡಿದಳು.[44]

ಅಡಿಕೆ ಹೊರವಳೊಬ್ಬಳೂ ಕೂಡ ದೇವಾಲಯಕ್ಕೆ ದಾನಮಾಡಿದಳು. ಅಚ್ಯುತರಾಯನ ಆಡಳಿತದಲ್ಲಿ ಅಧೈಪ್ಪಮ್ ರುಕ್ಮಿಣಿಯಮ್ಮನ್ ಒಬ್ಬ ಅಡಿಕೆ ಹೊರುವವಳಾಗಿದ್ದಳು. ತಿರುಮಲೈ ದೇವಾಲಯದ ಸಂಚಾಲಕರು ಅಚ್ಯುತರಾಯನು ಡಿಸೆಂಬರ್ 26 ಕ್ರಿ.ಶ. 1535ರಲ್ಲಿ ವಿವರಿಸಿರುವಂತೆ ದಾನಿಯ ಹೆಸರಿನಲ್ಲಿ ಹಲವು ಧರ್ಮದತ್ತಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದಾರೆ.[45] ಕ್ರಿ.ಶ.1536ರ ಜನವರಿ 8ರಲ್ಲಿ ಕೊಟ್ಟಿಯ ಮಲ್ಲಯ್ಯನನ ಮಗಳಾದ ಎಲ್ಲಮ್ಮಳು ಶ್ರೀವೆಂಕಟೇಶನಿಗೆ ತಿರುಪೋಣಕಂ ತಳಿಗೆಯಿಂದ ಆರಾಧಿಸಲು 1.600 ನರ್ ಪಣಂ ನೀಡಿದಳು.[46] ಕ್ರಿ.ಶ. 1538ರ ಡಿಸೆಂಬರ್ 25ರಲ್ಲಿ ಕೋವಾಯಿಯ ಮಗಳಾದ ಎಲ್ಲಮ್ಮನಳು ಧನರ್ಮಾಸ ಪೂಜಾ ಆಚರಣೆಯೆಂದು ಶ್ರೀವೆಂಕಟೇಶ್ವರನಿಗೆ 30ತಿರುಪೋಣಕಂಗಾಗಿ 440ನಾರಪಣಂ ಕೊಡುಗೆಯನ್ನು ನೀಡಿದಳು.[47] ಒಡುಕರ್ರೈ ಗ್ರಾಮದ ಗೋವಿಂದಯ ಮಗಳಾದ ಕೃಷ್ಣಮಾಂಗೈಳು ತಿರುಪತಿಯಲ್ಲಿ ಆಚರಿಸಲಾದ ಭೇಟಿಯ ದಿನದಂದು ಕ್ರಿ.ಶ. 1545ರಲ್ಲಿ ತನ್ನ ಉಬೈಯಂ ಎಂದು ಶ್ರೀ ರಘುನಾಥನ್ 110 ಪಣಂ ಮೊತ್ತವನ್ನು ಠೇವಣಿ ಇಟ್ಟಳು.[48]

ಕ್ರಿ.ಶ.1545ರಲ್ಲಿ ರಾಣಿ ಅಂತಪುರದಲ್ಲಿ ಇದ್ದ ಸಖಿಯರಲ್ಲಿ ಒಬ್ಬಳಾದ ಲಕ್ಷ್ಮಿಯಮ್ಮನ್ನಳು ಮಂಟಪವೊಂದನ್ನು ಕಟ್ಟಿಸುವುದಕ್ಕಾಗಿ 25 ಈಕೈ ಪಾನ್ ಅನ್ನು ದಾನಮಾಡಿದಳು.[49] ಸೇನಪಾಕ ಕಮಯ್ಯಾರನ ಹೆಂಡತಿಯಾದ ತಿರುಮಲಮ್ಮನು ವನಮಹಾದೇವಿ ಗ್ರಾಮದಲ್ಲಿ ವಾಸಿಸುತ್ತಿದ್ದಳು. ಶ್ರೀ ಗೋವಿಂದರಾಜ ತಿರುಪತಿ ದೇವಸ್ಥಾನದ ಮುಂದೆ ಮಂಟಪವೊಂದನ್ನು ಕಟ್ಟಿಸಿದಳು ಹಾಗೂ ಗೋವಿಂದರಾಜನ್‌ಗೆ ಅವಳ ಹುಟ್ಟು ನಕ್ಷತ್ರವಾದ ಕ್ರಿ.ಶ. 1545ರ ವಿಶಾಖಂ ನಕ್ಷತ್ರದ ದಿನದಂದು[50]ದೋಸೈವಾದಿಗಳನ್ನು ಅರ್ಪಿಸುವುದಕ್ಕಾಗಿ 400ಪಣಂ ಅನ್ನು ಕೊಟ್ಟಳು.[50]

ಕೊಂಡದಾಸರಿ ತಿಮ್ಮಯ್ಯನ್ ಮಗಳಾದ ಕುರುಬಜಾತಿಯಲ್ಲಿ ಹುಟ್ಟಿದ ಗೋವಿಂದಿಯು ತಿರುಪತಿಯಲ್ಲಿ ವಾಸಿಸುತ್ತಿದ್ದಳು. ಕ್ರಿ.ಶ.1545ರಲ್ಲಿ 2180 ಪಣಂ ನಗದು ಠೇವಣಿಯನ್ನು ಶ್ರೀವೆಂಕಟೇಶ ಮತ್ತಿತರ ದೇವತೆಗಳ ಆರಾಧನೆಗಾಗಿ 10 ಬ್ರಹ್ಮೋತ್ಸವದ ಎಲ್ಲಾ ಏಳು ದಿವಸಗಳ ಆಚರಣೆಗಾಗಿ ನೀಡಲಾಯಿತು.[51] ಭಾರದ್ವಾಜ ಗೋತ್ರದ ಕಮಸಯ್ಯನಗರದ ಮಗಳಾದ ತಿರುಮಲ ಅಮ್ಮನ್‌ಳು ಕ್ರಿ.ಶ 1547ರಲ್ಲಿ ತನ್ನ ಹೆಸರಿನಲ್ಲಿ ಧನುರ್ಮಾಸ ಪೂಜಾ ಆಚರಣೆಗೆಂದು ಶ್ರೀವೆಂಕಟೇಶನಿಗೆ 60 ತಿರುಪೊಣಕಂಗಾಗಿ 300 ನಾರ್ ಪಣಂ ಅನ್ನು ನೀಡಿದಳು.[52]

ಪ್ರತಾಪ ಎಲ್ಲಮ್ಮರಸರ ಮಗಳಾದ ಚಿನ್ನಮ್ಮನಳು ತಿರುಪತಿಯ ಶ್ರೀವಿಠಲೇಶ ಪೆರುಮಾಳ್ ಮತ್ತು ಗೋವಿಂದ ಪೆರುಮಾಳ್ ಪೂಜಾ ಆಚರಣೆಗಾಗಿ 300 ರೇಖೈವಾರ್ಷಿಕ ಆದಾಯವನ್ನು ನೀಡುವ ರಾಮಚಂದ್ರಪುರಂ ಅನ್ನು ಕ್ರಿ.ಶ. 1547ರಲ್ಲಿ ದಾನಮಾಡಿದಳು.[53] ಲಕ್ಕಿಶೆಟ್ಟಿಯ ಹೆಂಡತಿಯಾದ ಲಿಂಗಮ್ಮಳು ತನ್ನ ಮಗ ಲಿಂಗಯ್ಯನು ಸಕಲೈಶ್ವರ್ಯವನ್ನು ಹೊಂದಲೆಂಬ ಪ್ರಾರ್ಥನೆಯಿಂದ ಕಾಳಿದೇವದೇವರಿಗೆ ಪೂಜೆ ಹಾಗೂ ಸೇವೆಗಾಗಿ ಭತ್ತ ಮತ್ತು ಚಿನ್ನವನ್ನು ದಾನಮಾಡಿದನು ಹಾಗೂ ದೇವಸ್ಥಾನದ ಮುಖ್ಯಸ್ಥನಿಗೆ ಡಿಸೆಂಬರ್ 23 ಮಂಗಳವಾರ ಕ್ರಿ.ಶ. 1550ರಂದು ದೇವರಸಿಜಿಯ ಎಂಬ ಕೊಡುಗೆಯನ್ನು ನೀಡಿದನು.[54]

ಕ್ರಿ.ಶ. 1550ರಲ್ಲಿ ಶಾಸನವು ಬ್ರಾಹ್ಮಣ ಸ್ತ್ರೀಯೊಬ್ಬಳು ತನ್ನ ಹಾಗೂ ತನ್ನ ಪತಿಯಾದ ಕುಮಾರ ದಿಂಡಿಯರ ಅಣ್ಣಮಲ್ಲಿನಾಥನ ಒಳಿತಿಗಾಗಿ ಸ್ವಯಂಭುನಾಥೇಶ್ವರ ದೇವಾಲಯದಲ್ಲಿ ಇವಳೇ ನಿರ್ಮಿಸಿದ ಅಣ್ಣಮಲ್ಲಿನಾಥ ಗುಡಿಗೆ ಭೂಧಾನವನ್ನು ಮಾಡಿದುದಾಗಿ ಬರೆಯುತ್ತದೆ.[55] ವೆಲಿಗೋಚಿಕೊಮಾರ ತಿಮ್ಮನಾಯಕನ ಪತ್ನಿಯಾದ ಲಿಂಗಮ್ಮಳು ಕ್ರಿ.ಶ.1554ರಲ್ಲಿ ಇಷ್ಟ-ಕಾಮೇಶ್ವರ ಮತ್ತು ನಾಗರ್ಜುನ ಕೊಂಡುಸೀಮೆಯ ಮಾಚೇಲದ ವಿಶ್ವೇಶ್ವರ ದೇವರಿಗೆ 14 ಪುಟ್ಟಿ ಮತ್ತು 10 ತುಮಲ ಭೂಮಿ ಹಾಗೂ ಲಿಂಗಪುರಂ ಎಂಬ ಗ್ರಾಮವನ್ನು ನೀಡಿದಳು.[56]

ಎಲ್ಲಿಯ ಮಗಳಾದ ಎಲ್ಲ-ತಿರುಮಂಗಳಳು ತಿರುಮಲೈ ದೇವಸ್ಥಾನಗಳ ಸಂಯೋಜಕರಿಗೆ ಕ್ರಿ.ಶ.1561ರಲ್ಲಿ ಎಲ್ಲಿ-ತಿರುಮಂಗನೀಲ ಎಂಬ ಹೆಸರಿನಲ್ಲಿ ಮಾಡಿದ ಪೂಜೆಯಿಂದ ಭಕ್ತರು ದೇವಸ್ಥಾನ ಸಲಹೆಗಾರರು ಹಾಗೂ ದಾನಿಗಳಿಗೆ ಪ್ರಸಾದವನ್ನು ನೀಡುವಂತೆ ಆಜ್ಞೆನೀಡಿದಳು.[57] ಕ್ರಿ.ಶ.1561ರಲ್ಲಿ ಚೊಕ್ಕಸಮ ಎಲ್ಲಮ್ಮಳು ಮಲ್ಲಿಕಾರ್ಜುನ ದೇವಸ್ಥಾನವನ್ನು ನಿರ್ಮಿಸಿದಳು. ಹಾಗೂ 40ಪಗೋಡಗಳ ತೋಟವನ್ನು ಕೊಂಡುಕೊಂಡು ಮಲ್ಲಿಕಾರ್ಜುನಿಗೆ ದಾನ ಮಾಡಿದಳು. ಕ್ರಿ.ಶ 1569ರ ಶಾಸನವೊಂದು ವೆಂಕಟಮ್ಮ[58] ಪಪಾತಿಮ್ಮನಾಯಕನ ಮಗಳಾದ ಇವಳು ಬೇಲೂರಿನ ಕೇಶವ

ದೇವಾಲಯದ ಸೇವೆಗಾಗಿ ಪಪಾತಿಮ್ಮಾಪುರ ಎಂದು ಪುನರ್ ನಾಮಕರಣ ಮಾಡಲಾದ ಏಸ್ತಾರೆ-ಸೀಮೆಯ ಜೀವನಿಗೆ ನಾಡಿನಲ್ಲಿನ ಡಣ್ಣಾಯಕನಹಳ್ಳಿಯನ್ನು ದಾನಮಾಡಿದ ಬಗ್ಗೆ ದಾಖಲೆಯನ್ನು ನೀಡುತ್ತದೆ.[59]

3. ಕುಟುಂಬದ ಕ್ಷೇಮಕ್ಕಾಗಿ ದಾನಮಾಡಿದವರು:-

ರಾಜರು, ಮಹಾಮಂಡಲೇಶ್ವರರು, ದೇವಸ್ಥಾನದ ಲೇಖ್ವಿಗರು, ಸೇವಕರು, ನಾಯಕರು, ದಂಡನಾಯಕರು ಹಾಗೂ ಸಾಮಾನ್ಯ ಜನಗಳು ತಮ್ಮ ತಂದೆತಾಯಿಗಳ ಗೌರವಾರ್ಥವಾಗಿ ಹಣ, ಭೂಮಿ, ಚಿನ್ನ, ಹಳ್ಳಿಗಳನ್ನು ದಾನಮಾಡಿದರು ಹಾಗೂ ದೇವಾಲಯಗಳನ್ನು ನಿರ್ಮಿಸಿದರು.

ಕ್ರಿ.ಶ.1351ರ ಶಾಸನವೊಂದು ಸವೇಮ್ನ ಒಡೆಯನೆಂಬುವನು ಭೈರವ ದೇವರಿಗೆ ತನ್ನ ತಂದೆ ಕೆಂಪರಾಜು ಹಾಗೂ ತಾಯಿ ಮಂಗದೇವಿಯ ಶ್ರೇಯಸ್ಸಿಗೋಸ್ಕರವಾಗಿ ನಾಗೂರು ಗ್ರಾಮವನ್ನು ದಾನಮಾಡಿದನೆಂದು ಹೇಳುತ್ತದೆ.[60] ಕ್ರಿ.ಶ. 1388ರ ಶಾಸನವೊಂದು ಮಹಾಮಂಡಲೇಶ್ವರ ಅಪ್ರತಿಮಲ್ಲಿ ಗಂಗಯದೇವಚೂಡ ಮಹಾರಾಜನು ಗೊಟೂರಿನ ಬಳಿ ಭೈರವದೇವರ ದೇವಸ್ಥಾನವನ್ನು ಕಟ್ಟಿದ ಕಲ್ಲು ಕುಟಿಗ ಚಾಮಯ್ಯಬಾತ್ತುಡುವಿಗೆ ತನ್ನ ಪೋಷಕರಾದ ಮಲದೇವರಾಜ ಮತ್ತು ಮಲದೇವಮ್ಮನ ಒಳಿತಿಗಾಗೋಸ್ಕರವಾಗಿ ಭೂದಾನವನ್ನು ಮಾಡಿದನೆಂದು ದಾಖಲೆಯನ್ನು ನೀಡುತ್ತದೆ.[61]

ಕ್ರಿ.ಶ.1401ರ ಶಾಸನವೊಂದು ನಾಯಕನೊಬ್ಬನು ಶಿವಪುರಂ ಗ್ರಾಮಕ್ಕೆ ತನ್ನ ತಂದೆತಾಯಿಗಳ ಹಿತಕ್ಕೋಸ್ಕರವಾಗಿ ಮಲ್ಲಿನಾಥದೇವರ ಪೂಜೆ ಹಾಗೂ ನೈವೇದ್ಯಕ್ಕಾಗಿ (ಮಲ್ಲುಭಟ್ಟ)ಕೆಲವು ವೃತ್ತಿಗಳನ್ನು ನೀಡಿದನೆಂದು ತಿಳಿಸುತ್ತದೆ.[62] ಕ್ರಿ.ಶ. 1404ರ ಶಾಸನವೊಂದು ಎರಡನೇ ಹರಿಹರನು ಹೊಯ್ಸಳದೇಶದ ಜಂಜೂರನ್ನು ತನ್ನ ತಾಯಿಯ ಹೆಸರಿನಲ್ಲಿ ಜಂಬೂರು ಎಂದು ಪುನರ್ ನಾಮಕರಣಮಾಡಿದನು ಹಾಗೂ ಅದನ್ನು ಬ್ರಾಹ್ಮಣರಿಗೆ ಕೊಡುಗೆಯಾಗಿ ನೀಡಿದ್ದನು ಎಂಬ ಉಲ್ಲೇಖವನ್ನು ನೀಡುತ್ತದೆ.[63] ಕ್ರಿ.ಶ. 1411ರ ಶಾಸನವೊಂದು ಮಹಾಮಂಡಲೇಶ್ವರ ಓಬಳೆಯ್ಯ ದೇವಚೂಡ ಮಹಾರಾಜನು ತನ್ನ ತಂದೆ ಹಾಗೂ ತಾಯಿಯಾದ ಅವುಭಲಮ್ಮನ ಶ್ರೇಯಸ್ಸಿಗಾಗಿ ಗೋಟೂರಿನ ಭೈರವದೇವದೇವರಿಗೆ ಭೂದಾನವನ್ನು ಮಾಡಿದುದರ ಬಗ್ಗೆ ದಾಖಲೆಯನ್ನು ಒದಗಿಸುತ್ತದೆ.[64]

ಕ್ರಿ.ಶ. 1413ರ ಶಾಸನವೊಂದು ಮಾದಣ್ಣನು ತನ್ನ ತಾಯಿ ಗೌರವದೇವಿಯ ನೆನಪಿನಲ್ಲಿ ಚಿಕ್ಕನಹಳ್ಳಿಯನ್ನು ಗೌರವಪುರ ಎಂದು ಪುನರ್‌ನಾಮಕರಣ ಮಾಡಿದನು ಹಾಗೂ ಅದನ್ನು ವೀರಶೈವ ಗುರು ರಾಯಸಮುದ್ರದ ಮಂಜುನಾಥದೇವನಿಗೆ ಮಠದ ನಿರ್ವಹಣೆಗಾಗಿ ಕೊಡಲಾಯಿತು ಎಂದು ಹೇಳುತ್ತದೆ.[65] ದೇವರಾಯನು ಮಾನಂಗಿಯ

ಹೆಸರನ್ನು ಲಕ್ಷ್ಮೀನಾರಾಯಣಪುರ ಎಂದು ಬದಲಿಸಿ ಅದನ್ನು ತನ್ನ ಅಚಾರ್ಯನಿಗೆ ನೀಡಿದನು. ಇವನ ತಾಯಿಯ ಹೆಸರು ನಾರಾಯಣಾಂಬಿಕ. ಬಹುಶಃ ಅವಳ ಗೌರವಾರ್ಥವಾಗಿ ಕ್ರಿ.ಶ. 1444ರಲ್ಲಿ ಅದನ್ನು ಬದಲಿಸಿರಬೇಕು.[66]

ಕ್ರಿ.ಶ.1444ರ ಶಾಸನವೊಂದು ಗ್ರಾಮದ ಕೇಸಜುಲು ತನ್ನ ಪೋಷಕರ ಒಳಿತಗೋಸ್ಕರವಾಗಿ ವೇಲಾಪುರದ ರಾಮಯ್ಯದೇವದೇವರಿಗೆ ಭೂದಾನ ಮಾಡಿದುದರ ದಾಖಲೆಯನ್ನು ನೀಡುತ್ತದೆ.[67] ಕ್ರಿ.ಶ.1460ರ ಶಾಸನವೊಂದು ಹೇಳುವಂತೆ ದಣ್ಣಾಯಕನು (ಹೆಸರು ಕಳೆದು ಹೋಗಿದೆ) ತನ್ನ ತಾಯಿಯ ಹೆಸರಿನಲ್ಲಿ (ಸೀತಾಯಿಮ್ಮ)ಅಗ್ರಹಾರವಾಗಿ ಒಂದು ಹಳ್ಳಿಯನ್ನು ದಾನ ಮಾಡಿದನು.[68]

ಕ್ರಿ.ಶ. 1513ರಲ್ಲಿ ಕೃಷ್ಣದೇವರಾಯನು ತನ್ನ ಪೋಷಕರಾದ ನರಸನಾಯಕ ಒಡೆಯ ಮತ್ತು ನಾಗಾಜಿ-ಅಮ್ಮನವರ ಹಿತಕ್ಕೋಸ್ಕರವಾಗಿ ಕಾಳಹಸ್ತಿಯ ವರಮಹಾದೇವದೇವರ ದಿನನಿತ್ಯದ ನೈವೇದ್ಯ ಹಾಗೂ ಪೂಜೆಗೆಂದು ಬೆಲೆಬಾಳುವ ಹರಳುಗಳನ್ನೊಳಗೊಂಡ ಚಿನ್ನದ ಪ್ರಭಾವಳಿಯನ್ನು ನೀಡಿದನು ಹಾಗೆಯೇ ಕೆಲವು ಹಳ್ಳಿಗಳನ್ನು ದಾನಮಾಡಿದನು.[69] ಕ್ರಿ.ಶ.1514ರ ಶಾಸನವೊಂದು ಕೃಷ್ಣದೇವರಾಯನು ತನ್ನ ಪೋಷಕರಾದ ನರಸನಾಯಕ ಒಡೆಯ ಮತ್ತು ನಾಗಾಜಿ ಅಮ್ಮ ಹಾಗೂ ತಾನೂ ಸೇರಿದಂತೆ ಎಲ್ಲರ ಹಿತಕ್ಕಾಗಿ ಪೆರುಲಾಳಿ ಪೆರುಮಾಳ್ ದೇವಸ್ಥಾನದ ಪುಣ್ಯಕೋಟಿ ವಿಮಾನಕ್ಕೆ ಚಿನ್ನದಲೇಪನವನ್ನು ಕೊಡಿಸಲು ಚಿನ್ನ, ತಾಮ್ರ ಮತ್ತು ಹಣವನ್ನು ದೇವಸ್ಥಾನಕ್ಕೆ ಕೊಡುಗೆಯಾಗಿ ನೀಡಿದ ಬಗ್ಗೆ ದಾಖಲೆಯನ್ನು ನೀಡುತ್ತದೆ.[70]

ಕ್ರಿ.ಶ. 1517ರ ಶಾಸನವು ತನ್ನ ಪೋಷಕರಾದ ತಿಪ್ಪರಸಯ್ಯ ಮತ್ತು ರಾಮಯ್ಯಮ್ಮ ಇವರ ಏಳಿಗೆಗಾಗಿ ಲಕ್ಷ್ಮೀಕಾಂತರಸು ಎಂಬುವನು ಪ್ರಸನ್ನಕೇಶವಪೆರುನಾಳ್ ದೇವಸ್ಥಾನವನ್ನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ.[71] ಕ್ರಿ.ಶ. 1521ರ ಶಾಸನವೊಂದು ತಿಮ್ಮರಾಜನು ತನ್ನ ಪೋಷಕರಾದ ಚಿಕ್ಕತಿಮ್ಮರಾಜ ಒಡೆಯ ಮತ್ತು ಕೊಣಜಿಅಮ್ಮ ಇವರ ಹಿತಕ್ಕಾಗಿ ಜಮೀನಿನಿಂದ ಬರುವ ಆದಾಯದ ಒಂದು ಭಾಗವನ್ನು ಹಜಾರ ರಾಮಸ್ವಾಮಿ ದೇವಾಲಯದಲ್ಲಿ ಹಬ್ಬಗಳನ್ನಾಚರಿಸಲು ಕೊಟ್ಟನೆಂದು ಹೇಳುತ್ತದೆ.[72] ಕ್ರಿ.ಶ.1524ರ ಶಾಸನವೊಂದು ಬೆಂಕಚೀಯ ಗೌಡನೆಂಬುವನು ವೀರಣ್ಣ ಒಡೆಯನೆಂಬುವನಿಗೆ ಶಿವದೇವಾಲಯದ ಪೂಜೆಗಾಗಿ ಒಂದು ಪುರವನ್ನು ಕೊಟ್ಟನು ಹಾಗೂ ಇದರಿಂದ ತನ್ನ ತಂದೆ ತಾಯಿಗೆ ಶ್ರೇಯಸ್ಸಾಗುವುದೆಂದು ತಿಳಿದನು.[73]

ಕ್ರಿ.ಶ. 1527ರ ಒಂದು ಶಾಸನವು ದೇವಿಪುರಂನ ಕನ್ನಡಿಗ ಬ್ರಾಹ್ಮಣನಾದ ಚಂದ್ರಶೇಖರಯ್ಯನ್ ಎಂಬುವನು ತನ್ನ ತಂದೆ ಹಾಗೂ ತಾಯಿ ಸಂಕಮ್ಮನರ ಒಳಿತಿಗಾಗಿ 200 ಪಣಂ ಅನ್ನು ದಾನ ಮಾಡಿದನು. ಈ ಹಣವನ್ನು ಭೂಮಿಯನ್ನು

ಸಾಗುವಳಿ ಮಾಡುವುದಕ್ಕಾಗಿ ಹಾಗೂ ದೇವದಾನ ಗ್ರಾಮವಾದ ಚಿಲತ್ತೂರು ಕೆರೆಯಲ್ಲಿ ಗುಂಡಿಗಳನ್ನು ತೆಗೆಸುವುದಕ್ಕಾಗಿ ಉಪಯೋಗಿಸುವ ಏರ್ಪಾಟು ಮಾಡಲಾಯಿತು. ಹಾಗೆಯೇ ಈ ಭೂಮಿಯಿಂದ ಬಂದ ಫಸಲಿನಿಂದ ರೈಲ್ಯೆಂಬಾಳ್ಯೆನ ಮೇಲೆ ಒಂದು ದೀಪವು ಉರಿಯಬೇಕಾಗಿತ್ತು.[74]

ಕ್ರಿ.ಶ.1528ರ ಒಂದು ಶಾಸನವು ಮಲ್ಲಿಪುರದ ಮಲ್ಲಪ್ಪಣ್ಣನೆಂಬುವನು ತನ್ನ ತಾಯಿ ವೀರಮ್ಮಳ ಒಳಿತಿಗೆ ಸೂರ್ಯನಾರಾಯಣದೇವನಿಗೆ ಮೋರಬದ ಬಳಿ ಸ್ವಲ್ಪ ಭೂಮಿಯನ್ನು ನೀಡಿದನೆಂದು ದಾಖಲಿಸುತ್ತದೆ.[75] ಒಂದು ಶಾಸನದ ಪ್ರಕಾರ ಕ್ರಿ.ಶ.1529ರಲ್ಲಿ ಸಿದ್ದವತಂ ಯಲ್ಲಮರುಸಯ್ಯನು ತನ್ನ ತಾಯಿ ಅಚ್ಚಮ್ಮಳ ಹಿತಕ್ಕಾಗಿ ಕಟ್ಟಿಕಂಡ್ಲದ ಚೆನ್ನಕೇಶವ ದೇವರಿಗೆ ಸಕಾರಿ ಸೀಮೆಯ ನಾವುಸುಲಪಾಡು ಗ್ರಾಮವನ್ನು ನೀಡಿದನೆಂದು ಹೇಳಲಾಗಿದೆ.[76] ಅಚ್ಯುತರಾಯನ ಸೇವಕನಾದ ಎಲ್ಲಪ್ಪನಾಯಕನು ಮಲ್ಲಿಕಾರ್ಜುನ ದೇವರ ಸೇವೆಗಾಗಿ ಕ್ರಿ.ಶ.1533ರಲ್ಲಿ ತನ್ನ ಪೋಷಕರಿಗೆ ಒಳಿತಾಗಲಿ ಎಂಬ ದೃಷ್ಟಿಯಿಂದ ಪುಷ್ಪಗಿರಿ ಭೂಮಿದಾನವನ್ನು ಮಾಡಿದನು.[77]

ಕ್ರಿ.ಶ.1535ರಲ್ಲಿ ಸಲಾಕರಾಜ ಚಿನ್ನನು ತನ್ನ ತಂದೆ ಸಲಾಕರಾಜ ಹಾಗೂ ತಾಯಿ ತಿಪ್ಪಾಜಮ್ಮಳ ಶ್ರೇಯಸ್ಸಿಗೋಸ್ಕರವಾಗಿ ನರಸಿಂಹದೇವ ದೇವರ ನೈವೇದ್ಯಕ್ಕಾಗಿ ಇವನೇ ಕಟ್ಟಿಸಿದ ಮಲ್ಲಿನಾಯನಿಪಲ್ಲಿ ಗ್ರಾಮವನ್ನು ಕೊಟ್ಟನು.[78] ಕ್ರಿ.ಶ 1535ರ ಒಂದು ಶಾಸನವು ಅಚ್ಯುತರಾಯನು ಏಳು ಮಂಟಪಗಳನ್ನು ಕಟ್ಟಿಸಿದನೆಂದೂ ಆ ಏಳು ಮಂಟಪಗಳಲ್ಲಿ ಒಂದನ್ನು ತನ್ನ ತಾಯಿಯಾದ ಓಬ್ಬಿ-ಅಮ್ಮನಳ ಹೆಸರಿನಲ್ಲಿ ಕರೆಯಲಾಗಿತ್ತು ಎಂದು ಹೇಳುತ್ತದೆ.[79] ಕ್ರಿ.ಶ.1544ರ ಒಂದು ಶಾಸನವು ಮಟ್ಟವಂದರಾರಜನು ತಿರುಮಲೈನಲ್ಲಿ ತನ್ನ ತಾಯಿಯ ಹೆಸರಿನಲ್ಲಿ (ಚೆನ್ನಮ್ಮನ್)ಒಂದು ಮಂಟಪವನ್ನು ಕಟ್ಟಿಸಿದನು ಎಂದು ತಿಳಿಸುತ್ತದೆ.[80] ಕ್ರಿ.ಶ. 1545ರ ಶಾಸನವೊಂದು ಮಹಾಮಂಡಲೇಶ್ವರ ತಿಮ್ಮರಾಜನು ತನ್ನ ಪೋಷಕರಾದ ವಲ್ಲಭಾಂಜು ಮತ್ತು ವೆಂಗಲಮ್ಮನ ಒಳಿತಿಗಾಗಿ ಮಾಧವ ದೇವರಿಗೆ ದೊಡ್ಡ ಬಜಾರ್‌ಬೀದಿಯ ಪಶ್ಚಿಮದ ಕಡೆಗೆ ರಂಗಮಂಟಪವನ್ನು ಕಟ್ಟಿಸಿದನು ಎಂದು ದಾಖಲೆಯನ್ನು ನೀಡುತ್ತದೆ.[81]

ದೇವಾಲಯದ ಲೆಕ್ಕಿಗನಾದ ತುರುವನಂತಲ್ವಿನ್ ಕುಪ್ಪಯನ್‌ನು ತನ್ನ ತಾಯಿ ಪೆರಿಯಪೆರುಮಾಳ್‌ಳ ಹಿತಕ್ಕಾಗಿ ಕ್ರಿ.ಶ. 1545ರಲ್ಲಿ ತಿರುಪತಿಯಲ್ಲಿನ ದೈನಂದಿನ ನೈವೇದ್ಯಕ್ಕಾಗಿ 2210 ಪಣಂ ಠೇವಣಿ ಮಾಡಿದನು.[82] ತಳ್ಳಭಾಕಂ ತಿರುವೆಂಕಟಾನಂದನು 500 ರೇಖ್ಯೆ ವಾರ್ಷಿಕ ಆದಾಯ ನೀಡುವ ಸೆಂದಲೂರು ಹಾಗೂ 120 ರೇಖ್ಯೆ ಪಣ ವಾರ್ಷಿಕ ಆದಾಯ ನೀಡುವ ಲ್ಲಾವರಂ ಎಂಬ ಎರಡು ಹಳ್ಳಿಗಳನ್ನು ಶ್ರೀಅಲಮೇಲು ಮನ್ಯೆ-ನಚ್ಚಿವಾರ್‌ಗೆ ತನ್ನ ತಾಯಿ ಮತ್ತು ತಂದೆಯ ವಾರ್ಷಿಕ ಪಕ್ಷದಾಚರಣೆಯ ದಿವಸ ನೈವೇದ್ಯವನ್ನರ್ಪಿಸಲು ಕ್ರಿ.ಶ. 1546ರಲ್ಲಿ ನೀಡಿದನು.[83]

ವಲ್ಲಭಯ್ಯದೇವ ಮಹಾರಾಜನು ತನ್ನ ತಾಯಿ ಕೃಷ್ಣಮ್ಮಳ ಹೆಸರಿನಲ್ಲಿ ಹೂದೋಟವನ್ನು ನೋಡಿಕೊಳ್ಳುತ್ತಿದ್ದನು ಹಾಗೂ ಕ್ರಿ.ಶ.1549ರಲ್ಲಿ ವರದರಾಜು ದೇವರಿಗೆ ಹೂಹಾರಗಳನ್ನು ಪೂರೈಸಿದನು.[84] ಕ್ರಿ.ಶ. 1555ರಲ್ಲಿ ವಿರುಮನಾಯಕನು ಉತ್ತನದ್ವಾದಸಿಯ ದಿವಸದಂದು ತನ್ನ ತಾಯಿ ದೇಸಮ್ಮಳ್‌ಳ ಹಿತಕ್ಕಾಗಿ ವೆಂಗಳನಾಡು ಗ್ರಾಮದ ನುಡಿಕ್ಕೊಡುಟ್ಟ ನಾಚಿಯಾರ್ ದೇವಿಯ ನೈವೇದ್ಯಕ್ಕಾಗಿ ಕೊಡುಗೆಯನ್ನು ನೀಡಿದನು.[85] ಕ್ರಿ.ಶ. 1558ರ ಒಂದು ಶಾಸನವು ವಿಠಲರಾಜಯ್ಯದೇವ ಮಹಾರಾಜನು ತನ್ನ ಪೋಷಕರಾದ ಮುತ್ತಿರಾಜು ಮತ್ತು ತಿರುಮಲಮ್ಮನ ಹಿತಕ್ಕಾಗಿ ವಿಠಲಾದೇವರಿಗೆ ಮೂರ್ತಿರಾಯಪುರ ಹಳ್ಳಿಯ ಅರ್ಧಭಾಗವನ್ನು ಕೊಡುಗೆಯಾಗಿ ನೀಡಿದನೆಂದು ಹೇಳುತ್ತದೆ.[86] ಕ್ರಿ.ಶ. 1559ರ ಒಂದು ಶಾಸನವು ಸುಗುತೂರಿನ ಮುಖ್ಯಸ್ಥನಾದ ತಿಮ್ಮಯ್ಯ ಗೌಡನೆಂಬುವನು ಅಮೃತಮಲ್ಲಿಕಾರ್ಜುನನ ಸೇವೆಗಾಗಿ ಹಾಗೂ ಇದರ ಫಲವಾಗಿ ತನ್ನ ಪೋಷಕರು ಹಾಗೂ ಗುರುಗಳು ಒಳಿತನ್ನು ಹೊಂದಲಿ ಎಂಬ ಉದ್ದೇಶದಿಂದ ನಂಜಿಗುಲಿಯ ಸಿಂಹಾಸನಾಂದ್ರವನ್ನು ನೀಡಿದನೆಂದು ಉಲ್ಲೇಖವನ್ನು ನೀಡುತ್ತದೆ.[87]

ಕ್ರಿ.ಶ. 1516ರ ಒಂದು ಶಾಸನವು ಕೃಷ್ಣಪ್ಪನಾಯಕನು ತನ್ನ ತಂದೆ ಭೈರಪ್ಪನಾಯಕ ಮತ್ತು ತನ್ನ ತಾಯಿ ಕೊಂಡಮ್ಮ ಇವರಿಬ್ಬರ ಶ್ರೇಯಸ್ಸಿಗಾಗಿ ಬಿಲ್ಲಕೊಡು ಸೀಮೆಯ ಕಾಡಜಿ ಗ್ರಾಮವನ್ನು ಛತ್ರದ ತುಪ್ಪಕ್ಕಾಗಿ ಹಾಗೂ ಹರಿಹರದೇವರ ಅವಶ್ಯಕ ನೈವೇದ್ಯಗಳಿಗಾಗಿ ದಾನಮಾಡಿದನೆಂದು ಹೇಳುತ್ತದೆ.[88] ಕ್ರಿ.ಶ.1572ರ ಶಾಸನವೊಂದು ಶ್ರೀರಂಗರಾಯನು ರಾಜನ ತಾಯಿಯಾದ ವೆಂಗಲಜ ಅಮ್ಮವರು ಇವಳ ಶ್ರೇಯಸ್ಸಿಗಾಗಿ ಪೆನುಗೊಂಡದ ತಿರಮಲಕೊಮಾರ ತಾತಾಚಾರ್ಯನಿಗೆ ಅಗ್ರಹಾರವೆಂದು ವಾದಿಗೇಪಲ್ಲಿ ಗ್ರಾಮವನ್ನು ದಾನಮಾಡಿರುವ ಬಗ್ಗೆ ಹೇಳಿಕೆಯನ್ನು ನೀಡುತ್ತದೆ.[89] ಕ್ರಿ.ಶ. 1579ರ ಒಂದು ಶಾಸನವು ಲಕ್ಷೇನಾಯಕನು ತನ್ನ ಪೋಷಕರ ಹಿತಕ್ಕಾಗಿ ಸಾತೇನಹಳ್ಳಿಯ ಹನುಮಂತದೇವರ ಪೂಜೆ ಹಾಗೂ ನೈವೇದ್ಯಕ್ಕಾಗಿ ಹುನುಮಸಮುದ್ರ ಗ್ರಾಮವನ್ನು ಕೊಡುಗೆಯಾಗಿ ನೀಡಿದನು ಎಂದು ಉಲ್ಲೇಖಿಸುತ್ತದೆ.[90]

ಕ್ರಿ.ಶ.1570ರ ಶಾಸನವೊಂದು ಶ್ರೀರಂಗನು ಕೊಡುಗೆಯೊಂದನ್ನು ನೀಡಿದುದರ ಬಗ್ಗೆ ಬರೆಯುತ್ತದೆ. ಇದನ್ನು ತನ್ನ ತಾಯಿ ವೆಂಗಲಾಂಬಳ ಹೆಸರಿನಲ್ಲಿ ಪುನರ್‌ನಾಮಕರಣ ಮಾಡಿದನು. ಇದನ್ನು ಶ್ರೀಪೆರಂಬೂರಿನ ಬಳಿಯ ರಾಮಾನುಜಕೂಟದ ಹಿತಕ್ಕಾಗಿ ಮಾಡಿದನು ಹಾಗೂ ಹೂದೋಟವೊಂದನ್ನು ನೀಡಿದನು. ಈ ಕೊಡುಗೆಯನ್ನು ಧಾರ್ಮಿಕ ನಿಷ್ಟತೆಯನ್ನು ಹೊಂದಿದ ತಾತಾಚಾರ್ಯ ಕುಟುಂಬದೊಂದಿಗೆ ಸಂಬಂಧವನ್ನು ಹೊಂದಿದ್ದ ತಿರುಮಲಾನಂಬಿ ಶ್ರೀರಂಗಮ್ಮಳ ಕೋರಿಕೆಗೆ ಅನುಗುಣವಾಗಿ ನೀಡಲಾಯಿತು.[91] ಕ್ರಿ.ಶ.1626ರ ಶಾಸನವೊಂದು ಮೂರ್ತಿಯಪ್ಪ ನಾಯಕ ಮತ್ತು ಪುಟ್ಟಣ್ಣನಾಯಕರಿಬ್ಬರು ತಮ್ಮ ಪೋಷಕರ ಒಳಿತಿಗಾಗಿ ವೇಲಾಪುರದ ಚೆನ್ನರಾಯಸ್ವಾಮಿ ದೇವಾಲಯದಲ್ಲಿ 26 ಚೌಕಗಳ

ಕೈಲಾಸವನ್ನು (ವರಾಂಡ) ಕಟ್ಟಿಸಿದರೆಂದು ಹೇಳುತ್ತದೆ.[92] ಕ್ರಿ.ಶ. 1641ರ ಶಾಸನವೊಂದು ಲಿಂಗರಾಜಯ್ಯನು ತನ್ನ ಪೋಷಕರ ಹಿತಕ್ಕೋಸ್ಕರವಾಗಿ ಮಾವಿನಹಳ್ಳಿ ಮತ್ತು ಕರಿಸಿದ್ದನ ಪುರಗಳನ್ನು ದಾನಮಾಡಿದನೆಂದು ತಿಳಿಸುತ್ತದೆ.[93]

4. ಹೆಣ್ಣುಮಕ್ಕಳು ಹಾಗೂ ಸಹೋದರಿಯರ ಪುಣ್ಯಕ್ಕಾಗಿ ದಾನಮಾಡಿದ ದಾನಿಗಳು:

ಕ್ರಿ.ಶ. 1524ರ ಒಂದು ಶಾಸನವು ಪೆಡಿಲಿಕೊಡುಕು ಚೆನ್ನೈಯನ್‌ನು ಸಾಳುವ ಗೋವಿಂದ ರಾಜನ ಮಗಳಾದ ತಿರುಮಾಳಿಮ್ಮನ್‌ಳ ಒಳಿತಿಗಾಗಿ ಶ್ರೀವೆಂಕಟೇಶ್ವರನ ಆರಾಧನೆಯನ್ನು ಮಾಡಿಸುವ ಉದ್ದೇಶದಿಂದ ಹನುಮಾನಿಗುಂಟ ಗ್ರಾಮವನ್ನು ದಾನಮಾಡಿದನು ಎಂದು ಹೇಳುತ್ತದೆ.[94] ಒಂದು ಶಾಸನವು ವರದಾಜ-ಅಮ್ಮನ್‌ಳ ಮೂರನೇ ಸಹೋದರನಾದ ಸಿಂಗರಾಜನು ತನ್ನ ಸಹೋದರಿಯ ಶ್ರೇಯಸ್ಸಿಗೋಸ್ಕರ ಕ್ರಿ. ಶ. 1537ರಲ್ಲಿ ಕೆಲವು ನೈವೇದ್ಯಗಳನ್ನು ಶ್ರೀವೆಂಕಟೇಶನಿಗೆ ಅರ್ಪಿಸಿದನು ಎಂದು ಉಲ್ಲೇಖಿಸುತ್ತದೆ.[95] ಕ್ರಿ.ಶ. 1555ರ ಒಂದು ಶಾಸನವು ವೆಂಗಲಿರಾಜನು ಸಿದ್ಧಾಪುರಸಿಂಹದಲ್ಲಿನ ಕೋಣಸಮುದ್ರಂ ಗ್ರಾಮವನ್ನು ತನ್ನ ತಂಗಿ ಕೋಣಮ್ಮಳ ಹಿತಕ್ಕಾಗಿ ಕೋಣಸಮುದ್ರದ ತಿರುವೆಂಗಲನಾಥ ದೇವರ ಪೂಜೆಗಾಗಿ ನೀಡಿದನೆಂದು ಹೇಳುತ್ತದೆ.[96] ಕ್ರಿ.ಶ.1556ರ ಒಂದು ಶಾಸನವು ಬಾಯಸ್ಕರ ರಾಮಪ್ಪಯ್ಯನು ತನ್ನ ಮಗಳ ಹಿತಕ್ಕಾಗಿ ಅಚ್ಯುತಾಯಪುರ ಗ್ರಾಮದ ನಿರ್ಮಾಣದ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[97] ಕ್ರಿ.ಶ. 1372ರ ಶಾಸನವೊಂದು ಬುಕ್ಕನು ಹೊನ್ನಾಪುರ -ಮಂಜರಾಬಾದ್ ತಾಲೋಕಿನ ಹಲಂದುರಿಗೆಯನ್ನು ದಾನಮಾಡಿದನು ಎಂದು ತಿಳಿಸುತ್ತದೆ. ಈ ಹಳ್ಳಿಯನ್ನು ಇವನ ಮಗಳ ಹೆಸರಿನಲ್ಲೇ ಕರೆಯಲಾಯಿತು.[98]

ಮೇಲಿನ ಶಾಸನಗಳು ಆಗಿನ ಕಾಲದ ಸ್ತ್ರೀಯರು ದೇವಾಲಯಗಳಿಗೆ, ಮಠಗಳಿಗೆ ಹಾಗೂ ಇತರೆ ಧಾರ್ಮಿಕಸಂಸ್ಥೆಗಳಿಗೆ ದಾನಮಾಡುತ್ತಿದ್ದ ರೂಢಿಯಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ನಾವು ಶಾಸನಗಳಲ್ಲಿ ಈ ದಾನಗಳ ಬಗ್ಗೆ ತ್ರಾಸದಾಯಕವಾದ ಪಟ್ಟಿಯನ್ನು ಹೊಂದಿದ್ದೇವೆ ಕೇವಲ ರಾಜಮನೆತನದ ಉಚ್ಚಕುಲೀನ ಸ್ತ್ರೀಯರ ಹೆಸರಲ್ಲದೆ ವರ್ತಕವರ್ಗದ ಹಾಗೂ ಸಾಮಾನ್ಯ ಕುಟುಂಬದ ಸ್ತ್ರೀಯರ ಹೆಸರುಗಳನ್ನೂ ಹೊಂದಿದ್ದೇವೆ. ಇದಕ್ಕೆ ಸಾಕ್ಷಿಯಾದ ಈ ಕಾಲದ ಮಹಿಳೆಯರು ಆರ್ಥಿಕ ಸ್ವಾತಂತ್ರ್ಯ ಜೀವನೋಪಾಯಕ್ಕೆ ದಾರಿಯನ್ನು ಕಂಡುಕೊಂಡರು. ಹಾಗೆಯೇ ಆಸ್ತಿಯ ಹಕ್ಕುಗಳನ್ನು ಅನುಭವಿಸಿದರು ಇವುಗಳೆಲ್ಲವೂ ಧಾರ್ಮಿಕ ಸಂಸ್ಥೆಗಳಿಗೆ ಉದಾರವಾದ ದಾನಗಳನ್ನು ಮಾಡಲು ಇವರಿಗೆ ಸಹಾಯಕವಾದವು.

ಆಧಾರಗಳು:ಅಡಿ ಟಿಪ್ಪಣಿಗಳು

1. ಕ್ಯೂ.ಜೆ. ಎಂ.ಎಸ್. ಸಂ.12 ಪುಟ 624-25
2. ಎಫ್.ಇ. ಪುಟ 327-336
3. ಮೈ.ಎ.ರಿ. 1912 ಪ್ಯಾರಾ 55
4. ತಿ.ತಿ.ಇ. ಸಂ.3 ಪುಟ 168-171
5. ಎಸ್.ಐ.ಐ. ಸಂ.4 ಪುಟ 295
6. ತಿ.ತಿ.ಇ. ಪುಟ 168-171
7. ಇನ್‌ಸ್ಕ್ರಿಪ್ಸನ್ ಆಂಧ್ರಪದೇಶ ಪುಟ 53
8. ಅದೇ, ಪುಟ 55
9. ಎ.ಕ. ಸಂ. 8 ಶಾಸನ ಸಂಖ್ಯೆ. 8 ಪುಟ 118
10. ಎಸ್. ಐ. ಐ. ಸಂ.16 ಪುಟ 62
11. ಅದೇ, ಸಂಖ್ಯೆ. 67
12. ಅದೇ, ಸಂಖ್ಯೆ 510
13. ನ್ಯೂನಿಜ್ ಪುಟ 63
14. ಕೃಷ್ಣದೇವರಾಯ ವಿಜಯಂ ಕ್ಯಾಂಟೊ.2 ಪುಟ 148
15. ಮೈ.ಆ.ರಿ. ಸಂ.1 1914-15 ಪ್ಯಾರಾ 93
16. ಇಂ.ಅಂ.ಪ್ರ. ಪುಟ 53
17. ಅದೇ, ಪುಟ 52
18. ಆ.ರಿ.ಮ. ಪ್ರ. ಪುಟ 305
19. ತಿ.ತಿ.ಇ. 111 ಪುಟ 164-167
20. ಇ.ಅಂ.ಪ್ರ ಪುಟ 53
21. ಸುಬ್ರಮಣ್ಯ ಶಾಸ್ತ್ರಿ ಟಿ.ಡಿ.ಇ.ಆರ್. ಪುಟ 226

22. ಹೆರಾಸ್ ಎ.ಡಿ.ಇ.ಆರ್. ಪುಟ 226

23. ಸುಬ್ರಮಣ್ಯಶಾಸ್ತ್ರಿ, ಪೂವೋಕ್ತ ಪುಟ 11

24. ಆ.ರಿ.ಇಂ.ಎ. 1920 ಪುಟ 29

25. ತಿ.ತಿ.ಇ. ಸಂ. 4 ಪುಟ 59

26. ತಿ.ತಿ.ಇಂ. ಸಂ. 4 ಪುಟ 59

27. ಸೋರ್ಸಸ್ ಪುಟ 172

28. ಸುಬ್ರಮಣ್ಯಶಾಸ್ತ್ರಿ ತಿ.ತಿ.ಎ.ಇ.ರಿ. ಪುಟ 226

29. ತಿ.ತಿ.ಇ. ಪುಟ 222

30. ಎಸ್.ಐ.ಐ. 9 ನಂ. 595

31. ಅ.ರಿ.ಸೌ.ಇಂ.ಎ. ಪುಟ 69

32. ಎ.ಕ.14 ಪುಟ 7

33. ಎಸ್.ಐ.ಐ. 9 ಭಾಗ 11 ಪುಟ 494

34. ಅದೇ,

35. ಅ.ರಿ.ಸೌ.ಇಂ.ಎ. 1939 ಪುಟ 69

36. ಅದೇ, ನಂ. 444

37. ಅದೇ, ಪುಟ 72

38. ಅದೇ, ಪುಟ 40

39. ಎಸ್.ಐ.ಐ. 9 ಭಾಗ 11 ನಂ. 525

40. ತಿ.ತಿ.ಇ.3 ಪುಟ 335

41. ಅದೇ, ನಂ. 525

42. ಅದೇ, ನಂ.112

43. ಇ.ಅಂ.ಪ್ರ. ಪುಟ 3

44. ಆ.ರಿ.ಸೌ.ಇಂ.ಎ. 1929-30 ಪುಟ 27

45. ತಿ.ತಿ.ಇ. 3 ನಂ.65

46. ಅದೇ, ಪುಟ 128 ಪುಟ 65

47. ಅದೇ, ಪುಟ 216 ನಂ.117

48. ಅದೇ, ಪುಟ 95

49. ಇ.ಅಂ.ಪ್ರ. 45

50. ತಿ.ತಿ.ಇ. ಪುಟ 81

51. ಅದೇ, ಪುಟ 85

52. ಅದೇ, ಪುಟ 282

53. ಅದೇ, ಪುಟ 324

54. ಎಸ್.ಐ.ಐ. ಶಾ.ಸಂ.640

55. ಆ.ರಿ.ಇಂ.ಎ. 1911 ಪುಟ 397

56. ಎಸ್.ಜಿ.ಜಿ.16 ಪುಟ 198

57. ತಿ.ತಿ.ಇ. ಪುಟ 451

58. ಇನ್‌ಸ್ಕ್ರಿಪ್ಷನ್ ಆಫ್ ಮದ್ರಾಸ್ ಪ್ರೆಸಿಡೆನ್ಸಿ 2 ಪುಟ 309

59. ಎ.ಕ. 9 ಬೇ.157

60. ಎಸ್.ಐ.ಐ.16 ಪುಟ 1

61. ಎ.ಕ. 5 ನಂ.211

62. ಆ.ರಿ.ಸೌ.ಇಂ.ಎ. 1939 ನಂ.384

63. ಎಸ್.ಐ.ಐ. 16 ಪುಟ 9

64. ಎ.ಕ. 6.ನಂ.25

65. ಆ.ರಿ.ಸೌ.ಇಂ.ಎ. 1929 ನಂ. 385

66. ಎಂ.ಎಂ.ಆರ್. 1939 ಪುಟ 152-154

67. ಮೈಸೂರ್ ಅಂಡ್ ಕೂರ್ಗ್ ಇನ್‌ಸ್ಕ್ರಿಪ್ಸನ್ಸ್ ಪುಟ 284

68. ಆ.ರಿ.ಸೌ.ಇಂ. ಎ. 1930-31 ಪುಟ 32

69. ಎ.ಕ.6 ಪುಟ 241

70. ಎಸ್.ಐ.ಐ.16 ಪುಟ 54

71. ಅದೇ, ಪುಟ 59

72. ಅದೇ, ಪುಟ 70

73. ಅದೇ, 4 ನಂ. 250

74. ಎ.ಕ.9 ಪುಟ 94

75. ಆ.ರಿ.ಸೌ.ಇಂ.ಎ. 1939 ಪುಟ 45

76. ಎಸ್.ಐ.ಐ.9.ಭಾಗ 2ನಂ 523ಬಳ್ಳಾರಿ

77. ಅದೇ 16 ಪುಟ 100

78. ಎಂ.ಎ.ಆರ್. 1943 ಪುಟ 86 ನಂ.21 ಹಾಸನ

79. ಅ.ರಿ.ಸೌ.ಇಂ.ಎ. 1929-30 ಪುಟ 34

80. ತಿ.ತಿ.ಎ.ರಿ. ಪುಟ 221-22

81. ತಿ.ತಿ.ಇ.5 ಪುಟ 31

82. ಎಸ್.ಐ.ಐ. 4. ನಂ. 248

83. ತಿ.ತಿ.ಇ. 5 ಪುಟ 146

84. ಅದೇ, ಪುಟ 179

85. ಅ.ರಿ.ಸೌ.ಇಂ.ಎ. 1919 ನಂ. 352

86. ಅದೇ, 1930-31 ಪುಟ 16

87. ಎಸ್.ಐ.ಐ. 16 ಪುಟ 238

88. ಎ.ಕ. 9 ಹೊ.ಕೋ.1

89. ಅದೇ, 11 ಪುಟ 29

90. ಇ.ಅಂ.ಪ್ರ. ಪುಟ 21

91. ಅ.ರಿ.ಸೌ.ಇಂ.ಎ. 1957-58

92. ಮೈ.ಗೆ. ಪುಟ 2165

93. ಎ.ಕ. 5. ಬೇ. 22

94. ಅದೇ, 4.ನಂ.170

95. ತಿ.ತಿ.ಇಂ. 3. ನಂ. 337

96. ತಿ.ತಿ.ಇ. ನಂ. 455

97. ಅ.ರಿ.ಸೌ.ಇಂ.ಎ. ಪುಟ 55

98. ಎಸ್.ಐ.ಐ. 9 ಭಾಗ 2 ನಂ. 660

ಅಧ್ಯಾಯ - 3

ಸಾಮಾಜಿಕ ಜೀವನದಲ್ಲಿ ಮಹಿಳೆಯರು

1. ಶಿಕ್ಷಣ:

ಸವಿದ್ಯ ವಿಮುಕ್ತಯ ಅಂದರೆ *"ವಿಮೋಚನೆಯೆಡೆಗೆ ಕೊಂಡೊಯ್ಯುವ ಜ್ಞಾನವೇ ನಿಜವಾದ ಜ್ಞಾನ"* ಇದು ನಮ್ಮ ಹಿಂದಿನ ತತ್ವಜ್ಞಾನಿಗಳ ಉದ್ದೇಶವಾಗಿದ್ದಿತು. ಅವರ ಪ್ರಕಾರ ಶಿಕ್ಷಣದ ಅಂತಿಮ ಗುರಿಯು ಜೀವನದ ಪರಮೋನ್ನತ ಧ್ಯೇಯವನ್ನು ತಲುಪುವುದು ಅಂದರೆ ಮುಕ್ತಿಯನ್ನು ಹೊಂದುವುದು. ಶಿಕ್ಷಣವನ್ನು ಪಡೆದವರಿಗೆ ಜ್ಞಾನವನ್ನು ಸಂಪಾದಿಸಿದವರಿಗೆ, ಅವರು ತಮ್ಮ ಧ್ಯೇಯವನ್ನು ಈಡೇರಿಸಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ ಅವರು ಜೀವಿಸಿರುವ ಸಮಾಜದಲ್ಲಿ ಉಪಯುಕ್ತವಾಗುವುದಕ್ಕೆ ಅನುಕೂಲವಾಯಿತು. ಅಭಿವೃದ್ಧಿಪಡಿಸಿದ ಪದ್ಧತಿ, ಅನುಸರಿಸಿದ ವಿಧಾನಗಳು ಹಾಗೂ ಬೋಧಿಸಿದ ವಿಷಯಗಳೆಲ್ಲವೂ ಈ ಶ್ರೇಷ್ಠೋತ್ತಮ ಆದರ್ಶವನ್ನು ಮನಗಾಣಲು ವ್ಯಕ್ತಿಗೆ ಬಹಳ ಸಹಾಯಕವಾದವು.[1]

ಈ ಕಾಲದ ಶಿಕ್ಷಣದ ಸ್ವರೂಪ ಮತ್ತು ಶಿಕ್ಷಣದ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾಹಿತಿಗಳು ಬಹಳ ವಿರಳವೂ ಅತೃಪ್ತಿಕರವೂ ಆಗಿವೆ. ಈಗಿನ ಅರ್ಥದಲ್ಲಿ ಆಗ ಯಾವುದೇ ಶಾಲೆಯಾಗಲೀ ಸಾರ್ವಜನಿಕ ಅಥವಾ ಖಾಸಗೀ ಶಿಕ್ಷಣವಾಗಲೀ ಇರಲಿಲ್ಲ.

ಶಿಕ್ಷಣವನ್ನು ಪ್ರಸಾರ ಮಾಡುವಲ್ಲಿ ವ್ಯಕ್ತಿಗತ ಸಹಭಾಗಿತ್ವ ಅಥವಾ ಈ ರೀತಿಯಾದ ಕಾರ್ಯಕ್ರಮಗಳೊಂದಿಗೆ ಒಂದಲ್ಲ ಒಂದು ರೀತಿಯಲ್ಲಿ ಸಹಕಾರ ನೀಡುವುದು ಶ್ರೇಷ್ಠಕಾರ್ಯವೆಂದು ನಂಬಲಾಗಿತ್ತು. ಆದ್ದರಿಂದ ಜನಗಳು ಈ ರೀತಿ ಸಹಾಯಮಾಡುವುದಕ್ಕಾಗಿ ಐಚ್ಛಿಕವಾಗಿ ಒಪ್ಪಿಕೊಳ್ಳುತ್ತಿದ್ದರು. ಈ ರೀತಿಯಾಗಿ ಶಿಕ್ಷಣವು ರಾಜ್ಯದ ಕರ್ತವ್ಯವೇನಾಗಿರಲಿಲ್ಲ. ರಾಜರು ರಾಣಿಯರು ಹಾಗೂ ಮತ್ತಿತರ ಹಲವಾರು ಶಿಕ್ಷಣ ಹಾಗೂ ಕಲಿಕೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ವೈಯಕ್ತಿಕ ಸಾಮರ್ಥ್ಯದಿಂದ ಸಾಕಷ್ಟು ಧನಸಹಾಯ ಮಾಡುತ್ತಿದ್ದರು. ಇಷ್ಟೆಲ್ಲಾ ಆದರ್ಶಗಳಿದ್ದರೂ ವಾಸ್ತವವಾಗಿ ಶಿಕ್ಷಣವು ಸಾಮಾನ್ಯವಾಗಿ ಕೆಲವೇ ಕೆಲವರ ಸೊತ್ತಾಯಿತು.

ಮೇಲ್ವರ್ಗದ ಮಹಿಳೆಯರು, ಆಡಳಿತ ವರ್ಗದ ಮಹಿಳೆಯರು ಹಾಗೂ ಅಧಿಕಾರಿಗಳ ಕುಟುಂಬದ ಮಹಿಳೆಯರು ಶಿಕ್ಷಣವನ್ನು ಪಡೆಯುತ್ತಿದ್ದರು. ಅವರ ಶಿಕ್ಷಣವು ಸಾಮಾನ್ಯ ಶಿಕ್ಷಣದ ಜೊತೆಗೆ ಮುಖ್ಯವಾಗಿ ಲಲಿತ ಕಲೆಗಳಾದ ಸಂಗೀತ ಮತ್ತು ನೃತ್ಯಗಳನ್ನೊಳಗೊಂಡಿತ್ತು. ಸ್ತ್ರೀಯರ ಶಿಕ್ಷಣವಿಲ್ಲದ ಯಾವುದೇ ಶಿಕ್ಷಣ ಪದ್ಧತಿಯು ಸ್ವತಃ ಪರಿಪೂರ್ಣ ಶಿಕ್ಷಣ ಪದ್ಧತಿಯಾಗಲಾರದು. ಶಿಕ್ಷಣದ ಉದ್ದೇಶದಿಂದಲೇ ಯಾವುದೇ ಸ್ತ್ರೀ ಶಿಕ್ಷಣದ ಸಂಸ್ಥೆಗಳಿಗೆ ನೇರವಾದ ಹಾಗೂ ಸ್ಪಷ್ಟವಾದ ಉಲ್ಲೇಖಗಳು ನಮಗೆ ಸಿಗದಿದ್ದರೂ ಮಹಿಳೆಯರು ನಿರ್ಲಕ್ಷಿತರಾಗಿ ಹಾಗೂ ನಿರಕ್ಷರಸ್ಥೆಯರಾಗಿ ಉಳಿದರು ಎಂದು ಹೇಳಲಾಗದು. ಈ ಕಾಲದ ಸ್ತ್ರೀಯರು ದೊಡ್ಡ ಸಾಧನೆಗಳಿಂದ ದೂರವಾಗಿರಲಿಲ್ಲ ಎಂದು ಹೇಳಬಹುದು. ರಾಜಮನೆತನದ ಸ್ತ್ರೀಯರು ಸೇನಾದಂಡನಾಯಕರ ಮಹಿಳೆಯರು, ಮಂತ್ರಿಗಳು ಮತ್ತು ಹಿರಿಯ ಅಧಿಕಾರಿಗಳ ಸ್ತ್ರೀಯರು ಹಾಗೆಯೇ ಮೇಲ್ವರ್ಗ ಹಾಗೂ ಮಧ್ಯಮ ವರ್ಗದ ಮಹಿಳೆಯರು ಓದಲು ಬರೆಯಲು ಬಲ್ಲವರಾಗಿದ್ದರು. ಸ್ತ್ರೀಯರು ಲಲಿತ

ಕಲೆಗಳಾದ ಸಂಗೀತ ಮತ್ತು ನೃತ್ಯದಲ್ಲಿ ವಿಶೇಷ ಪರಿಣತಿಯನ್ನು ಹೊಂದುವುದಕ್ಕಾಗಿ ಬಹಳ ಗಮನವನ್ನು ನೀಡಿರಬೇಕೆಂದು ಗೊತ್ತಾಗುತ್ತದೆ. ಶಿಕ್ಷಣವು ಹೆಚ್ಚು ವ್ಯಾಪಕ ಎನ್ನುವುದಕ್ಕಿಂತ ತೀವ್ರ ಆಗಿತ್ತು. ರಾಜಾಶ್ರಯದಿಂದ ಅಥವಾ ಖಾಸಗೀ ಕೊಡುಗೆಯ ಆಧಾರದ ಮೇಲೆ ನಿಂತಿದ್ದ ದೇವಾಲಯಗಳು, ಬಸದಿಗಳು, ಮಠಗಳು, ಬ್ರಹ್ಮಪುರಿಗಳು ಹಾಗೂ ಅಗ್ರಹಾರಗಳು ಕಲಿಕೆಯ ಕೇಂದ್ರವಾಗಿದ್ದವು. ಪುರಾಣ ಅಥವಾ ಕಾವ್ಯಗಳನ್ನು ದೇವಸ್ಥಾನಗಳಲ್ಲಿ ಮಠಗಳಲ್ಲಿ ಹಾಗೂ ಅಗ್ರಹಾರಗಳಲ್ಲಿ ಪಠಿಸುವ ಅಭ್ಯಾಸದಿಂದ ಅನಕ್ಷರಸ್ಥರನ್ನೂ ವಿದ್ಯಾವಂತರನ್ನಾಗಿ ಮಾಡಲಾಯಿತು. ಬಿ.ಎ. ಸಾಲತೊರೆ ಹೇಳುತ್ತಾರೆ.[2] *"ಅವರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಲಾತ್ಮಕ, ಸಾಂಸ್ಕೃತಿಕ ಅಥವಾ ರಾಷ್ಟ್ರೀಯ ಸಂಪ್ರದಾಯದ ಹಾಗೂ ಸ್ವತಃಆಲೋಚನೆ ಮತ್ತು ಜೀವನದ ದಾರಿಯ ಶಿಲ್ಪಗಳು ಹಾಗೂ ಹರಿಕಾರರು".*

ಸ್ತ್ರೀಯರಲ್ಲಿ ದೇವದಾಸಿಯರು ಹಾಡುವುದರಲ್ಲಿ ಹಾಗೂ ನರ್ತಿಸುವುದರಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದರು. ಅವರು ಸಪ್ತಸ್ವರಗಳ ಸುಮಧುರ ಸಮ್ಮಿಳಿತದಲ್ಲಿ ಸುಂದರವಾದ ಹಾಡನ್ನು ಹಾಡುತ್ತಿದ್ದರು.[3] ವೇಶ್ಯೆಯರ ವರ್ಗಕ್ಕೆ ನೃತ್ಯವನ್ನು ನಿರ್ಬಂಧ ಮಾಡಿರಲಿಲ್ಲ. ಆದರೆ ಎಲ್ಲಾ ವರ್ಗದವರೂ ಪಾಲ್ಗೊಳ್ಳಬಹುದಾದ ಲಲಿತಕಲೆಗಳಲ್ಲಿ ಇದೂ ಒಂದು ಎಂದು ಎಣಿಸಲಾಗಿತ್ತು.

ಹಿಂದೂ ಜೀವನದ ಪುನರುಜ್ಜೀವನವು ಮಹಿಳೆಯರ ಸ್ಥಾನಮಾನದಲ್ಲೂ ಅವರಿಗೆ ಗಣನೀಯವಾದ ಬಡ್ತಿಯನ್ನು ನೀಡಿತು. ಶಿಕ್ಷಣವು ಸ್ಥಳೀಯ ಭಾಷೆ ಹಾಗೂ ಸಂಸ್ಕೃತವೆರಡರಲ್ಲೂ ಇದ್ದ ಕವಿಯತ್ರಿಯರಿಂದ ವ್ಯಾಪಕವಾಗಿ ಹಬ್ಬಿತ್ತು ಎಂದು ತಿಳಿದು ಬರುತ್ತದೆ. ಗಂಗಾದೇವಿ ತಿರುಮಲಾಂಬರು ಉತ್ತಮ ಕವಿಯತ್ರಿಯರಾಗಿದ್ದರು. ಆದ್ದರಿಂದ ಶ್ರೇಷ್ಠ ಸಂಸ್ಕೃತ ಕೃತಿಗಳು ಶ್ರೇಷ್ಠ ಕೃತಿಗಳ ವ್ಯವಸ್ಥಿತವಾದ ಹಾಗೂ ನಿಯಂತ್ರಿತವಾದ ಅಧ್ಯಯನದ ಫಲವಾಗಿ ಮೂಡಿಬಂದವೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಸಂಗೀತದಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರೋತ್ಸಾಹವಿತ್ತು. ನೃತ್ಯವನ್ನು ಕಲಿಸುವುದಕ್ಕಾಗಿ ನಾಟ್ಯಶಾಲೆಯನ್ನು ಕಟ್ಟಿಸಲಾಯಿತು. ನವರಾತ್ರಿ ಹಬ್ಬದಂದು ವಿವಿಧ ಸ್ಥಳಗಳಿಂದ ಎಲ್ಲಾ ನರ್ತಕಿಯರನ್ನು ಆಹ್ವಾನಿಸಲಾಗಿತ್ತು. ಪಂಡಿತರು ಸ್ತ್ರೀಯರ ಮನೆಗಳಿಗೆ ಹೋಗಿ ಅಲ್ಲೇ ಅವರಿಗೆ ಹೇಳಿಕೊಡುತ್ತಿದ್ದರು. ಕೆಳವರ್ಗಕ್ಕೆ ಸೇರಿದ ಸ್ತ್ರೀಯರೂ ಶಿಕ್ಷಣವನ್ನು ಪಡೆದರು ಎಂಬುದಕ್ಕೆ ನಮಗೆ ದಾಖಲೆಗಳಿವೆ.

ಉದಾ: ಮದಗಲ್ ಘಟನೆಯನ್ನು ನಾವು ತೆಗೆದುಕೊಂಡರೆ ನೆಹಲ್‌ಳು ಒಬ್ಬ ರೈತನ ಮಗಳು. ಎರಡನೇ ದೇವರಾಯನ[4] ಆಸ್ಥಾನದಲ್ಲಿದ್ದ ಬ್ರಾಹ್ಮಣನೊಬ್ಬನು ಅವಳಿಗೆ ಉತ್ತಮ ಶಿಕ್ಷಣವನ್ನು ನೀಡಿದನು. ಪ್ರತೀ ಜಾತಿ ಹಾಗೂ ಪಂಗಡವೂ ತನ್ನದೇ ಆದ ಶಿಕ್ಷಣ ಪದ್ಧತಿಯನ್ನು ಹೊಂದಿದ್ದವು. ಇದು ಅವುಗಳ ಕಸುಬಿನ ಆಧಾರದ ಮೇಲೆ ಅವಲಂಬಿತವಾಗಿತ್ತು. ಕಾವ್ಯ, ಸಾಹಿತ್ಯ, ಸಂಗೀತ ವೇದಗಳನ್ನು ಅವರಿಗೆ ಕಲಿಸಲಾಗುತ್ತಿತ್ತು. ಇವುಗಳ ಜೊತೆಗೆ ಮಹಿಳೆಯರು ಮಂತ್ರಶಾಸ್ತ್ರ (ಖಗೋಳಶಾಸ್ತ್ರ), ಗಣಿತಶಾಸ್ತ್ರ, ವೈದ್ಯಕೀಯ ಹಾಗೂ ಜ್ಯೋತಿಶಾಸ್ತ್ರಗಳನ್ನು ಕಲಿಯುತ್ತಿದ್ದರು. ಇವರು ಸಂಸ್ಕೃತ ಭಾಷೆಯನ್ನು ಉಪಯೋಗಿಸುತ್ತಿದ್ದರು. ಇವರಿಗೆ ಮನೆಯಲ್ಲಿ ಸ್ವಾತಂತ್ರ್ಯವಿತ್ತು. ಅರಮನೆಯಲ್ಲಿ ಅನೇಕ

ಮಹಿಳೆಯರು ಸೇವಕಿಯರಾಗಿದ್ದರು. ಕೃಷ್ಣದೇವರಾಯನ ಕಾಲದಲ್ಲಿ 4,000 ಸೇವಕಿಯರು ವಿದ್ಯಾವತಿಯೋಧರು ಹಾಗೂ ನರ್ತಕಿಯರಾಗಿದ್ದರು. ಅಂತಃಪುರದಲ್ಲಿ ಅವರು ಎಲ್ಲಾ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದರು. ಅಚ್ಚುತರಾಯನ ಕಾಲದಲ್ಲಿ ಸ್ತ್ರೀಲೆಕ್ಕಿಗರೂ ಇದ್ದರು. ತಿರುಮಲಮ್ಮಳು ಪುರಾಣವನ್ನು ವಾಚಿಸುತ್ತಿದ್ದಳು ಹಾಗೂ ಅವಳನ್ನು ಓದುವ ತಿರುಮಲಮ್ಮ ಎಂದು ಕರೆಯಲಾಗಿತ್ತು. ಇವಳು ಎರಡು ಸಂಸ್ಕೃತ ಶ್ಲೋಕಗಳನ್ನು ರಚಿಸಿದ್ದಾಳೆ. ಒಂದನ್ನು ಅಚ್ಯುತರಾಯ ದಾನವೊಂದನ್ನು ನೀಡುವಾಗ ಹಾಗೂ ಇನ್ನೊಂದನ್ನು ರಾಜನು ಕ್ರಿ.ಶ. 1533ರಲ್ಲಿ ಹಂಪಿಯಲ್ಲಿ ಬ್ರಾಹ್ಮಣರಿಗೆ ಸ್ವರ್ಣಮೇರು ಕೊಡುಗೆಯನ್ನು ಕೊಟ್ಟ ಸ್ಮರಣಾರ್ಥವಾಗಿ ರಚಿಸಿದಳು.

ಸಾಮಾನ್ಯ ಜನರಿಗೆ ನೀಡುತ್ತಿದ್ದ ಶಿಕ್ಷಣಕ್ಕಿಂತ ರಾಜಕುಮಾರಿಯ ಶಿಕ್ಷಣವು ಬಹಳ ಭಿನ್ನವಾಗಿತ್ತು. ಅದು ಬಹಳ ವ್ಯತ್ಯಾಸದಿಂದ ಕೂಡಿದ್ದು ಹಲವಾರು ದೃಷ್ಟಿಕೋನಗಳನ್ನು ಹೊಂದಿತ್ತು. ರಾಜನೀತಿಯನ್ನು ಪ್ರತೀ ರಾಜಕುಮಾರನೂ ಕಲಿಯಬೇಕಾಗಿತ್ತು ಹಾಗೂ ಇದು ವಿಷಪಾರಿಕಗಳು ಅಥವಾ ವಿಷಹಾರಿಗಳ ಜ್ಞಾನವನ್ನೂ ಒಳಗೊಂಡಿತ್ತು.[5] ಈ ಸಂಬಂಧ ಈ ಕಾಲದ ಹಲವಾರು ದೇವಾಲಯಗಳು ಸಾಮಾನ್ಯ ವೈದ್ಯರ ಜೊತೆಗೆ ವಿಷ ವೈದ್ಯರನ್ನೂ ನೇಮಿಸಿಕೊಂಡಿದ್ದರೆಂಬುದು ಬಹಳ ಕುತೂಹಲಕಾರಿಯಾದ ಅಂಶವಾಗಿದೆ.

ಎಲ್ಲಾ ಕುಟುಂಬಗಳಲ್ಲೂ ಹುಡುಗಿಯರನ್ನು ಅವರ ಪೋಷಕರು ಬಹಳ ನಿಯಂತ್ರಣದಲ್ಲಿಡುತ್ತಿದ್ದರು. ಅವರಿಗೆ ಅವರ ಪೋಷಕರೇ ಬಾಲ್ಯದಿಂದಲೂ ಶಿಕ್ಷಣವನ್ನು ಮನೆಯಲ್ಲೇ ನೀಡುತ್ತಿದ್ದರು. ಅವರ ಪಠ್ಯಕ್ರಮದಲ್ಲಿ ಸಂಗೀತ ಮತ್ತು ನೃತ್ಯವು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದವು. ವೇಶ್ಯೆಯರ ವರ್ಗದ ಹುಡುಗಿಯರಿಗೆ ಉತ್ತಮ ಶಿಕ್ಷಣ ನೀಡಲಾಗುತ್ತಿತ್ತು. ಎಲ್ಲರಿಗೂ ಓದಲು ಬರೆಯಲು ಹೇಳಿಕೊಡಲಾಗುತ್ತಿತ್ತು. ಕೆಲವು ಸ್ತ್ರೀಯರು ಸಂಸ್ಕೃತ ಹಾಗೂ ಮಾತೃಭಾಷಾ ಸಾಹಿತ್ಯದಲ್ಲಿ ಉತ್ತಮ ಜ್ಞಾನವನ್ನು ಹೊಂದಿದ್ದರು. ಶೈವ, ವೈಷ್ಣವ ಹಾಗೂ ಜೈನ ಗುರುಗಳು ಅರ್ಹ ಯುವಕ ಹಾಗೂ ಯುವತಿಯರಿಗೆ ಶಿಕ್ಷಣವನ್ನು ನೀಡುವುದು ತಮ್ಮ ಆಧ್ಯ ಕರ್ತವ್ಯವೆಂದು ನಂಬಿದ್ದರು.

2. ಸಾಹಿತ್ಯ:

ವಿಜಯನಗರ ಕಾಲದಲ್ಲಿ ಸಾಹಿತ್ಯ ಮತ್ತು ಕಾವ್ಯದ ಕ್ಷೇತ್ರದಲ್ಲಿ ಮಹಿಳೆಯರು ಮಹೋನ್ನತ ಸಾಧನೆಗೈದಿದ್ದಾರೆ. ಅವರ ಕೊಡುಗೆ ಅಮೋಘವಾಗಿದೆ. ಈ ಕಾಲದ ಸ್ತ್ರೀಯರು ಸಂಸ್ಕೃತ ಮತ್ತು ತೆಲುಗು ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದರು. ಈ ಗುಂಪಿನ ಕೆಲವು ಪ್ರಸಿದ್ಧ ವಿದ್ವಾಂಸರು ಹಾಗೂ ಬರಹಗಾರರೆಂದರೆ ಗಂಗಾದೇವಿ ಹೊನ್ನಾಯಿ, ಜಗನ್ಮೋಹಿನಿ ಅಥವಾ ತುಕ್ಕ ಅಭಿರಾಮ ಕಾಮಾಕ್ಷಿ ಅಥವಾ ಮೊಲ್ಲ, ಮೋಹನಾಂಗಿ ಮತ್ತು ತಿರುಮಲಾಂಬ.

ಎ. ಗಂಗಾದೇವಿ (ಕ್ರಿ.ಶ. 1360)

ಎರಡನೇ ಕಂಪಣನ ರಾಣಿಯಾದ ಗಂಗಾದೇವಿಯು ಆ ಕಾಲದ ಪ್ರಸಿದ್ಧ ಕವಿಯತ್ರಿಯಾಗಿದ್ದಳು. ಇವಳೊಬ್ಬ ಶ್ರೇಷ್ಠ ಮಟ್ಟದ ಕವಿಯತ್ರಿ. ಶ್ರೇಷ್ಠ ಕೃತಿಗಳಾಧ್ಯಯನದ ವಿದ್ಯಾರ್ಥಿ ಇವಳು, ವೇದಸಾಹಿತ್ಯದಲ್ಲಿ ಬಹಳ ನಿಷ್ಣಾತೆ. ಬಹಳ ಪ್ರತಿಭಾವಂತ ಕವಿಯತ್ರಿಯಾದ ಇವಳು ಸಂಸ್ಕೃತ ಸಾಹಿತ್ಯದ ಶ್ರೇಷ್ಠ ಸಾಹಿತಿಗಳನ್ನು ನಿತ್ರಾಣವಿಲ್ಲದೆ ಓದಿ ಅರಗಿಸಿಕೊಂಡಳು. ಅವಳ ವಂಶದ ಬಗ್ಗೆ ನಮಗೆ ಹೆಚ್ಚು ತಿಳಿಯದಿದ್ದರೂ ಅವಳ ಹೆಸರು ದೇವಿ ಎಂಬುದರಿಂದ ಕೊನೆಗೊಳ್ಳುವ ಕಾರಣ ಇವಳು ಉತ್ತಮ ಕುಲದಿಂದಲೇ ಬಂದಿರುವಳೆಂದು ಊಹಿಸಬಹುದು. ಇವಳೊಬ್ಬ ಶ್ರೇಷ್ಠ ಸಾಧಕಳು ಹಾಗೂ ಎಲ್ಲ ರೀತಿಯಾದ ಬಿಂಕು ಬಿಗುಮಾನಗಳನ್ನು ಮೈಗೂಡಿಸಿಕೊಂಡಾಕೆ. ಇವಳು ಒಂದನೇ ಬುಕ್ಕನ ಸೊಸೆ ಒಂದನೇ ಬುಕ್ಕನ ಎರಡನೇ ಮಗನಾದ ಎರಡನೇ ಕಂಪಣನು ತನ್ನೆಲ್ಲಾ ಪ್ರೀತಿ ಪ್ರೇಮವನ್ನು ಈಗಾಗಲೇ ಅವನಿಗೆ ಇಬ್ಬರು ಹೆಂಡರಿದ್ದರೂ ಅವಳ ಮೇಲೆ ಹೊಂದಿದ್ದನು. ಟಿ. ರಾಮಯ್ಯ ಪಂತುಲು ಅವಳನ್ನು ಕಂಪಣನು[6] ಇಟ್ಟುಕೊಂಡಿದ್ದನು ಎಂದು ಹೇಳುತ್ತಾರೆ. ಆದರೆ ಡಾ.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್‌ರವರು ಅವಳು ಕಂಪರಾಯನ ರಾಣಿ ಎಂದು ಚಿತ್ರಿಸುತ್ತಾರೆ.[7]

ಗಂಗಾದೇವಿಯು ಸಂಸ್ಕೃತ ಭಾಷೆಯಲ್ಲಿ **ಮಧುರಾ ವಿಜಯಂ** ಅಥವಾ **ವೀರ ಕಂಪರಾಯಚರಿತಮು** ಕೃತಿಯನ್ನು ರಚಿಸಿದಳು. ಇದು ಅವಳ ಗಂಡನಾದ ಕುಮಾರ ಕಂಪಣನು ಮಧುರಾ ಪ್ರದೇಶವನ್ನು ವಶಪಡಿಸಿಕೊಳ್ಳುವುದರ ಬಗ್ಗೆ ವಿವರಣೆಯನ್ನು ನೀಡುತ್ತದೆ. ತನ್ನ ಗಂಡನ ಯಶಸ್ವೀ ದಂಡಯಾತ್ರೆಯನ್ನು ಬಹಳ ಸರಳ ಹಾಗೂ ಆಕರ್ಷಿತವಾದ ಶೈಲಿಯಲ್ಲಿ ನಿರೂಪಿಸಿದ್ದಾಳೆ. ಕಂಪರಾಯನು ಕ್ರಿ.ಶ. 1361ರಲ್ಲಿ ಶಾಂಭುವರಾಯನನ್ನು ಹಾಗೂ ಕ್ರಿ.ಶ. 1371ರಲ್ಲಿ ಮಧುರಾ ಸುಲ್ತಾನ್‌ನನ್ನು ಗೆದ್ದು ಸೇತುಬಂಧ ರಾಮೇಶ್ವರಂವರೆಗೂ ವಿಸ್ತರಿಸಿರುವ ತಮಿಳುದೇಶವನ್ನು ವಿಜಯನಗರ ಸಾಮ್ರಾಜ್ಯದಡಿಯಲ್ಲಿ ತಂದನು.

ಮಧುರಾವಿಜಯಂ, ಇದು ಲಭ್ಯವಿರುವ ಕೈಬರಹಗಳ ಮೇಲೆ ಆಧಾರಿತವಾಗಿದೆ. ಇದು ಎರಡು ಪ್ರಮುಖ ಘಟನೆಗಳನ್ನು ವಿವರಿಸುತ್ತದೆ. ತೊಂಡೈಮಂಡಲಂನಲ್ಲಿ ಸಾಂಬುವರಾಜನ ನಿರ್ನಾಮ ಹಾಗೂ ಇನ್ನೊಂದು ಮಧುರೈ ಸುಲ್ತಾನನ ವಿನಾಶ. ಈ ಕೃತಿಯ ಸಾಮಾನ್ಯ ವಸ್ತುವು ಐತಿಹಾಸಿಕ. ಇದು ಸಂಸ್ಕೃತ ವ್ಯಾಕರಣದ ಕ್ರಿಯಾಪದಗಳ ಮೂಲದ ಬಗ್ಗೆ ತಿಳಿಯುವ ಅಧ್ಯಯನವಾಗಿದ್ದು ಸಂಗಮ ವಂಶಕ್ಕೆ ಇದನ್ನು ಅರ್ಪಿಸಲಾಗಿದೆ. ಮಧುರಾ ವಿಜಯಂ ಈ ಕೃತಿಯು ತಮಿಳು ದೇಶಕ್ಕೆ ವಿಜಯನಗರದ ಆಳ್ವಿಕೆಯ ವಿಸ್ತರಣೆಯ ಬಗ್ಗೆ ಹಾಗೂ ಈ ಹಾದಿಯಲ್ಲಿನ ಸನ್ನಿವೇಶಗಳ ಬಗ್ಗೆ ಉತ್ತಮವಾದ ಚಿತ್ರಣವನ್ನು ನೀಡುತ್ತದೆ. ಈ ಗ್ರಂಥವು ಸಂಸ್ಕೃತ ಸಾಹಿತ್ಯದಲ್ಲಿ ಬಹಳ ಪ್ರಸಿದ್ಧಿಯಾಗಿದೆ. ಈ ಗ್ರಂಥವು ಒಂಬತ್ತು ಅಧ್ಯಾಯಗಳಲ್ಲದೆ ಇದರ ಹೆಚ್ಚು ಭಾಗದ ನಿರೂಪಣೆಯನ್ನು ಕುಮಾರ ಕಂಪಣನು ಮಧುರೈಯನ್ನು ಗೆದ್ದ ಯಶಸ್ಸಿನ ಪರಾಕಾಷ್ಠತೆಯನ್ನು ತಲುಪುವವರೆಗಿನ ಮುಖ್ಯ ಅಂಶಗಳನ್ನು ವಿವರಿಸಲು ಉದ್ದೇಶಿಸಲಾಗಿದೆ. ಕೆಳಗಿರುವುದು ಇದರ ಸಾರಾಂಶ. ಒಂದು ಕಾವ್ಯದ ಅಧ್ಯಾಯದಿಂದ ಇನ್ನೊಂದು ಕಾವ್ಯದ ಅಧ್ಯಾಯದ ಮೂಲಕ ವಿವರಿಸಲಾಗಿದೆ.

ಅಧ್ಯಾಯ 1: ಸಮಕಾಲೀನ ಪಂಡಿತರ ಹೆಸರನ್ನು ನೀಡುತ್ತದೆ:

2. ಕುಮಾರ ಕಂಪಣನ ವಂಶದ ಬಗ್ಗೆ ಮಾಹಿತಿಯನ್ನು ನೀಡುತ್ತದೆ: ಬುಕ್ಕ ಮತ್ತು ಹರಿಹರರನ್ನು ಉಲ್ಲೇಖಿಸುತ್ತದೆ. ಬುಕ್ಕನ ಮನಸ್ಸು ಮತ್ತು ಹೃದಯದ ಗುಣಗಳನ್ನು ವಿವರಿಸುತ್ತದೆ. ಹಾಗೂ ಬುಕ್ಕನ ರಾಣಿಯಾದ ದೇವಿಯ ಉಲ್ಲೇಖವನ್ನು ಮಾಡುತ್ತದೆ. ಬುಕ್ಕನ ರಾಣಿಯ ಬಗ್ಗೆ ಮಾಹಿತಿಯನ್ನು ನೀಡಲು ಇದೊಂದೇ ಆಧಾರವೆಂಬುದನ್ನು ಗಮನಿಸಬಹುದು.

3. ವಿಜಯನಗರ ನಗರವನ್ನು ವಿವರಿಸುತ್ತದೆ:

ಅಧ್ಯಾಯ 2: ಕಂಪಣನ ಜನನ ಹಾಗೂ ಇನ್ನಿಬ್ಬರು ಗಂಡು ಮಕ್ಕಳಾದ ಕಂಪಣ ಹಾಗೂ ಸಂಗಮರಿಬ್ಬರ ಜನನ.

ಅಧ್ಯಾಯ 3: 1. ಕಂಪಣನ ಆರಂಭಿಕ ತರಬೇತಿಯ ಬಗ್ಗೆ ಚಿತ್ರಣವನ್ನು ನೀಡುತ್ತದೆ.

2. ಗಂಗಾದೇವಿಯೊಂದಿಗಿನ ಅವನ ಮದುವೆಯ ಬಗ್ಗೆ ಹೇಳುತ್ತದೆ.

3. ಈ ಭಾಗವು ಬಹಳ ಕುತೂಹಲಕಾರಿಯಾದ ಹಾಗೂ ಬಹಳ ಬೆಲೆಬಾಳುವ ಐತಿಹಾಸಿಕ ಮಾಹಿತಿಯನ್ನು ಒಳಗೊಂಡಿದೆ.

ಇದನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದು.

ಎ. ತಮಿಳು ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಬುಕ್ಕನ ಸಮೀಕ್ಷೆ

ಬಿ. ತಮಿಳು ದೇಶದ ನಾಯಕರನ್ನು ನಿರ್ನಾಮ ಮಾಡಿ ಕಂಚಿಯ ಅರಸನಾಗಲು ಬುಕ್ಕನು ಕಂಪಣನನ್ನು ಒತ್ತಾಯಿಸುವುದು.

ಸಿ. ತೊಂಡೈಮಂಡಲಂ ಅನ್ನು ಗೆದ್ದ ಮೇಲೆ ಕಂಪಣನು ಮಧುರೈ ವಿಜಯದ ನಂತರ ರಾಜಮೆರವಣಿಗೆಯನ್ನು ಮಾಡುವುದು.

ಅಧ್ಯಾಯ 4 : 1. ಸಾಂಬುವರಾಯ ರಾಜ್ಯದಲ್ಲಿ ಮೆರವಣಿಗೆಗಾಗಿ ಸಿದ್ಧತೆಗಳು

2. ವಿಜಯನಗರ ಸೇನೆಯ ಗಾತ್ರ

3. ವಿಜಯನಗರದ ಮಿತ್ರ ಸೇನೆಗಳು ಚೋಳರು, ಕೇರಳರು ಮತ್ತು ಪಾಂಡ್ಯರು

4. ಸೇನೆಯ ಕ್ರಮವಾದ ಪಥಸಂಚಲನ

5. ಮುಳಬಾಗಿಲ ಬಳಿ ಮೊಕ್ಕಾಂ ಹಾಕಿ ನಂತರ ವಿರಿಂಚಿಪುರಾಕ್ಕೆ ಪ್ರಯಾಣ

6. ಪಡೈವೀಡಿನ ಗಾತ್ರ ಹಾಗೂ ಸಾಂಬುವವರಾಯನೊಂದಿಗೆ ಕದನ

7. ಸಾಂಬುವರಾಯನ ಸೋಲು ಹಾಗೂ ಕಂಪಣನ ಕೈಯಿಂದ ಇವನ ಹತ್ಯೆ.

ಅಧ್ಯಾಯ 5 : ಕಂಪಣನು ಕಂಚೀಪುರದಲ್ಲಿ ನ್ಯಾಯಯುತವಾದ ಹಾಗೂ ಸಂಪದ್ಭರಿತವಾದ ಆಳ್ವಿಕೆಯನ್ನು ಸ್ಥಾಪಿಸುತ್ತಾನೆ.

ಅಧ್ಯಾಯ 6 ಮತ್ತು 7 : ಇಲ್ಲಿ ಯಾವುದೇ ಐತಿಹಾಸಿಕ ಮಾಹಿತಿ ಇಲ್ಲ.

ಅಧ್ಯಾಯ 8 : ಮುಸ್ಲಿಂ ಆಕ್ರಮಣದ ನಂತರ ತಮಿಳು ದೇಶದ ಸ್ಥಿತಿ.

ಅಧ್ಯಾಯ 9 : ಇದು ಮುಕ್ತಾಯದ ಅಧ್ಯಾಯವಾಗಿದೆ. ಇದು ಮುಸ್ಲಿಂರೊಂದಿಗಿನ ಅಂತಿಮ ಹಣಾಹಣಿಯ ಬಗ್ಗೆ ನಮಗೆ ಮಾಹಿತಿಯನ್ನು ಒದಗಿಸುತ್ತದೆ. ಮಧುರೈ ಕಂಪಣನ ವಿಜಯ ಹಾಗೂ ನಂತರ ಯುದ್ಧದಲ್ಲಿ ಸುಲ್ತಾನನ ಮರಣ.

ಗಂಗಾದೇವಿಯು ಕಾಳಿದಾಸ, ಬಾಣಭಟ್ಟ, ಭಾರವಿ, ದಂಡಿ ಮತ್ತು ಭವಬೂತಿ ಹಾಗೂ ವಾಲ್ಮೀಕಿ ಮತ್ತು ವ್ಯಾಸರೊಂದಿಗೆ ತನ್ನ ಕಲ್ಪನಾಶಕ್ತಿಯೊಂದಿಗೆ ಇವರನ್ನು ಆಯ್ದುಕೊಂಡಳು. ಪ್ರತಿಯೊಬ್ಬರಿಗೂ ಬರೆದಿರುವ ಕವಿತೆಗಳಲ್ಲಿ ಪ್ರತೀ ಕವಿಯ ವಿಶೇಷ ಪಾಂಡಿತ್ಯವನ್ನು ಹೊರತುಪಡಿಸುತ್ತಾಳೆ.

ಇವಳ ಪ್ರಕಾರ ಕಾಳಿದಾಸನು ಉತ್ತಮ ಕವಿತೆಯನ್ನು ಬರೆಯುವವರಿಗೆ ಸೂಕ್ತ ಆದರ್ಶ ಕವಿಯಾಗಬೇಕು.[8] ಬಾಣಭಟ್ಟನ ಸುಲಲಿತ ಮತ್ತು ಅಲಂಕಾರಿಕ ಗುಣವು ಇವಳನ್ನು ಬಲು ಆಕರ್ಷಿಸಿತು.[9] ಭಾರವಿಯ ಬರಹಗಳಲ್ಲಿನ ಆಳ ಹಾಗೂ ಆಚಾರ್ಯ ದಂಡಿಯ ಸಾಹಿತ್ಯ ಪ್ರೌಢಿಮೆ ನಮ್ಮ ಕವಿಯತ್ರಿಯನ್ನು ಹೆಚ್ಚು ಆಕರ್ಷಿಸಿದವು.[10]

ಉತ್ತರ ರಾಮಚರಿತಂನ ಅಪ್ರತಿಮ ಬರಹಗಾರನಾದ ಭವಭೂತಿಯು ಇವಳ ಪ್ರಕಾರ ವಿದ್ಯಾವಂತರ ಕಿವಿಗಳಲ್ಲಿ ಅಮೃತದ ಸ್ವಾದವನ್ನು ತುಂಬಿದನು.[11] ಕೆಲವರು ಇವಳ ಮೇಲೆ ಅಗಾಧವಾದ ಪ್ರಭಾವವನ್ನು ಬೀರಿದರು ಹಾಗೂ ಉತ್ತೇಜಿಸಿದರು. ಇವರಲ್ಲಿ ಕ್ರಿಯಾಶಕ್ತಿ ಪಂಡಿತನು ಈ ಕವಿತೆಯಲ್ಲಿ ಹೆಮ್ಮೆಯ ಸ್ಥಾನವನ್ನು ಹೊಂದಿದ್ದಾನೆ. ಗಂಗಾದೇವಿಯು ನಾಟಕಕಾರನಾದ ಗಂಗಾಧರನನ್ನು ಸ್ವಾಗತಿಸುತ್ತಾಳೆ. ಇವನೊಬ್ಬ ನಾಟಕಕಾರನಾಗಿದ್ದು **ಮಹಾಭಾರತ, ಚಂದ್ರಾವಿಲಾಸ** ಮತ್ತು **ರಾಘುವಾಭ್ಯುದಯಂ** ಎಂಬ ನಾಟಕಗಳನ್ನು ಬರೆದಿದ್ದನು. ಅಗಸ್ತ್ಯನು ವಾರಂಗಲ್ಲಿನ ಪ್ರತಾಪರುದ್ರದೇವನ ಆಸ್ಥಾನದಲ್ಲಿ ಕವಿಯಾಗಿದ್ದನು. ಅಗಸ್ತ್ಯನು ಗಂಗಾದೇವಿಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದನು. ತನ್ನ ಗುರುವಾದ ವಿಶ್ವನಾಥನಿಗೆ ಪ್ರತ್ಯೇಕವಾಗಿ ವಂದಿಸುತ್ತಾಳೆ. ಅವನನ್ನು ಕವೀಶ್ವರ ಎನ್ನುತ್ತಾಳೆ ಹಾಗೂ ಅವನ ದೀರ್ಘಾಯುಷ್ಯಕ್ಕಾಗಿ ಅವನನ್ನು ಹರಸುತ್ತಾಳೆ.[12] ಅವಳು ಹೇಳುತ್ತಾಳೆ *"ಅವರ ಆಶೀರ್ವಾದದಿಂದಲೇ ನನ್ನಂತಹ ವ್ಯಕ್ತಿಯಲ್ಲೂ ಒಂದು ರೀತಿಯಾದ ಸರ್ವಜ್ಞಾನವು ಗೋಚರವಾಗಿದೆ."*

ಅವಳ ಕೃತಿಗಳ ಬಗ್ಗೆ ಸಂಪಾದಕರು ವ್ಯಕ್ತಪಡಿಸಿರುವ ಮೆಚ್ಚುಗೆಯ ಮಾತುಗಳನ್ನು ಈ ರೀತಿಯಾಗಿ ಉಲ್ಲೇಖಿಸಬಹುದು. *"ಈ ಕೃತಿಯು ಸಾಂಪ್ರದಾಯಿಕ ಕಾವ್ಯದ ಪ್ರಕಾರದಲ್ಲಿಯ ಕಾವ್ಯಮೀಮಾಂಸೆಯಲ್ಲಿರುವ ನಿಯಮಗಳಿಗೆ ಸಾಮರಸ್ಯವಾಗಿದೆ ಹಾಗೂ ಎಂದಿನಂತೆ ಋತುಗಳ ದೀರ್ಘ ವರ್ಣನೆಯಿದೆ; ಮುಸ್ಸಂಜೆಯ ಬೆಳಕು, ಚಂದಿರನ ಉದಯ ಹಾಗೂ ಇತರ ಅವಶ್ಯಕ ವಿಷಯಗಳನ್ನು ಹೊಂದಿದೆ. ಲೇಖಕಿಯು ವಿದರ್ಭ ಶೈಲಿಯಲ್ಲಿ ಬರೆಯುತ್ತಾಳೆ ಹಾಗೂ*

ಕಾಳಿದಾಸನೊಂದಿಗೆ ಅವಳ ಆಲೋಚನೆಗಳು ಹರಿಯುತ್ತವೆ. ಆದರೆ ನವೀನ ಪ್ರಾಮುಖ್ಯತೆಯನ್ನು ಹೊಂದಿರುವ ಇವುಗಳು ಅವಳ ಕಲ್ಪನೆಯನ್ನು ತುತ್ತ ತುದಿಯಲ್ಲಿ ಬದಲಾವಣೆಯನ್ನು ಹೊಂದಿವೆ."[13]

ಈ ರೀತಿಯಾಗಿ ಗಂಗಾದೇವಿಯು ಕವಿಯತ್ರಿಯಾಗಿ ಉತ್ತಮ ಶ್ರೇಣಿಯನ್ನು ತಲುಪುತ್ತಾಳೆ. ಸಂಸ್ಕೃತವನ್ನು ಅಭಿವ್ಯಕ್ತಿಯ ಸಾಧನವಾಗಿ ತೆಗೆದುಕೊಂಡ (ಮಹಿಳೆಯರಲ್ಲಿ) ದಕ್ಷಿಣ ಭಾರತದ ಸ್ತ್ರೀ ಬರಹಗಾರರಲ್ಲಿ ಪ್ರಾಯಶಃ ಇವಳು ಅತ್ಯಂತ ಶ್ರೇಷ್ಠ ಬರಹಗಾರಳೆಂದು ತೋರುತ್ತದೆ. ಅವಳ ನಿಸರ್ಗ ಸೌಂದರ್ಯ ಕಾವ್ಯವು ಸುಂದರವಾಗಿದೆ. ತಾವರೆಯಂತ ಕಣ್ಣುಗಳು, ತನ್ನ ಚಹರೆಯನ್ನೇ ನೋಡಿಕೊಳ್ಳುವ ತವಕ,ಶರತ್ಕಾಲವು ರವಿಯ ಮೇಲಿನ ತನ್ನ ಮೇಘಗಳ ಮುಸುಕನ್ನು ಶೀಘ್ರವಾಗಿ ತೆಗೆದು ಹಾಕಿತು.[14]

ಬಿ. ಹೊನ್ನಾಯಿ:

ಇವಳು ಆ ಕಾಲದ ಪ್ರಸಿದ್ಧ ಬರಹಗಾರಳು. ಇವಳು ಬುಕ್ಕರಾಯನ ರಾಣಿಯಾಗಿದ್ದಳು. ಕ್ರಿ.ಶ. 1378ರ ಶಾಸನವೊಂದು ವಿದ್ವಾಂಸೆಯನ್ನಾಗಿ ಬುಕ್ಕರಾಯನ ರಾಣಿಯಾದ ಹೊನ್ನಯಿಯನ್ನು ಹೊಗಳುತ್ತದೆ.[15] ಬುಕ್ಕರಾಯನಿಗೆ ಅನೇಕ ಹೆಂಡತಿಯರಿದ್ದರು. ಆದರೆ ಅವರಲ್ಲಿ ಹೊನ್ನಯಿ ಪ್ರಮುಖಳು. ರಾಮಶಾಸ್ತ್ರ ಹಾಗೂ ವೇದಶಾಸ್ತ್ರಗಳಲ್ಲಿ ಶ್ರೇಷ್ಠ ಸಾಧನೆಯನ್ನು ಮಾಡಿದ್ದಳು. ಅವನ ಆಸೆಗಳ ಅಭಿಲಾಷೆಗಳನ್ನು ಪೂರೈಸುವಾಕೆ ಎಂದು ಹೆಸರುವಾಸಿಯಾಗಿದ್ದಳು. ಆದರೆ ಇವಳು ಕ್ರಿ.ಶ.1372ರಲ್ಲಿ ಕಾಲವಾದಳು. ಬುಕ್ಕನು ಮಂಜರಾಬಾದು ತಾಲ್ಲೋಕಿನ ಹೊನ್ನಾಪುರ ಹಲಂದುಲಿಗೆಯನ್ನು ದಾನವನ್ನಾಗಿ ನೀಡಿದನು. ಈ ಹಳ್ಳಿಯು ಮುಂದೆ ಅವಳ ಹೆಸರಿನಲ್ಲಿಯೇ ಕರೆಯಲ್ಪಟ್ಟಿತು.[16]

ಸಿ. ಜಗನ್ಮೋಹಿನಿ ಅಥವಾ ತುಕ್ಕ:

ಈ ಕಾಲದ ಶ್ರೇಷ್ಠ ಕವಯತ್ರಿಯರಲ್ಲಿ ಇವಳು ಒಬ್ಬಳಾಗಿದ್ದಳು. ಗಜಪತಿಯ ರಾಜಕುಮಾರಿಯಾದ ಜನ್ಮೋಹಿನಿಯನ್ನು ಹಲವಾರು ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಇವಳು ಕೃಷ್ಣದೇವರಾಯನ ಪ್ರಧಾನ ರಾಣಿಯರಲ್ಲಿ ಒಬ್ಬಳಾಗಿದ್ದಳು. ಕುಮಾರ ದುರ್ಜತಿಯ **ಕೃಷ್ಣರಾಜವಿಜಯಂ** ಅವಳನ್ನು ತುಕ್ಕ ಎಂದು ಕರೆದರೆ **ರಾಯವಾಚಕಂ** ಇವಳನ್ನು ಜಗನ್ಮೋಹಿನಿ ಎಂದು ಕರೆಯುತ್ತದೆ. ತಿಮ್ಮರಸು ಮಂತ್ರಿಯ ಸಹೋದರಿಯ ಮಗನಾದ ನದಿಂದ್ಯಗೋಪ ಮಂತ್ರಿಯು ಪ್ರಭೋಧಾಚನ-ಚೋದಯದ ಮೇಲಿನ ಇವನ ವಿವರಣೆಯಲ್ಲಿ ಇವಳನ್ನು ಭದ್ರಾ ಎಂದು ಕರೆಯಲಾಗುತ್ತದೆ. ಕೆ.ಆರ್. ಲಕ್ಷ್ಮಣರಾವ್ ಪ್ರಕಾರ ಇವಳು ಓರಿಸ್ಸಾ ರಾಜ ಹಾಗೂ ಅನ್ನಪೂರ್ಣೆಯ ಮಗಳೆಂದು ಗುರುತಿಸಲಾಗಿದೆ.

ತುಕ್ಕಪಂಚಕಂ ಅನ್ನು ಸಂಸ್ಕೃತದಲ್ಲಿ ಇವಳು ಬರೆದಿದ್ದಾಳೆ. ಇದು ಐದು ಶ್ಲೋಕಗಳನ್ನು ಹೊಂದಿದೆ. ಇವಳನ್ನು ಅವಳ ಗಂಡನು ಬಿಟ್ಟಿರುತ್ತಾನೆ ಹಾಗೂ ಕುಡ್ಯಾವ್ ಜಿಲ್ಲೆಯ ಕಂಬಂ ಬಳಿ ಇವಳು ಏಕಾಂತವಾಸದಲ್ಲಿ ಜೀವಿಸಿದ್ದಳು ಎಂದು ಹೇಳಲಾಗಿದೆ. ಇವಳ ಒಂದು ಇಂಗಿತದಂತೆ ಕಂಬಂ ಬಳಿ ಇರುವ ಬೃಹತ್ ನೀರಾವರಿ ಕೆರೆಯನ್ನು ಕಟ್ಟಲಾಗಿದೆಯೆಂದು ಹೇಳಲಾಗಿದೆ. ತನ್ನ ಗಂಡನು ತನ್ನನ್ನು ಪರಿತ್ಯಾಗ ಮಾಡಿರುವ ಬಗ್ಗೆ ಈ ಕವಿತೆಗಳಲ್ಲಿ ವ್ಯಸನಪಡುತ್ತಾಳೆ.

ತುಕ್ಕ ಪಂಚಕಂ:

ತುಕ್ಕ ನಾಮ ಗಜಪತಿ ಪುತ್ರಿ
ಕೃಷ್ಣದೇವರಾಯ ಪತ್ನಿ
ಕಾರಣ್ ವಾನಂತೆ ನವ - ಮರಜರಿಸುವ
ಷತಪದೊ ಗಂಧ - ಫಾಲಂ ಆಜಿಘ್ರಾತ್
ಸ ಕಿಮ್ ನ ರಮ್ಯ ಸ ಕ ಕಿಮ್
ನ ರಂತ ಬಳಿಯಾಸಿ ಕೇವಲಂ ಈಶ್ವರಜ್ಞ 1

ಮಾ ಕಿಮೀಸುಕ ಪ್ರಕಾತಯಾತ್ಮ - ನಿಮೇಸ ಮಾತ್ರಂ
ಮಾನಮಾಸ್ತಕೆ ವಿಹಾರತಿತಿ ಮಧುಮಾತೊಯಾಮ್
ಕಿಮ್ ಮಾಲತಿ- ವಿರಹವೇದನಯ ತ್ವ ಅದಿಯಂ
ದೃಸ್ಟ್ವ ಪ್ರಶೂನಂ ಅಸೀರದ್ ಎ ನಳಬ್ರೊಮೇನ 2
ಭ್ರಮರ ಭ್ರಮತ ದಿಗಂತರಾಳೆ
ಕ್ವಸಿದ್ ಅಸ್ವಾದಿತಂ ಇಕ್ಸಿತೆಂ ವ
ವದ ಸತ್ಯಂ ಅಪಸ್ಸ ಪಕ್ಸಪತಂ
ಯದರ್ ಜತ್ ಇಕುಸುಮಾನುಕರಿ ಪುಷ್ಪಂ 3
ಕುಸುಮಾನಿ ಲಿಕಂತು ನಮ ಚಿತ್ರೆ
ಕತಿಚಿತ್-ಕರೂವೈಸೇಶ, ರೂಢ-ಶಿಕ್ಷಾಃ
ಸೂಭಿತ್ವಂ ಅಮುನಿ ಕಿಮ್ ಲಾಭಂತೆ
ಕಿಮು ಚೈತೇಸು ರಸಂ ಪಿಬಂತಿ ಭೃಂಗಃ 4

ಕಿಮ್ ಮಾಲತಿ ಮಲಯಾಸಿ ಇಯನ್ ವಿಹಾಯ

ಕುಕುಂಬ ತುಂಬಿ - ಕುಸುಮನ್ ಸದಾಂಗ್ರಿಹ

ಲೋಕೆ ಚತುರ್ಬಿಸ್ ಕಾರಣ್ಯೆ ಪಾಸ್ ಉಸ್ಸಯಾತ್

ಸ ಸದ್ಬಿರ್ ಅತ್ಯಾರ್ಥ - ಪಾಸ್ ಉರ್ ನ ಕಿಮ್ ಸ್ಯ[17] 5

ಓ ಕಿಂಸುಕ (ಕುಸುಮವೇ) ಮಾಲತಿ (ಹೂವು) ಯ ವಿರಹ ವೇದನೆಯಿಂದ ಬಳಲುತ್ತಿರುವ ಭೃಂಗವು ನಿನ್ನನ್ನು ಬೆಂಕಿಯುಂಡೆಯೆಂದು ತಿಳಿದು (ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ) ನಿನ್ನ ಮೇಲೆ ಕೂರಲು ಬರುತ್ತಿರುವ ಭೃಂಗಕ್ಕೆ ನಿನ್ನ ಮೊಗವನ್ನು ಅರಳಿಸುತ್ತಿರುವೆಯಾ ? ಓ ಪ್ರಿಯ ಭೃಂಗವೇ ನೀನು ಹಾರಾಡುವ ನೆಲಗಳಲ್ಲಿ ಈ ಜಾತಿಗೆ ಸಮನಾದ ಹೂವನ್ನು ಎಂದಾದರೂ ನೋಡಿರುವಿಯಾ ಅಥವಾ ಇದರ ಬಗ್ಗೆ ಕೇಳಿರುವೆಯಾ ಅಥವಾ ಮಕರಂದವನ್ನು ಹೀರಿರುವೆಯಾ ? ಹೇಳು ಸಂಕೋಚವಿಲ್ಲದೆ ಹೇಳೆನಗೆ.

ಅಪ್ರತಿಮ ಕಲಾಕಾರನೊಬ್ಬ ಬಟ್ಟೆಯ ಮೇಲೆ ತನ್ನ ಅದ್ಭುತ ಕುಂಚದಿಂದ ಅನುಪಮವಾದ ಹೂವೊಂದನ್ನು ಸೃಷ್ಟಿಸಬಹುದು. ಆದರೆ ಅದಕ್ಕೆ ಪರಿಮಳವಿರುವುದೇ ಅಥವಾ ಯಾವುದೇ ಜೇನು ಅದರ ಮಕರಂದವನ್ನು ಸವಿಯಲು ಸಾಧ್ಯವೇ ?

ಓ ಮಾಲತಿ ಏಕೆ ಕಳೆಗುಂದಿರುವ ಆರು ಪಾದಗಳುಳ್ಳ (ಕಾಲುಗಳುಳ್ಳ) ಜೇನೊಂದನ್ನು ನಿನ್ನನ್ನು ನಿರ್ಲಕ್ಷಿಸಿ ತುಂಬ ಸುಮವನ್ನು ಚುಂಬಿಸುದುದು ಇದಕ್ಕೆ ಕಾರಣವಿರಬಹುದೇ ? ಚತುಷ್ಪಾದವನ್ನು ಹೊಂದಿದ ಜೀವಿಯನ್ನು ಮೃಗವೆಂದು ಈ ಪ್ರಪಂಚದಲ್ಲಿ ಕರೆಯಲಾಗುತ್ತದೆ. ಹಾಗಾದರೆ ಆ ಆರು ಪಾದವಾದ ಭೃಂಗವನ್ನು ಮೃಗಗಳ ಮೃಗವೆಂದು ಕರೆಯಬಾರದೆ ? ಈರೀತಿಯಾಗಿ ಮೇಲೆ ಐದು ಪದ್ಯ ಭಾಗಗಳಲ್ಲಿ ಜಗನ್ಮೋಹಿಸಿಯು ತನ್ನ ಗಂಡನ ನಿರ್ಲಕ್ಷ್ಯತನವನ್ನು ವರ್ಣಿಸುತ್ತಾಳೆ. ಕೃಷ್ಣದೇವರಾಯನ ಕಾಲದಲ್ಲಿದ್ದ ಏಕ ಮಾತ್ರ ಪ್ರಸಿದ್ಧ ಕವಿಯತ್ರಿ ಇವಳಾಗಿದ್ದಾಳೆ.

ಜಗನ್ಮೋಹಿನಿಯನ್ನು ಹೊರತುಪಡಿಸಿ ಇವನ ರಾಣಿಯರಾದ ಚಿನ್ನಾದೇವಿ ಹಾಗೂ ತಿರುಮಲದೇವಿಯರೂ ಕೂಡ ಕಾವ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದರು. ತಿಮ್ಮಯ್ಯನು ತನ್ನ **ಪಾರಿಜಾತಾಪಹರಣಂ**ದಲ್ಲಿ ರಾಜನು ತನ್ನ ರಾಣಿಯರಾದ ಚಿನ್ನಾದೇವಿ ಹಾಗೂ ತಿರುಮಲಾದೇವಿಯರೊಂದಿಗೆ ವಸಂತೋತ್ಸವದಲ್ಲಿ ತನ್ನ ಆಸ್ಥಾನ ಕವಿಗಳು ರಚಿಸಿದ ಕೃತಿಗಳನ್ನು ಕೇಳುತ್ತಿರುವ ವರ್ಣನೆಯನ್ನು ನೀಡುತ್ತಾನೆ. ಈ ಉಲ್ಲೇಖದಿಂದ ಕೃಷ್ಣದೇವರಾಯನ ರಾಣಿಯರು ಕಾವ್ಯ ಹಾಗೂ ಸಾಹಿತ್ಯದಲ್ಲಿ ಆಸಕ್ತರಾಗಿದ್ದರೆಂಬುದು ತಿಳಿದುಬರುತ್ತದೆ.

ಡಿ. ಅಭಿರಾಮ ಕಾಮಾಕ್ಷಿ ಅಥವಾ ಅತುಕುರಿಮೊಲ್ಲ:

ಆ ಕಾಲದ ಪ್ರಸಿದ್ಧ ಕವಿಯತ್ರಿಯರಲ್ಲಿ ಇವಳೂ ಒಬ್ಬಳು. ಅಭಿರಾಮ ಕಾಮಾಕ್ಷಿಯ ಸಹೋದರನಾದ ಸ್ವಯಂಭುವು ಒಂದನೇ ಅರುಣಗಿರಿನಾಥನ ಅಳಿಯನಾಗಿದ್ದನು. ಇವನು **ಅಭಿನವ ರಾಮಾಭ್ಯುದಯವನ್ನು** ಮೋಹಕವಾದ ಕವಿತೆಗಳಲ್ಲಿ ರಚಿಸಿದನು. ಇದರಲ್ಲಿ ಇಪ್ಪತ್ನಾಲ್ಕು ಕಾವ್ಯದ ಅಧ್ಯಾಯಗಳಿವೆ. ಹಾಗೂ ಇದು ರಾಮಾಯಣದ ಕಥೆಯನ್ನು ನಿರೂಪಿಸುತ್ತದೆ. ಇದೇ ಕಾಲದಲ್ಲಿ ಬರೆದ ಇನ್ನೊಂದು ಕೃತಿಯಾದ ರಾಮಾಭ್ಯುದಯದಿಂದ ಪ್ರತ್ಯೇಕಿಸಲು ಇದನ್ನು **ಅಭಿನವ ರಾಮಾಭ್ಯುದಯ ಮೊಲ್ಲ** ಎಂದು ಕರೆಯಲಾಗಿದೆ. ಇವಳು ಉತ್ತಮ ಕುಲೀನ ಕವಿಯತ್ರಿಯೇನಲ್ಲ. ಇವಳು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದವಳು. ಪೆನ್ನಾರ್ ನದಿಯ ಎಡದಂಡೆಯ ಮೇಲಿನ ನೆಲ್ಲೂರಿನ ಉತ್ತರಕ್ಕೆ ಐದು ಮೈಲು ದೂರದಲ್ಲಿರುವ ಗೋಪವರಂ (ಈಗಿನ ಪಡುಗುಪಾಡು) ನಲ್ಲಿದ್ದ ಒಬ್ಬ ಕುಂಬಾರ ಕೇಶವ ಶೆಟ್ಟಿಯ ಮಗಳಾಗಿದ್ದಳು. ಇವಳು ಬದುಕಿದ ಕಾಲವು ನಿರ್ದಿಷ್ಟವಾಗಿ ತಿಳಿಯದೆ ಇದ್ದರೂ ಇವಳು ಕೃಷ್ಣದೇವರಾಯ ಅಥವಾ ಅದಕ್ಕೂ ಮುನ್ನ ಪ್ರವರ್ಧಮಾನಕ್ಕೆ ಬಂದಿದ್ದಳು ಎಂಬುದರಲ್ಲಿ ಯಾವುದೇಅನಿಶ್ಚಿತತೆಯಿಲ್ಲ. ಇವಳ ರಾಮಾಯಣಂ ಮೇಲಿನ ಕವಿಗಳ ಮೇಲಿನ ಶ್ಲಾಘನೆಯಲ್ಲಿ ಹದಿನಾಲ್ಕನೆಯ ಶತಮಾನದ ಅಂತ್ಯಭಾಗಕ್ಕೆ ಹಾಗೂ ಹದಿನೈದನೆಯ ಶತಮಾನದ ಆದಿ ಭಾಗದ ವರ್ಷಗಳಲ್ಲಿ ಜೀವಿಸಿದ್ದ ಶ್ರೇಷ್ಠ ಕವಿಯಾದ ಶ್ರೀನಾಥನನ್ನು ಉಲ್ಲೇಖಿಸುತ್ತಾಳೆ. ರಾಮಾಯಣಂ ಅನ್ನು ಬರೆದುದನ್ನೊಂದು ಬಿಟ್ಟರೆ ಮೊಲ್ಲಳ ವೈಯಕ್ತಿಕ ಚರಿತ್ರೆಯ ಬಗ್ಗೆ ನಮಗೆ ಹೆಚ್ಚಿನದೇನು ತಿಳಿಯದು. ಮೊಲ್ಲಳ ರಾಮಾಯಣಂ ಗಾತ್ರದಲ್ಲಿ ಬಹಳ ಚಿಕ್ಕದಾದರೂ ಇದೊಂದು ಉತ್ತಮ ಸಾಹಿತ್ಯಿಕ ಗುಣಗಳನ್ನು ಮೈಗೂಡಿಸಿಕೊಂಡಿರುವ ಶ್ರೇಷ್ಠ ಕೃತಿ. ಮೊಲ್ಲಳು ಬಹಳ ಸತ್ವವುಳ್ಳ ಬರಹಗಾರಳು. ಮೊಲ್ಲಳ ರಾಮಾಯಣವು ಒಂದು ಗೌರವದ ಸ್ಥಾನವನ್ನು ಯೋಗ್ಯವಾಗಿ ಹೊಂದಿದೆ.[18]

ಇ. ಮೋಹನಾಂಗಿ:

ಇವಳು ಕೃಷ್ಣದೇವರಾಯನ ಮಗಳಾಗಿದ್ದಳು. ಇವಳ ಉಪ ಹೆಸರು ತಿರುಮಲಾಂಬ ಆಗಿತ್ತು. ಹಾಗೂ ಇವಳು ರಾಮರಾಯನ ಪತ್ನಿಯಾಗಿದ್ದಳು. ಆ ಕಾಲದ ಅತ್ಯಂತ ಖ್ಯಾತಿವೆತ್ತ ಕವಿಯತ್ರಿಯಾಗಿದ್ದಳು. ಮಾರೀಚಿ ಪರಿಣಯಂ ಎಂಬ ಕವಿತೆಯನ್ನು ಇವಳು ಬರೆದಿದ್ದಾಳೆ. ಇದೊಂದು ಪ್ರೇಮ ಕವನವಾಗಿದ್ದು ಆ ಕಾಲದ ಪ್ರಸಿದ್ಧ ಕವಿತೆಗಳಲ್ಲಿ ಒಂದಾಗಿದೆ.[19]

ಎಫ್. ತಿರುಮಲಾಂಬ: (ಕ್ರಿ.ಶ. 1530)

ತಿರುಮಲಾಂಬಳು ಸಂಸ್ಕೃತದಲ್ಲಿ ಬರೆದ ವರದಾಂಬಿಕ ಪರಿಣಯಂ ಅನ್ನು ವರದಾಂಬಿಕೆ ರಾಜಕುಮಾರಿಯ ಮದುವೆಯು ಅಚ್ಯುತನೊಂದಿಗೆ ನಡೆಯುವ ವಿವಾಹಕ್ಕೆ ಅರ್ಪಿಸಲಾಗಿದೆ. ತಿರುಮಲಾಂಬಳು ಒಳ್ಳೆಯ ಪ್ರತಿಭಾವಂತ ಕವಿಯತ್ರಿಯಾಗಿದ್ದಳು. ಇದೊಂದು ಪ್ರಮುಖವಾದ ಗ್ರಂಥವಾಗಿದೆ. ಯಾಕೆಂದರೆ ಇದೊಂದು ಸಾಮಾಜಿಕ ಹಾಗೂ ರಾಜಕೀಯ

ತತ್ವಗಳ ಮೂಲವಾಗಿ ಮೌಲ್ಯ ಗ್ರಂಥವಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಇವಳೇ ಕಣ್ಣಾರೆ ಕಂಡ ಘಟನೆಗಳನ್ನು ಈ ಗ್ರಂಥದಲ್ಲಿ ಲೇಖಕಿಯು ನಿರೂಪಿಸುತ್ತಾಳೆ.

ಕೆಲವು ಪಂಡಿತರು ಈ ಕಾವ್ಯವು ಕೃಷ್ಣದೇವರಾಯನ ಆಳ್ವಿಕೆಯಲ್ಲಿ ರಚಿಸಲಾಯಿತೆಂದು ಅಭಿಪ್ರಾಯಪಡುತ್ತಾರೆ. ಇದರ ಜೊತೆಗೆ ಅಚ್ಯುತರಾಯನಿಗೆ ಮಗನ ಜನನ, ವೆಂಕಟಾದ್ರಿಯೆಂಬ ಹೆಸರಿನ ಇವನು ತನ್ನ ತಂದೆಯ ಸಿಂಹಾಸನಾರೋಹಣದೊಂದಿಗೆ ಯುವರಾಜನಾಗಿ ನೇಮಕವಾಗುವುದೆಲ್ಲವೂ ಈ ಕವಿಯತ್ರಿಯ ನಂತರದ ಸೇರ್ಪಡೆ ಎಂದು ನುಡಿದಿದ್ದಾರೆ.[20] ಆದರೆಕಾವ್ಯದ ವಿಷಯದ ಸಂಬಂಧವಾಗಿ ಈ ಮಾತುಗಳು ವಿಚಿತ್ರವಾಗಿ ಕಂಡುಬರುತ್ತವೆ. ಏಕೆಂದರೆ ಯಾವುದೇ ಕವಿಯು ತನ್ನ ಕವಿತೆಗಳನ್ನು ಅಪೂರ್ಣಗೊಳಿಸಿಬಿಡುವುದಿಲ್ಲ. ಅವನು ಕೆಲವು ಘಟನೆಗಳಿಗೋಸ್ಕರ ಕಾಯ್ದು ಆ ನಂತರ ಮುಂದಿನ ವಿವರಣೆಯನ್ನು ಆ ಕಾವ್ಯದಲ್ಲಿ ನೀಡುತ್ತಾನೆ. ಇದರ ಜೊತೆಗೆ ಕ್ರಿ.ಶ. 1529ರಲ್ಲಿ ಕೃಷ್ಣದೇವರಾಯನು ತೀರಿಕೊಂಡ ಮೇಲೆ ಅಚ್ಯುತರಾಯನ ಕಿರೀಟಧಾರಣೆಯ ಜೊತೆಯಲ್ಲಿಯೇ ವೆಂಕಟಾದ್ರಿಯು ಯುವರಾಜನಾಗಿ ನೇಮಕವಾಗುವುದರೊಂದಿಗೆ ಈ ಕಾವ್ಯವು ಕೊನೆಗೊಳ್ಳುವುದು. ಈ ಕಾವ್ಯವನ್ನು ಹೆಚ್ಚು ಪಾಲು ಅಚ್ಯುತರಾಯನ ಕಿರೀಟಧಾರಣೆಯ ನಂತರ ರಚಿಸಿರಬೇಕು.[21]

ಇದೊಂದು ಅತ್ಯುತ್ತಮ ಕಲ್ಪನಾತೀತ ಕಾವ್ಯವಾಗಿದ್ದು, ಸರಳ ಹಾಗೂ ಪರಿಶುದ್ಧವಾದ ಶೈಲಿಯಲ್ಲಿ ಬರೆಯಲಾಗಿದೆ. ಲೇಖಕಿಯು ಸಾಹಿತ್ಯಿಕ ರಸಗಳನ್ನು ಹೊಂದಿದ ಶ್ರೇಷ್ಠ ಮಹಿಳೆಯಾಗಿದ್ದಳು. ಇವಳನ್ನು ಕ್ರಿ.ಶ. 1533ರಲ್ಲಿ ಅಚ್ಯುತರಾಯನು ಸ್ವರ್ಣಮೇರು ದಾನವನ್ನು ಕೊಟ್ಟ ಸ್ಮರಣಾರ್ಥವಾಗಿ ಹಂಪೆಯ ವಿಠ್ಠಲ ದೇವಾಲಯದಲ್ಲಿ ಸಂಸ್ಕೃತ ಕಾವ್ಯದಲ್ಲಿ ಒಂದು ಶಾಸನವನ್ನು ಬರೆದಿರುವಳೆಂದು ಹೇಳಲಾಗಿರುವ ಓದುವ ತಿರುಮಲಾಂಬಳೊಂದಿಗೆ ಗುರುತಿಸಲಾಗಿದೆ. ಇದರ ನಕಲನ್ನು ಈ ದೇವಸ್ಥಾನದ ಇನ್ನೊಂದು ಭಾಗದಲ್ಲಿ ಪತ್ತೆ ಹಚ್ಚಲಾಗಿದೆ.[22]

ಎ.ಎನ್. ಕೃಷ್ಣ ಅಯ್ಯಂಗಾರ್‌ರವರು ತಮ್ಮ ಅಚ್ಯುತರಾಯಾಭ್ಯುದಯಂನ ಪೀಠಿಕೆಯಲ್ಲಿ ವರದಾಂಬಿಕಾ ಪರಿಣಯಂ ತಿರುಮಲಾಂಬಳನ್ನು ಅಚ್ಯುತರಾಯನ ರಾಣಿ ಎಂದು ಉಲ್ಲೇಖಿಸುತ್ತಾರೆ.[23] ಸಂಸ್ಕೃತ ಚಂಪೂಕಾವ್ಯವಾದ ವರದಾಂಬಿಕ ಪರಿಣಯಂ ಅನ್ನು ಓದುವ ತಿರುಮಲಾಂಬಳು ರಚಿಸಿದ್ದ, ಈ ಗ್ರಂಥದ ಕೊನೆಯಲ್ಲಿ ಅದರ ಉದ್ದವಾದ ಮುದ್ರಾಂಕಿತದಲ್ಲಿ ಇವಳ ಎಲ್ಲಾ ಸಾಧನೆಗಳು ಹಾಗೂ ಪ್ರತಿಭೆಯನ್ನು ಸ್ಮರಿಸುತ್ತದೆ. ಇದರಲ್ಲಿ ಇವಳು ಅಚ್ಯುತರಾಯನ ಪ್ರೀತಿಯ ರಾಣಿಯೆಂದೂ ಹಾಗೂ ಪುರಾಣ, ಇತಿಹಾಸ ಮತ್ತು ಆಗಮಗಳ ಸತ್ಯವನ್ನು ಕಲಿತಳೆಂದೂ ಹಾಗೂ ಕೇವಲ ಒಂದು ಬಾರಿ ಹೊಸ ಕಾವ್ಯ ಹಾಗೂ ನಾಟಕಗಳ ವಿವರಣೆಗಳನ್ನು ಅವುಗಳ ಪ್ರತಿಪಾದನೆಯನ್ನು ಆಲಿಸುವುದರ ಮುಖಾಂತರ ಕಲಿತುದುದಾಗಿಯೂ ಮತ್ತು ಅವಳು ಅನೇಕ ಭಾಷೆಗಳಲ್ಲಿ ಪ್ರಭುತ್ವವನ್ನು ಹೊಂದಿದ್ದಳೆಂದೂ ಹೇಳಲಾಗಿದೆ.[24]

ಶ್ರೀರಂಗಂ ಶಾಸನದಲ್ಲಿ ಉಲ್ಲೇಖಿಸಲಾಗಿರುವ ಎರಡೂ ಪದ್ಯ ಭಾಗಗಳ ಸಂಬಂಧವಾಗಿ ಇವುಗಳನ್ನು ಸಾರ್ದುಲಾ ವಿಕ್ರಿಢಿತ ಛಂದಸ್ಸಿನಲ್ಲಿ ಸಮಾಪ್ತಿಗೊಳಿಸಲಾಗಿದೆ. ಒಂದು ಡಜನ್‌ಗೂ (12) ಹೆಚ್ಚು ಪ್ರತಿಗಳಲ್ಲಿ, ಅವುಗಳೆಂದರ: ತಮಿಳು,

ತೆಲುಗು, ಕನ್ನಡ, ಗ್ರಂಥ ಮತ್ತು ನಾಗರಗಳಲ್ಲಿ ಹಾಗೂ ಅಣ್ಣಿಗೆರೆ ಮತ್ತು ಶ್ರೀರಂಗಂನಂತಹ ಸ್ಥಳಗಳಲ್ಲೂ ಇವುಗಳು ಹಲವಾರು ಲಿಪಿಗಳಲ್ಲಿ ಲಭ್ಯವಾಗಿವೆ. ಆದರೆ ತಿರುಮಲಾಂಬ ಮತ್ತು ಅಚ್ಯುತರಾಯನ ಸಂಬಂಧವಾಗಿ ಶ್ರೀರಂಗಂ ಶಾಸನವೊಂದನ್ನು ಬಿಟ್ಟರೆ ಇನ್ನಾವುದೇ ಶಾಸನದಲ್ಲೂ ಮಾಹಿತಿಯನ್ನು ನೀಡಲಾಗಿಲ್ಲ.

ಸಂಸ್ಕೃತ ಪದ್ಯ ಭಾಗಗಳು ಕ್ರಿ.ಶ. 1539ರಲ್ಲಿ ರಾಜನು ಆನಂದನಿಧಿ ಕೊಡುಗೆಯನ್ನು ಕೊಟ್ಟ ಬಗ್ಗೆ ವೈಭವಯುತವಾಗಿ ಪ್ರಶಂಸಿಸಿದರೆ ತಮಿಳು ಭಾಗವು ಅದೇ ದಿವಸದಂದು ತುಲಾಭಾರ ಮಾಡಿದ ಬಗ್ಗೆ ಉಲ್ಲೇಖವನ್ನು ಮಾಡುತ್ತದೆ. ಬಹುಶಃ ಇದನ್ನು ಭಾಸ್ಕರ ಕ್ಷೇತ್ರದ ತುಂಗಭದ್ರ ನದಿಯ ದಂಡೆಯ ಮೇಲಿನ ವಿಠ್ಠಲೇಶ್ವರ ದೇವಾಲಯದಲ್ಲಿ ಆಚರಿಸಲಾಯಿತು. ಆನಂದನಿಧಿನದ ಸ್ಥಳದ ಬಗ್ಗೆ ಗದಗ ಆವೃತ್ತಿಯ ಕನ್ನಡ ಪಾರಿಚಯಿಕ ಭಾಗದಲ್ಲಿ ಉಲ್ಲೇಖವನ್ನು ಮಾಡಲಾಗಿದೆ. ಇದರಿಂದ ಆನಂದನಿಧಿ ಎಂಬುದು ಒಂದು ವಿಧವಾದ ದಾನವಾಗಿದ್ದು ಮಾಧವ ದೇವರನ್ನು ಆರಾಧಿಸಲು ಆಚರಿಸಲಾಗುತ್ತಿತ್ತು, ಹಾಗೂ ಈ ಪ್ರಶಂಸನೀಯ ಕಾವ್ಯ ಭಾಗಗಳನ್ನು ಗದಗಿನ ತ್ರಿಯಾಂಬಾಕದೇವಿ ದೇವಾಲಯದಲ್ಲಿ ಕೆತ್ತಲಾಗಿತ್ತು. ಆನಂದನಿಧಿ ದಾನವು ವಿದ್ಯಾವಂತ ಪಂಡಿತ ಬ್ರಾಹ್ಮಣರಿಗೆ ಉದಂಬರ ಮರದಿಂದ ಮಾಡಲಾದ ಕುಡಿಕೆಗಳಲ್ಲಿ ಬೆಲೆಬಾಳುವ ಹರಳುಗಳು ಚಿನ್ನದ ನಾಣ್ಯಗಳು, ಬೆಳ್ಳಿ ಅಥವಾ ತಾಮ್ರಗಳಿಂದ ತುಂಬಿ ಕೆಲವು ಆಚರಣೆಗಳನ್ನು ಮುಗಿಸಿದ ನಂತರ ಕೊಡಲ್ಪಡುತ್ತಿತ್ತು. ಹಾಗೂ ಈ ಆಚರಣೆಯಿಂದ ಶ್ರೇಯಸ್ಸುಂಟಾಗುತ್ತದೆಂದು ತಿಳಿಯಲಾಗಿತ್ತು. ಇದು ಆಯುರಾರೋಗ್ಯವನ್ನು ಐಶ್ವರ್ಯಾದಿಗಳನ್ನು ಪಡೆಯಲು ಹಾಗೂ ರಾಜಕೀಯ ಸಾರ್ವಭೌಮತ್ವವನ್ನು ಪಡೆಯಲು ಮಾಡಿದ ಆಚರಣೆಯಾಗಿತ್ತು. ಆದುದರಿಂದಲೇ ಅಚ್ಯುತರಾಯನು ತನ್ನ ಸ್ಥಾನವನ್ನು ಮುಂದೆ ತುಂಬುತ್ತಿದ್ದ ವೆಂಕಟಾದ್ರಿಯ ಉತ್ತರಾಧಿಕಾರತ್ವವನ್ನು ಖಾತ್ರಿಪಡಿಸಲು ಈ ಆನಂದನಿಧಿದಾನವನ್ನು ಮಾಡಿದನು. ಆದರೆ ಅವನ ದೊಡ್ಡ ಆಶೋತ್ತರಗಳೆಲ್ಲವೂ ಬುಡಮೇಲಾದವು.

ಕ್ರಿ.ಶ. 1533ರ ಅಚ್ಯುತರಾಯನ ಕಾಲದ ಒಂದು ಶಾಸನವು ದಾಖಲಿಸುವಂತೆ ಓದುವ ತಿರುಮಲಾಂಬೆಯು ರಾಜನು ವಿಠ್ಠಲೇಶ್ವರನ ಸಮ್ಮುಖದಲ್ಲಿ ಸುವರ್ಣ ಮೇರುವನ್ನು ದಾನ ಮಾಡಿದುದರ ಬಗ್ಗೆ ಸಂಸ್ಕೃತದ ಶ್ಲೋಕವೊಂದನ್ನು ಹಾಕಿದಳು.

ಬಾಣ-ಪ್ರಾಣ-ಪಯೋಧಿ-ಸಿತಾಕರ, ಸಂಖ್ಯಾತ-ಸಕ-ವತ್ಸರೆ.

ವಿಖ್ಯಾತೆ -ವಿಜಯೆಚ ಮಸಿ ಶಶಿ-ಸ್ವಚ್ಛೆ

ಚ ಪಕ್ಷೇ ಗುರೂ;

ವರೆ -ವಿಷ್ಣು-ದಿನೇ ಶುಭ ಪರಿಸರ ಶ್ರೀ

ವಿಠ್ಠಲಾಧಿಸುತ

ಧೀರ ಕಾಮೇಹಮೋರು - ದನಂ -ಅಕರೋದ್

- ವಿರೋಚ್ಯುತ ಕ್ಷಮಾಪತಿ.[26]

ಆದುದರಿಂದ ಇದುವರೆಗೂ ತಿರುಮಲಾಂಬಳ ಅನಿಶ್ಚಿತ ಪರಿಚಯವು ಈಗ ಶ್ರೀರಂಗಂ ದಾಖಲೆಯಿಂದ ನಿಸ್ಸಂಶಯವಾಗಿ ತಿಳಿದುಬಂದಿದೆ. ಎರಡನೇ ಕಂಪಣನ ಹೆಂಡತಿಯಾದ ಗಂಗಾದೇವಿಯನ್ನು ಹೊರತುಪಡಿಸಿ ಇವಳು ವಿಜಯನಗರ ಕಾಲದ ಪ್ರತಿಭಾವಂತ ಕವಿಯತ್ರಿಯರಲ್ಲಿ ಎರಡನೆಯವಳಾಗಿದ್ದಾಳೆ.

ರಾಣಿತಿರುಮಲಾಂಬಳ ಒಂದು ಶಾಸನವು ದಾಖಲೆಯನ್ನು ನೀಡಿರುವಂತೆ ತನ್ನ ಸ್ವಸಾಮರ್ಥ್ಯದಿಂದ ದಾನ ಮಾಡಿದಳೆಂದು ಹೇಳುವ ಹೇಳಿಕೆಯನ್ನು ಅವಳ ಸ್ವಸಾಮರ್ಥ್ಯದಿಂದ ನೀಡಿದಳು ಎಂದು ನಿರ್ದಿಷ್ಟವಾಗಿ ಹೇಳಲಾಗದು. ಆದರೂ ಅವಳೊಬ್ಬ ಶ್ರೇಷ್ಠಭಕ್ತಳಾಗಿ ಕಾಣಿಸಿಕೊಂಡಿದ್ದಾಳೆ.

ಅಚ್ಯುತರಾಯನ ಕಾಲದ ಶ್ರೀರಂಗಂ ಬಳಿಯ ರಂಗನಾಥಸ್ವಾಮಿ ದೇವಸ್ಥಾನದ 1454ನೇ ಶಕನಂದನ (ಕಣ್ಣಿ) ಸಾನ್ 13 ಗುರುವಾರ ಸದ್ಯೆಯಾಮ್‌ನ ಒಂದು ಶಾಸನವು (ಕ್ರಿ.ಶ. 1532 ಸೆಪ್ಟೆಂಬರ್ 12ಕ್ಕೆ ಹೊಂದಾಣಿಕೆಯಾಗುತ್ತದೆ) ತಿರುಮಲೈಯಮ್ಮಳು ಅವಳೇ ಸ್ವತಃ ರಚಿಸಿದ ಭಕ್ತ ಸಂಜೀವಿ (ಭಕ್ತ ಸಂಜೀವಿ ಸೊನ್ನ ತಿರುಮಲೈ ಅಮ್ಮನ್ ಉಭೈಯಮಾಗ)ಯನ್ನು ದೇವರ ಮುಂದೆ ಪಠಿಸುವ ಶ್ರೀ ವೈಷ್ಣವರನ್ನು ಇಟ್ಟುಕೊಳ್ಳಲು ಅವಿಲೈ ಗ್ರಾಮದಲ್ಲಿನ ಭೂಮಿಯನ್ನು ದಾನ ಮಾಡಿದುದರ ಬಗ್ಗೆ ದಾಖಲೆಯನ್ನು ನೀಡುತ್ತದೆ.

ತಿರುಮಲಾಂಬಳು ತನ್ನ ಆಶ್ರಯದಾತನಾದ ಅಚ್ಯುತರಾಯನಿಗೆ ಬಹಳ ನಿಷ್ಠಾವಂತಳೂ ಹಾಗೂ ತನ್ನನ್ನು ಅರ್ಪಿಸಿಕೊಂಡಿದ್ದಳು. ಅವನು ಅವಳನ್ನು ಕೇವಲ ಸಾಮಾನ್ಯ ಆಸ್ಥಾನ ಕವಿಯತ್ರಿಯ ಹಂತದಿಂದ ಬಹಳ ಉನ್ನತವಾದ ಸ್ಥಾನವಾದ ರಾಜಮಹಿಷಿಯ ಸ್ಥಾನಕ್ಕೇರಿಸಿದನು. ಹಿಂದಿನ ಕಾಲದಲ್ಲಿಪವಿತ್ರ ಗ್ರಂಥಗಳನ್ನು ಓದುತ್ತಿದ್ದ ಕೆಲವು ಸ್ತ್ರೀಯರ ಜೊತೆಗೆ ಆಸ್ಥಾನದಲ್ಲಿ ಲೆಕ್ಕಪತ್ರವನ್ನು ಹಾಗೂ ಘಟನೆಗಳ ಬಗ್ಗೆ ದಾಖಲೆಯನ್ನೂ ಸ್ತ್ರೀಯರು ನೋಡಿಕೊಳ್ಳುತ್ತಿದ್ದರು. ಓದುವ ತಿರುಮಲಾಂಬ ಎಂದು ಕರೆಯಲ್ಪಡುತ್ತಿದ್ದ ತಿರುಮಲಾಂಬಳೂ ಈ ರೀತಿಯಾದ ಒಬ್ಬಳು ಸ್ತ್ರೀಯಾಗಿದ್ದು ತನ್ನ ಅಸಾಧಾರಣ ಸಾಹಿತ್ಯಿಕ ಸಾಮರ್ಥ್ಯದಿಂದ ಅಚ್ಯುತರಾಯನ ಹೃದಯವನ್ನು ಸೆರೆಹಿಡಿದು ಅಂತಿಮವಾಗಿ ಅವನನ್ನು ವಿವಾಹವಾದಳು ಪಟ್ಟಮಹಿಷಿಯಾದ ವರದಾಂಬಿಕೆಗೆ ರಾಣಿಯ ಪ್ರತಿನಿಧಿ ಹಾಗೂ ಅವಳ ಯುವರಾಜ ವೆಂಕಟಾದ್ರಿಯ ಪೋಷಣೆಗಾಗಿ ಅವಳು ಮಾಡಿದ ಪ್ರಾಮಾಣಿಕ ಪ್ರಾರ್ಥನೆಯನ್ನು ದಾಖಲಿಸುವುದರ ಮೂಲಕ ತಿರುಮಲಾಂಬಳು ತನ್ನ ಅಪಾರ ಗೌರವವನ್ನು ತೋರಿಸುತ್ತಾಳೆ.[28]

ಈ ರೀತಿಯಾಗಿ ತಿರುಮಲಾಂಬಳು ತನ್ನ ಸಾಹಿತ್ಯ ಪ್ರತಿಭೆಯ ಮೂಲಕ ಸಾಹಿತ್ಯ ಸಾಧನೆಯ ಮೂಲಕ ಹಾಗೂ ಪೂಜ್ಯ ಭಾವನೆಯಿಂದ ನೋಡುತ್ತಿದ್ದ ರಾಜದಂಪತಿಗಳ ಮೇಲಿನ ಪ್ರೀತಿಯ ಮೂಲಕ ರಾಜನಿಂದ ರಾಜಮಹಿಷಿ ಎಂದು ಹೊಗಳಿಸಿಕೊಂಡಳು. ಇದು ವಿಜಯನಗರದ ರಾಜಸ್ಥಾನದಲ್ಲಿ ಇವಳಿಗೊಂದು ಅರ್ಹಸ್ಥಾನವನ್ನು ಕಲ್ಪಿಸಿಕೊಡುವಲ್ಲಿ ಯಶಸ್ವಿಯಾಯಿತು. ತಿರುಮಲಾಂಬಳು ರಾಜಮನೆತನದ ಕುಟುಂಬದ ಸ್ತ್ರೀಯರಿಗೆ ಕವಿತೆಯನ್ನು ವಾಚಿಸುತ್ತಿದ್ದಳು. ಇವಳು ಒಬ್ಬ ಉತ್ತಮ ಸಂಗೀತಗಾರಳೂ, ವ್ಯಾಕರಣ ತಜ್ಞೆಯೂ ಹಾಗೂ ಆಲಂಕಾರಿಕ ತಜ್ಞೆಯೂ ಆಗಿದ್ದಳು.

ಈ ರೀತಿಯಾಗಿ ವಿಜಯನಗರ ಕಾಲವು ಶ್ರೇಷ್ಠ ಕಾಣಿಕೆಯನ್ನು ನೀಡಿದ ಪ್ರಖ್ಯಾತ ಸ್ತ್ರೀಪಂಡಿತೆಯರಾದ ಗಂಗಾದೇವಿ, ತಿರುಮಲಾಂಬ, ಜಗನ್ಮೋಹಿನಿ ಅಥವಾ ತುಕ್ಕ, ಮೋಹನಾಂಗಿ ಮತ್ತು ಹೊನ್ನಾಯಿಯಂತಹ ಸಾಹಿತ್ಯ ರತ್ನಗಳನ್ನು ಕಂಡಿತು. ಈ ರೀತಿಯಾಗಿ ವಿಜಯನಗರ ಕಾಲದಲ್ಲಿ ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ಮಹೋನ್ನತವಾದ ಸ್ಥಾನವನ್ನು ಆಕ್ರಮಿಸಿಕೊಂಡಿದ್ದರು.

3. ದೇವಾಲಯ ಹಾಗೂ ಮಹಿಳೆಯರು:

ಶಾಸನಗಳು ಹಾಗೂ ಸ್ಮಾರಕಗಳಿಂದ ಹೊರತಾಗಿ ಆಧಾರಗಳಿಗೆ ಬಂದರೆ ನಮಗೆ ಬಾರ್ಬೋಸಾ ಪಯಸ್, ಅಬ್ದುಲ್‌ರಜಾಕ್, ನ್ಯೂನಿಜ್, ನಿಕೊಲೊಕೊಂಟಿ ಇತ್ಯಾದಿ, ಮೊದಲಾದಂತವರ ವಿದೇಶೀ ಪ್ರವಾಸಿಗರ ಬರಹಗಳು ದೊರೆಯುತ್ತವೆ. ಭಾರತದಂತೆ ಯಾವುದೇ ದೇಶದಲ್ಲೂ ಧರ್ಮವು ಜನರ ಜೀವನದೊಂದಿಗೆ ಹಾಸು ಹೊಕ್ಕಾಗಿಲ್ಲ. ಅವರ ಎಲ್ಲಾ ಹವ್ಯಾಸಗಳೂ ದಿನನಿತ್ಯದ ಜೀವನದೊಂದಿಗೆ ಬೆರೆತ ನಿಯಮಗಳು, ಅವರ ಆಹಾರ, ಉಡುಗೆ ತೊಡುಗೆ, ಮನೆಗಳು, ಸಾಮಾಜಿಕ ಅಥವಾರಾಜಕೀಯ ಜೀವನವು ಧರ್ಮದಿಂದ ಹೆಚ್ಚು ಪ್ರಭಾವಕ್ಕೊಳಪಡುತ್ತಿದ್ದವು. ಹದಿಮೂರನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರವರ್ಧಮಾನಕ್ಕೆ ಬರಲು ಮುಖ್ಯ ಕಾರಣ 'ಧರ್ಮವು ಶತ್ರುಗಳಿಂದ ದುರಾಕ್ರಮಣಗೊಳ್ಳುತ್ತಿದ್ದರ ವಿರುದ್ಧವಾಗಿ ದಕ್ಷಿಣ ಭಾರತದಲ್ಲಿದ್ದ ಎಲ್ಲರೂ ಒಗ್ಗೂಡಿದರ ಫಲವಾಗಿ' ಎಂದು ಹೇಳಬಹುದು. ವಿಜಯನಗರವು ಹಿಂದೂ ಧರ್ಮ ಹಾಗೂ ತತ್ವಶಾಸ್ತ್ರದ ಸಂಪ್ರದಾಯ ಮತ್ತು ಆಚರಣೆಗಳು ಹಾಗೂ ಶ್ರೇಷ್ಠ ಆಲೋಚನೆಗಳನ್ನು ಪೋಷಿಸಿತು ಹಾಗೂ ಬೆಳೆಸಿತು. ವಿಜಯನಗರದ ಪ್ರೋತ್ಸಾಹವಿಲ್ಲದೆ ಹಿಂದೂ ಧರ್ಮವು ಕೇವಲ ನರಳು ಮಾತ್ರವಾಗುತ್ತಿತ್ತು ಹಾಗೂ ಅಪಹಾಸ್ಯಕ್ಕೆ ಗುರಿಯಾಗುತ್ತಿತ್ತು.

ದೇವಸ್ಥಾನವು ಧರ್ಮ ಅಥವಾ ಸದ್ಗುಣದ ಸಂಕೇತ. ಈ ಕಾಲದಲ್ಲಿ ದೇವಾಲಯ ಹಾಗೂ ಸ್ತ್ರೀಯರ ನಡುವೆ ಬಹಳ ನಿಕಟವಾದ ಸಂಬಂಧವು ಇದ್ದಿತು. ದೇವಾಲಯವು ಹೆಚ್ಚು ಸಂಖ್ಯೆಯ ಸ್ತ್ರೀಯರನ್ನು ನರ್ತಕಿಯರನ್ನಾಗಿ, ಹಾಡುಗಾರರನ್ನಾಗಿ, ಸಂಗೀತಗಾರರನ್ನಾಗಿ ಹಾಗೂ ಕೆಳವರ್ಗದ ಸೇವಕಿಯರಾಗಿ ಹಲವಾರು ಸಾಮರ್ಥ್ಯಗಳಡಿ ನೇಮಕ ಮಾಡಿಕೊಂಡಿತ್ತು. ರಂಗಭೋಗಮ್ಮರು, ಬೋಗಮ್ಮರು, ದೇವದಾಸಿ, ಪತ್ರಿ ಹಾಗೂ ಸವಿ ಇವರೆಲ್ಲರೂ ದೇವರ ಸೇವೆಯಲ್ಲಿ ನಿರತರಾದ ನೇಮಕವಾಗಲ್ಪಟ್ಟ ಮಹಿಳೆಯು ಶೈವ ದೇವಾಲಯಗಳಲ್ಲಿ ನೇಮಕವಾದ ಸ್ತ್ರೀಯರು ದೇವರ ಬಸವಿಯರು ಅಥವಾ ಬಸವುಲು ಎಂದು ಹೆಸರಾಗಿದ್ದಾರೆ. ಕ್ರಿ.ಶ. 1518ರ ಒಂದು ಶಾಸನದಲ್ಲಿ ಇವರ ಬಗ್ಗೆ ಉಲ್ಲೇಖವಿದೆ.

ಮೂಲ ಸೇವೆಗಳಿಗಾಗಿ ನೇಮಕವಾದ ಸ್ತ್ರೀಯರು ನರ್ತಿಸುವುದು, ಹಾಡುವುದು ಹಾಗೂ ಸಂಗೀತದ ಮೂಲಕ ದೇವಾಲಯದ ಅತ್ಯಂತ ಅವಶ್ಯಕ ಭಾಗವಾಗಿದ್ದರು. ಈ ಉದ್ದೇಶಗಳಿಗಾಗಿ ಮಹಿಳೆಯರನ್ನು ನೇಮಿಸುತ್ತಿದ್ದುದು ಈ ಕಾಲದ ದೇವಾಲಯದ ವೈಶಿಷ್ಟವಾಗಿತ್ತು. ಕ್ರಿ.ಶ. 1513 [30] ಅಮರಾವತಿಯ ಶಾಸನವೊಂದು ಇಲ್ಲಿನ ಮಧುರಾಪುರಿಯ ಮಹಾದೇವಿ ದೇವಸ್ಥಾನದಲ್ಲಿ ಸನಿಗಳು ಸೇವೆ ಸಲ್ಲಿಸುತ್ತಿದ್ದುದರ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ದೇವರನ್ನು ಆರಾಧಿಸಲು

ಮುಖ್ಯವಾಗಿ ಮಾಡಲಾಗುತ್ತಿದ್ದ ಆಚರಣೆಗಳಲ್ಲಿ ಹೂವನ್ನರ್ಪಿಸುವುದು, ಹಣ್ಣು, ಧೂಪಾರತಿ, ದೀಪಗಳು ಹಾಗೂ ದೇವರಿಗೆ ಇಷ್ಟವಾಗುತ್ತಿದ್ದ ಎಲ್ಲ ವಿಧವಾದ ನೈವೇದ್ಯಗಳನ್ನೂ ಅರ್ಪಿಸಲಾಗುತ್ತಿತ್ತು. ಹಾಡುಗಾರಿಕೆ ಹಾಗೂ ನರ್ತನವೆರಡೂ ಮತ್ತು ಸಂಗೀತ ವಾದ್ಯಗಳನ್ನು ನುಡಿಸುವುದು ಧಾರ್ಮಿಕ ಆಚರಣೆಗಳಾಗಿದ್ದವು. ಇವುಗಳನ್ನು ಪೂಜಿಸಲಾಗುತ್ತಿದ್ದ ದೇವರ ಭವ್ಯತೆಯನ್ನು ಪ್ರೇರೇಪಿಸಲು ಆಚರಿಸಲಾಗುತ್ತಿತ್ತು. ಇಲ್ಲಿನಮುಖ್ಯ ಉದ್ದೇಶವು ಮಾನವನ ಶ್ರೇಷ್ಠ ಪ್ರಯತ್ನಗಳಾದ ಸಂಗೀತ ಹಾಗೂ ನೃತ್ಯವನ್ನು ದೇವರ ಮುಂದೆ ಪ್ರದರ್ಶಿಸುವುದರ ಮೂಲಕ ದೇವರ ಆಶೀರ್ವಾದಗಳನ್ನು ಪಡೆಯಲು ಯತ್ನಿಸುವುದಾಗಿತ್ತು. ಇದು ದೇವರಿಗೆ ಮನೋರಂಜನೆಯನ್ನು ನೀಡುತ್ತಿತ್ತು ಎಂದು ತಿಳಿಯಲಾಗಿತ್ತು. ಹಾಗೆಯೇ ಇದು ಭಕ್ತರಿಗೆ ಮನೋರಂಜನೆ ಹಾಗೂ ಶಿಕ್ಷಣವನ್ನು ನೀಡುತ್ತಿತ್ತು. ಈ ರೀತಿಯಾಗಿ ದೇವಾಲಯಗಳಲ್ಲಿ ಪ್ರದರ್ಶನ ನೀಡುತ್ತಿದ್ದುದರ ಫಲವಾಗಿ ದೇವಾಲಯಗಳು ಕಲೆಯ ಕಣಜಗಳಾದವು. ಹಾಗೆಯೇ ಅವುಗಳನ್ನು ಉತ್ತೇಜಿಸುವ ಕೇಂದ್ರಗಳಾದವು. ದೇವಾಲಯದ ನರ್ತಕಿಯರು ಮುಂದೆ ಕಲೆಯ ಪಾಲಕರಾದರು. ಸಂಗೀತ ಹಾಗೂ ನೃತ್ಯದ ಆಚರಣೆಯು ಒಂದು ಅವಿಭಾಜ್ಯ ಅಂಗವಾಗಿತ್ತು. ಈ ಉದ್ದೇಶಕ್ಕಾಗಿ ಸಂಗೀತಗಾರರು ಹಾಗೂ ನರ್ತಕಿಯರ ಒಂದು ಸಿಬ್ಬಂದಿಯನ್ನೇ ಇಟ್ಟುಕೊಳ್ಳಲಾಗಿತ್ತು. ಇವರ ಕರ್ತವ್ಯವೆಂದರೆ ದೇವರ ಮುಂದೆ ತಮ್ಮ ಕಲೆಯನ್ನು ಪ್ರದರ್ಶನ ಮಾಡುವುದು.

ನರ್ತಕಿಯರು ತಮ್ಮ ಬಾಲ್ಯದಿಂದಲೇ ದೇವಾಲಯದ ಸೇವೆಯಲ್ಲಿ ಇರುತ್ತಿದ್ದರು. ದೇವಾಲಯದ ಈ ನರ್ತಕಿಯರು ಈ ಸಂಪ್ರದಾಯಿಕ ಕಲೆಗಳಲ್ಲಿ ಬಹಳ ನುರಿತವರಾಗಿದ್ದು ಈ ಉದ್ದೇಶಕ್ಕಾಗಿ ಇವರನ್ನು ವಿಶೇಷವಾಗಿ ತರಬೇತಿ ಮಾಡಲಾಗುತ್ತಿತ್ತು. ಈ ಕಲೆಗಳನ್ನು ಕಲಿಸಲು ಕೆಲವು ದೇವಾಲಯಗಳಲ್ಲಿ ನೃತ್ಯ ಗುರುಗಳನ್ನು ನೇಮಕ ಮಾಡುತ್ತಿದ್ದರು. ಕ್ರಿ.ಶ. 1496 ರಲ್ಲಿ ತಿರುಪತಿಯ ಒಂದು ಶಾಸನದಲ್ಲಿ ಈ ನೃತ್ಯದ ತರಬೇತುದಾರರ ಬಗ್ಗೆ ಉಲ್ಲೇಖವನ್ನು ನೀಡಲಾಗಿದೆ.[31]

ದಕ್ಷಿಣ ಭಾರತದ ಬಹುತೇಕ ಪ್ರತೀ ದೇವಾಲಯವೂ ಗರ್ಭಗೃಹಕ್ಕೆ ಹೊಂದಿಕೊಂಡಂತೆ ನಾಟ್ಯಮಂಟಪವನ್ನು ಹೊಂದಿತ್ತು. ಇದರಲ್ಲಿ ದೇವಾಲಯದ ನರ್ತಕಿಯರು ಹಾಡು ಹಾಗೂ ನರ್ತನದ ಮೂಲಕ ದೇವತೆ ಹಾಗೂ ಭಕ್ತರಿಬ್ಬರನ್ನೂ ರಂಜಿಸುತ್ತಿದ್ದರು. ಕ್ರಿ.ಶ. 1381ರ ಶಾಸನವೊಂದು (ಗೋದಾವರಿ ಜಿಲ್ಲೆಯ ದ್ರಾಕ್ಷಾರಾಮಂ) ಈ ಊರಿನಲ್ಲಿ ಭೀಮೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ನಾಟ್ಯ ಮಂಟಪ ನಿರ್ಮಾಣದ ಬಗ್ಗೆ ಉಲ್ಲೇಖವನ್ನು ನೀಡುತ್ತದೆ.[32]

ಕೆಲವು ದೇವಾಲಯದ ಸ್ತ್ರೀಯರು ಗಾಯನ ಹಾಗೂ ವಾದ್ಯಸಂಗೀತವೆರಡರಲ್ಲೂ ಉತ್ತಮ ಸಾಮರ್ಥ್ಯವನ್ನು ತೋರಿಸಿರುವ ರೀತಿ ಕಂಡುಬರುತ್ತಾರೆ. ಕ್ರಿ.ಶ. 1359ರ ಸಿಂಹಾಚಲಂ ಶಾಸನವೊಂದು ಆ ಊರಿನ ನರಸಿಂಹ ದೇವರಿಗೆ ಧೂಪವನ್ನು ಹಾಕುವ ಸಂದರ್ಭದಲ್ಲಿ ನಾಮಸಂಕೀರ್ತನವನ್ನು (ದೇವರ ಪವಿತ್ರ ಹೆಸರಿನ ಪಠನೆ)ಹಾಡಲು ನೇಮಕಗೊಂಡಿದ್ದ ಸನಿಗಳ ಉಲ್ಲೇಖವನ್ನು ಇದು ಮಾಡುತ್ತದೆ.ಕ್ರಿ.ಶ. 1349ರ ಸಿಂಹಾಚಲಂನ ಶಾಸನವೊಂದರ ಪ್ರಕಾರ ಇಬ್ಬರು ಮಹಿಳೆಯರನ್ನು ನರಸಿಂಹ ದೇವರ ಮುಂದೆ ವೀಣೆ ಹಾಗೂ ಇತರ ವಾದ್ಯಗಳನ್ನು ನುಡಿಸಲು ನೇಮಿಸಲಾಗಿತ್ತು.[33]

ಈ ಕಾಲದ ಶಾಸನಗಳಲ್ಲಿ ದೇವಾಲಯದ ಸ್ತ್ರೀಯರು ನಿರ್ವಹಿಸುತ್ತಿದ್ದ ಇತರೆ ಕಾರ್ಯಗಳನ್ನು ಉಲ್ಲೇಖಿಸಲಾಗಿದೆ. ಕ್ರಿ.ಶ. 1382ರ ಸಿಂಹಾಚಲಂನ ಶಾಸನವೊಂದು ಚಾಮರಸದೇವನ ಸೇವೆಯನ್ನು ಉಲ್ಲೇಖಿಸುತ್ತವೆ. (ಚಿತ್ರಸಂಖ್ಯೆ-9) ಅಂದರೆ ಇಬ್ಬರು ಸನಿಯರು ಚಾಮರ ಬೀಸುವುದಕ್ಕೆ ನೇಮಕಗೊಂಡಿರುವುದನ್ನು ಉಲ್ಲೇಖಿಸಲಾಗಿದೆ.[34] ಇದೇ (ದೇವಾಲಯದ) ಊರಿನ ಇನ್ನೊಂದು ಶಾಸನವು ದೇವತೆಗೆ ಕನ್ನಡಿಯನ್ನು ತೋರಿಸುವ ಅದ್ದಾಮುಟ್ಟನು ಹಾಗೂ ಅಕ್ಕಿ ಹಿಟ್ಟಿನಿಂದ ದೇವಾಲಯದ ನೆಲವನ್ನು ಸಿಂಗಾರಗೊಳಿಸುವ ಮುಗ್ಗು ಪೆಟ್ಟನ್ನು ಎಂಬ ಸೇವೆಗಳನ್ನು ಅಲ್ಲಿನ ಸ್ಥಳೀಯ ದೇವಾಲಯದ ಮಹಿಳೆಯೊಬ್ಬಳು ಮಾಡುತ್ತಿದ್ದುದನ್ನು ಉಲ್ಲೇಖಿಸುತ್ತದೆ.[35]

ನೃತ್ಯದಲ್ಲಿ ಹಾಗೂ ಹಾಡುಗಾರಿಕೆಯಲ್ಲಿ ಉತ್ತಮ ಪಾಂಡಿತ್ಯವನ್ನು ಹೊಂದಿದ್ದ ಸ್ತ್ರೀಯರನ್ನು ಶ್ರೀಮಂತ ದಾನಿಗಳು ದೇವಾಲಯದ ಸೇವೆಗಾಗಿ ನೇಮಿಸುತ್ತಿದ್ದರು. ಕ್ರಿ.ಶ. 1531ರ ತಿರುಪತಿಯ ಶಾಸನವೊಂದು ಅಚ್ಯುತರಾಯನ ಅರಮನೆಯೊಂದಿಗೆ ಸಂಬಂಧವನ್ನು ಹೊಂದಿದ್ದ ಮುದ್ದು ಕುಪ್ಪಾಯಿಯನ್ನು ತಿರುಪತಿಗೆ ಹೋಗಿ ವೆಂಕಟೇಶ ದೇವಾಲಯದಲ್ಲಿ ಸೇವೆ ಸಲ್ಲಿಸುವಂತೆ ಆಜ್ಞೆ ನೀಡಲಾಯಿತು ಎಂದು ಹೇಳುತ್ತದೆ.[36]

ದೇವಾಲಯದ ಕೆಲವು ನರ್ತಕಿಯರಿಗೆ ಅವರು ತಮ್ಮ ಕರ್ತವ್ಯದ ಮೇಲೆ ಹೊಂದಿದ್ದ ಭಕ್ತಿಗಾಗಿ ಅವರಿಗೆ ವಿಶೇಷ ಗೌರವ ಮನ್ನಣೆಗಳನ್ನು ನೀಡಲಾಗುತ್ತಿತ್ತು. ತಿರುಪತಿಯ ಶ್ರೀ ವೆಂಕಟೇಶ್ವರ ದೇವಾಲಯದ ನರ್ತಕಿಯಾದ ತಿರುವೆಂಕಟಮಣಿಯಕ್ಕಳಿಗೆ ಅವಳಿಗೆ ಅನುಕೂಲಕ್ಕೆ ತಕ್ಕಂತ ಪಲ್ಲಕ್ಕಿಯನ್ನು ಉಪಯೋಗಿಸಲು ಅವಕಾಶ ಮಾಡಿಕೊಡಲಾಗುತ್ತಿತ್ತು.[37] ದೇವಾಲಯದ ನರ್ತಕಿಯೊಬ್ಬಳಿಗೆ ನೀಡಲಾಗಿದ್ದ ವಿಶೇಷ ಗೌರವವು ಇದಾಗಿತ್ತು. ಈ ಕಾಲದ ಶಾಸನಗಳ ಪ್ರಕಾರ ದೇವಾಲಯ ಮಹಿಳೆಯರ ಖಾಸಗೀ ಜೀವನವಾಗಲೀ ಜಾತಿ ಅಥವಾ ಸಾಮಾಜಿಕ ಸ್ಥಾನಮಾನದ ಬಗ್ಗೆ ಯಾವುದೇ ಮಾಹಿತಿಯನ್ನು ನೀಡುವುದಿಲ್ಲ. ಈ ಕಾಲದ ಕೆಲವು ಶಾಸನಗಳು ದೇವಾಲಯದ ಕೆಲ ಮಹಿಳೆಯರು ವೈವಾಹಿಕ ಜೀವನವನ್ನು ನಡೆಸಿದರು ಹಾಗೂ ಕೆಲವರಿಗೆ ಮಕ್ಕಳಿದ್ದರು. ಕ್ರಿ.ಶ. 1391ರ ಬೇಜವಾಡದ ಶಾಸನವೊಂದು ಬೇಜಾವಾಡ ಮಲ್ಲಿಕಾರ್ಜುನ ದೇವಾಲಯದ ನರ್ತಕಿಯಾದ ಭೋಗಂ ನರಬೂರಿಅನ್ನಸಾನಿಯು ಸೊಸೆಯೊಬ್ಬಳನ್ನು ಹೊಂದಿದ್ದಳು.[38] ಇದು ಅವಳ ಕುಟುಂಬದ ವೈವಾಹಿಕ ಜೀವನದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಸಿಂಹಾಚಲಂ ಮತ್ತು ಶ್ರೀಕರ್ಮಂನ ಬಹಳಷ್ಟು ಸಂಖ್ಯೆಯ ಶಾಸನಗಳು ಇದನ್ನು ಸಾಬೀತುಪಡಿಸುತ್ತವೆ. ಮೊದಲ ವರ್ಗಕ್ಕೆ ಸೇರಿದ ಸ್ತ್ರೀಯರು ಅವಿವಾಹಿತವಾಗಿ ಉಳಿದರು ಹಾಗೂ ದೇವಾಲಯಗಳಿಗೆ ಸೇರಿದವರಾಗಿದ್ದರು. ಅದೇ ರೀತಿಯಲ್ಲಿ ಎರಡನೆಯ ವರ್ಗಕ್ಕೆ ಸೇರಿದ ಮಹಿಳೆಯರು ವಿವಾಹವಾಗಿದ್ದರು ಹಾಗೂ ಸ್ವತಂತ್ರ ಜೀವನವನ್ನು ನಡೆಸುತ್ತಿದ್ದರು. ಆದರೆ ದೇವಾಲಯಗಳು ಇವರನ್ನು ಅರೆಕಾಲಿಕ ಕೆಲಸಗಾರರನ್ನಾಗಿ ನೇಮಕ ಮಾಡಿಕೊಂಡಿದ್ದವು.[39]

ದೇವಾಲಯ ಜೀವನದ ಭಾಗವಾಗಿದ್ದ ಮನೋರಂಜನೆ, ನಾಟಕ, ನೃತ್ಯ, ಸಂಗೀತ ಹಾಗೂ ಹಾಡುಗಾರಿಕೆಯು ಜನರ ಸಾಂಸ್ಕೃತಿಕ ಜೀವನದಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದವು. ಈ ರೀತಿಯಾಗಿ ಈ ಕಾಲದಲ್ಲಿ ದೇವಾಲಯ ಹಾಗೂ ಸ್ತ್ರೀಯರ ನಡುವೆ ಬಹಳ ನಿಕಟ ಸಂಪರ್ಕವಿತ್ತು. ದೇವಾಲಯದ ಅಧಿಕಾರಿಗಳು ಸ್ತ್ರೀಯರು ತಮ್ಮ ಕರ್ತವ್ಯದ ಮೇಲೆ ತೋರುತ್ತಿದ್ದ ಭಕ್ತಿಯನ್ನು ಪರಿಗಣಿಸಿ ಅವರನ್ನು ಗೌರವಿಸುತ್ತಿದ್ದರು.

4. ಧರ್ಮ:

ವಿಜಯನಗರವು ಎಲ್ಲಾ ರೀತಿಯಾದ ಧರ್ಮಗಳು, ಮತಗಳು, ತತ್ವಗಳು ಹಾಗೂ ಸಿದ್ಧಾಂತಗಳನ್ನು ಸಮನಾಗಿ ಪೋಷಿಸಿತ್ತು. ಭಕ್ತಿಯ ಸಿದ್ಧಾಂತವು ಸಾರ್ವತ್ರಿಕ ಪರಿಮಾಣವನ್ನು ಹೊಂದಿತ್ತು ಹಾಗೂ ಧಾರ್ಮಿಕ ಆಚರಣೆಗಳು ಹಾಗೂ ಆಧ್ಯಾತ್ಮಿಕ ಆಶೋತ್ತರಗಳಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿತ್ತು. ವಿಜಯನಗರ ಸಾಮ್ರಾಜ್ಯವು ಹಲವಾರು ಮತ ಧರ್ಮಗಳ ಎಲ್ಲಾ ರೀತಿಯಾದ ಜನಗಳನ್ನು ಹೊಂದಿತ್ತು. ರಾಜಧಾನಿಯು ವಿಶ್ವನಗರವಾಗಿತ್ತು. ವಿಜಯನಗರ ರಾಜರು ಧಾರ್ಮಿಕ ಸಹಿಷ್ಣುತೆಯನ್ನು ಅನುಸರಿಸಿದ್ದರು.

ಪ್ರಾರಂಭದ ವಿಜಯನಗರ ರಾಜರು ಶೈವರಾಗಿದ್ದರು. ಆದರೆ ನಂತರದ ರಾಜರು ತಿರುಪತಿಯ ವೆಂಕಟೇಶ ದೇವರ ಮೇಲಿನ ಪರಮ ಭಕ್ತಿಯೊಂದಿಗೆ ಶುದ್ಧ ವೈಷ್ಣವರಾದರು. ದೇವಾಲಯದಲ್ಲಿದ್ದ ಹಲವಾರು ಶಿಲ್ಪಗಳು ಹಾಗೂ ಚಿತ್ರಗಳು ಹಾಗೂ ಸಾಮಾನ್ಯವಾಗಿ ಪುರಾಣ, ಮಹಾಕಾವ್ಯಗಳಿಂದ ಆಯ್ದು ವಸ್ತುವಿನ ಆಧಾರದ ಮೇಲೆ ಇರುತ್ತಿದ್ದ ನೃತ್ಯ ಹಾಗೂ ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು. ಇದರಿಂದ ದೇವಾಲಯಕ್ಕೆ ಆಗಾಗ ಭೇಟಿ ನೀಡುತ್ತಿದ್ದ ಸರಕ್ಷರಸ್ತ ಯಾತ್ರಿಗಳು ಹಾಗೂ ಭಕ್ತರಿಗೆಧಾರ್ಮಿಕ ಹಾಗೂ ರಾಜ್ಯಗಳೆರಡರ ಮೇಲಿನ ಜ್ಞಾನವನ್ನು ಪ್ರಸಾರ ಮಾಡಲು ಅನುಕೂಲವಾಗಿತ್ತು. ಈ ಕಾಲದ ಹಲವು ದೇವಾಲಯಗಳಲ್ಲಿ ಮಾಡಲಾಗಿದ್ದ ಬೋಧಿಸುವ ಏರ್ಪಾಟುಗಳ ದೃಷ್ಟಿಯಿಂದ ಅವುಗಳು ವಾಚನಾಲಯವನ್ನೂ ಹೊಂದಿದ್ದವು ಎಂದು ತಿಳಿದುಬರುತ್ತದೆ. ತಿರುಪತಿಯ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ಹೊಂದಿಕೊಂಡಂತೆ ಪ್ರಸಿದ್ಧ ತಳಪಕ್ಕ ಮನೆತನದ ಸಂಗೀತ ಕವಿಗಳಿಂದ ರಚಿಸಲ್ಪಟ್ಟ ಸಂಕೀರ್ತನಗಳ ಸಾವಿರಾರು ತಾಮ್ರ ಹಾಳೆಗಳನ್ನು ಸಂರಕ್ಷಿಸಿಡಲಾಗಿದ್ದ ಸಂಕೀರ್ತನ ಭಂಡಾರವನ್ನು ಒಂದು ರೀತಿಯಲ್ಲಿ ಒಂದು ಗ್ರಂಥಾಲಯವೆಂದು ಕರೆಯಬಹುದು.[40]

ಈ ಕಾಲದ ಎಲ್ಲಾ ವರ್ಗದ ಜನಗಳ ಸಾಮಾಜಿಕ ಹಾಗೂ ಧಾರ್ಮಿಕ ಜೀವನದಲ್ಲಿ ಧಾರ್ಮಿಕ ಯಾತ್ರೆಗಳು ಪ್ರಮುಖ ಭಾಗವಹಿಸಿದ್ದವು. ವ್ರತಗಳೂ ಕೂಡ ಜನರ ಧಾರ್ಮಿಕ ಆಚರಣೆಗಳಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿವೆ. ಈ ಕಾಲದ ಜನರು ಆಚರಿಸುತ್ತಿದ್ದ ಹಲವಾರು ವ್ರತಗಳನ್ನು ಕುರಿತು ಸಮಕಾಲೀನ ಸಾಹಿತ್ಯಿಕ ದಾಖಲೆಗಳು ಹಾಗೂ ಶಾಸನಗಳು ಉಲ್ಲೇಖವನ್ನು ಹೊಂದಿವೆ. ಇವುಗಳಲ್ಲಿನ ಬಹುತೇಕ ವ್ರತಗಳು ಇಂದಿನ ದಿನದವರೆಗೂ ಉಳಿದುಕೊಂಡು ಬಂದಿವೆ. ಕೆಲವು ವ್ರತಗಳು ಶೈವ ಮತ್ತು ಕೆಲವು ವೈಷ್ಣವ ಹಾಗೂ ಕೆಲವು ವ್ರತಗಳು ಎಲ್ಲಾ ವರ್ಗಗಳಿಗೆ ಸೇರಿದ ಎಲ್ಲಾ ಜನಗಳಿಗೆ ಸಮಾನವಾದ ವ್ರತಗಳಾಗಿದ್ದವು. ಹಾಗೆಯೇ ಕೆಲವು ಸಾಮಾನ್ಯ ಲಕ್ಷಣವನ್ನು ಹೊಂದಿದ್ದವು. ಆದರೆ ಇನ್ನೂ ಕೆಲವು

ನಿರ್ದಿಷ್ಟವಾದ ಧ್ಯೇಯವನ್ನು ಸಾಧಿಸಲು ಮಾಡಿಕೊಂಡ ವ್ರತಗಳಾಗಿದ್ದವು. ದಾನಗಳನ್ನು ನೀಡುವುದು ಹಿಂದೂ ಧಾರ್ಮಿಕ ಪದ್ಧತಿಯ ಪ್ರಮುಖ ಅಂಶವಾಗಿತ್ತು. ಈ ಕಾಲದ ಸಾಹಿತ್ಯಿಕ ಹಾಗೂ ಶಾಸನ ದಾಖಲೆಗಳು ದೇವಾಲಯಗಳಿಗೆ ಹಲವಾರು ಸಂದರ್ಭಗಳಲ್ಲಿ ರಾಜರು, ಮಂತ್ರಿಗಳು, ಆಸ್ಥಾನಿಕರು, ದೇವದಾಸಿಯರು ಮತ್ತು ಸೇನಾಧಿಪತಿಗಳು, ಶ್ರೀಮಂತ ನಾಗರೀಕರು, ಯಾತ್ರಿಗಳು, ವಿದ್ಯಾವಂತ ಬ್ರಾಹ್ಮಣರು ಹಾಗೂ ಸಾಮಾನ್ಯ ಮಹಿಳೆಯರು ಹಲವಾರು ರೀತಿಯಲ್ಲಿ ನೀಡಿದ್ದ ದಾನಗಳ ಬಗ್ಗೆ ದಾಖಲೆಯನ್ನು ನೀಡುತ್ತವೆ.

ಕ್ರಿ.ಶ. 1372ರ ಒಂದು ಶಾಸನವು ಹೇಳುವಂತೆ ಅಯ್ಯಪ್ಪನ ತಾಯಿಯಾದ ಮಾಜಿಯ ಚೌವಕ್ಕನ ಮಗಳು, ಕೋಟೆಯಪ್ಪ ಹಾಗೂ ಇನ್ನಿತರರಿಂದ ಕೊಂಡುಕೊಂಡ ಭೂಮಿಯನ್ನು ಚೋಳಿಯ ಕೇರಿಯ ಕೆಲ್ಲಮ್ಮಗರಿಯ ತೋಟದಲ್ಲಿನ ಮಠಕ್ಕೆ 12 ಬ್ರಾಹ್ಮಣರ ಅನ್ನಸಂತರ್ಪಣೆಗೆ ಹಾಗೂ ಅಡಿಗೆಯವನಿಗಾಗಿ ದಾನ ಮಾಡಿದುದಾಗಿ ಹೇಳಲಾಗಿದೆ.[41]

ಈ ಕಾಲದಲ್ಲಿ ರಾಣಿಯರು ಹಾಗೂ ಉಚ್ಚ ಕುಲೀನ ಮಹಿಳೆಯರು ದೇವಾಲಯಗಳಿಗೆ ದಾನವನ್ನು ನೀಡಿದರು. ರಾಣಿ ಬುಕ್ಕವ್ವೆಯು ಬಸದಿಗೆ ದಾನವನ್ನು ನೀಡಿದಳು. ಮೊದಲನೇ ದೇವರಾಯನ ರಾಣಿಯಾದ ಭೀಮದೇವಿಯು ಶಾಂತಿನಾಥ ಮೂರ್ತಿಯನ್ನು ಶ್ರವಣಬೆಳಗೊಳದ ಮಾಗಯಿ ಬಸದಿಯಲ್ಲಿ ಪ್ರತಿಷ್ಠಾಪಿಸಿದರು.[42] ಎರಡನೇ ದೇವರಾಯನ ಪತ್ನಿಯಾದ ಕಮಲಾ ದೇವಿಯು ತುಮಕೂರು ಬಿದಿರೆಯ ಕಾಳಿನಾಥ ದೇವಾಲಯಕ್ಕೆ ಭೂದಾನವನ್ನು ಮಾಡಿದಳು.[43] ಶಾಸನವೊಂದರ ಪ್ರಕಾರ ಬೊಮ್ಮರಸನು ಬಾರಕೂರು ರಾಜ್ಯವನ್ನು ಆಳುತ್ತಿದ್ದನು. ಇದರ ಪ್ರಕಾರ ಮಹಾಪ್ರಧಾನ ಮುದ್ದೆದಣ್ಣಾಯಕನು ಮೂರು ಕುಂಟೆ ಭೂಮಿಯನ್ನು ಕೊಂಡುಕೊಂಡು ಕೋಟೇಶ್ವರ ದೇವರ ಪೂಜೆ ಹಾಗೂ ನೈವೇದ್ಯಕ್ಕಾಗಿ, ದೇವಾಲಯದಲ್ಲಿನ 13 ಬ್ರಾಹ್ಮಣರ ದಿನನಿತ್ಯದ ಅನ್ನಸಂತರ್ಪಣೆಗಾಗಿ ಹಾಗೂ ದೇವರ ಮುಂದೆ ಚೌರಿ ಬೀಸುತ್ತಿದ್ದ ಇಬ್ಬರು ಹೆಂಗಸರ ಕೂಲಿಗಾಗಿ ತಾನು ಕೊಂಡುಕೊಂಡ ಭೂಮಿ ಹಾಗೂ ಸ್ವಲ್ಪ ಚಿನ್ನವನ್ನು ಕೊಟ್ಟನು.[44]

ಕ್ರಿ.ಶ. 1378ರ ಶಾಸನವೊಂದು ರಾಮಣ್ಣ ಶೆಟ್ಟಿಯ ಹೆಂಡತಿಯಾದ ನಾಗಾವೆಯು ಮನಿಗಾರೆ ಕೇರಿಯ ಸೋಮ್ಮೆದೇವ ದೇವಾಲಯದಲ್ಲಿ ರುದ್ರಪೂಜೆ, 3 ಬ್ರಾಹ್ಮಣರ ಅನ್ನಸಂತರ್ಪಣೆಗಾಗಿ, ತುಪ್ಪದ ಬತ್ತಿಗಳನ್ನು ಉರಿಸಲು, ಪಂಚಾಮೃತ ಅಭಿಷೇಕಕ್ಕಾಗಿ, ತುಳಸಿಯ ಹಾರದ ಪೂರೈಕೆಗಾಗಿ ಕೊಟ್ಟ ಹಣದ ಕಾಣಿಕೆಯ ಬಗ್ಗೆ ದಾಖಲೆಯನ್ನು ನೀಡುತ್ತದೆ.[45] ಕ್ರಿ.ಶ. 1397ರ ಶಾಸನವೊಂದರ ಪ್ರಕಾರ ರಾಣಿ ಬುಕ್ಕದೇವಿಯು ತನ್ನ ಗುರುವಾದ ಭಾಸ್ಕರ ದೇವಯ್ಯನ ಏಳಿಗೆಗೋಸ್ಕರವಾಗಿ ಜಡೇಯಸಂಕರದೇವ ದೇವಾಲಯದಲ್ಲಿ ದೀಪ-ಸ್ತಂಭವೊಂದನ್ನು ಪ್ರತಿಷ್ಠಾಪಿಸಿದುದರ ಬಗ್ಗೆ ಬರೆಯುತ್ತದೆ.[46] ಕ್ರಿ.ಶ. 1430ರ ಶಾಸನವೊಂದು ಎರಡನೇ ದೇವರಾಯನನ್ನು ತುರುಕ-ಮಹಾರಾಯ ಪ್ರಬಲಾರ್ಣ್ಯವಿದಾರಿ ಎಂದು ವರ್ಣಿಸಲಾಗಿರುವ ಬಗ್ಗೆ ಬರೆಯುತ್ತದೆ. ಇವನು ನಾಗಿರೆ ರಾಜ್ಯದಲ್ಲಿನ ಬಿದರೆ ಬಳಿಯ ತ್ರಿಭುವನ ಚೂಡಾಮಣಿ-ಚೈತಾಲಯವನ್ನು ಉದ್ಘಾಟನೆ ಮಾಡಿರುವುದಾಗಿ ಹೇಳಲಾಗಿದೆ. ಇವನ ಹೆಂಡತಿಯಾದ ನಾಗಲಾದೇವಿಯು ಮಾನಸ್ತಂಭವನ್ನು

ನಿರ್ಮಿಸಿದ್ದಳು ಮತ್ತು ಇವನ ಮಗಳಾದ ಲಕ್ಷ್ಮಿ ಮತ್ತು ಪಂಡಿತಾ ದೇವಿಯರು ಭೋಜನದ ವ್ಯವಸ್ಥೆಯನ್ನು ಮಾಡಿದ್ದರು.[47] ಎರಡನೇ ದೇವರಾಯನ ತಾಯಿಯಾದ ನಾರಾಣದೇವಿಯು ವಿಷ್ಣುವಿನ ಭಕ್ತೆಯಾಗಿದ್ದಳು. ರಾಮಚಂದ್ರ ದೇವರಿಗೆ ನೈವೇದ್ಯವನ್ನು ಅರ್ಪಿಸಲು ಹಾಗೂ ಬ್ರಾಹ್ಮಣರಿಗೆ ಅನ್ನಸಂತರ್ಪಣೆ ಮಾಡಲು ಕ್ರಿ.ಶ. 1432ರಲ್ಲಿ ಕೆಳಗುಂದನಿ ಹಾಗೂ ಕೈಗೈ ಗ್ರಾಮುಗಳನ್ನು ದಾನ ಮಾಡಿದಳೆಂದು ತಿಳಿದುಬಂದಿದೆ.[48]

ಈ ಕಾಲದಲ್ಲಿ ಸಾಮಾನ್ಯ ಮಹಿಳೆಯರು ದೇವಾಲಯಗಳಿಗೆ ಉದಾರವಾದ ದಾನವನ್ನು ನೀಡಿದ್ದರು. ಪ್ರಧಾನ ದೇವರಾಯ ಮಹಾರಾಯನ ಆಳ್ವಿಕೆಯಲ್ಲಿ ಹೊನ್ನಮವ್ವ ಎಂಬ ಆಸ್ಥಾನ ವಾಚಕಳು ಒಂದು ಕುಂಟೆ ಜಮೀನನ್ನು ಕೊಂಡುಕೊಂಡು ಮಲ್ಲಿಕಾರ್ಜುನ ದೇವರ ಪೂಜೆಗಾಗಿ ಹಾಗೂ ದೇವಸ್ಥಾನದಲ್ಲಿ ಐದು ಜಂಗಮರ ಅನ್ನಸಂತರ್ಪಣೆಗಾಗಿ ಅದನ್ನು ಕ್ರಿ.ಶ. 1458 ಜನವರಿ 19 ರಂದು ದಾನ ಮಾಡಿದಳು.[49] ತಿಮ್ಮಣ್ಣದಣ್ಣಾಯಕನ ಹೆಂಡತಿಯಾದ ನಾಚರಮ್ಮಳು ಕ್ರಿ.ಶ. 1471ರಲ್ಲಿ ಮೇಲುಕೋಟೆಯ ಐವತ್ತೆರಡು ಶ್ರೀ ವೈಷ್ಣವರಿಗಾಗಿ ಧನಸಹಾಯವನ್ನು ಮಾಡಿದಳು.[50] ಅನ್ನೈಮದಿಯ ಮಗಳು ಹಾಗೂ ದೇವಾಲಯದ ಮಹಿಳೆಯರಲ್ಲಿ ಒಬ್ಬಳಾದ ವಾಲಂದಿಯು ಕ್ರಿ.ಶ. 1486ರಲ್ಲಿ ಮಾರ್ಗಲಿ ತಿಂಗಳಲ್ಲಿ ಧನುರ್ಮಾಸ ಪೂಜೆ ಎಂದು ಶ್ರೀ ವೆಂಕಟೇಶನಿಗೆ ಪೂಜೆಯನ್ನರ್ಪಿಸಲು ಹಣದ ಕಾಣಿಕೆಯನ್ನು ನೀಡಿದಳು.[51]

ಕ್ರಿ.ಶ. 1493ರ ಒಂದು ಶಾಸನವು ಸೋಮಚಾರ ಹಿರಿಯಣ್ಣ ಎಂಬುವವನ ಮಗನಾದ ಸೋಮಣ್ಣನು ಕಳಸನಾಥ ದೇವಾಲಯದಲ್ಲಿ ರುದ್ರ ಪೂಜೆಯ ಸಂದರ್ಭದಲ್ಲಿ ಬ್ರಾಹ್ಮಣನೊಬ್ಬನಿಗೆ ಭೋಜನವನ್ನೇರ್ಪಡಿಸಲು 20 ಪಣಗಳ (ಕೊಡುಗೆಯನ್ನು) ಕಾಣಿಕೆಯನ್ನು ನೀಡಿದನೆಂದು ಹೇಳುತ್ತದೆ. ಗೌನಪತಿಯ ಹೆಂಡತಿ ಮದುವಳಿಗೆಯು ಮುತ್ತೈದೆಯರ ಭೋಜನಕ್ಕಾಗಿ ಹಾಗೂ ಪೂಜೆಗಾಗಿ ಭೂದಾನ ಮಾಡಿದುದಾಗಿ ದಾಖಲೆಯನ್ನು ನೀಡುತ್ತದೆ.[52]

ಕ್ರಿ.ಶ. 1510 ಶಾಸನವೊಂದು ವಿರೂಪಾಕ್ಷ ದೇವರ ದಿನನಿತ್ಯದ ಪೂಜೆಯ ಉದ್ದೇಶಕ್ಕಾಗಿ ನರಸನಾಯಕನ ತಾಯಿಯಾದ ಬುಕ್ಕಜಮ್ಮಳು ಮುದ್ದನಯ ಹಳ್ಳಿಯಲ್ಲಿ ಭೂಮಿಯನ್ನು ಖರೀದಿಸಿ ಅದನ್ನು ಹಂಪೆಯ ತಿರುಮಲಭಟ್ಟನ ಮಗನಾದ ಸಾಯಿಭಟ್ಟನಿಗೆ ನೀಡಿದಳೆಂದು ಹೇಳುತ್ತದೆ.[53]

ಕೃಷ್ಣದೇವರಾಯನ ರಾಣಿಯಾದ ತಿರುಮಲಾದೇವಿಯು ಶ್ರೀ ವೆಂಕಟೇಶನಿಗೆ ತಿರುಮಲ ದೇವಾಲಯದಲ್ಲಿ ದೇವರಿಗೆ ರಾತ್ರಿಪೂಜೆಯಲ್ಲಿ ನೈವೇದ್ಯಕ್ಕಾಗಿ ಹಾಲನ್ನರ್ಪಿಸಲು ಕ್ರಿ.ಶ. 1513ರಲ್ಲಿ ಒಂದು ಚಿನ್ನದ ಬಟ್ಟಲನ್ನು ನೀಡಿದಳು.[54] ಕ್ರಿ.ಶ. 1514ರಲ್ಲಿ ಕೃಷ್ಣದೇವರಾಯನ ಕಿರಿಯ ರಾಣಿಯಾದ ಚಿನ್ನಾದೇವಿಯು ಶ್ರೀ ವೆಂಕಟೇಶನಿಗೆ ಬಹಳ ಬೆಲೆಬಾಳುವ ಕಂಠೀಹಾರವನ್ನು ಕೊಡುಗೆಯಾಗಿ ನೀಡಿದಳು ಹಾಗೂ ದೈನಂದಿನ ಐದು ತಿರುಪ್ಪೊಣಕಂ ಪೂಜೆಗಾಗಿ ಮುದಿಯಾರ್

ಗ್ರಾಮವನ್ನು ದಾನಮಾಡಿದಳು.[55] ಅಚ್ಯುತರಾಯನ ರಾಣಿಯಾದ ವರದಾಜಿದೇವಿಅಮ್ಮನ್‌ಳು ಕ್ರಿ.ಶ.1534ರಲ್ಲಿ ತಿರುವೆಂಕಮುದಿಯಾರ್‌ಗಾಗಿ ಅವಸರಂ ಒಂದನ್ನು ಏರ್ಪಾಟು ಮಾಡಿದಳು.[56]

ಕ್ರಿ.ಶ. 1520 ಶಾಸನವೊಂದು ಕಾರ್ಕಳದ ರಾಮಸೇನಬೋವನ ಪತ್ನಿಯಾದ ಮಾದಯ್ಯೆಳು ಹಣದ ಕಾಣಿಕೆಯನ್ನೂ, ಸಂಗರಸ ಸೇನಬೋವನ ಹೆಂಡತಿಯಾದ ಬೊಮ್ಮರಸಿಯೂ ಕೂಡ ಕಳಸನಾಥ ದೇವರ ವಿಶೇಷ ಪೂಜೆಗಾಗಿ ಹಣದ ಕಾಣಿಕೆಯನ್ನು ನೀಡಿದಳೆಂದು ಉಲ್ಲೇಖವನ್ನು ಮಾಡುತ್ತದೆ.[57] ಕ್ರಿ.ಶ.1550ರ ಶಾಸನವೊಂದರ ಪ್ರಕಾರ ಬ್ರಾಹ್ಮಣ ಸ್ತ್ರೀಯೊಬ್ಬಳು ಸ್ವಯಂಭುನಾಥೇಶ್ವರ ದೇವಾಲಯದಲ್ಲೇ ಇವಳೇ ಸ್ವತಃ ಕಟ್ಟಿಸಿದ ಅಣ್ಣಮಲ್ಲಿನಾಥ ಗುಡಿಗೆ ಅವಳು ಹಾಗೂ ಅವಳ ಗಂಡನಾದ ಕುಮಾರಡಿಂಡಿಮರ್ ಅಣ್ಣಮಲ್ಲಿನಾಥನ ಶ್ರೇಯಸ್ಸಿಗೋಸ್ಕರವಾಗಿ ಭೂದಾನ ಮಾಡಿದುದರ ಬಗ್ಗೆ ದಾಖಲೆಯಿದೆ.[58] ಕ್ರಿ.ಶ. 1590ರ ಒಂದು ಶಾಸನವು ಅಂಬುಅಣ್ಣಶ್ರೇಷ್ಠಿಯ ಹೆಂಡತಿಯಾದ ದೇವರಸಿಗೆ ಪದ್ಮರಸಿ ಹಾಗೂ ದೇವರಸಿ ಎಂಬ ಇಬ್ಬರು ಅವಳಿ ಹೆಣ್ಣುಮಕ್ಕಳು ಹುಟ್ಟಿದಾಗ ಆತನು ನೇಮೀಶ್ವರ ಚೈತಾಲಯದ ಮುಂದಿರುವ ಕಂಬದ ಮೇಲೆ ಗಂಟೆಯೊಂದನ್ನು ಕಟ್ಟಿಸಿದನು. ಹಾಗೆಯೇ ಅದರ ಮೆಲೆ ಚಿನ್ನದ ಕಳಸವೊಂದನ್ನು ಜೋಡಿಸಿದನು.[59]

ನಾಗದೇವತೆಗಳ ಆರಾಧನೆಯು ವಿಜಯನಗರ ಕಾಲದಲ್ಲಿದ್ದ ಪ್ರಸಿದ್ಧ ಧಾರ್ಮಿಕ ಆಚರಣೆಯಾಗಿತ್ತು. ಸ್ವತಃ ವಿರೂಪಾಕ್ಷನೇ ನಾಗದೇವತೆಗಳ ಅದಿದೇವತೆಯಾಗಿದ್ದನೆಂದು ಹೇಳಲಾಗಿದೆ. ವಿಜಯನಗರ ಸಾರ್ವಭೌಮರು ನಾಗದೇವತೆಗಳನ್ನು ಪೂಜಿಸುತ್ತಿದ್ದರು. ಹಾಗೂ ಶಿವನನ್ನು ನಾಗದೇವತೆಗಳ ರಾಜ ನಾಗನಾಥನೆಂದು ಕರೆಯಲಾಗಿತ್ತು. ಅವರ ರಾಣಿಯರು ದೇವಾಲಯಗಳಲ್ಲಿ ನಾಗಕಲ್ಲುಗಳನ್ನು ಪ್ರತಿಷ್ಠಾಪಿಸಿದ್ದರು. ಇವುಗಳಿಗೆ ಪೂಜೆಗಳನ್ನು ಅರ್ಪಿಸುತ್ತಿದ್ದರು. ಅದೇ ರೀತಿಯಲ್ಲಿ ವಿಶೇಷ ಹೆಣ್ಣು ನಾಗದೇವತೆಗಳೂ ಇದ್ದವು. ಕಳಸ ಕಾರ್ಕಳ ಮುಖ್ಯಸ್ಥರ ರಾಜಕುಟುಂಬದ ಕೆಲವು ಸದಸ್ಯರು ಜೈನ ಸಂಸ್ಥೆಗಳಿಗೆ ದಾನ ನೀಡುವುದರ ಮೂಲಕ ಜೈನಧರ್ಮವನ್ನು ಪ್ರೋತ್ಸಾಹಿಸಿದರು. ಇವುಗಳ ಬೆಂಬಲವಾಗಿ ಕೆಳಗಿನ ಉದಾಹರಣೆಗಳನ್ನು ನೀಡಬಹುದು.[60]

ಗುರುರಾಜ ಒಡೆಯನ ರಾಣಿಯಾದ ವೀರಾಂಬಳು (1523-27) ಭಟ್ಕಳದಲ್ಲಿ ಜೈನಧರ್ಮದ ಪ್ರಸಾರಕ್ಕಾಗಿ ದುಡಿದಳು. ಕ್ರಿ.ಶ. 1490 ರಲ್ಲಿ ಭಟ್ಕಳದ ಹತ್ತಿರ ಅಂಬಲಕಟ್ಟೆಯ ಬಳಿ ಚೆನ್ನಮಲ್ಲನು ಕಟ್ಟಿಸಿದ ಚೈತಾಲಯದ ಮುಂದೆ ಇವಳು ಸನ್ಯಾಸಿಗಳ ವಸತಿಗಾಗಿ ಪಟ್ಟಶಾಲಾ ಹಾಗೂ ಕೊಠಡಿಗಳನ್ನೊಳಗೊಂಡಂತೆ, ದೊಡ್ಡ ಪಡಸಾಲೆಗಳ ಒಂದು ಭವ್ಯ ಬಂಗಲೆಯನ್ನು ನಿರ್ಮಿಸಿದಳೆಂದುಹೇಳಲಾಗಿದೆ.[61] ಕ್ರಿ.ಶ. 1511ರಲ್ಲಿ ಇದೇ ರಾಣಿಯು ಮುದುಭಟ್ಕಳದ ಜೈನಬಸದಿಗೆ ಆ ಬಸದಿಯ ತೀರ್ಥಂಕರರ ಹಾಲಿನ ಅಭಿಷೇಕಕ್ಕಾಗಿ ಭೂದಾನ ಮಾಡುವುದರೊಂದಿಗೆ ಜೈನಧರ್ಮದ ಮೇಲೆ ತಾನು ಹೊಂದಿದ್ದ ಅತೀವ ಉತ್ಸಾಹವನ್ನು ಪ್ರದರ್ಶಿಸಿದಳು.[62] ಕ್ರಿ.ಶ.1531ರಲ್ಲಿ ಭೈರವರಾಯನ ತಂಗಿಯಾದ ಕಾಳದೇವಿಯು ಭಗ್ನುಂಜೆ ಸೀಮೆಯ ಕಲ್ಲುಬಸದಿಯಲ್ಲಿನ ಪಾರ್ಶ್ವ ತೀರ್ಥಂಕರನಿಗೆ ಧನಸಹಾಯ ಮಾಡಿದಳೆಂದು ತಿಳಿದುಬಂದಿದೆ. ಮೇಲಿನ

ದಾನವನ್ನು ಮರಣ ಹೊಂದಿದ ತನ್ನ ಮಗಳ ಏಳಿಗೆಗಾಗಿ ಆ ಬಸದಿಗೆ ನೀಡಲಾಯಿತು.[63] ಭಟ್ಕಳದ ಬಳಿಯ ಅಂಬಾಲ ಕಟ್ಟೆಯ ಕ್ರಿ.ಶ. 1530ರ ಒಂದು ಶಾಸನವು ವೀರಂಬಳು ಮೇಲೆ ಹೇಳಿರುವ ಬಸದಿಯಲ್ಲಿ ಇಪ್ಪತ್ನಾಲ್ಕು ಕಂಚಿನ ತೀರ್ಥಂಕರರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದಳು.[64]

ಹಲವು ಸಂದರ್ಭಗಳಲ್ಲಿ ಸ್ತ್ರೀಯರೂ ಮಠಗಳ ನಿರ್ಮಾಣದಲ್ಲಿ ಬಹಳ ಆಸಕ್ತಿಯನ್ನು ತೋರಿಸಿದರು. ಹಾಗೂ ಇದಕ್ಕಾಗಿ ನಾಯಕರು ಉದಾರವಾದ ಧನಸಹಾಯವನ್ನು ಮಾಡಿದರು. ಉದಾ: ಕ್ರಿ.ಶ.1641ರಲ್ಲಿ ಮಹಾಮತ್ತುವಿನ ಮೇಲ್ವಿಚಾರಣೆಯಲ್ಲಿ ದಕ್ಷಿಣ ಕನ್ನಡದ ಸೋಮೇಶ್ವರದ ಬಳಿಯಲ್ಲಿ ಸಿದ್ದಮ್ಮನ ಹೆಸರಿನಲ್ಲಿ ಒಂದು ಮಠವನ್ನು ಕಟ್ಟಲಾಯಿತು.[65] ಗೋಕರ್ಣವು ಶೈವ ಅಧ್ಯಯನದ ಶ್ರೇಷ್ಠ ಕೇಂದ್ರವಾಗಿತ್ತು. ಕ್ರಿ.ಶ.1526ರ ಮಿದ್ಜನ್‌ನ ಒಂದು ಶಾಸನವು ಮಹಾಲಪ್ಪ ಸೇನಬೋವನೆಂಬುವನು ಗೇರುಸೊಪ್ಪೆರಾಣಿಯಿಂದ (1523-29) ಒಂದು ತುಂಡು ಜಮೀನನ್ನು ಕೊಂಡುಕೊಂಡು ಮಹಾಬಲೇಶ್ವರ ಮತ್ತು ಇತರೆ ಗೋಕರ್ಣದ ದೇವಾಲಯಗಳಲ್ಲಿ ಶಾಸ್ತ್ರಗಳ ಅಧ್ಯಯನ ಹಾಗೂ ಧಾರ್ಮಿಕ ಆಚರಣೆಗಳಿಗಾಗಿ ಕೊಡುಗೆಯಾಗಿ ನೀಡಿದನೆಂದು ತಿಳಿಸುತ್ತದೆ.[66] ಸಂಗೀತಪುರದ ರಾಣಿಯಾದ ಚೆನ್ನದೇವಿಯಮ್ಮಳು (ಕ್ರಿ.ಶ. 1541-1551) ಮಹಾಬಲೇಶ್ವರ ದೇವರಿಗೆ ಮೂರು ಗದ್ಯಾಣಗಳನ್ನು ದಾನ ಮಾಡಿದಳು. ಇದರ ಜೊತೆಗೆ ಈ ಹಣವನ್ನು ದೇವಾಲಯದಲ್ಲಿ ಧರ್ಮವನ್ನು ಕಾಪಾಡಿಕೊಂಡು ಹೋಗಲು ಬಳಸಬೇಕೆಂದು ರಾಣಿಯು ಸೂಚನೆಯನ್ನು ನೀಡಿದಳು.[67] ಸಂಗೀತಪುರದ ನಂತರದ ರಾಣಿಯಾದ ಚೆನ್ನಭೈರ ದೇವಿಯು ಮೇಲಿನ ದಾನವನ್ನು ನವೀಕರಿಸಿದಳು.[68] ಕೃಷ್ಣದೇವರಾಯನು ಅನುಸರಿಸಿದ ಧಾರ್ಮಿಕ ಸಹಿಷ್ಣುತೆಯ ನೀತಿಯನ್ನು ರಾಬರ್ಟ್ ಸೀವೆಲ್‌ನು ಪೂಜ್ಯ ಭಾವನೆಯಿಂದ ನೋಡಿದ್ದಾನೆ. ಸದಾಶಿವರಾಯ ಹಾಗೂ ರಾಮರಾಯರು ಮುಸ್ಲಿಮರು ಮಸೀದಿಗಳನ್ನು ಕಟ್ಟಿ ತಮ್ಮ ಧರ್ಮದ ತತ್ತ್ವಗಳು ಹಾಗೂ ಆಚರಣೆಗಳನ್ನು ಅನುಸರಿಸಲು ಅವಕಾಶಮಾಡಿಕೊಟ್ಟನು. ರಾಮರಾಯನು ತನ್ನ ಸಿಂಹಾಸನದ ಮುಂದೆ ಕುರಾನ್ ಅನ್ನೂ ಇಟ್ಟಿದ್ದನು.ಈ ಸಾಮ್ರಾಜ್ಯದ ಹಲವಾರು ಸಾಮ್ರಾಟರು ಮುಸ್ಲಿಮರ ದರ್ಗಗಳಿಗೆ ದಾನವನ್ನು ನೀಡಿದರು.

ಅರವೀಡು ವಂಶಸ್ಥರೂ ಅವರ ಧಾರ್ಮಿಕ ಸಹಿಷ್ಣುತೆಗೆ ಪ್ರಸಿದ್ಧಿಯನ್ನು ಹೊಂದಿದ್ದರು. ಎರಡನೇ ವೆಂಕಟನ ಆಸ್ಥಾನಕ್ಕೆ ಭೇಟಿ ನೀಡಿದ ಕ್ರಿಶ್ಚಿಯನ್ ಪಾದ್ರಿಗಳು ರಾಜನು ತೋರಿದ ಗೌರವಕ್ಕೆ ಬೆರಗಾದರೂ ಅವರು ಯಾವ ಲೆಕ್ಕಾಚಾರಕ್ಕೆ ಬಂದಿದ್ದರೆಂದರೆ ರಾಜನೂ ಕೂಡ ಕ್ರಿಶ್ಚಿಯನ್ ಮತಕ್ಕೆ ಮತಾಂತರವನ್ನು ಹೊಂದುತ್ತಾನೆ ಎಂಬ ಹಗಲುಗನಸನ್ನು ಕಂಡಿದ್ದರು. ಈ ರೀತಿಯಾಗಿ ವಿಜಯನಗರ ಸಾಮ್ರಾಟರು ಎಲ್ಲಾ ಧರ್ಮಗಳನ್ನೂ ಸಮನಾದ ಗೌರವದಿಂದ ಕಾಣುತ್ತಿದ್ದರು ಹಾಗೂ ಅವರ ಸಾಮ್ರಾಜ್ಯದಲ್ಲಿ ಹಲವಾರು ಧರ್ಮ ಹಾಗೂ ವೇದಾಂತ ಶಾಸ್ತ್ರಗಳನ್ನು ಪೋಷಿಸಿದರು. ಎರಡನೇ ದೇವರಾಯನು ತನ್ನ ಸಿಂಹಾಸನದ ಮುಂದೆ ಕುರಾನ್ ಗ್ರಂಥವನ್ನು ಇಟ್ಟಿದ್ದನು. ಇದರಿಂದ ಅವರು ಆ ಗ್ರಂಥಕ್ಕೆ ಬಾಗಿ ನಮಸ್ಕರಿಸುವುದಲ್ಲದೆ

ಅವನಿಗೂ ಗೌರವವನ್ನು ವ್ಯಕ್ತಪಡಿಸುತ್ತಿದ್ದರು. ತನ್ನ ರಾಜಧಾನಿಯಲ್ಲಿ ಮುಸ್ಲಿಂ ಬಾಂಧವರಿಗಾಗಿ ಒಂದು ಮಸೀದಿಯನ್ನೂ ಕಟ್ಟಿಸಿದನು.

ಕೃಷ್ಣದೇವರಾಯನು ಒಬ್ಬ ವೈಷ್ಣವನಾದರೂ ಹಂಪೆಯ ವಿರೂಪಾಕ್ಷ ದೇವಾಲಯವನ್ನು ದುರಸ್ತಿಗೊಳಿಸಿದನು ಹಾಗೂ ಗೋಪುರವನ್ನು ಕಟ್ಟಿಸಿದನು. ಅನೇಕ ಶಿವದೇವಾಲಯಗಳಿಗೂ ಉದಾರವಾದ ದಾನವನ್ನು ನೀಡಿದನು. ಪ್ರತಿಯೊಬ್ಬ ವ್ಯಕ್ತಿಯೂ ಅವನವನ ಧರ್ಮವನ್ನು ಅನುಸರಿಸಿ ಜೀವನವನ್ನು ಸಾಗಿಸಬಹುದಿತ್ತು. ಈ ವಿಷಯದಲ್ಲಿ ಯಾವುದೇ ರೀತಿಯಾದ ಹಾಗೂ ಯಾವುದೇ ವಿಧವಾದ ಒತ್ತಾಯವಿರಲಿಲ್ಲ. ಕ್ರಿಶ್ಚಿಯನ್, ಯಹೂದಿ ಹಾಗೂ ಹಿಂದೂಗಳ ಮಧ್ಯೆ ಯಾವುದೇ ಅಂತರವಿರಲಿಲ್ಲ. ಶೈವಧರ್ಮ, ವೀರಶೈವಧರ್ಮ, ವಿಶಿಷ್ಠಾದ್ವೈತತತ್ವ, ದ್ವೈತಸಿದ್ಧಾಂತಗಳು ಈ ಕಾಲದಲ್ಲಿ ಹುಲುಸಾಗಿ ಬೆಳೆದವು.

ಈ ರೀತಿಯಾಗಿ ಹಲವಾರು ವರ್ಗಗಳ ಸ್ತ್ರೀಯರು ದೇವಾಲಯಗಳು, ಛತ್ರಗಳು ಅಥವಾ ಸಾರ್ವಜನಿಕ ಹಿತಾಸಕ್ತಿಯ ಇತರ ಕೆಲಸಕಾರ್ಯಗಳು ಮತ್ತು ಬ್ರಾಹ್ಮಣರಿಗೆ ದಾನವನ್ನು ನೀಡಿದರು. ಮೇಲಿನ ನಿದರ್ಶನಗಳಿಂದ ಎಲ್ಲಾ ವರ್ಗಗಳ ಮಹಿಳೆಯರೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಧಾರ್ಮಿಕ ಕಾರ್ಯಗಳಿಗಾಗಿ ಉದಾರವಾದ ದಾನವನ್ನು ನೀಡಿದರು ಎಂದು ಹೇಳಬಹುದು. ಈ ಕಾಲದ ಸ್ತ್ರೀಯರು ಬಹಳ ಸಂಪ್ರದಾಯವಂತರೂ ಆಗಿದ್ದರು. ಈ ಕಾಲದ ಧಾರ್ಮಿಕ ಕ್ಷೇತ್ರದಲ್ಲಿ ಸ್ತ್ರೀಯರು ಬಹಳ ಪ್ರಭಾವಶಾಲಿಯಾದ ಪಾತ್ರವನ್ನು ವಹಿಸಿದ್ದರು. ಶ್ರೀಮಂತ ಸ್ತ್ರೀಯರು, ರಾಣಿಯರು, ಸಾಮಾನ್ಯಸ್ತ್ರೀಯರು, ದೇವಾಲಯದ ನರ್ತಕಿಯರು ಹಾಗೂ ಸ್ತ್ರೀ ಸಂಗೀತಗಾರರು ದೇವಾಲಯದ ಸೇವೆ ಮಾಡುತ್ತಿದ್ದರು. ಧರ್ಮವು ಮಹಿಳೆಯರ ಜೀವನದ ಎಲ್ಲಾ ಅಂಗಗಳಲ್ಲೂ ಪ್ರಭಾವವನ್ನು ಬೀರಿತು.

5. ದೇವದಾಸಿ ಪದ್ಧತಿ:

ಇಂದು ಮಧ್ಯಕಾಲೀನ ಯುಗದ ಆರಂಭದ ಸಂಸ್ಥೆ, ದಕ್ಷಿಣ ಭಾರತದಲ್ಲಿನ ಬಹುಪಾಲು ಪ್ರಧಾನ ಬ್ರಾಹ್ಮಣ ದೇವಾಲಯಗಳಲ್ಲಿ ದೇವದಾಸಿಯರು ಅದರಲ್ಲೂ ವಿಶೇಷವಾಗಿ ಶೈವ ದೇವಾಲಯಗಳಲ್ಲಿ ಒಂದು ಸಾಮಾನ್ಯ ಲಕ್ಷಣವಾಗಿದ್ದಿತು. ದೇವದಾಸಿ ಪದ್ಧತಿಯು ವಿಜಯನಗರ ಕಾಲದಲ್ಲಿ ಹೆಚ್ಚು ಪ್ರಖ್ಯಾತಿಯನ್ನು ಪಡೆಯಿತು. ದೇವದಾಸಿಯೊಬ್ಬಳು ಅವಿವಾಹಿತ ಹಿಂದೂ ಕನ್ಯೆ. ಇವಳು ಹಿಂದೂ ದೇವಾಲಯದ ಅಥವಾ ಹೊರಗಿನ ಒಂದು ಮೂರ್ತಿಯೊಂದಿಗೆ ಹುಸಿ ಮದುವೆಯನ್ನು ಮಾಡಿಕೊಂಡಿದ್ದಾಳೆ. ಈ ವಿವಾಹದ ಆಚರಣೆಯು ದೇವರಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುವ ಹೆಸರಿನಿಂದ ಕೂಡಿದೆ. ದೇವಾಲಯಕ್ಕೆ ಹುಡುಗಿಯರು ಅರ್ಪಿಸಿಕೊಳ್ಳುವ ಪದ್ಧತಿಯು ಬಹಳ ಹಿಂದಿನದು ಹಾಗೂ ಹತ್ತನೇ ಶತಮಾನದ ಹೊತ್ತಿಗೆ ಇದೊಂದು ಕಾನೂನು ಬದ್ಧವಾದ ಪದ್ಧತಿಯಾಯಿತು. ಪ್ರೊಫೆಸರ್ ಕುಂದನ್‌ಗರ್ ಪ್ರಕಾರ ದೇವದಾಸಿ ಪದ್ಧತಿಯು ಉಗಮಗೊಳ್ಳಲು ಕಾರಣವೇನೆಂದರೆ ವಿದ್ಯಾವಂತ ಹಾಗೂ ಶ್ರೀಮಂತ ಕುಲದವರು ಕೇವಲ ದೇವಾಲಯದ ಕರ್ತವ್ಯವನ್ನು ಮಾತ್ರ ನಿರ್ವಹಿಸುತ್ತಿದ್ದರು ಹಾಗೂ ಕೆಳಮಟ್ಟದ ಕರ್ತವ್ಯವನ್ನು ನಿರ್ವಹಿಸುತ್ತಿರಲಿಲ್ಲ. ಆದ್ದರಿಂದ ಕಸಗುಡಿಸುವುದು ಹಾಗೂ ತೊಳೆಯುವ ಕೆಲಸವನ್ನು ದೇವಾಲಯದ ಹುಡುಗಿಯರಿಗೆ ವಹಿಸಲಾಗಿತ್ತು.

ದೇವದಾಸಿಯರನ್ನು ಬಹಳಷ್ಟು ಸಂಖ್ಯೆಯಲ್ಲಿ ನೇಮಕ ಮಾಡುವುದು ದೇವಾಲಯಕ್ಕೆ ಒಂದು ದೊಡ್ಡ ಗೌರವವಾಗಿತ್ತು. ದೇವದಾಸಿಯರನ್ನು ಶಾಶ್ವತವಾದ ಹಾಗೂ ವಂಶದ ಆಧಾರದ ಮೇಲೆ ನೇಮಕ ಮಾಡಲಾಗುತ್ತಿತ್ತು. ಒಮ್ಮೆ ನೇಮಕವಾದ ನಂತರ ಅವರನ್ನು ಯಾವುದೇ ಕಾರಣದಿಂದಲೂ ದೇವಾಲಯದ ಅಧಿಕಾರಿಗಳು ತೆಗೆಯುವಂತಿಲ್ಲ ಅಥವಾ ಅವರಿಗೆ ತೊಂದರೆ ಕೊಡುವಂತಿರಲಿಲ್ಲ ಹಾಗೂ ಅವರ ಸೇವೆಗೆ ಪ್ರತಿಯಾಗಿ ಅವರಿಗೆ ಶಾಶ್ವತವಾಗಿ ಭೂಮಿಯನ್ನು ನೀಡಲಾಗುತ್ತಿತ್ತು. ಇದು ಅವಳ ಕರ್ತವ್ಯ ಹಾಗೂ ವಿಶೇಷ ಹಕ್ಕುಗಳೆರಡೂ ಆಗಿದ್ದವು. ದೇವದಾಸಿಯೊಬ್ಬಳು ಮರಣ ಹೊಂದಿದಲ್ಲಿ ಅಥವಾ ತನ್ನ ಸೇವೆಯಿಂದ ವಿಶ್ರಾಂತಿಯನ್ನು ಹೊಂದಿದಲ್ಲಿ ಅವಳ ಸ್ಥಾನಕ್ಕೆ ಅವಳ ಮಗಳು ಅಥವಾ ಅವಳ ಹತ್ತಿರ ಸಂಬಂಧಿಯೊಬ್ಬಳನ್ನು ನೇಮಕ ಮಾಡಲಾಗುತ್ತಿತ್ತು ಹಾಗೂ ಈ ಉದ್ದೇಶಕ್ಕಾಗಿ ತೆಗೆದಿಟ್ಟ ಭತ್ಯೆಯನ್ನು ಹೊಸದಾಗಿ ನೇಮಕವಾಗಲ್ಪಟ್ಟವಳು ಅನುಭವಿಸುತ್ತಿದ್ದಳು.ದೇವದಾಸಿ ಪದ್ಧತಿಯನ್ನು ಉತ್ತೇಜಿಸಿದ ಎರಡನೇ ಬೆಳವಣಿಗೆಯೆಂದರೆ ಬಸವಿಪದ್ಧತಿ,[69] ಉದಾಹರಣೆಗೆ ಕುಟುಂಬವೊಂದರಲ್ಲಿ ಕೆಲವು ಮಹಿಳೆಯರು ಹೆಣ್ಣು ಮಕ್ಕಳ ಮೂಲಕವಾಗಿ ಈ ವಂಶಪಾರಂಪರ್ಯ ಪದ್ಧತಿಗೆ ಬರುತ್ತಿದ್ದರು. ವಂಶಪಾರಂಪರ್ಯ ಸ್ತ್ರೀಯರ ಸಾಲಿನಲ್ಲಿರುತ್ತಿದ್ದ ಹೆಣ್ಣು ಮಗಳನ್ನು ದೇವಾಲಯಕ್ಕೆ ಬಸವಿಯೆಂದು ಬಿಡಲಾಗುತ್ತಿತ್ತು. ಅವಳನ್ನು ಬಸವಿಯಾಗಿ ಬಿಟ್ಟ ನಂತರ ಅವಳು ತನ್ನ ಪೋಷಕರ ಆಸ್ತಿಯ ಒಡತಿಯಾಗುತ್ತಿದ್ದಳು ಹಾಗೂ ಗಂಡುಮಗನಂತೆ ಅವರ ಉತ್ತರಕ್ರಿಯಾಧಿಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ್ದಳು. ಅವಳಿಗೆ ಇಷ್ಟವಾದ ವ್ಯಕ್ತಿಯೊಬ್ಬನನ್ನು ಅವಳು ಆರಿಸಿಕೊಳ್ಳಬಹುದಿತ್ತು. ಅವನು ಅವಳಿಗೆ ಸಮನಾದ ಅಥವಾ ಮೇಲ್ವರ್ಗದ ಜಾತಿಯವನಾಗಿರಬಹುದಾಗಿತ್ತು. ಯಾವುದೇ ಮಹಿಳೆಯೊಬ್ಬಳಿಗೆ ಕೇವಲ ಒಬ್ಬಳೇ ಹೆಣ್ಣು ಮಗಳಿದ್ದಾಗ ಆ ಹೆಣ್ಣುಮಗಳು ಬಸವಿಯಾಗುತ್ತಿದ್ದಳು.[70]

ದೇವದಾಸಿ ಪದ್ಧತಿಯ ಇತಿಹಾಸವು 8ನೇ ಶತಮಾನದ ಅಂತ್ಯಭಾಗಕ್ಕೆ ಹೋಗುತ್ತದೆ. ಕ್ರಿ.ಶ. 800ನೇ ವರ್ಷದಲ್ಲಿ ಮಾಯಿಲೆ ಗ್ರಾಮದ ಅರಿದಾರಿಪಾಳೆಯಮ್ಮನೆಂಬುವಳು ಸ್ಥಳೀಯ ದೇವಾಲಯವೊಂದಕ್ಕೆ ಒಬ್ಬ ಕನ್ಯೆಯೊಂದಿಗೆ 8 ಮಟ್ಟರ್ ಭೂಮಿ 1,000 ಆಕಳು ಹಾಗೂ ದೇವತೆಯ ಉಪಯೋಗಕ್ಕಾಗಿ ಒಂದು ತೋಟ್ಟಿಲನ್ನು ದಾನ[71] ಮಾಡಿದಳು. ಈ ಕಾಲದಲ್ಲಿ ದೇವದಾಸಿ ಪದ್ಧತಿಯು ಬಹಳ ಪ್ರಸಿದ್ಧಿಯಾದ ಪದ್ಧತಿಯಾಗಿತ್ತು. ದೇವಾಲಯಕ್ಕೆ ಕನ್ಯೆಯರನ್ನು ಒದಗಿಸಲು ದೇವದಾಸಿಯರು ಮೂಲವಾಗಿದ್ದರು.

ಈಗಿನ ವಿದ್ವಾಂಸರಿಗೆ ದೇವಾಲಯದ ಹುಡುಗಿಯರು ದೇವದಾಸಿಯರೆಂದು ಹೆಸರುವಾಸಿಯಾಗಿದ್ದಾರೆ. ಈಗಿನ ಸಾಮಾನ್ಯ ಅರ್ಥದಲ್ಲಿ ದೇವದಾಸಿಯರೆಂದರೆ (ಎ) ದೇವಾಲಯ ಅಥವಾ ದೇವರಸೇವೆಯಲ್ಲಿರುವ ಹೆಣ್ಣು (ಬಿ) 'ವಾರಾಂಗನೆ' (ದೇವಾಲಯದಲ್ಲಿ ನರ್ತಕಿಯಾಗಿ ನೇಮಕವಾಗಿರುವವಳು)[72] ದೇವದಾಸಿ ಎಂಬುದು ಸಂಸ್ಕೃತ ಸಮೂಹ ಪದವಾಗಿದ್ದು 'ದೇವ' ಎಂದರೆ ದೇವರು ಅಥವಾ ದೇವತೆಯಾಗಿದ್ದು 'ದಾಸಿ' ಎಂಬುದು ಸೇವಕಿ ಎಂಬ ಅರ್ಥವನ್ನು ನೀಡುತ್ತದೆ. ಶಬ್ದ ಶಾಸ್ತ್ರದ ಪ್ರಕಾರ ದೇವ ಎಂಬ ಪದವು ಎಟಿಮೊನ್ ಡಿ (ಅಂದರೆ ಕಾಪಾಡು) ಎಂಬ ಪದದಿಂದ ಬಂದಿದೆ.

ನಂತರ ದೇವ್ ಎಂಬ ರೂಪವನ್ನು ತಾಳುತ್ತದೆ. (ಆಟವಾಡು, ಹೊಳೆ, ಕ್ರೀಡೆಯಾಡು) ದಾಸಿ ಈ ಪದವು (ಕೊಡು, ನೀಡು) ಎಂಬ ಮೂಲದಿಂದ ಬರುತ್ತದೆ. ಇದು ಇದೇ ರೀತಿಯಾದ ಹಲವಾರು ಅಸಂಖ್ಯ ಪದಗಳಿಗೆ ತದ್ರೂಪವಾಗಿದೆ.[73] ಭವಿಷ್ಯಪುರಾಣದ ಪ್ರಕಾರ ಯಾವ ವ್ಯಕ್ತಿ ಸೂರ್ಯದೇವಾಲಯಕ್ಕೆ ಕನ್ಯೆಯರನ್ನು ಅರ್ಪಿಸುವನೋ ಅವನು ಸೂರ್ಯಲೋಕದಲ್ಲಿ ಸ್ಥಾನ ಪಡೆಯುವನು.[74] ಮತ್ಸ್ಯಪುರಾಣದಲ್ಲಿ ದೇವಾಲಯಕ್ಕೆ ನೀಡಿದ ಹುಡುಗಿಯರು (ವೇಶ್ಯಯರು) ದೇವಸ್ಥಾನದಲ್ಲಿ ಸೇವೆ ಸಲ್ಲಿಸುವುದರ ಮೂಲಕ ಅವರೇ ವಿಷ್ಣುಲೋಕದಲ್ಲಿ ಸ್ಥಾನವನ್ನು ಹೊಂದಬಹುದಾಗಿತ್ತು.[75]

ದೇವದಾಸಿಯಾಗಿ ಮಹಿಳೆಯರ ಸ್ಥಾನಮಾನವು ಬಹಳ ಗೌರವಯುತವಾಗಿತ್ತು. ದೇವದಾಸಿಯೆಂದರೆ ದೇವರ ಸೇವಕಿ ಅಥವಾ ಗುಲಾಮಳು. ಅಂದರೆ ದೇವ ಸೇವೆಗಾಗಿ ಮೀಸಲಾಗಿರುವವಳು. ಇವರು ಸಂಗೀತ ಹಾಗೂ ನೃತ್ಯದ ಮೂಲಕ ದೇವರಿಗೆ ಸೇವೆಯನ್ನು ಸಲ್ಲಿಸುತ್ತ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ದೇವದಾಸಿ ಪದ್ಧತಿಯು ಒಂದು ಸಾಮಾಜಿಕ ಧಾರ್ಮಿಕ ಸಂಸ್ಥೆಯಾಗಿದ್ದು, ಇದರಲ್ಲಿ ಧರ್ಮವು ದೈವೀ ಅನುಮೋದನೆಯನ್ನು ನೀಡಲು ಲೈಂಗಿಕ ಅನೈತಿಕತೆಯ ಜೊತೆ ಹೊಂಚುಹಾಕುತ್ತದೆ.[76] ಸಂಸ್ಥೆಯನ್ನು ದೇವಾಲಯದ ವೇಶ್ಯಾವಾಟಿಕೆ ಎಂದು ಕರೆಯಲಾಗುತ್ತಿತ್ತು. ದೇವಾಲಯಗಳಿಗೆ ಹೆಣ್ಣುಮಕ್ಕಳನ್ನು ಅರ್ಪಿಸುತ್ತಿದ್ದ ಪದ್ಧತಿಯ ಮೂಲಕ ಇದು ಉಗಮಗೊಂಡಿತು. ಈ ರೀತಿಯಾದ ಹುಡುಗಿಯರಿಗೆ ದೇವಾಲಯವನ್ನು ಸ್ವಚ್ಛಗೊಳಿಸುವುದು, ದೀಪಗಳನ್ನು ಹಚ್ಚುವುದು, ದೇವಾಲಯಗಳನ್ನು ಅಲಂಕರಿಸುವುದು ಹಾಗೂ ಹಲವಾರು ಧಾರ್ಮಿಕ ಆಚರಣೆಯ ಸಂದರ್ಭಗಳಲ್ಲಿ ಮತ್ತು ಹಬ್ಬದ ದಿನಗಳಂದು ಹಾಡುವುದು ಹಾಗೂ ನರ್ತಿಸುವುದು ಅವರ ಕರ್ತವ್ಯವಾಗಿತ್ತು.

ದೇವದಾಸಿಯರು ದೇವಾಲಯದ ಒಳಾವರಣದಲ್ಲಿ ವಾಸಿಸುವುದಿಲ್ಲ. ಬದಲಾಗಿ ಅವರು ಮುಂಜಾನೆ ಹಾಗೂ ಸಂಜೆಯಹೊತ್ತು ಹಾಡುವುದು ಹಾಗೂ ನರ್ತಿಸುವುದಕ್ಕಾಗಿ ಹಾಗೂ ದೇವರ ಮೂರ್ತಿಗಳ ಮೆರವಣಿಗೆಯಲ್ಲಿ ಹಿಂಬಾಲಿಸಲು ಮಾತ್ರ ಬರುತ್ತಿದ್ದರು. ಮಿಕ್ಕ ಸಮಯದಲ್ಲಿ ಅವರು ತಮ್ಮ ತಮ್ಮ ಮನೆಗಳಲ್ಲಿಯೇ ವಾಸಿಸುತ್ತಿದ್ದರು. ಅವರ ಮನೆಗಳು ದೇವಾಲಯಗಳಿಗಿಂತ ಹತ್ತಿರದ ದೂರದಲ್ಲಿರುತ್ತಿದ್ದವು. ಒಟ್ಟು ದೇವದಾಸಿಯರಲ್ಲಿ ಒಂದು ಸಣ್ಣಪ್ರಮಾಣದ ದೇವದಾಸಿಯರು ದೇವಾಲಯಗಳಲ್ಲಿ ಸೇವೆಸಲ್ಲಿಸುತ್ತಾರೆ. ಇದಕ್ಕಾಗಿ ಅವರು ಹಣದರೂಪದ ಭತ್ಯೆಯನ್ನು ಪಡೆಯುತ್ತಾರೆ ಅಥವಾ ಅವರ ಹೆಸರಿನ ಸಾಗುವಳಿ ಭೂಮಿಯನ್ನು ಪಡೆಯುತ್ತಾರೆ.

ಎಲ್ಲಾ ದೇವದಾಸಿಯರೂ ಅವಿವಾಹಿತರು ಅಕ್ಷರಸ್ಥರು ಹಾಗೂ ಸಂಗೀತ ಮತ್ತು ನೃತ್ಯದಲ್ಲಿ ಪರಿಣಿತಿಯನ್ನು ಸಾಧಿಸಿರುವುದು ಹಾಗೂ ಇವರಲ್ಲಿನ ಹೆಚ್ಚು ಪಾಲು ದೇವದಾಸಿಯರು ವೇಶ್ಯಾವಾಟಿಕೆಯ ಮೂಲಕ ತಮ್ಮ ಜೀವನ ನಿರ್ವಹಣೆಯನ್ನು ಮಾಡುತ್ತಾರೆ. ಇದನ್ನು ಹಿಂದೂಸಮಾಜವು ಅನುಮೋದಿಸಿದ್ದುನಡೆಸಿಕೊಂಡುಬಂದಿದೆ. ವೇಶ್ಯಾವಾಟಿಕೆಯನ್ನು ಅವರು ಕಾನೂನುಬದ್ಧವಾದ ಹಾಗೂ ಗೌರವಯುತವಾದ ವೃತ್ತಿ ಎಂದು ಪರಿಗಣಿಸುತ್ತಾರೆ. ದೇವದಾಸಿಯರಲ್ಲಿ ಅತೀ ಕಡಿಮೆ ಸಂಖ್ಯೆಯಲ್ಲಿ ಮೇಲ್ವರ್ಗದ ಹಿಂದೂಗಳ ಜೊತೆ ಶಾಶ್ವತ ವಿವಾಹಸಂಬಂಧವನ್ನು ಬೆಳೆಸುತ್ತಾರೆ ಹಾಗೂ ತಮ್ಮ ಜೀವಿತದ ಕೊನೆಯ ಅವಧಿಯವರೆಗೂ ಅವರಿಗೆ ನಿಷ್ಠರಾಗಿ, ನಂಬಿಕಸ್ತರಾಗಿ ಜೀವಿಸುತ್ತಾರೆ.

ದೇವದಾಸಿಯರು ಬಹಳ ಪ್ರತಿಭಾವಂತರೂ, ಪ್ರಸಿದ್ಧರೂ ಆದ್ದರಿಂದ ಕೆಳವರ್ಗ ಹಾಗೂ ಶೋಷಿತ ವರ್ಗದವರ ಜೊತೆ ಸಂಬಂಧವನ್ನು ಹೊಂದುವ ಇರಾದೆಯನ್ನು ತೋರುತ್ತಿರಲಿಲ್ಲ. ಆದ್ದರಿಂದ ಇವರು ತಮ್ಮ ಪ್ರಿಯತಮನನ್ನು ಬ್ರಾಹ್ಮಣರು ಹಾಗೂ ಇತರೆ ಉನ್ನತ ವರ್ಗದವರಿಂದ ಆಯ್ಕೆ ಮಾಡುತ್ತಿದ್ದರು. ಈ ಸ್ತ್ರೀಯರು ಕೆಟ್ಟ ಪದ್ಧತಿಯೊಂದರಿಂದಾಗಿ ಒಂದು ಅಸ್ತವ್ಯಸ್ತ ಜೀವನವನ್ನು ಸಾಗಿಸುವ ಹಾಗಾಯಿತು. ಹಾಗೂ ತಮ್ಮದೇ ಆದ ತಾವು ಇಚ್ಛಿಸುವಂತೆ ಜೀವನನಡೆಸುವುದು ಕನಸೇ ಸರಿಯಾಗಿತ್ತು. ಉದಾ: ಒಬ್ಬ ದೇವದಾಸಿಗೆ ನಾಲ್ಕು ಹೆಣ್ಣು ಮಕ್ಕಳಿದ್ದಲ್ಲಿ ಅವರಲ್ಲಿ ಒಬ್ಬಳನ್ನು ಅವಳು ದೇವಾಲಯಕ್ಕೆ ಅರ್ಪಿಸಬೇಕು ಹಾಗೂ ಮಿಕ್ಕ ಮೂವರು ಹೆಣ್ಣುಮಕ್ಕಳನ್ನು ಅದೇ ಜಾತಿಯ ಪುರುಷರೊಂದಿಗೆ ವಿವಾಹ ಮಾಡಬೇಕು. ಕೆಲವೊಮ್ಮೆ ಬೇರೆಯ ಜಾತಿಯ ಪುರುಷರೊಂದಿಗೂ ವಿವಾಹ ಮಾಡಬೇಕಿತ್ತು. ವಿವಾಹವಾದ ಕನ್ಯೆಯರು ಯಾವುದೇರೀತಿಯ ಅಸಮಾನ್ಯ ಪ್ರವೃತ್ತಿಯನ್ನು ತೋರಿಸದಿದ್ದಲ್ಲಿ ಹಾಗೂ ಅವರು ಸುಂದರವಾಗಿ, ಸ್ವಚ್ಛವಾಗಿ, ಪವಿತ್ರತೆಯಾಗಿ ಹಾಗೂ ಶೀಲವಂತಳೂ ಆಗಿದ್ದಲ್ಲಿ ಅದರಂತೆ ದೇವಾಲಯಕ್ಕೆ ಅರ್ಪಿಸಿರುವ ಕನ್ಯೆಯೋರ್ವಳು ಮನೆಯಲ್ಲಿಯೇ ವೇಶ್ಯಾವೃತ್ತಿಯ ಜೀವನವನ್ನು ನಡೆಸುತ್ತಿರಬಹುದು. ಏಕೆಂದರೆ ದೇವದಾಸಿಯಾಗಿ ಮಾರ್ಪಡುವ ಹುಡುಗಿಯನ್ನು ಯಾವ ರೀತಿಯಾದ ಅನಾರೋಗ್ಯಕರ ಪ್ರವೃತ್ತಿಯಲ್ಲಿ ಬೆಳೆಸಲಾಗುತ್ತದೆಂದರೆ ಅವಳು ದೇವದಾಸಿ ತ್ಯಾಗದ ಆಚರಣೆಯಲ್ಲಿ ಒಮ್ಮೆ ಪಾಲ್ಗೊಂಡಳೆಂದರೆ ಅವಳು ದೇವರ ಸ್ತ್ರೀಯಾಗುತ್ತಾಳೆ. ಇದರಂತೆ ಅವಳು ವಿವಾಹವಾಗುವಂತಿಲ್ಲ. ಆದರೆ ಅವಳು ಸ್ವಚ್ಛಂದವಾದ ಅಸ್ತವ್ಯಸ್ತವಾದ ಜೀವನವನ್ನು ನಡೆಸಬಹುದು ಹಾಗೂ ಇದಕ್ಕಾಗಿ ಇವಳನ್ನು ಈ ಪ್ರಪಂಚದಲ್ಲಾಗಲಿ ಅಥವಾ ಮುಂದಿನ ಪ್ರಪಂಚದಲ್ಲಾಗಲೀ ಶಿಕ್ಷೆಗೆ ಗುರಿಪಡಿಸುವುದಿಲ್ಲ. ಈಗ ಅವಳು ತನ್ನ ಹಿಂದಿನ ಕರ್ಮದ ಫಲವಾಗಿ ಬಂದಿರುವುದರಿಂದ ಅದನ್ನು ಈಗಿನ ವೇಶ್ಯಾಜೀವನದ ಮುಖಾಂತರ ನಿವಾರಣೆಗೊಳಿಸಲು ಪ್ರಯತ್ನಿಸುತ್ತಾಳೆ. ಮತ್ತೊಂದೆಡೆಯಲ್ಲಿ ವಿವಾಹವಾಗುವ ಕನ್ಯೆಯರಿಗೆ ಅವರು ತಮ್ಮ ಗಂಡಂದಿರಿಗೆ ನಂಬಿಕಸ್ತರೂ ಹಾಗೂ ಪ್ರಾಮಾಣಿಕರಾಗಿದ್ದಲ್ಲಿ ಅವರು ಸ್ವರ್ಗವನ್ನು ತಲುಪುತ್ತಾರೆ ಎಂಬುದನ್ನು ಹೇಳಿಕೊಡಲಾಗುತ್ತದೆ.

ದೇವಾಲಯದ ಹುಡುಗಿಯರ ಕರ್ತವ್ಯಗಳೆಂದರೆ

ಅ) ಧಾರ್ಮಿಕ ಆಚರಣೆಗಳನ್ನು ಅರ್ಚಕರು ಹಾಗೂ ಧಾರ್ಮಿಕ ಕಾರ್ಯಕರ್ತರೊಂದಿಗೆ
ದೇವಾಲಯದ ಹುಡುಗಿಯರು ಮಾಡುತ್ತಿದ್ದರು.

ಆ) ಪರಿಮಳಯುಕ್ತ ನೀರಿನಿಂದ ದೇವರನ್ನು ಸ್ನಾನಮಾಡಿಸುವುದು, ಚೌರಿಗಳಿಂದ ದೇವರಿಗೆ ಗಾಳಿ ಬೀಸುವುದು, ರಥಯಾತ್ರೆಗಳಲ್ಲಿ ಬೆಳ್ಳಿಯದಂಡಗಳನ್ನು ಒಯ್ಯುವುದು ಹಾಗೂ ಇತರೆ ಧಾರ್ಮಿಕ ಕರ್ತವ್ಯಗಳನ್ನು ನಿಭಾಯಿಸುವುದು ದೇವಾಲಯದ ಹಲವು ಸ್ತಂಭಗಳು ಹಾಗೂ ಮಾಡಗಳ ಬಳಿ ನಿಲ್ಲುವುದು, ದೇವರ ಸೇವಕಿಯಾಗಿ ನಿಲ್ಲುವುದು ಮತ್ತು ಮುಂಜಾನೆಯ ಆಚರಣೆಗಳಲ್ಲಿ ಸ್ವಸ್ತಿ ಶ್ಲೋಕಗಳನ್ನು ಹಾಡುವುದು ಹಾಗೂ ನರ್ತಿಸುವುದು ಇವರ ಕರ್ತವ್ಯವಾಗಿದ್ದಿತು.

ದೇವಾಲಯದ ಗೋಡೆಗಳ ಮೇಲಿನ ನರ್ತಕಿಯರ ಚಿತ್ರಗಳ ಸಾಂಸ್ಕೃತಿಕ ಪ್ರತಿನಿಧಿತ್ವಕ್ಕೆ ದೇವಾಲಯದ ಹುಡುಗಿಯರು ಸ್ಫೂರ್ತಿಯಾದರು.[77] ದೇವಾಲಯದ ಗಾತ್ರದಲ್ಲಿ ವಿಸ್ತರಣೆಯಾದಂತೆ ಪೂಜಾವಿಧಿಗಳು ಹಾಗೂ ಆಚರಣೆಗಳೂ ಒಂದೇ ಸಮನಾಗಿ ಹೆಚ್ಚಾದವು. ಉದಾ: ನಾಟ್ಯಮಂಟಪ ಸಭಾಮಂಟಪಗಳ ಸೇರ್ಪಡೆಯನ್ನು ನೃತ್ಯ ಹಾಗೂ ಸಂಗೀತಗಳೊಂದಿಗೆ ಹೆಚ್ಚಾದ ಆಚರಣೆಗಳೊಂದಿಗೆ ಸರಿದೂಗಿಸಲಾಯಿತು.[78]

ದೇವದಾಸಿಯರು ದಿನನಿತ್ಯ ಒಂದು ನಿಗದಿತ ವೇಳೆಯಲ್ಲಿ ದೇವರ ಮುಂದೆ ನರ್ತಿಸುತ್ತಿದ್ದರು. ಇವರ ಸೇವೆಯು ದೇವರನ್ನು ಸಂತೃಪ್ತಿಗೊಳಿಸುವುದೆಂದು ನಂಬಲಾಗಿತ್ತು. ಆದ್ದರಿಂದಲೇ ಇವರನ್ನು ದೇವದಾಸಿಯರು ಎಂದು ಕರೆಯಲಾಗುತ್ತಿತ್ತು. ಈ ರೀತಿಯಾದ ಅವರ ಸೇವೆಯು ವಂಶಪಾರಂಪರ್ಯವಾಗಿತ್ತು. ದೇವದಾಸಿಯರು ದೇವಾಲಯದ ನಿಧಿಯಿಂದ ತಮ್ಮ ಭತ್ಯೆಯನ್ನು ಪಡೆಯುತ್ತಿದ್ದರು. ಉದಾ: ತೇಕಲ್‌ನ ಒಂದು ಶಾಸನದ ಪ್ರಕಾರ ಸೊಕ್ಕ ಪೆರುಮಳದಾಸರ್ ಎಂಬೊಬ್ಬ ಹಾಗೂ ತೇಕಲ್ ದೇವಾಲಯದ ಅಧಿಕಾರಿಗಳು ಇಬ್ಬರು ನರ್ತಕಿಯರಿಗೆ ತಿರುಪ್ಪಳನಾಡನ್ನು ಓದಿದ್ದಕ್ಕಾಗಿ ಸ್ವಲ್ಪ ಭೂಮಿಯನ್ನು ಕೊಟ್ಟರು. ನೃತ್ಯ ಹಾಗೂ ಸಂಗೀತಗಳೆರಡರಲ್ಲಿನ ಅವರ ಸಾಧನೆಯನ್ನು ಶ್ಲಾಘಿಸಿ ದೇವಾಲಯದ ಅಧಿಕಾರಿಗಳು ಹಾಗೂ ದಾಸರು ಅವರಿಗೆ ಹಲವಾರು ಕಾಣಿಕೆಗಳನ್ನು ನೀಡಿದರು.[79]

ನರ್ತಕಿಯರಲ್ಲಿ ಆಸ್ತಿಯು ಮೊದಲು ಸ್ತ್ರೀವಾಂಶಿಕವಾಗಿರುತ್ತದೆ ಹಾಗೂ ಕೆಲವು ಜಾತಿಗಳಲ್ಲಿ ಪುರುಷವಾಂಶಿಕವಾಗೂ ಇರುತ್ತದೆ. ಅವರಿಗೆ ಯಾವುದೇ ಮಕ್ಕಳಾಗದಿದ್ದ ಪಕ್ಷದಲ್ಲಿ ಅವರ ಆಸ್ತಿಯುಅವರು ಸೇರಿದ ನಿರ್ದಿಷ್ಟ ದೇವಾಲಯಕ್ಕೆ ಸೇರುತ್ತದೆ. ಹಿಂದೂ ಕುಲದವರು ಈ ನರ್ತಕಿಯರನ್ನು ಗೌರವಿಸುತ್ತಿದ್ದರು ಹಾಗೆಯೇ ಹೆಚ್ಚು ಗೌರವಾನ್ವಿತರ ಜೊತೆ ಕೂರಲು ಇವರಿಗೆ ಅವಕಾಶವಿತ್ತು. ನಮಗೆ ಲಭ್ಯವಿರುವ ಒಂದು ರೀತಿಯಾದ ಮಾಹಿತಿಗಳೆಂದರೆ, ವಿವಿಧ ವರ್ಗಗಳ ನರ್ತಕಿಯರಿಗೆ ನೀಡಿದ ಹಲವಾರು ರೀತಿಯ ಕೊಡುಗೆಗಳು ಹಾಗೂ ಉಂಬಳಿಗಳು. ಇವುಗಳು ಮುಖ್ಯವಾಗಿ ದೇವಾಲಯದ ಸಾಮಾಜಿಕ ಆರ್ಥಿಕ ರಚನೆಯ ಬಗ್ಗೆ ಮಾಹಿತಿಯನ್ನು ನೀಡುತ್ತವೆ ಹಾಗೂ ದೇವಾಲಯದಲ್ಲಿನ ಅಥವಾ ಹೊರಭಾಗದ ಈ ರೀತಿಯ ನರ್ತಕಿಯರ ಬಗ್ಗೆ ಯಾವುದೇ ನೇರ ಮಾಹಿತಿಯನ್ನು ನೀಡುವುದಿಲ್ಲ. ನರ್ತಕಿಯರು ಹಾಗೂ ಗಾಯಕಿಯರ ಪೋಷಣೆಗಾಗಿ ದಾನವನ್ನು ನೀಡಿದ ಸಂದರ್ಭದಲ್ಲಿ ಅವರನ್ನು ನಟ್ಟೂವನ್ ಜೊತೆ ಸೇರಿಸಲಾಗುತ್ತಿತ್ತು. ಏಕೆಂದರೆ ದೇವಾಲಯದ ಆಚರಣೆಗಳೊಂದಿಗೆ ಸಂಬಂಧ ಹೊಂದಿದ ಒಂದು ಅವಿಭಾಜ್ಯ ಭಾಗವಾಗಿದ್ದರು ಈ ನರ್ತಕಿಯರು.

ದೇವದಾಸಿಯರು ವಿಜಯನಗರದ ಅರಸರು ಹಾಗೂ ಬ್ರಾಹ್ಮಣರಿಂದ ಉದಾರವಾದ ದಾನವನ್ನು ಪಡೆಯುತ್ತಿದ್ದರು. ತಳಿರೂರಿನಲ್ಲಿರುವ ಬಹು ಹಿಂದಿನ ಮಧುಸೂಧನಪುರ ಅಗ್ರಹಾರದ ಬ್ರಾಹ್ಮಣರು ಎಲ್ಲರ ಸರ್ವ ಅಭಿಪ್ರಾಯದಂತೆ ಇಮ್ಮುವ್ವಗೌಡರಸು ಹಳ್ಳಿಯಲ್ಲಿ ಮಧುಸೂಧನ ದೇವರ ನರ್ತಕಿಯರ ಪೋಷಣೆಗಾಗಿ ಧನಸಹಾಯವನ್ನು ಮಾಡಿದರು. ಹಾಗೂ ಈ ಉದ್ದೇಶಕ್ಕಾಗಿ ಕ್ರಿ.ಶ.1369ರಲ್ಲಿ ದೇವಾಲಯವೊಂದನ್ನು ಕಟ್ಟಿಸಿದರು.[80] ತೇಕಲ್‌ನಲ್ಲಿರುವ ತೇಕಲ್‌ಬಳಿಯ ವರದರಾಜಸ್ವಾಮಿ ದೇವಾಲಯದ ದಕ್ಷಿಣಕ್ಕಿರುವ ಹುಲಿಬಂಡೆಯ ಮೇಲೆ ದೊರೆತಿರುವ ಎರಡು ಶಿಲಾಶಾಸನಗಳು ವಿವರಣೆ ನೀಡುವಂತೆ ದೇವಾಲಯದ ನರ್ತಕಿಯರಲ್ಲಿ ಒಬ್ಬ ದೇವದಾಸಿಗೆ ವಿಶೇಷವಾದ ಆದರಗಳನ್ನು ನೀಡಲಾಯಿತು. ಹಾಗೂ ಕ್ರಿ.ಶ.

1336ರಲ್ಲಿ ದೇವಾಲಯದ ಒಡೆಯನಾದ ಸೊಕ್ಕಪ್ಪೇರು ಮೊಲ್ತದಾರ್ ಎಂಬುವವನು ಅನ್ನವನ್ನು ದಿನಭತ್ಯೆಯೆಂದು ಕೊಟ್ಟನು.[81]

ನರ್ತಕಿಯರಲ್ಲಿ ಮಾಲ್ಯೆಯತ್ತಿ ಶ್ರೀರಂಗನಾಯಕಿಯರ್ ಮಾಣಿಕ್ಕಮ್ ಎಂಬುವವಳು (ಚೆಂಡಿಕಾದೇವಿಯ ಮಗಳು) ಅರುಳಾಲಂದನ್ ದೇವಾಲಯದಲ್ಲಿ ಮೊದಲಸರತಿಯ ವಿಶೇಷ ಹಕ್ಕನ್ನು ಹೊಂದಿದಳು. ಹಾಗೆಯೇ ಕ್ರಿ.ಶ.1356ರಲ್ಲಿ ಸ್ವಲ್ಪ ಭೂಮಿಯನ್ನು ಪಡೆದಳು. ಅರುಳಾಲಂದನ್ ದೇವರ ಪತ್ನಿಯ ದೇವಾಲಯದಲ್ಲಿ ಮೊದಲಸರತಿಯ ವಿಶೇಷ ಹಕ್ಕು ಹಾಗೂ ಸ್ವಲ್ಪ ಭೂಮಿಯನ್ನು ಇವಳ ಸಹೋದರಿಯಾದಿ ವಾರಧಿಗೆ ನೀಡಲಾಯಿತು. ಇವಳೂ ಕೂಡ ದಿನಭತ್ಯೆಯಾದ ಅನ್ನವನ್ನು ಪಡೆಯುವ ವಿಶೇಷ ಹಕ್ಕನ್ನು ಅನುಭವಿಸಿದಳು.[82] ಹರಿಹರನ ಆಳ್ವಿಕೆಯಲ್ಲಿ ಹರಿಹರನ ಕಾವ್ಯದಲಭಿಮಾನಿಯಾದ ವಾಂಬಿಯ ಮಕ್ಕಳು ಅವಳ ಸ್ವಇಚ್ಛೆಯಿಂದ ಪಂಪಾವತಿಯ ದೇವಸ್ಥಾನದಲ್ಲಿ ದೇವದಾಸಿಯಾದಳು. ಇದು ಕೆಲವು ಇತರೆ ವಾಸ್ತವವನ್ನು ಮನಗಂಡ ಸ್ತ್ರೀಯರಿಂದ ಸ್ವೀಕರಿಸಲ್ಪಟ್ಟಿತು. ಎರಡನೇ ದೇವರಾಯನ ಆಳ್ವಿಕೆಯಲ್ಲಿ ಈತನು ವರದರಾಜ ದೇವಾಲಯದಲ್ಲಿ ನೇಮಕವಾಗಿದ್ದ ನರ್ತಕಿಯರಿಗೆ ಭೂದಾನವನ್ನು ಮಾಡಿದನು.[83]

ಪ್ರಸನ್ನ ವಿಜಯಪುರ ಅಗ್ರಹಾರದ ಎಲ್ಲ ಬ್ರಾಹ್ಮಣರು ಕ್ರಿ.ಶ. 1372ರಲ್ಲಿ ಧನಸಹಾಯವನ್ನು ನೀಡಿದರು. ಇದರಲ್ಲಿ ರಾಮನಾಥದೇವರ ನರ್ತಕಿಯರಿಗೆ 30 ಗದ್ಯಾಣಗಳನ್ನು ಕೊಡಬೇಕಾಗಿತ್ತು.[84] ವೀರ ಬುಕ್ಕಣ್ಣ ಒಡೆಯರ್‌ನ ಮಗನಾದ ಚಿಕ್ಕಕಂಪಣ ಒಡೆಯರ್‌ನು ತೆರಕಣಾಂಬಿಯ ವೀರಪಾಂಚಾಲ ಹಾಗೂ ಕುಶಲಕರ್ಮಿಗಳೊಂದಿಗೆ ಇತರೆ ಊರುಗಳನ್ನು ಹಾಗೂ ಜೊತೆಗೆ ಹಣವನ್ನೂ ವಿಜಯಪುರ ರಾಮನಾಥದೇವರ ನರ್ತಕಿಯರ ಮೇಲ್ವಿಚಾರಣೆಗಾಗಿ ಕ್ರಿ.ಶ.1372ರಲ್ಲಿ ನೀಡಿದನು.[85] ನಾಗವ್ವಳ ಮಗನಾದ ರಾಮಣ್ಣನು ಕೇತವ್ವೆಯನ್ನು ನರ್ತಕಿಯಾಗಿ ಹಾಗೂ ಅವಳ ಪೋಷಣೆಗಾಗಿ ಕಾಣಿಕೆಯೊಂದನ್ನು ಕ್ರಿ.ಶ. 1372ರಲ್ಲಿ ವಿಜಯಪುರದ ರಾಮನಾಥದೇವರಿಗೆ ನೀಡಿದನು.[86]

ಅಚ್ಯುತರಾಯನು ಶ್ರೀರಂಗರಾಯದೇವರ ಬಳಿಗೆ ಇಬ್ಬರು ನರ್ತಕಿಯರನ್ನು ಕಳಿಸುವುದರ ಮೂಲಕ ಅವರ ಪೋಷಣೆಗಾಗಿ ಸಹಾಯಮಾಡಿದನು. ಇವರು **'ವಿದ್ವತ್ ಸಭಾ ರಾಯ ರಂಜಕಂ'** ಎಂಬ ಬಿರುದನ್ನು ಹೊಂದಿದ್ದರು. ಅಂದರೆ ಈ ಬಿರುದನ್ನು ಹೊಂದುವ ನಿರ್ದಿಷ್ಟ ವ್ಯಕ್ತಿಯು ಸಂಗೀತ ಹಾಗೂ ನೃತ್ಯದಲ್ಲಿ ಪ್ರವೀಣೆಯಾಗಿರುತ್ತಿದ್ದಳು. ಇವಳ ಪ್ರತಿಭೆಯನ್ನು ಪಂಡಿತರು ಹಾಗೂ ಸ್ವತಃ ರಾಜನೂ ಇಷ್ಟಪಡುತ್ತಿದ್ದರು. ಇದರ ಮೂಲಕ ಆ ಸ್ತ್ರೀಯು ಕಲೆಯಲ್ಲಿ ನಿಸ್ಸೀಮಳೆಂದು ಆಗ ತಿಳಿಯಲಾಗುತ್ತಿತ್ತು. ಆ ನಂತರ ಅವಳನ್ನು ಕಳಿಸಲಾಗುತ್ತಿತ್ತು. ಆ ನರ್ತಕಿಯ ಹೆಸರು ಕುಪ್ಪಾಯಿ ಎಂದು ಅವಳು ರಂಗರಾಯ ಹಾಗೂ ಹನುಮಸಾನಿಯ ಮೊಮ್ಮಗಳಾಗಿದ್ದಳು. ಸಾನ್ ಎಂಬ ಪದದ ಅರ್ಥವು ನರ್ತಕಿ ಎಂದಾಗುತ್ತದೆ. ಇವಳು ಉತ್ತಿದ ತಿಮ್ಮಾಯಿಯನ್ ಮಗಳಾಗಿದ್ದಳು.

ಕೃಷ್ಣದೇವರಾಯನ ಕಾಲದಲ್ಲಿ ರಂಜಮ್‌ಕುಪ್ಪಾಯಿಯು ಒಬ್ಬ ಪ್ರಸಿದ್ಧ ನರ್ತಕಿಯಾಗಿದ್ದಳು. ಇವಳು ಅಸ್ಥಾನ ನರ್ತಕಿಯಾಗಿದ್ದಳು. ಕ್ರಿ.ಶ. 1512ರ ಶಾಸನವೊಂದು ರಂಜಮ್ ಶ್ರೀರಂಗರಾಜನ ಮಗಳಾದ ರಂಜಕಮ್ ಕುಪ್ಪಾಯಿಯು ತಿರುಕಲ್ಲೆಯ ವೆಂಕಟೇಶನಿಗೆ ನೈವೇದ್ಯ ಮಾಡಿಸುವುದಕ್ಕಾಗಿ 1.000 ನರ್ ಪಣಂಗಳನ್ನು ಹುಂಡಿಗೆ ಹಾಕಿದಳು. ಅಚ್ಯುತರಾಯನ ಆಳ್ವಿಕೆಯಲ್ಲಿ ಕುಪ್ಪಾಯಿಯಸೇವೆಯನ್ನು ಗುರುತಿಸಲಾಯಿತು ಹಾಗೂ ವೆಂಕಟೇಶ್ವರನ ಸೇವೆಗೆಂದು ತಿರುಮಲೈಗೆ ಇವಳನ್ನು ಕಳುಹಿಸಲಾಯಿತು.[87] ಕ್ರಿ. ಶ. 1517ರಲ್ಲಿ ತಿರುಮಲೈ ಬಳಿಯ ವೆಂಕಟೇಶನಿಗೆ ದೋಸೈವಾಡಿ ಎಂಬ ದೈನಂದಿನ ಪೂಜೆಗಾಗಿ 3.000 ಪಣಂ ಧನಸಹಾಯವನ್ನು ನೀಡಿದಳು.[88]

ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಚಿನ್ನಾದೇವಿಯು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಒಬ್ಬ ಪ್ರಸಿದ್ಧ ನರ್ತಕಿಯಾಗಿದ್ದಳು. ಇವಳೊಬ್ಬ ದೇವದಾಸಿಯಾಗಿದ್ದಳು. ಸಂಗೀತ, ಹಾಡುಗಾರಿಕೆ ಮತ್ತು ನರ್ತನದಲ್ಲಿ ಹೆಸರುವಾಸಿಯಾಗಿದ್ದಳು. ಹಾಗೂ ಇವಳು ಅಪ್ರತಿಮ ಸೌಂದರ್ಯವತಿಯಾಗಿದ್ದಳು. ಕೃಷ್ಣದೇವರಾಯನು ಚಿನ್ನಾದೇವಿಯ ಮೋಹಕ ಸೌಂದರ್ಯಕ್ಕೆ ಮಾರುಹೋಗಿ ಅವಳನ್ನು ವಿವಾಹವಾದನು. ಚಿನ್ನಾದೇವಿಯು ಬಹುಶಃ ಇವನ ಅಚ್ಚುಮೆಚ್ಚಿನ ರಾಣಿಯಾಗಿದ್ದಳು. ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಕ್ರಿ.ಶ 1514ರ ಶಾಸನವೊಂದು ಇದು ಕರ್ನೂಲು ಜಿಲ್ಲೆಯ ಕರ್ನೂಲು ತಾಲ್ಲೋಕಿನ ಚೂಿವ ಬೆಳಗಲ್ಲು ಬಳಿಯ ಕೇಶವಸ್ವಾಮಿ ದೇವಾಲಯದ ಕಂಬವೊಂದನ್ನು ಅಲಂಕರಿಸಿ ದಾಖಲಿಸುವಂತೆ ತಿರಪೂರಿನ ಸೋಮರಸನ ಮಗನಾದ ಕರಣಂ ಬಸವರಸನು ಜಲಸಿಂಗದೇವರ ಸಮ್ಮುಖದಲ್ಲಿ ಅಡಾವಾನಿದುರ್ಗ ಜಿಲ್ಲೆಯ ಕೇರಿಯ ಬೆಳಗಲ್ಲಿನಲ್ಲಿ ಒಂದು ತುಂಡು ಭೂಮಿಯನ್ನು ಕಲಾಪದ ನಾಗಯ್ಯ ಹಾಗೂ ಅಭಿನೇತ್ರಿಯಾದ ಪೊಳವರ ನಾಟ್ಟುವ ತಿಮ್ಮಯ್ಯನ ಮಗಳಾದ ಪಾತ್ರಿಗೆ ನೀಡಲಾಯಿತೆಂದು ಹೇಳುತ್ತದೆ.[89]

ಕೆಲವೊಮ್ಮೆ ರಾಜನಬಳಿಗೆ ದೇವದಾಸಿಯರು ಸೇವೆಸಲ್ಲಿಸುತ್ತಿದ್ದ ದೇವಾಲಯದ ಪರವಾಗಿ ದೇವದಾಸಿಯರ ಪ್ರತಿನಿಧಿಗಳು ಹೋಗುತ್ತಿದ್ದರು. ಕ್ರಿ.ಶ.1433-34ರ ಶಾಸನವೊಂದರ ಪ್ರಕಾರ ಮಾದಮ್‌ನ ಅಗ್ನೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಕೈಕೊಳ ಹಿರಿಯ ಸಹೋದರಿಯಾದ ಅರಂವಲಟ ನಾಚಿಯಾರ್‌ಳು ಒಂದು ದೇವಾಲಯದ ಪರವಾಗಿ ಎರಡನೇ ದೇವರಾಯನನ್ನು ಸಂದರ್ಶಿಸಿದಳು ಹಾಗೂ ಗ್ರಾಮವೊಂದರ ಸರ್ವಮಾನ್ಯ ಕೊಡುಗೆಯೊಂದಿಗೆ ತಾಮ್ರಕಟ್ಟೆಯೊಂದರ ದಾನವನ್ನು ಸ್ವೀಕರಿಸಿದಳು. ಅವಳ ಸೇವೆಗೆ ಪ್ರತಿಯಾಗಿ ಆ ದೇವಾಲಯದ ರುದ್ರಮಹೇಶ್ವರನು ಪ್ರತಿನಿತ್ಯವೂ ಅವಳಿಗೆ ಒಂದು ಪಡಕ್ಕು ಧಾನ್ಯವನ್ನೂ ಹಾಗೂ ಮಾಸಿಕ ಎರಡು ಪಣಂ ಹಣವನ್ನು ಕೊಟ್ಟನು.

ದೇವದಾಸಿಯರು ಸಾಮಾನ್ಯವಾಗಿ ಸ್ವಲ್ಪ ಶ್ರೀಮಂತರಾಗಿರುತ್ತಿದ್ದರು. ದೇವಾಲಯಗಳಿಗೆ ದಾನಿಗಳಾಗಿ ಅವರು ಪ್ರಬಲವಾದ ಪಾತ್ರವನ್ನು ವಹಿಸಿದ್ದರು. ಅವರು ಶಾಶ್ವತವಾಗುಳಿಯುವ ಇಚ್ಛೆಯಿಂದ ದೇವಾಲಯಗಳಿಗೆ ಉದಾರವಾದ ಧನಸಹಾಯವನ್ನು ಮಾಡಿದರು. ಸಾಳುವ ನರಸಿಂಹನಾಳ್ವಿಕೆಯಲ್ಲಿ ಸಾವಿಪ್ರೆರುಮಾಳ್‌ನ ಮಗಳು ಹಾಗೂ ತಿರುಪತಿಯ ನರಸಿಂಹಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ಕನ್ಯೆಯರಲ್ಲಿ ವೆಂಕಟವಲ್ಲಿಯಾರ್ ಒಬ್ಬಳಾಗಿದ್ದಳು. ತಿರುಮಲೈ

ದೇವಾಲಯದ ಅಧಿಕಾರಿಗಳು ಶ್ರೀ ವೆಂಕಟೇಶ್ವರನ ದೈನಂದಿನ ಪೂಜೆಗಾಗಿ ನವೆಂಬರ್ 7, ಕ್ರಿ.ಶ.1457ರಲ್ಲಿ ದೇವಾಲಯದ ಹುಂಡಿಗಾಗಿ ಇವಳು ಕೊಟ್ಟ 1,000 ಪಣಂ ಮೊತ್ತದಿಂದ ಏರ್ಪಾಟು ಮಾಡಿದರು.[90]

ಇದೇ ಆಳ್ವಿಕೆಯಲ್ಲಿ ಅನ್ನೈಮದ್ಯೆನ ಮಗಳು ಹಾಗೂ ದೇವಾಲಯದ ಕನ್ಯೆಯರಲ್ಲಿ ಒಬ್ಬಳಾದ ವಾಲಂದಿಯು ಶ್ರೀವೆಂಕಟೇಶನಿಗೆ ಪೂಜೆಸಲ್ಲಿಸುವ ಉದ್ದೇಶದಿಂದ ಕ್ರಿ.ಶ. 1486ರಲ್ಲಿ ಮಾರ್ಗಲಿ ತಿಂಗಳಲ್ಲಿನ ಧನುರ್ಮಾಸ ಪೂಜೆಗಾಗಿ ಹಣದರೂಪದಲ್ಲಿ ಕೊಡುಗೆಯನ್ನು ನೀಡಿದಳು.[91] ಸದಾಶಿವರಾಯನ ಆಳ್ವಿಕೆಯಲ್ಲಿ ತಿರುಪತಿಯಲ್ಲಿ ವಾಸಿಸುತ್ತಿದ್ದ ದೇವಾಲಯದ ಕನ್ಯೆಯರಲ್ಲಿ ಒಬ್ಬಳಾದ ಸೆಲ್ಲಿಯು ತಿರುಮಲೈನ ಬಳಿ ಸುಗ್ಗಿಹಬ್ಬದ ಆಚರಣೆಗಾಗಿ ಶ್ರೀವೆಂಕಟೇಶನಿಗೆ ಕ್ರಿ.ಶ.1543ರಲ್ಲಿ ಅವಳ ಉಭೈಯಂ ಎಂದು 1120 ಪಣಂ ಅನ್ನು ಹುಂಡಿಗೆ ಹಾಕಿದಳು.[92]

ಇದೇ ಕಾಲದಲ್ಲಿ ತಿರುಪತಿಯಲ್ಲಿ ವಾಸವಾಗಿದ್ದ ದೇವದಾಸಿ ಗುಂಪಿಗೆ ಸೇರಿದ ತಿರುವೆಂಕಟದಾಸಿಯ ಹೆಣ್ಣುಮಕ್ಕಳಾದ ಲಿಂಗಸಾನಿ ಹಾಗೂ ತಿರುವೆಂಕಟ ಮಣಿಕ್ಕಂರಿಬ್ಬರು ಇದೇ ಕಾಲದಲ್ಲಿ ಕ್ರಿ.ಶ. 1543ರಲ್ಲಿ ಇವರಿಬ್ಬರು ಸಹೋದರಿಯರ ಉಬೈಯಂ ಎಂದು 1600 ಪಣಂ ಮೊತ್ತವನ್ನು ದೇವಾಲಯದ ಹುಂಡಿಗೆ ನೀಡಿದರು.[93] ಇದೇ ಕಾಲದಲ್ಲಿ ತುಂಗಸೆಲ್ವಿಯ ಮಗಳಾದ ತಿಮ್ಮಿಯ ಮಗಳಾದ ಸೆಂಬಾಕವೆಂಗು ತಿರುಪತಿಯ ದೇವದಾಸಿಯರಲ್ಲಿ ಒಬ್ಬಳಾದ ಇವಳು ಶ್ರೀ ವೆಂಕಟೇಶ್ವರನನ್ನು ಆರಾಧಿಸಲು 600 ಪಣಂ ಅನ್ನು ಕಾಣಿಕೆಯಾಗಿ ನೀಡಿದಳು.[94] ಕ್ರಿ.ಶ. 1545ರಲ್ಲಿ ಬ್ರಹ್ಮೋತ್ಸವದ ಮೂಲಕವಾಗಿ ಇವಳ ಉಭೈಯಂ ಎಂದು 10 ಬ್ರಹ್ಮೋತ್ಸವದ ಎಲ್ಲಾ ಹಬ್ಬಗಳ ದಿವಸದಂದೂ ಪೂಜೆ ಪುನಸ್ಕಾರದ ಉದ್ದೇಶದಿಂದ ನೀಡಿದಳೆಂದು ತಿಳಿದುಬಂದಿದೆ. ದೇವದಾಸಿಯರಲ್ಲಿ ಒಬ್ಬಳಾದ ಒಬುಲಯ್ಯಮ್ಮಳ ಮಗಳಾದ ನಾಗಸಾನಿಯು ಕ್ರಿ.ಶ.1545ರಲ್ಲಿ ತಿರುಮಲೈಂ ಬಳಿ ಒಂದು ಮಂಟಪವನ್ನು ಕಟ್ಟಿಸಿದಳು.[95] ತಿರುಪತಿಯ ಬಳಿ ವಾಸವಿದ್ದ ಪ್ರಸಿದ್ಧ ದೇವದಾಸಿಯರಲ್ಲಿ ಒಬ್ಬಳಾದ ತಿಪ್ಪಸಾನಿಯಮಗಳಾದ ತಿರುವೆಂಕಟ ಮನಿಕ್ಕಮ್‌ಳಿಗೆ ಪೊಲ್ಲಪಾದಿ ತಿಮ್ಮರಾಜ ಹಾಗೂ ತಿರುಮಲೈ ದೇವಾಲಯದ ಅಧಿಕಾರಿಗಳು ಅವಳ ಉಪಯೋಗಕ್ಕಾಗಿ ಅವಳು ಸಲ್ಲಿಸಿದ ಸೇವೆಯ ಗೌರವದ ಸಂಕೇತವಾಗಿ ಹಾಗೂ ತಿರುಪತಿ ಮತ್ತು ತಿರುಮಲೈ ದೇವಾಲಯಗಳಲ್ಲಿ ಬಳಸಲು ಒಂದು ದಂಡಿಕಲ್ಲನ್ನು ಕ್ರಿ.ಶ. 1546ರಲ್ಲಿ ನೀಡಿದರು.[96]

ತಿರುಪತಿಯ ಬಳಿ ವಾಸಿಸುತ್ತಿದ್ದ ದೇವದಾಸಿಯರಲ್ಲಿ ಒಬ್ಬಳಾದ ತಿರುವೆಂಕಟದಾಸಿಯ ಮಗಳಾದ ಲಿಂಗಸಾನಿಯು ತಿರುಮಲೈನ ಬಳಿಯ ಬ್ರಹ್ಮೋತ್ಸವದ ಅವಧಿಯಲ್ಲಿ ಇವಳ ಉಭೈಯಂ ಎಂದು ಕ್ರಿ.ಶ.1548ರಲ್ಲಿ ಎಲ್ಲಾ ಏಳು ಹಬ್ಬಗಳ ದಿವಸಗಳೆಂದು ಶ್ರೀಉತ್ಸವ ಮೂರ್ತಿಗೆ ನೀಡಬೇಕಾಗಿದ್ದ 10 ಮನೋಹರ ಪಾದಿಗೆ ಏರ್ಪಾಟು ಮಾಡಿದಳು.[97] ತಿರುಪತಿ ದೇವದಾಸಿಯರಲ್ಲಿ ಒಬ್ಬಳಾದ ಅಂಗಲಿಯ ಮಗಳಾದ ಸೇವುಸಾಣಿಯು 200 ಪಣಂ ಮೊತ್ತವನ್ನು ತಿರುಪತಿಯ

ಕಪಿಲತೀರ್ಥಂನ ಶ್ರೀ ಕಪಿಲೇಶ್ವರಸ್ವಾಮಿ ದೇವಾಲಯದಲ್ಲಿ ಇವಳೇ ಪ್ರತಿಷ್ಠಾಪಿಸಿದ್ದ ಶ್ರೀ ವಿಘ್ನೇಶ್ವರನ ದಿನನಿತ್ಯದ ಆರಾಧನೆಗಾಗಿ ಮೂಲಧನವಾಗಿ ಕ್ರಿ.ಶ. 1563ರಲ್ಲಿ ನೀಡಿದಳು.[98]

ಕ್ರಿ.ಶ. 1535ರ ಶಾಸನವೊಂದರ ಪ್ರಕಾರ ತಿರುಪತಿಯಲ್ಲಿ ವಾಸವಾಗಿದ್ದ ದೇವದಾಸಿಯರಲ್ಲಿ ಒಬ್ಬಳಾದ ಪೆರುಚ್ಚಿಯು ತಿರುಪತಿ ದೇವಾಲಯದಲ್ಲಿ ಆಚರಿಸಲ್ಪಡುವ ಮಕರಸಂಕ್ರಮಣ ಹಬ್ಬದ ದಿವಸದಂದು ಸಲ್ಲಿಸುವ ತಿರುವೊಲಕ್ಕಮ್ಮ ಪೂಜೆಗಾಗಿ 230 ಪಣಂ ಮೊತ್ತವನ್ನು ನಿಧಿಗೆ ನೀಡಿದಳು.[99] ಕ್ರಿ.ಶ.1535ರ ಇನ್ನೊಂದು ಶಾಸನವು ಹೇಳುವಂತೆ ಪೋಲುನಾಯಕನ ಹೆಣ್ಣುಮಕ್ಕಳಾದ ಚಿಕ್ಕಮಸವನಿ ಹಾಗೂ ಅವಳ ತಂಗಿ ಗೋವಿಂದಸಾನಿ ಹಾಗೂ ತಿರುಪತಿಯಲ್ಲಿ ವಾಸವಾಗಿದ್ದ ಇವರಿಬ್ಬರು ದೇವದಾಸಿಯರು ತಿರುಪತಿಯ ದೇವಾಲಯದಲ್ಲಿ ಚಿತ್ತಿರೈವಿಷ್ಣು ಎಂಬ ಹಬ್ಬವನ್ನು ಪ್ರಾರಂಭಿಸಿದರು(ಇದು ತಮಿಳರ ಹೊಸ ವರ್ಷದ ದಿವಸ) 1750ರ ಪಣಂ ಮೊತ್ತವನ್ನು ದೇವಾಲಯದ ಹುಂಡಿಗೆ ನೀಡುವುದರ ಮೂಲಕ ಈ ಹಬ್ಬವನ್ನು ಆಚರಿಸುವ ಏರ್ಪಾಟನ್ನು ಮಾಡಲಾಯಿತು.[100]

ದೇವಾಲಯದ ಹಬ್ಬಗಳಲ್ಲಿ ಸರ್ಕಾರವು ವೇಶ್ಯೆಯರಿಂದ ಸ್ವಲ್ಪ ಆದಾಯವನ್ನು ಪಡೆಯುತ್ತಿತ್ತು. ಕ್ರಿ.ಶ. 1555ರ ಶಾಸನವೊಂದು ಇಂಜ ಸುಂಕದ ಉಲ್ಲೇಖವನ್ನು ನೀಡುತ್ತದೆ. ಇದೊಂದು ವೇಶ್ಯೆಯರ ಮೇಲೆ ವಿಧಿಸಲಾಗುತ್ತಿದ್ದ ಸುಂಕವಾಗಿದ್ದು ಕರ್ನೂಲ್ ಜಿಲ್ಲೆಯ ಮಕರಂಪುರಂ ಬಳಿಯ ದೇವಾಲಯದ ಹಬ್ಬಗಳಲ್ಲಿ ಸರ್ಕಾರವು ಈ ತೆರಿಗೆಯನ್ನು ಸಂಗ್ರಹಿಸುತ್ತಿತ್ತು.[101] ಎಲ್ಲಾದೇವದಾಸಿಯರೂವೇಶ್ಯೆಯಾಗಿರುತ್ತಿದ್ದರು. ಆದರೆ ಎಲ್ಲಾ ವೇಶ್ಯೆಯರು ದೇವದಾಸಿಯಾಗಿರಲಿಲ್ಲ. 'ಸೂಳೆ' ಎಂಬ ಪದವನ್ನು ದೇವರಗುಡಿಗಳಿಗೆ ನೀಡಿದ ದಾನಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಆದರೆ ಇದರ ಅರ್ಥ ದೇವದಾಸಿ ಎಂದಾಗುತ್ತಿತ್ತು. ಇವರ ವೃತ್ತಿಯನ್ನು ನಡೆಸಲು ಇವರು ಸರ್ಕಾರದ ಅನುಮತಿಯನ್ನು ಎದುರು ನೋಡಬೇಕಾಗಿತ್ತು. ಸರ್ಕಾರವು ಇವರ ಮೇಲೆ 'ಸೂಳೆದೆರೆ' ಎಂಬ ತೆರಿಗೆಯನ್ನು ವಿಧಿಸುತ್ತಿತ್ತು. ಕನ್ನಡಿಯನ್ನು ಇಡುತ್ತಿದ್ದಕ್ಕಾಗಿಯೂ ಇವರು ತೆರಿಗೆಯನ್ನು ಕೊಡಬೇಕಾಗುತ್ತಿತ್ತು.[102] ಕ್ರಿ.ಶ.1380ರ ಹರಿಹರದ ಶಾಸನವೊಂದು ನರ್ತಕಿಯರಿಗೆ ಸಂಬಂಧಿಸಿದಂತೆ ಈ ರೀತಿಯಾದ ಒಂದು ಕನ್ನಡಿಯ ಪ್ರದರ್ಶನದ ಬಗ್ಗೆ ಉಲ್ಲೇಖವನ್ನು ನೀಡುತ್ತದೆ. ವಿಜಯನಗರದಲ್ಲಿ ಈ ರೀತಿಯ ಕನ್ನಡಿಗಳನ್ನು ತೆರಿಗೆಯ ಹೊರಗೆ ಗುರಿಪಡಿಸಲಾಗುತ್ತಿತ್ತು. ಶಿಖಾರಿಪುರದ ಒಂದು ದಾಖಲೆಯು ಹೇಳುವಂತೆ ಈ ನರ್ತಕಿಯರ ಮದುವೆಮಂಟಪ ಹಾಗೂ ಕನ್ನಡಿಗಳಿಗಾಗಿ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು.[103]

ನರ್ತಕಿಯರು (ವೇಶ್ಯೆಯರು) ಊಹೆಗೂ ನಿಲುಕದ ಶ್ರೀಮಂತರಾಗಿದ್ದರು. ಅವರು ಚಿನ್ನದಿಂದ ರತ್ನಗಳು, ವಜ್ರಗಳು, ಪಚ್ಚೆಗಳು ಹಾಗೂ ಮುತ್ತುಗಳಿಂದ ತಯಾರಿಸಲಾದ ಆಭರಣಗಳನ್ನು ಮುಡಿಯಿಂದ ಅಡಿಯವರೆಗೂ ತೊಡುತ್ತಿದ್ದರು. ಅಬ್ದುಲ್ ರಜಾಕ್ ಹೇಳುವಂತೆ *"ಇವರಲ್ಲಿನ ಪ್ರತಿಯೊಬ್ಬ ಮಹಿಳೆಯೂ ಮುತ್ತು ಹಾಗೂ ಹೆಚ್ಚು ಬೆಲೆಬಾಳುವ ಹವಳಗಳನ್ನು ತೊಡುತ್ತಿದ್ದರು ಹಾಗೂ ಅತ್ಯಂತ ದುಬಾರಿಯಾದ ಉಡುಪನ್ನು ತೊಡುತ್ತಿದ್ದರು."*

ಯೂರೋಪಿನ ಪ್ರವಾಸಿಯಾದ ಪಯಸ್‌ನು ರಾಜಧಾನಿಗೆ ಭೇಟಿ ನೀಡಿದಾಗ ವಿಜಯನಗರದ ದೇವಾಲಯ ನರ್ತಕಿಯರ ಬಗ್ಗೆ ಈ ರೀತಿ ಬರೆಯುತ್ತಾನೆ. *"ಅವರು (ಹಿಂದೂಗಳು) ಪ್ರತಿದಿನವೂ ಮೂರ್ತಿಗೆ ನೈವೇದ್ಯ ತಿನ್ನಿಸುತ್ತಾರೆ. ಅವರು ಇದಕ್ಕೆ ಕೊಡುವ ಕಾರಣವೇನೆಂದರೆ ದೇವರು ತಿಂದಾಗ ಪಗೋಡಕ್ಕೆ ಸೇರಿದ ಮಹಿಳೆಯರು ನಂತರ ಇವನ ಮುಂದೆ ನರ್ತಿಸುತ್ತಾರೆ. ಈ ಹೆಂಗಸರಿಗೆ ಹುಟ್ಟಿದ ಎಲ್ಲ ಹೆಣ್ಣುಮಕ್ಕಳು ದೇವಾಲಯಕ್ಕೆ ಸೇರಿದವರಾಗಿರುತ್ತಾರೆ. ಇವರದು ಕೆಳಮಟ್ಟದ ನಡತೆ ಹಾಗೂ ಇವರು ಉತ್ತಮವಾದ ಬೀದಿಗಳಲ್ಲಿ ವಾಸಿಸುತ್ತಾರೆ. ಇವರ ಎಲ್ಲಾ ನಗರಗಳಲ್ಲೂ ಇದೇ ರೀತಿ ಇರುತ್ತದೆ. ಇವರ ಬೀದಿಗಳು ಉತ್ತಮ ಮನೆಗಳ ಸಾಲುಗಳನ್ನು ಹೊಂದಿವೆ. ಮುಖ್ಯಸ್ಥರುಗಳ ಪತ್ನಿಯರಂತೆಯೇ ಇವರೂ ಕೂಡ ಹೆಚ್ಚು ಗೌರವವುಳ್ಳವರಾಗಿರುತ್ತಾರೆ. ಯಾವುದೇ ಗೌರವಯುತವಾದ ಪುರುಷನು ಇವರ ಮನೆಗಳಿಗೆ ಯಾವುದೇ ಕಳಂಕ ಅಪವಾದಗಳ ಭಯವಿಲ್ಲದೆ ಹೋಗಬಹುದು.ಇವರು ರಾಜಪತ್ನಿಯರೊಂದಿಗೂ ಸೇರಬಹುದು, ಅವರೊಂದಿಗೆ ಇರಬಹುದು ಹಾಗೂ ಎಲೆಯನ್ನು ಜಗಿಯಬಹುದು ಬಹುಶಃ ಇದನ್ನು ಬೇರೆ ಯಾರೂ ಮಾಡುವಂತಿಲ್ಲ ಹಾಗೂ ಅವರ ಶ್ರೇಣಿಯು ಎಂತಹುದೇ ಆಗಿರಬಹುದು."*

ಬಾರ್ಬೋಸಾನ ಪ್ರಕಾರ ವಿಜಯನಗರದಲ್ಲಿ ಹುಡುಗಿಯರನ್ನು ದೇವಾಲಯಗಳಿಗೆ ಅವರ ಹತ್ತನೇ ವಯಸ್ಸಿನಲ್ಲಿಯೇ ಕಳುಹಿಸಲಾಗುತ್ತಿತ್ತು. ಹಾಗೆಯೇ ಮುಂದೆ ಅವನು ಹೇಳುವಂತೆ *"ಒಂದು ಮೂರ್ತಿಗೆ ತಮ್ಮ ಹೆಣ್ಣುಮಕ್ಕಳ ಶೀಲವನ್ನು ಅರ್ಪಿಸುವ ವ್ಯಕ್ತಿಗಳೂ ಇವರು ಹೌದು, ಅವರು ಹತ್ತು ವರ್ಷ ಪ್ರಾಯಕ್ಕೆ ಬರುತ್ತಿದ್ದಂತೆಯೇ ಅವಳನ್ನು ಒಂದು ದೇವಾಲಯಕ್ಕೆ ಹಾಗೂ ಆ ಮೂರ್ತಿಯ ಪ್ರಾರ್ಥನೆಗೆ ಕರೆದೊಯ್ಯುತ್ತಾರೆ. ಅವಳನ್ನು ಬಹಳ ಗೌರವದಿಂದ ಅವಳ ಸಂಬಂಧಿಕರೆಲ್ಲರೂ ಅವಳನ್ನು ಮದುವೆ ಮಾಡಲು ಕರೆದೊಯ್ಯುವಂತೆ ಬಹಳ ಸಂಭ್ರಮದಿಂದ ಕರೆದೊಯ್ಯುತ್ತಾರೆ"* ಇದು ವಿಜಯನಗರ ಜನರು ದೇವರ ಹೆಸರಿನಲ್ಲಿ ಈ ಪದ್ಧತಿಯ ದಾಸರಾಗಿದ್ದರು ಎಂಬುದನ್ನು ತೋರಿಸುತ್ತದೆ, ದೇವದಾಸಿಯರನ್ನು ಹಿಂದೂ ಜಾತಿ ಜನಗಳು ಗೌರವಿಸುತ್ತವೆ ಹಾಗೂ ಹೆಚ್ಚು ಗೌರವಾನ್ವಿತ ಪುರುಷರ ಸಭೆಯಲ್ಲಿ ಕೂರುವ ಅವಕಾಶವನ್ನು ಪಡೆದಿದ್ದರು. ಈ ರೀತಿಯಾಗಿ ರಾಜರು, ಬ್ರಾಹ್ಮಣರು ಪ್ರಾಂತೀಯ ಸೇನೆಯ ಹಾಗೂ ಪಟ್ಟಣದ ಅಧಿಕಾರಿಗಳು, ವರ್ತಕರು ಮತ್ತು ಮಾರಾಟಗಾರರೆಲ್ಲರೂ ದೇವದಾಸಿಯರನ್ನು ಪ್ರೋತ್ಸಾಹಿಸಿದರು. ರಾಜಮನೆತನದವರು ಇವರನ್ನು ಹೆಚ್ಚು ಗೌರವದಿಂದ ಕಾಣುತ್ತಿದ್ದರು. ಅಬ್ದುಲ್‌ರಜಾಕ್‌ನು ಅಭಿಪ್ರಾಯಪಡುವಂತೆ ಈ ಹುಡುಗಿಯರು ಕೆಳಚಾರಿತ್ರದವರಾಗಿದ್ದರು. ಆದರೂ ಮಾಮೂಲಿಯಂತೆ ರಾಜಮನೆತನದವರು [104] ಇವರನ್ನು ಗೌರವಾಧರದಿಂದ ಕಾಣುತ್ತಿದ್ದರು. ಆದರೂ ಹೆಚ್ಚು ವಿದ್ವಾಂಸರು ಮುಂದೆ ಒಂದು ನಿರ್ದಿಷ್ಟ ಅವಧಿಯಲ್ಲಿ ಈ ನರ್ತಿಸುವ ಹಾಗೂ ಹಾಡುವ

ಹುಡುಗಿಯರು ಬಹಳ ಶುದ್ಧವಾದ **"ಆಧ್ಯಾತ್ಮಿಕ"** ಕಾರ್ಯವನ್ನು ನಿರ್ವಹಿಸುತ್ತಿದ್ದರು ಎಂಬ ಊಹೆಯಿಂದ ಪ್ರಾರಂಭಿಸುತ್ತಾರೆ. ಆದ್ದರಿಂದ ಈ ದೇವದಾಸಿಯರನ್ನು ಹೆಚ್ಚು ಗೌರವಾದರಗಳಿಂದ ನೋಡಲಾಗುತ್ತಿತ್ತು.

ಒಂದು ಶಿಲ್ಪವು ಆಸ್ಥಾನ ನರ್ತಕಿಯೊಬ್ಬಳು ರಾಜನ ಮುಂದೆ ನರ್ತಿಸುತ್ತಿರುವ ಚಿತ್ರವನ್ನು ಪ್ರದರ್ಶಿಸುತ್ತದೆ. ರಾಜನೊಂದಿಗೆ ಇಬ್ಬರು ಸೇವಕಿಯರಿದ್ದಾರೆ. ಇವರು ಇವನ ಹಿಂದೆ ನಿಂತಿದ್ದಾರೆ. ರಾಜನು ಮಂಚದ ಮೇಲೆ ಕುಳಿತಿದ್ದಾನೆ. ನರ್ತಕಿಯು ಉತ್ತಮವಾಗಿ ಅಲಂಕರಿಸಲ್ಪಟ್ಟಿದ್ದಾಳೆ. ಇವಳು ಉತ್ತಮವಾದ ಆಭರಣಗಳಿಂದ ಹಾಗೂ ಕೇಶಾಲಂಕಾರದಿಂದ ಕಂಗೊಳಿಸುತ್ತಿದ್ದಾಳೆ. ಈ ನರ್ತಕಿಯೊಂದಿಗೆನೃತ್ಯಗಾರನೊಬ್ಬನಿದ್ದಾನೆ ಹಾಗೂ ಒಬ್ಬ ಡೋಲು ಬಡಿಯುವವನೂ ಇದ್ದಾನೆ.

ಇನ್ನೊಂದು ಶಿಲ್ಪವು ನರ್ತಕಿಯರ ಗುಂಪೊಂದನ್ನು ಚಿತ್ರಿಸಿದೆ. ಬಹುಶಃ ಇವರು ದೇವದಾಸಿಯರಿರಬೇಕು. ಇವಳು ರಾಜ ಹಾಗೂ ರಾಣಿಯರ ಮುಂದೆ ನರ್ತಿಸುತ್ತಿದ್ದಾಳೆ. ಎಡಭಾಗಕ್ಕೆ ಮೂವರು ಸ್ತ್ರೀಯರಿದ್ದಾರೆ. ಒಬ್ಬಳು ಮೃದಂಗವನ್ನು ಬಾರಿಸುತ್ತಿದ್ದರೆ, ಇನ್ನೊಬ್ಬಳು ಮೃದಂಗವೊಂದನ್ನು ಹಿಡಿದಿದ್ದಾಳೆ. ಮೂರನೆಯವಳು ಅವಳ ಬಲಗೈಯಲ್ಲಿ ಬಟ್ಟೆಯೊಂದಿಗೆ ಒಂದು ದಂಡವನ್ನು ಹಿಡಿದಿದ್ದಾಳೆ. ಇನ್ನೊಬ್ಬ ಪುರುಷನಿದ್ದು ತಾಳಹಾಕುತ್ತಿರುವನು, ನಾಲ್ಕನೆಯವಳು ನರ್ತಿಸುತ್ತಿರುವಳು ಹಾಗೂ ಬಲಕ್ಕೆ ಇಬ್ಬರು ಸ್ತ್ರೀಯರು ನರ್ತಿಸುತ್ತಿದ್ದಾರೆ.

6. ಹಬ್ಬಗಳು:

ಶಾಸನಗಳು ಹಾಗೂ ಪ್ರವಾಸಿಗಳ ಬರಹಗಳು ರಾಜಮನೆತನದವರು ಹಾಗೂ ವಿಜಯನಗರದ ಜನಗಳು ಆಚರಿಸುತ್ತಿದ್ದ ಹಬ್ಬಗಳ ಬಗ್ಗೆ ಸಾಕಷ್ಟು ಪುರಾವೆಯನ್ನು ಒದಗಿಸುತ್ತವೆ. ಗ್ರಾಮಗಳಲ್ಲಿ ದೇವಾಲಯಗಳು ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿ ಮುಂದುವರೆದವು, ತೀರ್ಥಯಾತ್ರೆಗಳನ್ನು ಕೈಗೊಳ್ಳುತ್ತಿದ್ದರು. ನಡೆದುಕೊಂಡೋ ಅಥವಾ ಎತ್ತಿನ ಬಂಡಿಯಲ್ಲೋ ತೀರ್ಥಯಾತ್ರೆಗೆ ಹೋಗುತ್ತಿದ್ದರು. ತೀರ್ಥಯಾತ್ರೆಗಳನ್ನು ತಮ್ಮ ಮನೆದೇವರಿಗೆ ಮಾಡಿಕೊಂಡ ಹರಕೆಗಳನ್ನು ಒಪ್ಪಿಸಲು ಹಾಗೂ ತಮ್ಮ ಎಂದಿನ ಬೇಸರದ ಜೀವನವನ್ನು ಸ್ವಲ್ಪ ಕಾಲ ಮರೆಯಲು (ಈ ಯಾತ್ರೆಗಳನ್ನು) ಕೈಗೊಳ್ಳುತ್ತಿದ್ದರು. ಸಂಕ್ರಾಂತಿ, ಯುಗಾದಿ, ದಸರಾ, ಹೋಳಿ ಹಾಗೂ ದೀಪಾವಳಿಯಂತಹ ಋತುಮಾನ ಹಬ್ಬದ ದಿನಗಳನ್ನು ಆಚರಿಸುತ್ತಿದ್ದರು. ಇವುಗಳು ಅವರಿಗೆ ಬಹಳ ಮುದ ನೀಡುತ್ತಿದ್ದವು. ಏಕೆಂದರೆ ಈ ದಿವಸಗಳಲ್ಲಿ ಪಂಗಡದ ಎಲ್ಲಾ ಜನಗಳೂ ಒಗ್ಗಟ್ಟಾಗಿ ಒಂದೆಡೆ ಸೇರಿ ಸಂತೋಷವಾಗಿ ಹಿಗ್ಗಿ ನಲಿಯುತ್ತಿದ್ದರು. ಧರ್ಮವನ್ನು ಹೆಚ್ಚುಪಾಲು ಆಧರಿಸಿರುವ ಹಬ್ಬಗಳು ಸಾರ್ವತ್ರಿಕ ಸಾಮಾಜಿಕ ಮಿಲನಗಳು ಹಾಗೂ ಸಂತೋಷದ ಪ್ರಸಿದ್ಧ ಸಂದರ್ಭಗಳಾಗಿ ಮುಂದುವರೆದಿವೆ.

ಮಹಾನವಮಿಯು ರಾಷ್ಟ್ರೀಯ ಹಬ್ಬವಾಗಿತ್ತು. ಹಾಗೂ ವಿಜಯನಗರದ ಹಬ್ಬವಾಗಿತ್ತು. ಇದನ್ನು ಅಶ್ವಿನಿ ತಿಂಗಳ ಮೊದಲ ಪಕ್ಷದ ದಿವಸದಂದು ಆಚರಿಸಲಾಗುತ್ತಿತ್ತು. ಇದನ್ನು ದೊಡ್ಡ ಪ್ರಮಾಣದಲ್ಲಿ ಭವ್ಯ ಆಚರಣೆಗಳಿಂದ, ಆಡಂಭರದಿಂದ, ದಿವ್ಯತೆಯಿಂದ ಹಾಗೂ ಅತ್ಯುತ್ಸಾಹದಿಂದ ಆಚರಿಸಲಾಗುತ್ತಿತ್ತು. ಇದರಲ್ಲಿ ಬಹಳ ಮನೋರಂಜನೆಯೂ ಇತ್ತು. ಪ್ರೇಕ್ಷಕರು ಹತ್ತಿರದ ಹಾಗೂದೂರದ ಊರುಗಳಿಂದೆಲ್ಲಾ ಬರುತ್ತಿದ್ದರು. ಹಾಗೆಯೇ ವಿದೇಶೀ ಪ್ರವಾಸಿಗರು ಇದರ ಸೊಗಸು ಭವ್ಯತೆ, ಬೆಡಗಿಗೆ ಮಾರುಹೋಗುತ್ತಿದ್ದರು.

ವಿಜಯನಗರ ಕಾಲದಿಂದಲೂ ಒಂಬತ್ತನೇ ದಿನದ ಆಚರಣೆಯು ಹತ್ತನೇ ದಿನದಾಚರಣೆಯವರೆಗೂ ಮುಂದುವರೆಯುತ್ತದೆ. ಅದೇ ದಸರಾ, ಇದೇ ಹಬ್ಬವನ್ನು ನವರಾತ್ರಿ ಎಂದು ಕರೆಯಲಾಗುತ್ತದೆ. ಮಹಾನವಮಿಯನ್ನು ವಿಜಯನಗರದ ರಕ್ಷಣೆ ಹಾಗೂ ಪುನರುತ್ಥಾನದ ಉದ್ದೇಶಕ್ಕಾಗಿ ಆಚರಿಸಲಾಗುತ್ತಿತ್ತು.

ಈ ಹಬ್ಬಗಳ ಬಗೆಗಿನ ಬಹಳ ವಿಸ್ತೃತವಾದ ವಿವರಣೆಯೆಂದರೆ ಪಯಸ್‌ನ ಬರವಣಿಗೆ, ಇದರಿಂದ ಕೆಳಗಿನ ಅಂಶಗಳನ್ನು ಗಮನಿಸಬಹುದು. ಈ ಒಂಭತ್ತು ದಿವಸಗಳಲ್ಲಿ ವಿಜಯನಗರದ ಕೋಟೆಯ ಭಾಗದ ಕೇಂದ್ರಭಾಗದಲ್ಲಿ ಹಬ್ಬಗಳನ್ನು ಆಚರಿಸಲಾಗುತ್ತಿತ್ತು. ಹಾಗೂ ಅರಮನೆಯ ಮುಂದೆ ಮತ್ತು ಎರಡು ದೊಡ್ಡ ಶಾಶ್ವತ ಕಟ್ಟಡಗಳ ಮೇಲೆ ಒಂದನ್ನು "ವಿಜಯೀ ಭವನ" ಎಂದು ಪಯಸ್ ಕರೆದಿದ್ದಾನೆ. **'ಸಿಂಹವೇದಿಕೆ'** ಎಂದು ವಿಜಯನಗರ ಹಾಗೂ ಮಹಾನವಮಿ ದಿಬ್ಬದ ಪ್ರಾಚ್ಯಶಾಸ್ತ್ರಜ್ಞನಾದ ಲಾಂಗಹರ್ಸ್ಟ್ ಕರೆದಿದ್ದಾನೆ ಎಂದು ಈಗಿನ ಹಂಪೆಯ ನಿವಾಸಿಗಳು ತಿಳಿಸಿದ್ದಾರೆ ಹಾಗೂ ಇನ್ನೊಂದು **"ರಾಜನ ಶೋತೃಸಭಾಂಗಣ"** ಇವುಗಳನ್ನು ಕೃಷ್ಣದೇವರಾಯನು ಕ್ರಿ.ಶ. 1513ರ ಸರಿಸುಮಾರಿನಲ್ಲಿ ಅವನ ಒರಿಸ್ಸಾ ದಂಡೆಯಾತ್ರೆಯ ನಂತರ ಇವುಗಳನ್ನು ಕಟ್ಟಿಸಿದನು. ಈ ಕಟ್ಟಡಗಳ ಸುತ್ತ ಹಾಗೂ ಇವುಗಳ ಒಳಭಾಗದಲ್ಲಿ ಹಬ್ಬದ ಘಟನೆಗಳನ್ನು ಒಳಗೊಂಡ ರಸವತ್ತಾದ ಚಿತ್ರಣವು ಮೂಡಿಬಂದಿತ್ತು.[105]

ಸಾಲತೊರೆ ಅಭಿಪ್ರಾಯಪಡುವಂತೆ *"ಇದು ವಾತಾವರಣದಲ್ಲಿ ಧಾರ್ಮಿಕ ಎಂದು ಕಂಡುಬಂದರೂ ಇದು ರಾಜಕೀಯ ಪ್ರಾಮುಖ್ಯತೆಯನ್ನು ಹೊಂದಿದೆ."*[106] ಪಯಸ್, ನ್ಯೂನಿಜ್ ಹಾಗೂ ಇತರೆ ಪ್ರವಾಸಿಗರು ಸ್ಪಷ್ಟವಾದ ವಿವರಣೆಯನ್ನು ಈ ಹಬ್ಬದ ಬಗ್ಗೆ ನೀಡಿರುವುದಾದರೂ ಅಬ್ದುಲ್‌ರಜಾಕ್‌ನ ಬರವಣಿಗೆಯು ನಮ್ಮ ವಿಶೇಷ ಗಮನವನ್ನು ಸೆಳೆಯುತ್ತದೆ. ಇವನು ಮಹಾನವಮಿ ಹಬ್ಬವನ್ನು ಭವ್ಯ ಹಾಗೂ ಅಮೋಘವೆಂದು ಪರಿಗಣಿಸಿದ್ದಾನೆ. ಎಲ್ಲಾ ಸಾಮ್ರಾಜ್ಯದ ಮಂತ್ರಿವರ್ಯರು ಈ ಹಬ್ಬಕ್ಕಾಗಿ ತಮ್ಮ ಆನೆಗಳು ಹಾಗೂ ಕುದುರೆಗಳೊಂದಿಗೆ ಬಂದು ಸೇರುತ್ತಿದ್ದರು. ಎರಡರಿಂದ ಐದು ಜಿಂಕೆಗಳನ್ನು ಹೊಂದಿದ್ದ ಕೆಲವು ಮಂಟಪಗಳನ್ನು ನಿರ್ಮಿಸಲಾಗುತ್ತಿತ್ತು. ಮಹಾನವಮಿ ಹಬ್ಬವನ್ನು ಒಂಬತ್ತುದಿವಸಗಳ ಕಾಲ ಬಹಳ ಆಡಂಭರ ಹಾಗೂ ವೈಭವಯುಕ್ತವಾಗಿಯೂ ಆಚರಿಸಲಾಗುತ್ತಿತ್ತು. ಈ ಎಲ್ಲಾ ಒಂಬತ್ತು ದಿವಸಗಳಲ್ಲಿಯೂ ರಾಜನು ಉಪವಾಸ ಇರುತ್ತಿದ್ದನು ಹಾಗೂ ಪ್ರತೀ ದಿವಸವೂ ಎಲ್ಲವೂ ಮುಗಿದ ನಂತರ ಮಧ್ಯರಾತ್ರಿಯ ಸಮಯದಲ್ಲಿ ಆಹಾರವನ್ನು ಸೇವಿಸುತ್ತಿದ್ದರು.[107] ಒಂಬತ್ತನೇ ದಿವಸ ಆಟ ಹಾಗೂ ಮನೋರಂಜನೆಗಳು ನಡೆಯುತ್ತಿದ್ದವು.[108] ಪಯೆಸ್‌ನ ಮಹಾನವಮಿ ವರ್ಣನೆಯು ಮೇಲ್ವರ್ಗದವರ ವಿಲಾಸೀ ಜೀವನವನ್ನು ನಮ್ಮ ಕಣ್ಮುಂದೆ ತರುತ್ತದೆ. ಮಹಾನವಮಿ ಹಬ್ಬದ ನಂತರ ಹೊಸ ವರ್ಷವು ಆಚರಿಸಲ್ಪಡುತ್ತಿತ್ತು ಎಂದು ಪಯೆಸ್‌ನು ತನ್ನ ಬರವಣಿಗೆಯಲ್ಲಿ ದಾಖಲಿಸಿದ್ದಾನೆ.[109]

ನವರಾತ್ರಿ ಹಬ್ಬವು ವಿಜಯನಗರದಲ್ಲಿ ಒಂದು ಸಾಂಸ್ಕೃತಿಕ ಹೊಸತನವಾಗಿತ್ತು. ಇದು ರಾಜಧಾನಿಯ ವಾರ್ಷಿಕ ಮೇಳವಾಗಿತ್ತು. ರಾಜನ ವೈಭವೋಯುತ ಮೆರವಣಿಗೆ, ಮಂತ್ರಿ ಮಹೋದಯರ ಆಡಂಭರ, ಭಿನ್ನಾಣ, ರಾಜಮನೆತನದವರು

ತೊಟ್ಟಿದ ಕಣ್ಣು ಕೋರೈಸುವ ಆಭರಣ, ಮನೆಯ ಮೇಲೆ, ಬೆಟ್ಟದ ಮೇಲೆ ಹಾಗೂ ಇಳಿಜಾರಿನ ಪ್ರದೇಶದಲ್ಲಿ ನೆರೆದಿದ್ದ ಇಡೀ ಜನಸ್ತೋಮವೆಲ್ಲವನ್ನೂ ನೋಡಿದ ಪಯೆಸ್ ನಿಬ್ಬೆರಗಾದನು ಹಾಗೂ ಬಹಳ ಹೃದಯಂಗಮವಾಗಿ (ಹೆಮ್ಮೆಯಿಂದ) ಈ ಮಾತುಗಳನ್ನು ಹೇಳಿದನು. ಏನೆಂದರೆ ಇಡೀ ಪ್ರಪಂಚವು ಅಲ್ಲಿ ನೆರೆದಿರುವಂತೆ ಹಾಗೂ ಇಡೀ ನಗರವು ತಲೆಕೆಳಕಾಗಿರುವಂತೆ ಕಂಡು ಬರುತ್ತಿತ್ತು. ಹಾಗೂ ಬೆಟ್ಟಗಳು, ಕಣಿವೆಗಳು ಹಾಗೂ ನೆಲವೆಲ್ಲ ಜನಗಳ ಕೂಗು ಕಿರಿಚಾಟದಿಂದ ಕುದುರೆಗಳ ಕೆನೆಯುವಿಕೆಯಿಂದ ಆನೆಗಳ ಘೀಳಿಡುವಿಕೆಯಿಂದ ಗುರಾಣಿಗಳ ಆರ್ಭಟದಿಂದ ಬಾಣಗಳ ರಭಸದಿಂದ ನಡುಗುತ್ತಿರುವಂತೆ, ಬಾಂಬುಗಳು ಹಾಗೂ ತುಫಾಕಿಗಳನ್ನು ನೆಲದ ಮೇಲೆ ನೋಡುವುದು ಕಣ್ಣಿಗೆ ಆಶ್ಚರ್ಯವನ್ನು ಹುಟ್ಟಿಸುತ್ತದೆ. (ವಿಸ್ಮಯಕಾರಿಯಾದುದು) ನಿಕೊಲೋಕೊಂಟಿಯ ಪ್ರಕಾರ ಹಬ್ಬದ ಅವಧಿಯಲ್ಲಿ *"ದೇವಾಲಯದೊಳಗೆ ಚಾವಣಿಯ ಹೊರಭಾಗದಲ್ಲಿ ಬಹಳ ಸಂಖ್ಯೆಯಲ್ಲಿ ಎಣ್ಣೆ ದೀಪಗಳು ಹಾಗೂ ಸೂಸಿಮಣ್ಣೆಯನ್ನು ಇಡುತ್ತಿದ್ದರು. ಇವುಗಳನ್ನು ಹಗಲು ರಾತ್ರಿಯೆಲ್ಲಾ ಉರಿಸಲಾಗುತ್ತಿತ್ತು."*[110]

ಹಬ್ಬಗಳ ಆಚರಣೆಗಾಗಿ ಧಾರ್ಮಿಕ ಅರಣರು ಕೊಡುಗೆಯನ್ನು ನೀಡಿದರು. ವಸಂತಮಾಸದ ಹೋಳಿ ಹಬ್ಬದ ಬಗ್ಗೆ ಮಾತನಾಡುತ್ತಾ ನಿಕೋಲೋಕೊಂಟಿಯು ಹೇಳುವಂತೆ ಹಬ್ಬದ ಸಮಯದಲ್ಲಿ *"ದಾರಿಯ ಪಕ್ಕದಲ್ಲೇ ಇಡಲಾಗುವ ಹಳದೀ ನೀರನ್ನು ಎಲ್ಲ ದಾರಿಹೋಕರು ರಾಜ ಹಾಗೂ ರಾಣಿಯರ ಮೇಲೂ ಎರಚುತ್ತಾರೆ. ಇದನ್ನು ಎಲ್ಲರೂ ತುಂಬು ನಗುವಿನಿಂದ ಸ್ವಾಗತಿಸುತ್ತಾರೆ."*[111]

ಕೆಲವು ದೇವಾಲಯದ ಕಾರ್ಯಗಳಲ್ಲಿ ರಥೋತ್ಸವಗಳು ಸಾಮಾನ್ಯವಾಗಿದ್ದವು. ದೇವಾಲಯದ ಆನೆಗಳು, ಸಂಗೀತಗಾರರು, ಕಹಳೆಯೂದುವವರು ಹಾಗೂ ನರ್ತಕಿಯರು ದೇವರಮೂರ್ತಿಯನ್ನು ಇಟ್ಟ ರಥದೊಂದಿಗೆ ಮೆರವಣಿಗೆಯಲ್ಲಿ ಸಾಗುತ್ತಿದ್ದರು. ನಿಕೊಲೋಕೊಂಟಿ ಹೇಳುತ್ತಾನೆ ವರ್ಷದ ನಿರ್ದಿಷ್ಟ ದಿನವೊಂದರಲ್ಲಿ ಅವರ ದೇವರಮೂರ್ತಿಯನ್ನು ನಗರದುದ್ದಕ್ಕೂ ಒಯ್ಯಲಾಗುತ್ತದೆ. ಈ ಮೂರ್ತಿಯನ್ನು ಎರಡು ರಥಗಳ ಮಧ್ಯೆ ಇಡಲಾಗಿರುತ್ತದೆ. ಇವುಗಳಲ್ಲಿ ಸುಂದರವಾಗಿ ಸಿಂಗರಿಸಿದ ಕೋಮಲೆಯರು ಕುಳಿತಿರುತ್ತಾರೆ. ಇವರು ದೇವರ ಮೇಲೆ ಕೀರ್ತನೆಗಳನ್ನು ಹಾಡುತ್ತಿರುತ್ತಾರೆ. ಹಾಗೂ ಬೃಹತ್ ಸಂಖ್ಯೆಯ ಜನಗಳು ಇವರ ಜೊತೆ ಇರುತ್ತಾರೆ. ಹಲವರು ತಾವು ಧರ್ಮದ ಮೇಲೆ ಹೊಂದಿದ ನಂಬಿಕೆಯ ಉನ್ಮಾದದಿಂದ ರಥವು ಹರಿಯುವಾಗ ಅದರ ಚಕ್ರದಡಿ ಮಲಗಿ ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದರು. ಇದರಿಂದ ಅವರ ನಂಬಿಕೆಯೇನೆಂದರೆ ಈ ರೀತಿಯಾದ ಸಾವಿನ ಪದ್ಧತಿಯಿಂದ ದೇವರು ಸಂತುಷ್ಟಗೊಳ್ಳುವನು.[112] ಕೆಲಜನಗಳು ತಮ್ಮ ಪ್ರದೇಶದ ದೇವಾಲಯದಲ್ಲಿ ಕೈಗೊಳ್ಳುತ್ತಿದ್ದರು.

ದಕ್ಷಿಣ ಭಾರತದಲ್ಲಿ ಸಾಮಾನ್ಯ ಪದ್ಧತಿಯಾಗಿದ್ದ ಸಿಡಿ-ಆಡುವ ಹಬ್ಬವು ವಿದೇಶೀಯರ ಗಮನವನ್ನು ಹೆಚ್ಚು ಸೆಳೆಯಿತು. ಈ ಸಿಡಿ ಪ್ರದರ್ಶನವನ್ನು ನಿಕೊಲೊಕೊಂಟಿ ಹಾಗೂ ಬಾರ್ಬೋಸಾನಂತವರು ವರ್ಣಿಸಿದ್ದಾರೆ. *"ಯಾರು ತಮ್ಮ ದೇವರ ಮುಂದೆ ವಚನ ತೆಗೆದುಕೊಂಡು ಕೊಂಡಿಯನ್ನು ತಮ್ಮ ಬೆನ್ನಿಗೆ ಸಿಕ್ಕಿಸಿಕೊಂಡು ನೇತಾಡುತ್ತಾ ಈ ಸಾಹಸ ಪ್ರದರ್ಶನವನ್ನು*

ನೀಡುತ್ತಾರೆ" ಈ ಹಬ್ಬವು ಕಬ್ಬಿಣದ ಕೊಂಡಿ 'ಸಿಡಿ' ಎಂಬ ಪದದಿಂದ ಹೆಸರು ಪಡೆಯುತ್ತದೆ.[113] ಈ ಕೊಂಡಿಗೆ ಒಬ್ಬ ಮನುಷ್ಯನನ್ನು ತೂಗುಬಿಡಲಾಗುತ್ತಿತ್ತು. ಅವನ ಬೆನ್ನಹಿಂದೆಯ ಮಾಂಸಖಂಡಕ್ಕೆ ಆ ಕೊಂಡಿಯನ್ನು ಚುಚ್ಚಿ ಅವನನ್ನು ತೂಗಿಬಿಡಲಾಗುತ್ತಿತ್ತು.

ಈ ಪ್ರದರ್ಶನವನ್ನು ವಿವರಿಸುತ್ತಾ ಬಾರ್ಬೋಸಾ ಹೇಳುತ್ತಾನೆ. ಏನೆಂದರೆ ಮಹಿಳೆಯರೂ ದೇವರ ಮೇಲಿನ ಭಕ್ತಿಯನ್ನು ಪ್ರದರ್ಶಿಸಲೋಸುಗ ಈ ಭಯಂಕರ ಪ್ರದರ್ಶನವನ್ನು ನೀಡುತ್ತಾರೆ. ಈ ರೀತಿ ಒಬ್ಬಳು ಮಹಿಳೆ ಸಿಡಿ ಆಡುತ್ತಿದ್ದುದನ್ನು ನೋಡಿ ಅವನು ಹೇಳುತ್ತಾನೆ *"ಒಂದು ನಿರ್ದಿಷ್ಟ ದಿವಸದಂದು ಅವಳು ತನ್ನ ನೆರೆಹೊರೆಯವರ ಜೊತೆಯಲ್ಲಿ ಸಂಬಂಧಿಕರು, ಸ್ನೇಹಿತರು, ಪುರುಷರು ಸ್ತ್ರೀಯರು ಸಂಗೀತವನ್ನು ನುಡಿಸುತ್ತಾ ಹಾಡನ್ನು ಹಾಡುತ್ತಾ ಹಾಗೂ ಹಲವು ನರ್ತಕಿಯರೊಂದಿಗೆ ಹೋಗುತ್ತಾಳೆ. ಸೊಂಟದಿಂದ ಮೇಲಕ್ಕೆ ಬತ್ತಲೆಯಾಗಿರುವ ಇವಳು ಕೆಳಕ್ಕೆ ಹತ್ತಿಯ ಉಡುಪನ್ನು ತೊಟ್ಟಿರುತ್ತಾಳೆ ಬಂಡಿಯು ಇವಳಿಗಾಗಿ ಹೊರಗೆ ಕಾಯುತ್ತಿರುತ್ತದೆ. ಅದರ ಬಳಿ ಇವಳು ಬಂದಾಗಲಅವಳನ್ನು ಎತ್ತಿ ಅವಳ ಸೊಂಟಕ್ಕೆ ಕೊಂಡಿಯನ್ನು ಸಿಗಿಸುತ್ತಾರೆ. ಆನಂತರ ಅವಳ ಎಡಗೈಗೆ ಸಣ್ಣ ಕಟಾರಿಯೊಂದನ್ನು ಕೊಟ್ಟಿರುತ್ತಾರೆ. ಆನಂತರ ಆ ಬಂಡಿಯ ಇನ್ನೊಂದೆಡೆಯಿಂದ ಅದರ ಮೂರ್ತಿ(ಮೂರ್ತಿ)ಯನ್ನು ನಿಧಾನವಾಗಿ ಎತ್ತುತ್ತಾರೆ. ಈ ಸಂದರ್ಭದಲ್ಲಿ ಅಲ್ಲಿ ನೆರೆದಿರುವ ಇಡೀ ಜನಸ್ತೋಮವು ಕಿರಿಚುತ್ತದೆ. ಅವಳ ಕಾಲುಗಳಿಂದ ರಕ್ತದ ಓಕುಳಿಯೇ ಹರಿಯುತ್ತಿದ್ದರೂ ಯಾವುದೇ ನೋವಿಲ್ಲದಂತೆ ತೂಗಾಡುತ್ತಿರುತ್ತಾಳೆ ಹಾಗೂ ಅವಳ ಕೈಯಲ್ಲಿ ಹಿಡಿದ ಕಟಾರಿಯನ್ನು ಬಹಳ ಸಂತೋಷದಿಂದ ಝಳಪಿಸುತ್ತಿರುತ್ತಾಳೆ."*[114]

ಮೇಲೆ ಹೇಳಿದ ಹಬ್ಬಗಳಲ್ಲಿ ಮಹಿಳೆಯರ ಪಾತ್ರವು ನಿಜವಾಗಲೂ ಶ್ರೇಷ್ಠವಾಗಿತ್ತು. ಈ ಹಬ್ಬಗಳಲ್ಲಿ ಅವರು ಬಹಳ ಶೋಭಾನುಮಯವಾದ ರೀತಿಯಲ್ಲಿ ಬಟ್ಟೆಯನ್ನು ಧರಿಸುತ್ತಿದ್ದರು. ಇವರು ದೇವರ ಮುಂದೆ ನರ್ತಿಸುತ್ತಿದ್ದರು. ಹಾಗೆಯೇ ಮೆರವಣಿಗೆಯೊಂದಿಗೆ ಹೋಗುತ್ತಿದ್ದರು. ಧಾರ್ಮಿಕ ನಿಷ್ಠಾವಂತರು ಹಬ್ಬಹರಿದಿನಗಳನ್ನು ಆಚರಿಸುವುದಕ್ಕಾಗಿ ದೇವಾಲಯಗಳಿಗೆ ಕೊಡುಗೆಯನ್ನು ನೀಡುತ್ತಿದ್ದರು. ಈ ಹಬ್ಬಗಳಲ್ಲಿ ಸ್ತ್ರೀಯರು ಭಾಗವಹಿಸುವುದು ಬಹಳ ಪ್ರಮುಖವಾಗಿತ್ತು. ನಿಕೊಲೊ ಕೊಂಟಿಯು ನಗರದ ಸಾಮಾನ್ಯ ಜನರು ಹಬ್ಬದ ಸಮಯದಲ್ಲಿ ಮೂರು ಸಂಪೂರ್ಣ ದಿವಸಗಳನ್ನು ಹಾಡುವುದರಲ್ಲಿ, ನರ್ತಿಸುವುದರಲ್ಲಿ ಹಾಗೂ ದಿವ್ಯಭೋಜನವನ್ನು ಸೇವಿಸುವುದರಲ್ಲಿ ಕಾಲ ಕಳೆಯುತ್ತಿದ್ದುದನ್ನು ನೋಡಿದ್ದನು. ಇದು ಬಹುಶಃ ಹೊಸ ವರ್ಷದ ದಿವಸವಾಗಿದ್ದು ಇದನ್ನು ಮೂರು ದಿವಸಗಳ ಕಾಲ ಆಚರಿಸಲಾಗುತ್ತಿತ್ತು.[115] ಧಾರ್ಮಿಕ ಹರಕೆಗಳನ್ನು ತೀರಿಸುವ ಅಂಥ ಪದ್ಧತಿಗಳಿದ್ದವು. ಇವುಗಳಲ್ಲಿ ಸಿಡಿ ಆಡುವ ಪದ್ಧತಿ ಅಥವಾ ರಥದ ಚಕ್ರದಡಿ ಮಲಗುವುದು ಕೆಟ್ಟಪದ್ಧತಿಗಳಾಗಿದ್ದವು.

7. ವಿವಾಹ:

ಹಿಂದೂ ವಿವಾಹ ಸಂಸ್ಥೆಯು ನಾಗರಿಕ ಪ್ರಪಂಚದ ಸಾಮಾಜಿಕ ಸಂಸ್ಥೆಗಳಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಹಿಂದೂ ವಿವಾಹವು ಒಂದು ಧಾರ್ಮಿಕ ಸಂಸ್ಕಾರವೆಂದು ಹೇಳಬಹುದು. ಇದರಲ್ಲಿ ಒಬ್ಬ ಪುರುಷ ಹಾಗೂ ಸ್ತ್ರೀ, ಇಬ್ಬರು ಭೌತಿಕ ಸಾಮಾಜಿಕ ಮತ್ತು ಆಧ್ಯಾತ್ಮಿಕ ಧರ್ಮದ ಉದ್ದೇಶಗಳಿಗೆ ಹಾಗೂ ಸಂತಾನೋತ್ಪತ್ತಿ ಮತ್ತು ಲೈಂಗಿಕತೃಪ್ತಿಯನ್ನು ತೃಷೆಗೊಳಿಸುವ ಒಂದು ಆಚಾರಕ್ಕೆ ಬದ್ಧರಾಗಿರುತ್ತಾರೆ. ಇದು ಸ್ತ್ರೀ ಪುರುಷನ ಶಾಶ್ವತ ಸಂಬಂಧದಲ್ಲಿಹೆಚ್ಚು ಸದೃಶವಾಗಿರುತ್ತದೆ. ಅದರ ಉದ್ದೇಶ ಕೇವಲ ಪ್ರಾಪಂಚಿಕ ದೈಹಿಕ ಸುಖವಾಗಿರದೆ ಆಧ್ಯಾತ್ಮಿಕ ಬೆಳವಣಿಗೆಯೂ ಆಗಿರುತ್ತದೆ.

ಹಿಂದೂ ವಿವಾಹದ ಮೂಲಕ ಉದ್ದೇಶಗಳನ್ನು ಈ ಕೆಳಕಂಡಂತೆ ಸಂಕ್ಷಿಪ್ತಗೊಳಿಸಬಹುದು.

1. ಧರ್ಮ ಅಥವಾ ಧಾರ್ಮಿಕ ಕರ್ತವ್ಯಗಳನ್ನು ಈಡೇರಿಸುವುದು
2. ಸಂತಾನೋತ್ಪತ್ತಿ-ಹಿಂದೂ ಕುಟುಂಬದಲ್ಲಿ ಮಗುವಿಗೆ ಬಹಳ ಪ್ರಮುಖವಾದ ಸ್ಥಾನವಿದೆ.
3. ಲೈಂಗಿಕ ಸುಖ-ಭಾರತೀಯ ಸಂಹಿತೆಗಳು. ಲೈಂಗಿಕ ಸುಖವನ್ನು ಪರಮಸುಖವನ್ನು ಪಡೆಯುವುದರೊಂದಿಗೆ ಹೋಲಿಸಿದ್ದಾರೆ.

ಬಹುತೇಕ ಎಲ್ಲಾ ಸಮಾಜಗಳಲ್ಲಿಯೂ ಒಂದಲ್ಲ ಒಂದು ವಿಧವಾದ ವಿವಾಹವು ಅಸ್ತಿತ್ವದಲ್ಲಿರುತ್ತದೆ. ಎಲ್ಲಾ ಕಾಲದಲ್ಲಿಯೂ ಜನಗಳು ವಿವಾಹವಾಗುತ್ತಿದ್ದರು. ಕಾರಣವೇನೆಂದರೆ, ಕುಟುಂಬವು ಜೀವಿಸುವುದಕ್ಕೆ ಅತ್ಯಂತ ಸನಿಹ ಹಾಗೂ ಸಹಿತವಾದ ಆಶ್ರಯ ಎಂಬ ಸತ್ಯವನ್ನು ಅವರು ಮನಗಂಡಿದ್ದರು. ಸಾಮಾನ್ಯವಾಗಿ ಹಿಂದೂಗಳಲ್ಲಿ ವಿವಾಹವು ಪ್ರತಿಯೊಬ್ಬರಿಗೂ ಕರ್ತವ್ಯವಾಗಿತ್ತು. ಇದು ಪ್ರತಿಯೊಬ್ಬ ವ್ಯಕ್ತಿಗೂ ಒಂದು ಸಂಸ್ಕಾರವಾಗಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ ವಿವಾಹವು ಮನುಷ್ಯನಿಗೆ ತನ್ನ ಮೂರು ಋಣಗಳಿಂದ ಮುಕ್ತಿ ಹೊಂದಲು ಸಹಾಯಕವಾಗುತ್ತದೆ. ಅವುಗಳೆಂದರೆ ದೇವರ ಋಣ, ಗುರುವಿನ ಋಣ ಹಾಗೂ ಪಿತೃಋಣ, ಇದರ ಜೊತೆಗೆ ಪತಿ ಪತ್ನಿಯರಿಬ್ಬರೂ ಸೇರಿ ಪಂಚಮಹಾಯಾಗಗಳನ್ನು ಮಾಡಬೇಕಿತ್ತು. ಈ ಎಲ್ಲಾ ಹಲವಾರು ಆಚರಣೆಗಳು ತಿಳಿಸುತ್ತಿದ್ದೇನೆಂದರೆ ಗಂಡಹೆಂಡತಿಯರು ಪರಸ್ಪರ ಪ್ರೀತಿಸಬೇಕು ಹಾಗೂ ಪರಿಪೂರ್ಣ ಸಾಮರಸ್ಯತೆಯಿಂದ ಜೀವಿಸಬೇಕು.

ಹಿಂದೂ ಸ್ಮೃತಿಗಳು ಕೆಳಗಿನ ಎಂಟು ವಿವಾಹ ಪದ್ಧತಿಗಳನ್ನು ಅಂಗೀಕರಿಸಿವೆ.

1. **ಬ್ರಹ್ಮ ವಿವಾಹ:** ಈ ರೀತಿಯ ವಿವಾಹ ಪದ್ಧತಿಯಲ್ಲಿ ಸರ್ವ ಆಭರಣಗಳಿಂದ ಸರ್ವಾಲಂಕೃತಗೊಂಡ ಕನ್ಯೆಯನ್ನು ವಿದ್ಯಾವಂತ ಹಾಗೂ ಉತ್ತಮ ನಡವಳಿಕೆಯ ವರನೊಂದಿಗೆ ವಿವಾಹ ಮಾಡಲಾಗುತ್ತದೆ.

2. **ಪ್ರಜಾಪತ್ಯ:** ಈ ವಿವಾಹ ಪದ್ಧತಿಯಲ್ಲಿ ಹೆಣ್ಣು ಮಗಳನ್ನು ವಿವಾಹದ ಜೀವನದ ನಂತರ ಸಂಪೂರ್ಣ ಸುಖಪ್ರಾಪ್ತವಾಗಲೆಂದೂ ಹಾಗೂ ಧರ್ಮವನ್ನು ಸಂಪೂರ್ಣವಾಗಿ ಈಡೇರಿಸಲೆಂದು ವರನಿಗೆ ವಿವಾಹ ಮಾಡಿಕೊಡಲಾಗುತ್ತದೆ.

3. **ಆರ್ಶ ವಿವಾಹ:** ಈ ರೀತಿಯ ವಿವಾಹ ಪದ್ಧತಿಯಲ್ಲಿ ಋಷಿಯೊಬ್ಬನು ಕನ್ಯೆಯ ಪೋಷಕರಿಗೆ ಹಸು ಅಥವಾ ಎತ್ತು ಹಾಗೂ ಸ್ವಲ್ಪ ಬಟ್ಟೆ ನೀಡಿದ ನಂತರ ಆ ಹುಡುಗಿಯ ಕೈ ಹಿಡಿಯುತ್ತಿದ್ದನು.

4. **ದೈವ ವಿವಾಹ:** ಈ ರೀತಿಯ ವಿವಾಹ ಪದ್ಧತಿಯಲ್ಲಿ ಒಳ್ಳೆಯ ಉಡುಪು ಹಾಗೂ ಒಡವೆಗಳಿಂದ ಅಲಂಕೃತಳಾದ ವಧುವನ್ನು ಯಜ್ಞವನ್ನು ನಡೆಸುತ್ತಿದ್ದ ಪುರೋಹಿತನೊಂದಿಗೆ ವಿವಾಹ ಮಾಡಲಾಗುತ್ತಿತ್ತು.

5. **ಅಸುರ ವಿವಾಹ:** ಈ ಮಾದರಿಯಾದ ವಿವಾಹ ಪದ್ಧತಿಯಲ್ಲಿ ವರನು ಸ್ವಲ್ಪ ಹಣ ಸಾಮಾನುಗಳನ್ನು ವಧುವಿನ ಕುಟುಂಬದ ಸದಸ್ಯರಿಗೆ ಕೊಟ್ಟು ಅದಕ್ಕೆ ಪ್ರತಿಯಾಗಿ ವಧುವನ್ನು ಪಡೆಯುತ್ತಿದ್ದನು.

6. **ಗಾಂಧರ್ವ ವಿವಾಹ:** ಈ ವಿವಾಹ ಪದ್ಧತಿಯು ವಧು ಹಾಗೂ ವರರಿಬ್ಬರ ಪರಸ್ಪರ ಪ್ರೇಮದಿಂದ ಏರ್ಪಡುತ್ತಿತ್ತು.

7. **ರಾಕ್ಷಸ ವಿವಾಹ:** ಈ ರೀತಿಯ ವಿವಾಹ ಪದ್ಧತಿಯು ಸ್ತ್ರೀಯರನ್ನು ಪಣಕ್ಕಿಟ್ಟು ಯುದ್ಧದ ಬಹುಮಾನವೆಂದು ಪಡೆಯುತ್ತಿದ್ದ ಕಾಲದಲ್ಲಿ ಅಸ್ತಿತ್ವದಲ್ಲಿತ್ತು.

8. **ಪೈಶಾಚ ವಿವಾಹ:** ಇದನ್ನು ಬಹಳ ಕೆಳಮಟ್ಟದ ವಿವಾಹ ಪದ್ಧತಿ ಎಂದು ಕರೆಯಲಾಗಿದೆ. ಈ ಪದ್ಧತಿಯಲ್ಲಿ ಒಬ್ಬ ಪುರುಷನು ನಿದ್ರೆಹೋದ, ಅಮಲೇರಿದ ಅಥವಾ ಪ್ರಜ್ಞೆಯಿಲ್ಲದ ಸ್ತ್ರೀಯ ಜೊತೆ ಲೈಂಗಿಕ ಸಂಬಂಧವನ್ನು ಹೊಂದುವುದಾಗಿದೆ. [116]

ಹಿಂದೂಗಳಲ್ಲಿ ಬಾಲ್ಯ ವಿವಾಹ ಪದ್ಧತಿಗಳು ರೂಢಿಯಲ್ಲಿದ್ದವು. ಬಾರ್ಬೋಸನು ಈ ಪದ್ಧತಿಯನ್ನು ಬ್ರಾಹ್ಮಣರಲ್ಲಿ ಕಂಡನು.[117]

ಪುರಾತನ ಹಿಂದೂ ಸ್ಮೃತಿಗಳ ಕಟ್ಟಳೆಯ ಪ್ರಕಾರ ವಿಜಯನಗರದ ಬ್ರಾಹ್ಮಣರು ತಮ್ಮ ಹೆಣ್ಣುಮಕ್ಕಳನ್ನು ಸಾಮಾನ್ಯಕ್ಕಿಂತ ಬಹಳ ಚಿಕ್ಕವಯಸ್ಸಿನಲ್ಲಿ ವಿವಾಹ ಮಾಡುತ್ತಿದ್ದರು. ತನ್ನ ಭೇಟಿಯ ಸಮಯದಲ್ಲಿ ಈ ಪದ್ಧತಿಯನ್ನು ಕಣ್ಣಾರೆ ಕಂಡ ಲಂಶೋಟಿನ್ ಈ ರೀತಿ ಹೇಳುತ್ತಾನೆ. *"ಏಳು ವರ್ಷದ ಮಹಿಳೆ ಹಾಗೂ ಒಂಬತ್ತು ವರ್ಷದ ಪುರುಷರಿಬ್ಬರು ವಿವಾಹವಾದಾಗ ಅವರು ವಿವಾಹ ಮಾತ್ರವಾಗುತ್ತಾರೆ. ಆದರೆ ಸಂತಾನೋತ್ಪತ್ತಿಯ ಲಕ್ಷಣಗಳು ಮಾತ್ರ ಇರುವುದಿಲ್ಲ."* ಈ ರೀತಿಯಾದ ಬ್ರಾಹ್ಮಣರ ಪದ್ಧತಿಯನ್ನು ಹೆಚ್ಚು ಭಾಗ ಇತರೆ ಜಾತಿಯವರು ಅನುಸರಿಸುತ್ತಿದ್ದರು. ಈ ರೀತಿಯಾಗಿ ಫೆರಿಸ್ತಾ,

ನೆಹಲ್ ಪ್ರಕಾರವಾಗಿ[118] ರೈತನೋರ್ವನ ಹುಡುಗಿಯೊಬ್ಬಳನ್ನು ಬಾಲ್ಯದಲ್ಲಿ ಅವಳದೇ ಜಾತಿಯ ಯುವಕನೋರ್ವನೊಂದಿಗೆ ವಿವಾಹ ಮಾಡಲಾಗುತ್ತಿತ್ತು. ಹಾಗೂ ಇದು ಹಿಂದೂಸ್ಥಾನದ ಪದ್ಧತಿಯ ಅನುಮೋದನೆಯ ಅನುಸಾರವಾಗಿತ್ತು.[119]

ಬ್ರಾಹ್ಮಣರು ಏಕಪತ್ನಿತ್ವವನ್ನು ಹೆಚ್ಚು ಇಷ್ಟಪಡುತ್ತಿದ್ದರು. ಇದು ಅವರ ಆರ್ಥಿಕ ಸ್ಥಿತಿಯ ಕಾರಣದಿಂದಲೂ ಇರಬಹುದು. ವಿಜಯನಗರದ ಜನರ ಬಗ್ಗೆ ಬಾರ್ಬೋಸಾ ಹೇಳುತ್ತಾನೆ. "ರಾಜ ಹಾಗೂ ನಾಡಿನ ಜನರು ಹೆಚ್ಚು ಕಡಿಮೆ ನಮ್ಮಂತೆಯೇ ವಿವಾಹವಾಗುತ್ತಾರೆ. ಅವರಿಗೆ ವಿವಾಹ, ಕಾನೂನೂ ಇದೆ, ಆದರೂ ಇವರನ್ನು ಸಲಹುವ ಸಾಮರ್ಥ್ಯವಿರುವ ಶ್ರೀಮಂತ ಮಹಿಳೆಯರನೇಕರನ್ನು ವಿವಾಹವಾಗುತ್ತಾರೆ.[120]

ಇದೇ ನಗರದಲ್ಲಿ ಲಿಂಗಾಯತರ ಪದ್ಧತಿ ಹಾಗೂ ಆಚರಣೆಗಳನ್ನು ಕುರಿತು ಅವನು ಹೇಳುತ್ತಾನೆ. *'ಅವರು ಕೇವಲ ಒಬ್ಬ ಹೆಂಡತಿಯನ್ನು ಮಾತ್ರ ವಿವಾಹವಾಗುತ್ತಾರೆ ಹಾಗೂ ಅವನು ಸತ್ತಾಗ ಅವನ ಹೆಂಡತಿ ತನ್ನನ್ನು ತಾನೆ ಸ್ವತಃ ಜೀವಂತ ಹೂತುಕೊಳ್ಳುತ್ತಾಳೆ.'*[121] ಮಹಾಮಂಡಲೇಶ್ವರ ರಾಮರಾಜು ರಾಮರಾಜಯ್ಯದೇವ ಮಹಾರಸನು ನಂಜರಾಯಪಟ್ಟಣ, ಬಸವಾಪಟ್ಟಣ ಮತ್ತು ಕೋಣನ ಊರ ಸ್ಥಳದ ವೀರರಾಜುವಿನ ಮಗಳನ್ನು ವಿವಾಹ ಮಾಡಿಕೊಟ್ಟಿದ್ದಕ್ಕಾಗಿ ಕ್ರಿ.ಶ. 1579ರಲ್ಲಿ ಪಲ್ಲಕಿಯುಂಬಳಿ ಎಂಬ ಎರಡು ಹಳ್ಳಿಗಳನ್ನು ಕೊಡುಗೆಯಾಗಿ ನೀಡಿದ ಬಗ್ಗೆ ಒಂದು ಶಾಸನವು ಕೊಡುಗೆ ದಾಖಲೆಯನ್ನು ನೀಡುತ್ತದೆ.[122]

ಇನ್ನೊಂದು ಶಾಸನದ ಪ್ರಕಾರ ಎಡದುಹಾಳಿನ ಕಳಸಪ್ಪನ ಹೆಂಡತಿಯಾದ ಉಮ್ಮಾಕ್ಕರ್ ಎಂಬ ಸ್ತ್ರೀಯೊಬ್ಬಳು ತನ್ನ ಮೊಮ್ಮೊಗನ ಮದುವೆಗೆಂದು ಸೂರಪ್ಪ ಸೇನಾಬೋವನ ಸಮ್ಮುಖದಲ್ಲಿ ಹಣವನ್ನು ಸ್ವೀಕರಿಸಿದಳು ಹಾಗೂ ಇದಕ್ಕೆ ಪ್ರತಿಯಾಗಿ ಕ್ರಿ.ಶ. 1524ರಲ್ಲಿ ಭೂಮಿಯನ್ನು ನೀಡಿದಳು.[123] ದೇವರಾಯನ ಕಾಲದಲ್ಲಿ ಕನ್ಯಾದಾನ ವಿವಾಹ ಪದ್ಧತಿಯು ಅಸ್ತಿತ್ವದಲ್ಲಿತ್ತು.[124] ಕನ್ಯಾದಾನವೆಂದರೆ ಒಬ್ಬ ಕನ್ಯೆಯನ್ನು ಪುರುಷನೊಬ್ಬನಿಗೆ ಕೊಟ್ಟು ವಿವಾಹ ಮಾಡುವುದು ಕನ್ಯಾದಾನವನ್ನು ಪುಣ್ಯದ ಕಾರ್ಯವೆಂದು ತಿಳಿಯಲಾಗಿತ್ತು. ವಿವಾಹ ತೆರಿಗೆಯ ಬಗ್ಗೆ ಹಲವಾರು ಶಾಸನಗಳು ಉಲ್ಲೇಖವನ್ನು ನೀಡುತ್ತವೆ. ಉದಾ: ಕ್ರಿ.ಶ. 1510ರ ಒಂದು ಶಾಸನವು ಒಡೆಯನೊಬ್ಬನು ಯಾಲಪೆ-ಸೀಮೆಯಲ್ಲಿ ವಿವಾಹದ ಮೇಲಿನ ತೆರಿಗೆಯನ್ನು ತೆಗೆದುಹಾಕಿದುದರ ಬಗ್ಗೆ ದಾಖಲೆಯನ್ನು ನೀಡುತ್ತದೆ.[125]

ಕ್ರಿ.ಶ. 1527ರ ಇನ್ನೊಂದು ಶಾಸನವು ಬಾಯಿಪನಾಯಕನೆಂಬುವನು ಕ್ರಿ.ಶ. 1527ರಲ್ಲಿ ಯಗಟಿಯ 1000 ಪ್ರಾಂತ್ಯದ ಶೂದ್ರರ (ಶುದ್ರ ಮದುವೆಯ ಸುಂಕ) ಮೇಲಿನ ಸುಂಕವನ್ನು ಒಂದು ಕೊಡುಗೆಯನ್ನು ನೀಡುವುದರ ಮೂಲಕವಾಗಿ ವಿನಾಯತಿಗೊಳಿಸಿದನು.[126] ಕ್ರಿ.ಶ. 1537ರಲ್ಲಿ ಒಂದುಶಾಸನವು ದಾಖಲಿಸುವಂತೆ ತಿಮ್ಮಪ್ಪನಾಯಕನು ಸೋಲೂರು

ಸೀಮೆಯಲ್ಲಿ ವಿವಾಹತೆರಿಗೆಯನ್ನು ನೀಡಿದ್ದನು.[127] ಕ್ರಿ.ಶ.1562ರ ಒಂದು ಶಾಸನವು ದಾಖಲಿಸುವಂತೆ ಸಾತಿನಾಡಿನ ಕಾಳೇಯ ಸ್ಥಳದ ಪ್ರಭುಗಳು ಹಾಗೂ ಮಹಾ ರಾಮರಾಯದೇವ ಮಹಾರಸು ಇವರು ವಿವಾಹದ ತೆರಿಗೆಯನ್ನು ನೀಡಿದರು.[128] ಕ್ರಿ.ಶ. 1534ರ ಶಾಸನವೊಂದು ವಿವಾಹದ ಮೇಲಿನ ತೆರಿಗೆಯ ವಿನಾಯಿತಿಯ ಬಗ್ಗೆ ದಾಖಲೆಯನ್ನು ನೀಡುತ್ತದೆ.[129] ಕ್ರಿ.ಶ.1540ರ ಶಾಸನವೊಂದು ದಾಖಲಿಸುವಂತೆ ಜಾಜೂರು ಸೀಮೆಯ ಎಲ್ಲಾ ವರ್ಗದ ಜನಗಳನ್ನು ತೆರಿಗೆಯಿಂದ ವಿಮುಕ್ತಗೊಳಿಸಿದುದರ ಬಗ್ಗೆ ಹೇಳಲಾಗಿದೆ.[130] ಕ್ರಿ.ಶ. 1540ರ ಶಾಸನವೊಂದು ಬಾಗೂರು ಸೀಮೆ ದಲಿತ ಜನಗಳ ಮೇಲೆ ಹಾಕಲಾಗಿದ್ದ ತೆರಿಗೆಯನ್ನು ಅವರು ಪಾವತಿ ಮಾಡಿದುದರ ಬಗ್ಗೆ ಮಾಹಿತಿಯನ್ನು ನೀಡುತ್ತದೆ.[131]

8. ವರದಕ್ಷಿಣೆ:

ವಿಜಯನಗರದ ಕಾಲದಲ್ಲಿ ವಧುಶುಲ್ಕದ ಸಮಸ್ಯೆ ಅತ್ಯಂತ ಗಂಭೀರ ಸಮಸ್ಯೆಯಾಗಿತ್ತು ಹಾಗೂ ಇದು ಒಂದು ಉತ್ತಮ ಪರಿಹಾರವನ್ನು ಬಯಸಿತ್ತು. ವಿಜಯನಗರದ ದಿನಗಳಲ್ಲಿ ವರದಕ್ಷಿಣೆ ಪದ್ಧತಿಯು ಅಸ್ತಿತ್ವದಲ್ಲಿತ್ತು. ಇದು ಕಡ್ಡಾಯವಾಗಿದ್ದುದರ ಪರಿಣಾಮವಾಗಿ ಹಲವಾರು ಕುಟುಂಬಗಳಿಗೆ ಇದು ಬಹಳ ಹೊರೆಯಾಗಿತ್ತು. ಜನಗಳು ಸಾಂಪ್ರದಾಯಿಕ ವಿವಾಹ ಪದ್ಧತಿಗಳನ್ನು ಅನುಸರಿಸುತ್ತಿದ್ದರು. ರಾಜಮನೆತನದ ವಿವಾಹಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಹಾಗೂ ಬಹಳ ವೆಚ್ಚದಾಯಕವಾಗಿ ಆಚರಿಸುತ್ತಿದ್ದರು. ತಮ್ಮ ಬೆಳೆದ ಹೆಣ್ಣು ಮಕ್ಕಳ ಮದುವೆಯ ಬಗ್ಗೆ ಪೋಷಕರು ಬಹಳ ಚಿಂತಿತರಾಗುತ್ತಿದ್ದರು. ವಿವಾಹ ಪದ್ಧತಿಗಳು ಜನರ ಜೀವನವನ್ನೇ ವಿನಾಶಗೊಳಿಸುತ್ತಿದ್ದವು.[132] ಬಾಲ್ಯ ವಿವಾಹ ಪದ್ಧತಿಗಳು ಸಾಮಾನ್ಯವಾಗಿದ್ದವು. ಎರಡನೇ ದೇವರಾಯನು[133] ಕ್ರಿ.ಶ.1432ರಲ್ಲಿ ಬಳ್ಳಾಪುರದಲ್ಲಿ ಎಲ್ಲಾ ವರ್ಗದವರ ಮೇಲೆ ವಿವಾಹ ತೆರಿಗೆಯನ್ನು ವಿಧಿಸಿದನು ಬಹುಶಃ ಇದು ವರದಕ್ಷಿಣೆ ಪದ್ಧತಿಯನ್ನು ನಿಷ್ಪ್ರಯೋಜಕಗೊಳಿಸುವ ಉದ್ದೇಶದಿಂದ ಮಾಡಲಾಯಿತು.[134]

ವರದಕ್ಷಿಣೆ ಪದ್ಧತಿಯು ವಿವಾಹವು ಒಂದು ದಾನ ಎಂಬ ಕಲ್ಪನೆಯೊಂದಿಗೆ ಸಂಬಂಧವನ್ನು ಹೊಂದಿದೆ. ವರದಕ್ಷಿಣೆ ಸಂಬಂಧ ಮನು ಈ ಕೆಳಕಂಡಂತೆ ಹೇಳುತ್ತಾನೆ. *"ಯಾವುದೇ ಈ ನಿಯಮಗಳನ್ನು ತಿಳಿದು ತಂದೆಯು ತನ್ನ ಮಗಳಿಗಾಗಿ ಸಣ್ಣ ಗಾತ್ರದ ಕಾಣಿಕೆಯನ್ನೂ ಪಡೆಯಬಾರದು. ಯಾವ ವ್ಯಕ್ತಿ ತನ್ನ ದುರಾಸೆಯಿಂದ ಈ ಕಾಣಿಕೆಯನ್ನು ಸ್ವೀಕರಿಸುತ್ತಾನೋ ಅವನು ತನ್ನ ಮಗಳನ್ನು ಮಾರಾಟ ಮಾಡುತ್ತಾನೆ,[135] ಆದರೆ ಕೆಲವರು ಆರ್ಶ ವಿವಾಹ ಪದ್ಧತಿಯಲ್ಲಿ ಕೊಡಲಾಗುವ ಹಸುಹಾಗೂ ಎತ್ತನ್ನು ದಕ್ಷಿಣೆ ಎನ್ನುತ್ತಾರೆ. ಆದರೆ ಇದು ತಪ್ಪು, ಕಾರಣವೇನೆಂದರೆ ಈ ದಕ್ಷಿಣೆಯು ಕನ್ಯೆಯ ಮೇಲಿನ ಮಮತೆ ಹಾಗೂ ಗೌರವದಿಂದ ಕೊಡಲ್ಪಟ್ಟಿರುತ್ತದೆ."*

ಪುನಃ ಹೇಳುತ್ತಾನೆ "ಶೂದ್ರನೂ ಕೂಡ ವಿವಾಹ ದಕ್ಷಿಣೆಯನ್ನು ಪಡೆಯುವಂತಿಲ್ಲ. ಏಕೆಂದರೆ ಈ ರೀತಿ ಯಾರು ದಕ್ಷಿಣೆಯನ್ನು ಪಡೆಯುತ್ತಾನೋ ಅವನು ತನ್ನ ಮಗಳನ್ನು ಮಾರುತ್ತಾನೆ. ಹಿಂದಿನವರಾಗಲೀ ಅಥವಾ ಈಗಿನವರಾಗಲೀ ಉತ್ತಮ ಸಂಸ್ಕೃತಿಯ ಜನಗಳು ಈ ರೀತಿ ಮಾಡಿಲ್ಲ (ಅಂದರೆ ತಮ್ಮ ಮಗಳನ್ನು ಒಬ್ಬನಿಗೆ ಕೊಡುತ್ತೇನೆಂದು ಹೇಳಿ ನಂತರ ಬೇರೊಬ್ಬನೊಂದಿಗೆ ವಿವಾಹ ಮಾಡುವುದು). ಆದ್ದರಿಂದ ಮನುವಿನ ಪ್ರಕಾರ ಶುಲ್ಕವನ್ನು ಸಣ್ಣ ಪ್ರಮಾಣದಲ್ಲಿಯಾಗಲಿ ಅಥವಾ ದೊಡ್ಡ ಪ್ರಮಾಣದಲ್ಲಾಗಲೀ ಸ್ವೀಕರಿಸುವುದು ಮಗಳನ್ನು ಮಾರಿದಂತೆ. ಆದ್ದರಿಂದ ಇದನ್ನು ವಿರೋಧಿಸಬೇಕು"

ಅನುಪಾತ ಪದ್ಧತಿಯು ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ವರದಕ್ಷಿಣೆ ಪದ್ಧತಿಗೆ ಒಂದು ಪ್ರಮುಖ ಕಾರಣವಾಗಿತ್ತು. ಪುರುಷರ ಅನುಪಾತವು ಸ್ತ್ರೀಯರ ಅನುಪಾತಕ್ಕಿಂತ ಕಡಿಮೆಯಾಗಿತ್ತು. ಆದ್ದರಿಂದ ಗಂಡು ಜನಸಂಖ್ಯೆಗೆ ಹೆಚ್ಚಿನ ಪೈಪೋಟಿ ಹಾಗೂ ಬೇಡಿಕೆಯಿತ್ತು. ಗ್ರಾಮಗಳನ್ನೇ ವರದಕ್ಷಿಣೆಯಾಗಿ ನೀಡಲಾಗುತ್ತಿತ್ತು.[136]

ವಿಜಯನಗರ ಕಾಲದ ಬ್ರಾಹ್ಮಣರು ವರದಕ್ಷಿಣೆ ಸ್ವೀಕರಿಸುವುದನ್ನು ಖಂಡಿಸಿದರು. ವರದಕ್ಷಿಣೆಯು ಹೆಚ್ಚು ಸಹಿಸಲಸಾಧ್ಯವಾಗುತ್ತಿದ್ದುದನ್ನು ಅವರು ಮನಗಂಡಿರಬೇಕು. ಹಾಗೆಯೇ ಈ ಪದ್ಧತಿಯು ಹಿಂದೂ ಕುಟುಂಬಗಳ ಭೌತಿಕ ಅಭ್ಯುದಯದ ಮೇಲೆ ಪ್ರಭಾವವನ್ನುಬೀರುತ್ತಿತ್ತು. ಸಾಮಾನ್ಯ ಜನಗಳ ಮೇಲೆ ಎಷ್ಟು ಪ್ರಮಾಣದ ವರದಕ್ಷಿಣೆ ವಿಧಿಸಲಾಗುತ್ತಿತ್ತು ಎಂಬುದು ನಮಗೆ ತಿಳಿಯದಿದ್ದರೂ ಸುಸ್ಥಿತಿಯಲ್ಲಿದ್ದ ಕುಟುಂಬಗಳು ಇಡೀ ಹಳ್ಳಿಗಳನ್ನೇ ವರದಕ್ಷಿಣೆಯಾಗಿ ಕೊಡುವ ಪದ್ಧತಿಯನ್ನು ನಾವು ಕಾಣುತ್ತೇವೆ.[137] ಮಿತಿಮೀರಿದ ವರದಕ್ಷಿಣೆ ಹಾಗೂ ವಿವಾಹದ ತರುವಾಯ ಬರುವ ಭರಿಸಲಾಗದ ಖರ್ಚಿನಿಂದಾಗಿ ಜನಗಳು ತಮ್ಮ ಆಸ್ತಿಯನ್ನೇ ಕಳೆದುಕೊಳ್ಳಬೇಕಾಗುತ್ತಿತ್ತು. ಬಹುಶಃ ಈ ವಾಸ್ತವಾಂಶವನ್ನು ಕ್ರಿ.ಶ. 1404ರ ಶಾಸನವೊಂದರಲ್ಲಿ ಪ್ರಸ್ತಾಪಿಸಲಾಗಿದೆ. ಇದು ಹೇಳುವಂತೆ ಅಚ್ಚಪ್ಪನ ಮಗ ವಿಠಲಪ್ಪನು ಬೇಲೂರು ವಾರಶವದೇವನ ಮಗನಾದ ಸುಗಣ್ಣನಿಗೆ ಅರಗವೆಂತೆಯ ಬೆಳವೆಯಲ್ಲಿನ ವಿರುವಾಂಬಿಕಪುರ ಎಂದು ಕರೆಯಲ್ಪಡುತ್ತಿದ್ದ ಕಾಂಡವಳ್ಳಿಯನ್ನು ಭೂಮಿಯೊಂದಿಗೆ ಸೇರಿಸಿ ವಿವಾಹದಉದ್ದೇಶದಿಂದ ಕೊಡಲಾಯಿತು. (ನಾನ್ ನಮ್ಮ ಪ್ರಸ್ತಾನಿಮಿತವಾಗಿ ಹಿಮಾಗೆ ಕ್ರಯವಾಗಿ ಕೊಟ್ಟ) ಸುಮಾರು ಕ್ರಿ.ಶ. 1429ರ ಶಾಸನವೊಂದು ದಾಖಲೆಯನ್ನು ನೀಡುವಂತೆ ಆಳ್ವಪ್ರಭು ಬೊಮ್ಮಿನಾಯಕ ಹೆಗ್ಗಡತಿಯ ಮಗನು ಇವನ ಹೆಸರು ಹಾಳಾಗಿರುವ ಈ ಶಾಸನದಲ್ಲಿ ಅಸ್ಪಷ್ಟವಾಗಿದೆ. ಮದುವೆಯ ಉದ್ದೇಶದಿಂದ ಸ್ಥಾನಿಕ ದೇವಾಲಯದ ಅರ್ಚಕನಾದ ದೇವಪ್ಪಯ್ಯನ ಮಗನಾದ ಬೋವಣ್ಣಯ್ಯನಿಗೆ ಭೂಮಿಯನ್ನು ಮಾರಿದನು.[138]

ಸರಿಸುಮಾರು ಈ ಹೊತ್ತಿಗೆ ಬ್ರಾಹ್ಮಣರು ಮದುವೆಗೆ ಸಂಬಂಧಿಸಿದ ಧರ್ಮದ ಪ್ರಶ್ನೆಗೆ ಒಂದು ಒಪ್ಪಂದವನ್ನು ಮಾಡಿಕೊಂಡರು. ಇದರ ಪ್ರಕಾರವಾಗಿ ಇಂದಿನಿಂದ ಬ್ರಾಹ್ಮಣರಲ್ಲಿ ಮದುವೆಯು ಕೇವಲ ಕನ್ಯಾದಾನದ ಮುಖಾಂತರ ಕೊನೆಗೊಳ್ಳಬೇಕು. ಕನ್ಯೆಯ ತಂದೆಯು ತನ್ನ ಮಗಳನ್ನು ಯಾವುದೇ ಖರ್ಚಿಲ್ಲದೆ ಉಚಿತವಾಗಿ ಕಳುಹಿಸಿಕೊಡಬೇಕು, ವರ

ಹಾಗೂ ಅವನ ತಂದೆ ಇವರಲ್ಲಿ ಯಾರಾದರೂ ಹಣವನ್ನು ನಿರೀಕ್ಷಿಸಿದಲ್ಲಿ ಅವರನ್ನು ರಾಜನು ಶಿಕ್ಷೆಗೆ ಗುರಿಪಡಿಸುತ್ತಿದ್ದನು ಹಾಗೂ ಇವರನ್ನು ಜಾತಿಯಿಂದ ಬಹಿಷ್ಕಾರ ಮಾಡಲಾಗುತ್ತಿತ್ತು.[139]

ಇದನ್ನು ಪಡೈವೀಡು ರಾಜ್ಯಕ್ಕೆ ಸೇರಿದ ಕ್ರಿ.ಶ. 1420ರ ಶಾಸನವೊಂದರಲ್ಲಿ ಉಲ್ಲೇಖಿಸಲಾಗಿದೆ. ಈ ಕಾಲದಲ್ಲಿ ಪ್ರಸಿದ್ಧ ದೊರೆಯಾದ ವೀರಪ್ರತಾಪ ದೇವರಾಯ ಮಹಾರಾಯನು ಪೃಥ್ವಿಯನ್ನು ಆಳಲು ಬಹಳ ಇಷ್ಟಪಟ್ಟನು. ಪಡೈವೀಡು ರಾಜ್ಯದ ಪಂಡಿತ ಘಾಮರರು ಅರ್ಕಪುಷ್ಕರಣಿಯ ಗೋಪಿನಾಥ ದೇವರ ಸಮ್ಮುಖದಲ್ಲಿ ಒಂದು ಕಾನೂನನ್ನು ಜಾರಿಗೊಳಿಸಿದರು. ಇದರ ಪ್ರಕಾರ ಪಡೈವೀಡಿನ ಬ್ರಾಹ್ಮಣರು (ಕನ್ನಡಿಗರು, ತಮಿಳರು, ತೆಲುಗರು ಇತ್ಯಾದಿ) ಬಂಗಾರವನ್ನು ಕೊಟ್ಟು ಮದುವೆಯನ್ನು ಮುಗಿಸುವುದು ಕಂಡುಬಂದಲ್ಲಿ ಅಂತಹವರನ್ನು ರಾಜನು ಶಿಕ್ಷೆಗೆ ಗುರಿಪಡಿಸುತ್ತಿದ್ದನು ಹಾಗೂ ಅವರನ್ನು ಬ್ರಾಹ್ಮಣರ ಪಂಗಡದಿಂದ ಬಹಿಷ್ಕಾರ ಮಾಡಲಾಗುತ್ತಿತ್ತು. ಉದಾಹರಣೆಗೆ ಕ್ರಿ.ಶ.1379ರ ಶಾಸನವೊಂದು ಹೇಳುವಂತೆ ಇಮ್ಮಡಿ ಬುಕ್ಕರಾಯನ ಕಾಲದಲ್ಲಿ ಪಲ್ಲೆಯರ್‌ಸರ್, ರಾಚ್ಚೂರಸರ್, ಕಂಟಿಕ್ಕಾರರಾಯನ ಮಂತ್ರಿ ಒಂದನೇ ನಾಗಣ್ಣ ಒಡೆಯರ ಮಲೈಮಂಡಲಪ ಪೆರುಮಾಳ್, ಪುಳ್ಳಿಯನಾಡಿನ ಮಹಾಪ್ರಭು, ಇವರ ಆಜ್ಞೆಯಂತೆ ನಂಬಿಗ್ರವಿ ಶೆಟ್ಟಿಯಾರ್‌ನು ವರದಕ್ಷಿಣೆಯಾಗಿ ಪುಳಿಯಾರ್ ನಾಡಿನ ಅವನ ಪಾಲಿನಲ್ಲಿ ಮೂರನೇ ಒಂದು ಭಾಗದಷ್ಟನ್ನು ಅವನ ಮಗಳ ಮಗನಾದ ಇರವಿಯಮ್ಮಮ್, ಕೇಶವ ಶೆಟ್ಟಿಯಾರ್ ಹಾಗೂ ಇತರರಿಗೆ ನೀಡಿದನು.[140]

ಒಂದು ದಾಖಲೆಯಲ್ಲಿ ಮಂಗಡು ಗ್ರಾಮಸ್ಥರು ಭೂಮಿಯನ್ನು ಬೇರೆಯವರಿಗೆ ಮಾರುವುದಾಗಲಿ ಅಥವಾ ವರದಕ್ಷಿಣೆ ಎಂದು ಜಮೀನನ್ನು ಕೊಡುವುದಾಗಲೀ ನಿಷಿದ್ಧ ಎಂಬ ಒಂದು ಕರಾರನ್ನು ಮಾಡಿಕೊಂಡರು.[141] ಮೊದಲ ದೇವರಾಜನು ಫಿರೋಜ್‌ಷಾನಿಗೆ ವಿವಾಹ ಮಾಡಿದನು ಹಾಗೂ ಬಂಕಾಪುರವನ್ನು ವರದಕ್ಷಿಣೆಯಾಗಿ ನೀಡಿದನು. ಚೆಮಕೂರ್ ವೆಂಕಟಸ್ವಾಮಿ ಬರೆದಿರುವ ತೆಲುಗು ಕವಿತೆಯಾದ ವಿಜಯವಿಲಾಸಮುವಿನಲ್ಲಿ ಸೇವಪ್ಪನೆಂಬುವನು ವಿಜಯನಗರ ರಾಜನ ರಾಣಿಯ ತಂಗಿಯನ್ನು ಮದುವೆಯಾದನು. ಅಚ್ಯುತರಾಯನು ತಂಜಾವೂರು ಸಂಸ್ಥಾನವನ್ನು ವರದಕ್ಷಿಣೆಯಾಗಿ ನೀಡಿದನೆಂಬ ಉಲ್ಲೇಖವಿದೆ.[142] ಕೃಷ್ಣದೇವರಾಯನು ಗಜಪತಿಯ ವಿರುದ್ಧ ಗೆದ್ದ ನಂತರ ಗಜಪತಿಯು ಕೃಷ್ಣದೇವರಾಯನಿಗೆ ಅಗಾಧವಾದ ವರದಕ್ಷಿಣೆಯನ್ನು ನೀಡಿ ತನ್ನ ಮಗಳಾದ ಜಗನ್ಮೋಹಿನಿಯನ್ನು ವಿವಾಹ ಮಾಡಿಕೊಟ್ಟನು.

ಈ ರೀತಿಯಾಗಿ ಈ ಕಾಲದಲ್ಲಿ ವಿವಾಹವು ಕಡ್ಡಾಯವಾದ ಪದ್ಧತಿಯಾಗಿತ್ತು. ಹಾಗೂ ವರದಕ್ಷಿಣೆಯು ಅಸ್ತಿತ್ವದಲ್ಲಿತ್ತು. ಬಾಲ್ಯವಿವಾಹ ಪದ್ಧತಿಯು ಸಾಮಾನ್ಯವಾಗಿತ್ತು. ಕನ್ಯಾದಾನ ವಿವಾಹ ಪದ್ಧತಿಯು ಬಹಳ ಪ್ರಸಿದ್ಧಿಯನ್ನು ಹೊಂದಿತ್ತು. ವರದಕ್ಷಿಣೆ ಪದ್ಧತಿಯು ಅಸ್ತಿತ್ವದಲ್ಲಿದ್ದ ಬಗ್ಗೆ ಬಹಳಷ್ಟು ಸಂಖ್ಯೆಯ ಶಾಸನಗಳು ಪುರಾವೆಯನ್ನು ಒದಗಿಸುತ್ತವೆ. ವರದಕ್ಷಿಣೆಯನ್ನು ತೆಗೆದುಕೊಳ್ಳುವುದನ್ನು ತಡೆಯಲು ಬ್ರಾಹ್ಮಣರು ಒಪ್ಪಂದವೊಂದನ್ನು ಮಾಡಿಕೊಂಡಿದ್ದರು. ವಿಜಯನಗರ ಸಾಮ್ರಾಜ್ಯಾಧಿಪತಿಯು ವಿವಾಹದ ತೆರಿಗೆಯನ್ನು ಪಾವತಿ ಮಾಡಿದ್ದರ ಬಗ್ಗೆ ಹಲವಾರು ಶಾಸನಗಳು ಪುರಾವೆಯನ್ನು ಒದಗಿಸುತ್ತವೆ.

9. ಸತಿಪದ್ಧತಿ:

ಸತಿ ಅಥವಾ ಸಹಗಮನ ಪದ್ಧತಿಯು ಸಾಮಾಜಿಕ ಸಂಸ್ಥೆಯಾಗಿದ್ದು ಇದು ಹಿಂದೂ ವಿಧವೆಯರು ತಮ್ಮ ಗಂಡಂದಿರು ತೀರಿಕೊಂಡ ನಂತರ ಅವರ ಚಿತೆಯನ್ನೇರುವ ಅವಕಾಶವನ್ನು ಇವರಿಗೆ ಕಲ್ಪಿಸಿಕೊಟ್ಟಿತ್ತು. ಯಾವ ಮಹಿಳೆಯು ಈ ರೀತಿಯಾಗಿ ಚಿತೆಗೆ ಹಾರಿ ಸಾಯುತ್ತಿದ್ದಳೋ ಅವಳನ್ನು **ಸತಿ** ಎಂದು ಕರೆಯಲಾಗುತ್ತಿತ್ತು. ಪತ್ನಿಯು ಪ್ರೀತಿ ಪ್ರೇಮಗಳ ಸಂಕೋಲೆಯಿಂದ ತನ್ನ ಪತಿಯ ಬದ್ಧಲಾಗಿರುತ್ತಿದ್ದಳು. ಈ ಆಚರಣೆಯು ಕೇವಲ ಹಿಂದೂ ಸಮಾಜದ ಮೇಲ್ವರ್ಗದವರಲ್ಲಿ ಮಾತ್ರ ರೂಢಿಯಲ್ಲಿತ್ತು. ಕೆಳವರ್ಗದ ಮಹಿಳೆಯರು ಈ ಆಚರಣೆಯನ್ನು ಅನುಸರಿಸುತ್ತಿರಲಿಲ್ಲ. ಚಿತೆಗೆ ಹಾರುವ ಈ ರೂಢಿಯು ಪುರುಷರಲ್ಲಿ ಆಚರಣೆಯಿರಲಿಲ್ಲ. ಅಂದರೆ ವ್ಯಕ್ತಿಯೊಬ್ಬನ ಹೆಂಡತಿಯುತೀರಿಕೊಂಡಾಗ ಅವಳ ಚಿತೆಗೆ ಹಾರುವ ದುಸ್ಸಾಹಸವನ್ನು ಯಾವೊಬ್ಬ ಪುರುಷನೂ ಮಾಡುತ್ತಿರಲಿಲ್ಲ.

ಸಮಕಾಲೀನ ಸಾಹಿತ್ಯಿಕ ಹಾಗೂ ಶಾಸನ ದಾಖಲೆಗಳಿಂದ ಸತಿಸಹಗಮನ ಪದ್ಧತಿಯು ಅಸ್ತಿತ್ವದಲ್ಲಿದ್ದುದರ ಬಗ್ಗೆ ಬಹಳಷ್ಟು ಸಂಖ್ಯೆಯಲ್ಲಿ ದಾಖಲೆಯನ್ನು ನೋಡುತ್ತೇವೆ. ಬಹುತೇಕ ಭಾರತಕ್ಕೆ ಭೇಟಿನೀಡಿದ ಪ್ರತೀ ವಿದೇಶೀಯ ಪ್ರವಾಸಿಗನೂ ಈ ಸತಿಪದ್ಧತಿಯು ಅಸ್ತಿತ್ವದಲ್ಲಿರುವುದನ್ನು ಕಣ್ಣಾರೆ ಕಂಡು ಅದರ ಮೇಲಿನ ದಾಖಲೆಯನ್ನು ಬಿಟ್ಟುಹೋಗಿದ್ದಾರೆ. ನಿಕೊಲೋಕೊಂಟಿ, ಬಾರ್ಬೋಸಾ, ನ್ಯುನಿಜ್, ಸೀಸರ್, ಫೆಡ್ರಿಕ್ ಲಿಂಶ್‌ಟನ್ ಹಾಗೂ ಇತರೆ ಪ್ರವಾಸಿಗರು ಸತಿಪದ್ಧತಿಯನ್ನು ಯಾವ ರೀತಿಯಲ್ಲಿ ಆಚರಿಸಲಾಗುತ್ತಿತ್ತು ಎಂಬುದರ ಬಗ್ಗೆ ಸ್ಪಷ್ಟ ವಿವರಣೆಯೊಂದನ್ನು ನೀಡುತ್ತಾರೆ. ಆದರೆ ಅವರು ತಮ್ಮ ವಿವರಣೆಗಳಲ್ಲಿ ಭಿನ್ನವಾಗಿದ್ದಾರೆ. ಇದಕ್ಕೆ ಮೂರು ವಿವರಣೆಯನ್ನು ನೀಡಬಹುದು. ಮೊದಲನೆಯದಾಗಿ ಒಂದು ವರ್ಗದ ಜನಗಳು ಅನುಸರಿಸುತ್ತಿದ್ದ ಪದ್ಧತಿಯು ಮತ್ತೊಂದು ವರ್ಗದ ಜನಗಳಿಗಿಂತ ಭಿನ್ನವಾಗಿತ್ತು. ಏಕೆಂದರೆ ಪ್ರತೀ ಪಂಗಡವು ಅದರದೇ ಆದ ರೂಢಿ ಪದ್ಧತಿಯನ್ನು ಹೊಂದಿತ್ತು. ಕಾರಣ ದಕ್ಷಿಣ ಭಾರತದಲ್ಲಿ ಪ್ರತೀ ಪಂಗಡವೂ ತನ್ನದೇ ಆದ ಸಂಪ್ರದಾಯವನ್ನು ಹೊಂದಬಹುದಾಗಿತ್ತು. ಎರಡನೆಯದಾಗಿ ಕಾಲಕಳೆದಂತೆ ಈ ಪದ್ಧತಿಯಲ್ಲಿ ಬಹಳ ಬದಲಾವಣೆಯು ಕಾಣಿಸಿರಬಹುದು. ಕೊನೆಯದಾಗಿ ಈ ಪದ್ಧತಿಗಳು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಬೇರೆ ಬೇರೆಯಾಗಿರಬಹುದು.

ಕ್ಯಾಂಬೆಯ ಪದ್ಧತಿಗಳ ಬಗ್ಗೆ ಮಾತನಾಡುತ್ತಾ ನಿಕೊಲೋಕೊಂಟಿಯು ಹೀಗೆ ಹೇಳುತ್ತಾನೆ. "ಒಬ್ಬ ಹಿಂದೂ ಅನೇಕ ಪತ್ನಿಯರನ್ನು ಹೊಂದಿರುತ್ತಿದ್ದನು ಹಾಗೂ ಅವನ ಮರಣಾನಂತರ ಎಲ್ಲರೂ ಭಸ್ಮವಾಗುತ್ತಿದ್ದರು. ಈ ಸ್ಥಳಗಳಲ್ಲಿ ಇವನು ಸತಿಯನ್ನು ನಿಖರವಾಗಿ ಹಾಗೂ ನಿರ್ದಿಷ್ಟವಾಗಿ ವಿವರಿಸಿದ್ದಾನೆ. ಇವನು ಕ್ಯಾಂಬೆಯಲ್ಲಿ ಈ ರೀತಿ ಬರೆದನು. ಅಲ್ಲಿ ಒಂದು ಪದ್ಧತಿಯಂತೆ ನಿರ್ದಿಷ್ಟ ಭೂಮಿ ಇರುತ್ತಿತ್ತು. ಅವಳ ಗಂಡನು ಸತ್ತ ನಂತರ ಆ ಸ್ಥಳದಲ್ಲಿ ಒಂದು ದೊಡ್ಡ ಹೊಂಡವಿರುತ್ತಿದ್ದು ಅದರಲ್ಲಿ ಸೌದೆಯನ್ನು ತುಂಬಿರುತ್ತಿದ್ದರು. ಗಂಡನ ದೇಹವನ್ನು ಅದರ ಮೇಲಿಟ್ಟು ಬೆಂಕಿಯನ್ನು ಹಚ್ಚಿಸಿದ ನಂತರ ಅವಳು ತನ್ನ ಸ್ವ-ಇಚ್ಛೆಯಿಂದ ಚಿತೆಗೆ ಧುಮುಕುತ್ತಿದ್ದರು ಹಾಗೂ ಇಬ್ಬರೂ ಸುಟ್ಟು ಭಸ್ಮವಾಗುತ್ತಿದ್ದರು. ಆದರೆ ಉನ್ನತಕುಲದ ನಾರಿಯೊಬ್ಬಳು ತಕ್ಷಣವೇ ಧುಮುಕುತ್ತಿರಲಿಲ್ಲ, ಅದಕ್ಕೂ ಮುನ್ನ ಹಲವಾರು ಪೂಜಾದಿಕಾರ್ಯಗಳನ್ನು ಮುಗಿಸಿದ ನಂತರವೇ ಚಿತೆಯನ್ನು ಹಾಯುತ್ತಿದ್ದಳು. ಅವಳು ಮಾಡುತ್ತಿದ್ದ ಕಾರ್ಯಗಳೆಂದರೆ

ಸಂಗೀತ, ಹಾಡುಗಾರಿಕೆ, ನೃತ್ಯವನ್ನೇರ್ಪಡಿಸುವುದು,ಭೋಜನವನ್ನೇರ್ಪಡಿಸಿದ ನಂತರ ಅವಳ ಬಳಿ ಇದ್ದ ಎಲ್ಲ ಆಭರಣಗಳಿಂದ ಸಿಂಗಾರಗೊಳ್ಳುತ್ತಿದ್ದಳು ಹಾಗೂ ಮಿಕ್ಕ ಆಸ್ತಿಯನ್ನು ಅವಳ ಗಂಡು ಮಕ್ಕಳು, ಸಂಬಂಧಿಕರು ಹಾಗೂ ಸ್ನೇಹಿತರಿಗೆ ಹಂಚುತ್ತಿದ್ದಳು. ಆ ನಂತರ ಬೂದುಬಣ್ಣದ ಕುದುರೆಯನ್ನೇರಿ ಆ ಚಿತೆಯ ಪ್ರದೇಶವನ್ನು ತಲುಪುವವರೆಗೂ ಬೀದಿಯಲ್ಲಿ ಮೆರವಣಿಗೆ ಹೋಗುತ್ತಿದ್ದಳು. ಆ ಸ್ಥಳವನ್ನು ತಲುಪಿದ ನಂತರ ಅವಳು ತನ್ನ ಉಡುಪನ್ನು ಕಳಚಿ ಕೇವಲ ಸೊಂಟದಿಂದ ಕೆಳಕ್ಕೆ ಮಾತ್ರ ಬಟ್ಟೆಯ ತುಂಡೊಂದನ್ನು ಧರಿಸುತ್ತಿದ್ದಳು. ಆ ಮೇಲೆ ಜನರನ್ನುದ್ದೇಶಿಸಿ ತಾನು ಚಿತೆಯನ್ನು ಪ್ರವೇಶಿಸುತ್ತಿರುವುದು ಬಲವಂತದಿಂದಲ್ಲ, ಆದರೆ ತನ್ನ ಗಂಡನ ಮೇಲೆ ಹೊಂದಿದ್ದ ಅನಂತ ಪ್ರೀತಿ ಹಾಗೂ ಅನುಪಮ ಪ್ರೇಮದ ದ್ಯೋತಕವಾಗಿ ಆತ್ಮಾಹುತಿ ಮಾಡಿಕೊಳ್ಳುತ್ತಿರುವುದಾಗಿ ಹೇಳುತ್ತಿದ್ದಳು. ಆನಂತರ ತನ್ನ ತಲೆಯ ಮೇಲೆ ಎಣ್ಣೆಯನ್ನು ಹಾಕಿಕೊಂಡು ಧಗಧಗನೆ ಉರಿಯುತ್ತಿರುವ ಕೆಂಡಕೆಂಪಾಗ್ನಿಯ ಕೆನ್ನಾಲಿಗೆಗೆ ಆಹುತಿಯಾಗುತ್ತಿದ್ದಳು. ಈ ರೀತಿಯಾಗಿ ತನ್ನನ್ನು ತಾನೇ ವಿನಾಶಗೊಳಿಸಿಕೊಳ್ಳುತ್ತಿದ್ದಳು.[143] ಆ ಧರ್ಮವು ಆತ್ಮಾಹುತಿಯನ್ನು ಅಂಗೀಕರಿಸಿತ್ತು. ಈ ರೀತಿಯ ಆಚರಣೆಗಳಿಂದ ಈ ಪದ್ಧತಿಯನ್ನು ಅನುಸರಿಸುವ ಮಹಿಳೆಯರು ಇದರ ಮುಖಾಂತರ ಸ್ವರ್ಗಕ್ಕೆ ನೇರ ಪ್ರವೇಶ ಪಡೆಯುತ್ತಿದ್ದರೆಂಬ ನಂಬಿಕೆಯನ್ನು ಹೊಂದಲಾಗಿತ್ತು.

ಗಂಡನು ಸತ್ತ ನಂತರ ತಕ್ಷಣವೇ ಹೆಂಡತಿಯು ಜೀವಂತ ದಹನ ಮಾಡಿಕೊಳ್ಳಬೇಕಾಗಿತ್ತು. ಸತ್ತ ವ್ಯಕ್ತಿಯ ಗೌರವಕ್ಕೆ ತಕ್ಕಂತೆ ಅವನ ಒಬ್ಬ ಅಥವಾ ಇಬ್ಬರೂ ಹೆಂಡತಿಯರು ಚಿತೆಯನ್ನೇರುತ್ತಿದ್ದರು. ಬಹಳ ಅಚ್ಚುಮೆಚ್ಚಿನ ಪತ್ನಿ ಹಾಗೂ ಸತ್ತವನ ಅಚ್ಚುಮೆಚ್ಚಿನ ಮಗುವಿನ ತಾಯಾದವಳು ಅವನ ಕೊರಳನ್ನು ಬಳಸಿ ಅವನೊಂದಿಗೆ ಮಲಗಿ ಸಾಯುತ್ತಿದ್ದಳು. ಆ ನಂತರ ಮಿಕ್ಕ ಹೆಂಡತಿಯರು ಬೆಂಕಿಗೆ ಹಾರುತ್ತಿದ್ದರು.[144]

ನ್ಯೂನಿಜ್‌ನು ಈ ಸುಡುವ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತಾನೆ. ಅವನು ಹೇಳುವಂತೆ ಗಂಡನ ಶವವನ್ನು ಬೆಂಕಿಗೆ ಸೋಗಿಸಿದ ನಂತರ ಬ್ರಾಹ್ಮಣನೊಬ್ಬ ಅವಳ ಮೇಲೆ ಹಲವಾರು ಪೂಜೆಗಳನ್ನು ಮಾಡುತ್ತಿದ್ದನು. ಆನಂತರ ಅವಳು ತನ್ನ ಎಲ್ಲಾ ಆಭರಣಗಳನ್ನು ಸಂಬಂಧಿಕರಿಗೆ ಹಂಚುತ್ತಿದ್ದಳು. ಹಾಗೂ ಹಳದಿಬಟ್ಟೆಯನ್ನು ತೊಡುತ್ತಿದ್ದಳು. ಆ ಮೇಲೆ ಹಾಡುತ್ತಾ ಓಡುತ್ತಾ ಆ ಗುಂಡಿಯ ಹತ್ತಿರ ಹೋಗುತ್ತಿದ್ದಳು. ಆ ಚಿತೆಯ ಸುತ್ತ ಮೂರು ಸುತ್ತು ಬಂದು ಆ ಬೆಂಕಿಯಮೇಲೆ ಮಾಡಿದ ಹಲವು ಮೆಟ್ಟಿಲುಗಳನ್ನು ಹತ್ತಿಬಂದು ಅದರ ತುದಿಯಮೇಲೆ ಒಂದು ಚಾಪೆಯನ್ನು ಹಿಡಿದುಕೊಂಡು ನಿಲ್ಲುತ್ತಿದ್ದಳು; ಈ ಚಾಪೆಯು ಅವಳು ಬೆಂಕಿಯನ್ನು ನೋಡುವುದರಿಂದತಡೆಯುತ್ತಿತ್ತು. ನೆರೆದಿದ್ದ ಜನರು ಅಕ್ಕಿಯಿಂದ ಒಂದು ಬಟ್ಟೆಯ ಗಂಟು ಹಾಗೂ ಇನ್ನೊಂದರಲ್ಲಿ ಅವರು ತಂದಿದ್ದ ವೀಳ್ಯದೆಲೆಯ ಗಂಟನ್ನು ಬೆಂಕಿಯಲ್ಲಿ ಎಸೆಯುತ್ತಿದ್ದರು ಹಾಗೂ ಅವಳು ಉಪಯೋಗಿಸುತ್ತಿದ್ದ ತಲೆಬಾಚಣಿಗೆ ಹಾಗೂ ಕನ್ನಡಿಯನ್ನು ಎಸೆಯುತ್ತಿದ್ದರು. ಇವೆಲ್ಲವು ಅವಳ ಗಂಡನ ಪಕ್ಕದಲ್ಲಿರುವಾಗ ಅವಳನ್ನಲಂಕರಿಸಲು ಎಂಬ ಉದ್ದೇಶದಿಂದ ಬೆಂಕಿಯಲ್ಲಿ ಎಸೆಯಲಾಗುತ್ತಿತ್ತು. ಕೊನೆಗೆ ಎಲ್ಲರನ್ನೂ ತ್ಯಜಿಸಿ ತಲೆಯ ಮೇಲೆ ಒಂದು ಗಡಿಗೆ ಎಣ್ಣೆಯನ್ನು ಸುರಿದುಕೊಂಡು ಬೆಂಕಿಯ ಜ್ವಾಲೆಯಲ್ಲಿ ತಲೆಮುಂದಾಗಿ ಬೀಳುತ್ತಿದ್ದರು.[145]

ಸೀಸರ್ ಫೆಡ್ರಿಕ್ ಹೇಳುವಂತೆ ಹೆಂಡತಿಯರು ತಮ್ಮ ಗಂಡಂದಿರು ಸತ್ತ ಎರಡು ಅಥವಾ ಮೂರು ತಿಂಗಳ ನಂತರ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದರು. ಅವಳು ಆತ್ಮಾಹುತಿಯಾಗಬೇಕಾಗಿದ್ದ ನಿರ್ದಿಷ್ಟ ದಿನದಂದು ಅವಳು ವಧುವಂತೆ ಸಿಂಗಾರವಾಗುತ್ತಿದ್ದಳು. ಆ ನಂತರ ಅವಳನ್ನು ಕುದುರೆ ಅಥವಾ ಆನೆಯ ಬೆನ್ನಿನಮೇಲೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುತ್ತಿತ್ತು ಅಥವಾ ಕೆಲವು ವ್ಯಕ್ತಿಗಳು ಅವಳನ್ನು ಚಿತೆಯು ಕಾಯುತ್ತಿರುವ ಶವದ ಹತ್ತಿರ ಕರೆದೊಯ್ಯುತ್ತಿದ್ದರು. ಅವಳು ತನ್ನ ಭೋಜನದ ನಂತರ ಅವಳ ಕರ್ಮಗಳನ್ನು ಕಳೆಯಲು ನದಿಯಲ್ಲಿ ಮೀಯಬೇಕಿತ್ತು. ಆಮೇಲೆ ಹಳದಿ ಬಟ್ಟೆಯೊಂದನ್ನು ಧರಿಸಿ ಎತ್ತರದ ಪ್ರದೇಶದ ಮೇಲೆ ಬಂದು ನಿಲ್ಲುತ್ತಿದ್ದಳು. ನಂತರ ತನ್ನ ತಲೆಯ ಮೇಲೆ ಎಣ್ಣೆಯನ್ನು ಸುರಿದುಕೊಂಡು ಉರಿಯುತ್ತಿರುವ ಬೆಂಕಿಯನ್ನು ಪ್ರವೇಶಿಸುತ್ತಿದ್ದಳು.[146]

ಸಹಗಮನ ಪದ್ಧತಿಯನ್ನು ಯಾರು ಆಚರಿಸುತ್ತಿರಲಿಲ್ಲವೋ ಅವರನ್ನು ಕೀಳಾಗಿ ಕಾಣಲಾಗುತ್ತಿತ್ತು. ಹಾಗೂ ಅವರ ಸಂಬಂಧಿಕರು ಅವರ ತಲೆಯ ಕೂದಲನ್ನು ಬೋಳಿಸಿ ಅವರು ಅವರ ಕುಟುಂಬಗಳಿಗೆ ಒಂದು ಅವಮಾನ ಹಾಗೂ ಪಾಪಿಗಳೆಂದು ಓಡಿಸುತ್ತಿದ್ದರು.[147] ಸತಿಪದ್ಧತಿಯನ್ನು ಯಾರು ಉಲ್ಲಂಘಿಸುತ್ತಿದ್ದರೋ ಅವರು ತಲೆಬೋಳಿಸಿಕೊಳ್ಳುವುದನ್ನು ಒಂದು ಅಪರಾಧ ಎಂದು ಪರಿಗಣಿಸಲಾಗಿತ್ತು. ವಿಧವೆಯಾಗಿ ಉಳಿಯುವುದು ಒಬ್ಬ ಮಹಿಳೆಗೆ ಅತ್ಯಂತ ಹೀನಾಯಮಯವಾದ ಸಂಗತಿಯಾಗಿತ್ತು. ಏಕೆಂದರೆ ಅವಳ ಪಾಪಗಳೇ ಅವಳ ಗಂಡನ ಸಾವಿಗೆ ಕಾರಣ ಎಂಬ ಅಭಿಪ್ರಾಯವನ್ನು ಜನರು ಹೊಂದಿದ್ದರು. ಅವಳ ಗಂಡನೊಂದಿಗೆ ಅವಳೂ ಸಾಯುವುದೊಂದೇ ಅವಳಿಗೆ ಅಂತಿಮ ಮಾರ್ಗ, ಈ ರೀತಿ ಮಾಡುವುದರಿಂದ ಅವಳು ಸ್ವರ್ಗ ಸೇರಬಹುದೆಂಬ ನಂಬಿಕೆಯೂ ಇತ್ತು. ಅದೇ ರೀತಿ ಅವಳು ಬೆಂಕಿಗೆ ಪ್ರವೇಸಿಸುವುದರಿಂದ ಅವಳು ಭೂಮಿಯ ಮೇಲೆ ಬಹಳ ಶೋಚನೀಯವಾದಜೀವನವನ್ನು ಸಾಗಿಸುವುದನ್ನು ಅವಳು ತಡೆಯಬಹುದಾಗಿತ್ತು. ಇದರಲ್ಲಿನ ಬಹಳ ವಿಷಾದದ ಸಂಗತಿಯೇನೆಂದರೆ ಬಹಳಷ್ಟು ಶಿಶುವಿಧವೆಯರು ಈ ರೀತಿ ಚಿತೆಯನ್ನು ಪ್ರವೇಶಿಸಲಾಗದವರು ತಮ್ಮ ಜೀವನದುದ್ದಕ್ಕೂ ವಿಧವಾ ಕನ್ಯೆಯಾಗಿಯೇ ಉಳಿಯಬೇಕಾದ ಪ್ರಸಂಗವನ್ನು ಎದುರಿಸಬೇಕಾಗಿತ್ತು. ಪುರುಷರು ಹೋರಾಡುತ್ತಾ ರಣರಂಗದಲ್ಲಿ ಮಡಿದರೆ ಸ್ತ್ರೀಯರು ಅವರ ಚಿತೆಯ ಮೇಲೆ ಸಾಯುತ್ತಿದ್ದರು. ಸ್ವಾಮಿನಿಷ್ಠೆಯೂ ಕೂಡ ಹಲವಾರು ಜೀವಗಳ ಸಾವಿಗೆ ಕಾರಣವಾಯಿತು. ಪೆಟ್ರೊಡೆಲ್ಲಾವೆಲ್ಲಿಯು ಸತಿಯ ಬಗ್ಗೆ ಒಂದು ಸತ್ಯನಿಷ್ಠ ವಿವರಣೆಯನ್ನು ನೀಡುತ್ತಾನೆ. ಕೆಲವು ವರ್ಗಗಳ ಸ್ತ್ರೀಯರು ತಮ್ಮ ಗಂಡಂದಿರು ತೀರಿಕೊಂಡ ನಂತರ ಅವರೊಂದಿಗೆ ಚಿತೆಯನ್ನೇರಿಯೋ ಅಥವಾ ಸ್ವಲ್ಪ ದಿವಸಗಳ ನಂತರ ಈ ಉದ್ದೇಶಕ್ಕಾಗಿಯೇ ಬೆಂಕಿಯ್ನು ಹಾಕಿ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದರು. ಆದರೆ ಕೆಲ ಲಿಂಗಾಯಿತ ಸ್ತ್ರೀಯರು ತಮ್ಮ ಸತ್ತ ಗಂಡಂದಿರೊಂದಿಗೆ ಜೀವಂತವಾಗಿ ಹೂಳಲ್ಪಡುತ್ತಿದ್ದರು. ಈ ವಿಧಾನವನ್ನು ವಿವರಿಸುತ್ತಾ ನ್ಯುನಿಜ್ ಹೇಳುತ್ತಾನೆ. *"ಇವರು ಎರಡು ಸ್ಥಳಗಳಿರುವ ಭೂಮಿಯಲ್ಲಿಗೆ ಬಂದು ಒಂದು ಗಂಡನಿಗೆ ಇನ್ನೊಂದು ಅವಳಿಗೆ - ಬಹಳ ಸಂತೋಷದಿಂದ ಬರುತ್ತಾರೆ. ಈ ಎರಡು ಸ್ಥಳಗಳಲ್ಲಿ ಇಬ್ಬರನ್ನು ಮಲಗಿಸಿದ ನಂತರ ನಿಧಾನವಾಗಿ ಸ್ವಲ್ಪ ಸ್ವಲ್ಪವೇ ಅವರನ್ನು ಮುಚ್ಚಲಾಗುತ್ತದೆ. ಈ ರೀತಿಯಾಗಿ ಹೆಂಡತಿಯು ಗಂಡನೊಂದಿಗೆ ಸಾಯುತ್ತಾಳೆ."*[148]

ಸತಿಪದ್ಧತಿಯ ಆಚರಣೆಯ ಸಂಬಂಧ ವಿಜಯನಗರದಲ್ಲಿ ಕಾಣಿಸಿದ್ದ ಬಹಳ ಮೂಲಭೂತ ಪ್ರಶ್ನೆಯೆಂದರೆ ಇದು ಐಚ್ಛಿಕವಾಗಿತ್ತಾ ಅಥವಾ ಕರ್ತವ್ಯವಾಗಿತ್ತಾ ಎಂಬ ಪ್ರಶ್ನೆ. ಪತ್ನಿಯರು ತಮ್ಮ ಗಂಡಂದಿರ ಪ್ರೀತಿಯ ಮೇಲಿನಿಂದ ಸ್ವ-ಇಚ್ಛೆಯಾಗಿ ಪ್ರಾಣತ್ಯಾಗ ಮಾಡುತ್ತಿದ್ದರಾ ಅಥವಾ ಬಲವಂತವೇನಾದರೂ ಇತ್ತಾ ಎಂಬ ಪ್ರಶ್ನೆಯು ಉದ್ಭವಿಸಿತ್ತು. ಇದಕ್ಕೆ ವಿರುದ್ಧವಾದ ವಿದೇಶೀ ಪ್ರವಾಸಿಗರ ದಾಖಲೆಗಳು ನಾವು ಒಂದು ನಿರ್ಧಾರಕ್ಕೆ ಬರಲು ತೊಡಕಾಗಿ ಸಂಭವಿಸಿದೆ. ಕೆಲವೊಮ್ಮೆ ಅದೇ ಪ್ರವಾಸಿಯ ಬರವಣಿಗೆಯಲ್ಲಿ ವಿರೋಧಾಭಾಸ ಹೇಳಿಕೆಗಳನ್ನು ನೋಡುತ್ತೇವೆ. ಒಟ್ಟಾರೆ ಸತಿ ಪದ್ಧತಿಯನ್ನು ಹಲವಾರು ವರ್ಗಗಳಿಗೆ ವಿಂಗಡಿಸಿರುವ ಅಬ್ದುಲ್ ಫಜಲ್‌ನನ್ನು ನಾವು ಒಪ್ಪಿಕೊಳ್ಳಬಹುದು. ತಮ್ಮ ಗಂಡಂದಿರ ಮೇಲೆ ಹೊಂದಿದ್ದ ಅಪಾರ ಪ್ರೇಮದ ವಿಲೋಪದಿಂದ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದರು. ಕೆಲವರು ನಂತರದ ದೂಷಣೆಗಳಿಂದ ವಿಮುಕ್ತರಾಗಲು ಅಗ್ನಿಗೆ ಆಹುತಿಯಾದರು. ಇನ್ನು ಕೆಲವರು ಕುಟುಂಬದ ಗೌರವವನ್ನು ಹಾಗೂ ಪ್ರಾಬಲ್ಯವನ್ನು ಕಾಪಾಡಲು ಇಚ್ಛೆಯಿಲ್ಲದಿದ್ದರೂ ಬಲವಂತವಾಗಿ ತಮ್ಮ ಪ್ರಾಣವನ್ನು ತೆತ್ತರು. ಈ ಸ್ಥಿತಿಯನ್ನು ಅರಿತಿದ್ದ ಹಿಂದೂ ಸ್ತ್ರೀ ತಾನುವಿಧವೆಯಾದ ನಂತರ ಅನುಭವಿಸಬೇಕಾದ ಕಷ್ಟಕಾರ್ಪಣ್ಯಗಳನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಸಂದರ್ಭದಲ್ಲೂ ಅವಳು ತನ್ನ ಗಂಡನಿಗೆ ವಿಷ ಕೊಡುವ ಸಾಹಸವನ್ನು ಮಾಡುತ್ತಿರಲಿಲ್ಲ. ಇದೆಲ್ಲಕ್ಕಿಂತಲೂ ಸ್ತ್ರೀಯು ಬೆಂಕಿಗೆ ಹೆದರದ, ಬೆಂಕಿಯನ್ನು ಆಲಂಗಿಸುತ್ತಿದ್ದುದರ ಕಾರಣವೇನೆಂದರೆ ವಿಧವೆಯ ದಾರುಣ ಅಸಹಾಯಕ ಸ್ಥಿತಿಯು ಬೆಂಕಿಗಿಂತಲೂ ಭಯಂಕರವಾದುದೆಂದು ಸಮಾಜಕ್ಕೆ ಹೆದರಿದುದು ಬಹುಶಃ ಬಹಳ ಬಲವಂತವಾದ ಕಾರಣ ಎಂದು ಹೇಳಬಹುದು.

ವಿಧವಾ ವಿವಾಹವನ್ನು ಈ ಸಂಕೀರ್ಣ ಸಮಾಜವು ಸ್ವೀಕರಿಸಿರಲಿಲ್ಲ. ಯಾರಾದರೂ ವಿಧವಾ ವಿವಾಹವನ್ನು ಮಾಡಿಕೊಂಡಿದ್ದೇ ಆದಲ್ಲಿ ಅಂತಹವಳು ಅವಳ ಧರ್ಮವನ್ನು ತೊರೆದು ಕ್ರಿಶ್ಚಿಯನ್ ಅಥವಾ ಇಸ್ಲಾಂ ಧರ್ಮವನ್ನು ಸ್ವೀಕರಿಸಬೇಕಾಗಿತ್ತು. ಅವಳ ಗಂಡನಿಲ್ಲದ ವಿಧವಾ ಸ್ಥಿತಿಯನ್ನು ನೆನೆದು ವಿಧವಾ ಸ್ಥಿತಿಯ ದಯನೀಯ ಹಾಗೂ ಅಸಹಾಯಕ ಸ್ಥಿತಿಯನ್ನು ಕಂಡು ಗಂಡನಿಲ್ಲದ ಜೀವನ ಎಷ್ಟು ದಾರುಣ ಎಂಬುದನ್ನು ಒಂದು ಕ್ಷಣ ಯೋಚಿಸಿದ ಯಾವುದೇ ಮಹಿಳೆಯು ಈ ರೀತಿಯ ಸುಲಭದ ಆತ್ಮಾಹುತಿ ಪರಿಹಾರವನ್ನು ಯಾವುದೇ ಹಿಂಜರಿಕೆಯಿಲ್ಲದೆ ಕಂಡುಕೊಳ್ಳುತ್ತಿದ್ದಳು. ಪ್ರವಾಸಿಗರೇನಾದರೂ 'ಸತಿ'ಯ ಬಗ್ಗೆ ಭಾರತೀಯರನ್ನು ಪ್ರಶ್ನಿಸಿದಾಗ ಅವರು ಆ ಬಗ್ಗೆ ಯಾರನ್ನೂ ನಿಂದಿಸದೆ ಅದೊಂದು ಪ್ರಾಚೀನ ಪದ್ಧತಿ ಎಂದು ಉತ್ತರಿಸುತ್ತಿದ್ದರು. ಈ ನಂಬಿಕೆಯು ಬೆಳೆಯುತ್ತಿರುವ ಎಳೆಯ ಹುಡುಗಿಯ ಮನಸ್ಸಿನಾಳದಲ್ಲೇ ಹೆಚ್ಚು ಮನೆಮಾಡಿರುತ್ತಿತ್ತು. ಯಾವುದೇ ವಿವಾಹಿತ ಸ್ತ್ರೀಯು ತನ್ನ ಗಂಡನೊಂದಿಗೆ ಭಸ್ಮವಾಗುವುದು ಬಹಳ ಶ್ರೇಯಸ್ಸುಕಾರಿಯೆಂದು ತಿಳಿಯಲಾಗಿತ್ತು. ಗೌರವಯುತವಾದ ಯಾವುದೇ ಮಹಿಳೆಯು ಈ ಪದ್ಧತಿಯ ವಿರುದ್ಧ ನಡೆದುಕೊಳ್ಳುವ ಉದ್ಧಟತನವನ್ನು ತೋರುತ್ತಿರಲಿಲ್ಲ. ಅಂತಿಮವಾಗಿ ಮನೆತನದ ಗೌರವವೂ ಅವಳು ಚಿತೆಯನ್ನೇರುವುದರಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತಿತ್ತು. ಇದು ವಿಧವೆಯ ಮನಸ್ಸಿನಲ್ಲಿ ಹೆಚ್ಚು ಭಾರವಾದ ಸಂಗತಿಯಾಗಿ ತೋರುತ್ತಿತ್ತು ಮತ್ತು ಅವಳು ಬೆಂಕಿಯ ಜ್ವಾಲೆಯನ್ನು ಪ್ರವೇಶಿಸಲು ಪ್ರೇರೇಪಿಸುತ್ತಿತ್ತು.

ಬಾರ್ಬೋಸನು ಹೇಳುವಂತೆ ರಾಜನ ಮರಣಾನಂತರ *"ಕೇವಲ ನಾಲ್ಕುನೂರು ಅಥವಾ ಐದುನೂರು ಸ್ತ್ರೀಯರಲ್ಲದೆ ಅವನಿಗೆ ಬಹಳ ಹತ್ತಿರ ಸಂಬಂಧದ ಪುರುಷರೂ ರಾಜನೊಂದಿಗೆ ಭಸ್ಮವಾಗುತ್ತಿದ್ದರು."* [149] ಸತಿಪದ್ಧತಿಯನ್ನು ಅನುಸರಿಸುವಲ್ಲಿ ಬ್ರಾಹ್ಮಣರು ಬಹಳ ನೀಚ ವಿಧಾನವನ್ನು ಅನುಸರಿಸುತ್ತಿದ್ದರು. ಸಮಾಜದ ಪಾಲಕರಾಗಿ ವಿಧವೆಯ ಜೊತೆ ಹೋಗುತ್ತಿದ್ದರು. ಅವಳು ಸಾರ್ವಜನಿಕವಾಗಿ ತನ್ನ ಯೋಗ್ಯತಾಪತ್ರವನ್ನು ತಾಳ್ಮೆಯನ್ನು ಹಾಗೂ ಧೈರ್ಯವನ್ನು ಪ್ರದರ್ಶಿಸಲುಒತ್ತಾಯ ಮಾಡಲಾಗುತ್ತಿತ್ತು. ಹಾಗೂ ಕೆಲವು ಪ್ರವಾಸಿಗರು ಹೇಳುವಂತೆ ಕೆಲವೊಮ್ಮೆ ಅವಳನ್ನು ಮತಿಹೀನಳನ್ನಾಗಿ ಮಾಡಲು ಮದ್ಯವನ್ನು ಕುಡಿಸುತ್ತಿದ್ದರು. ಈ ಪದ್ಧತಿಯನ್ನು ಕಾರ್ಯರೂಪಕ್ಕೆ ತರುವಲ್ಲಿ ಬ್ರಾಹ್ಮಣರು ತಮ್ಮ ಐಹಿಕ ಹಿತಾಸಕ್ತಿಗಳನ್ನು ಹೊಂದಿದ್ದರು. ಯಾವ ರೀತಿಯೆಂದರೆ ವಿಧವೆಯು ತೊಟ್ಟಿದ್ದ ಆಭರಣಗಳು ಅವರಿಗೆ 'ಸುಲಭದ ಬಹುಮಾನ'ವಾಗುತ್ತಿದ್ದವು. ಆ ಭಸ್ಮದಲ್ಲಿ ಅವುಗಳನ್ನು ಶೋಧಿಸುವ ಏಕಸ್ವಾಮ್ಯವು ಬ್ರಾಹ್ಮಣರಿಗೆ ಮಾತ್ರ ಇತ್ತು. ಇಬನ್ ಬಟೂಟನಂತಹ ಕೆಲವು ಪ್ರವಾಸಿಗರು ಹೇಳಿರುವಂತೆ ವಿಧವೆಯರು ತಾವು ಬೆಂಕಿಗೆ ಆಹುತಿಯಾಗುವ ಮುನ್ನ ತಮ್ಮ ಆಭರಣಗಳನ್ನು ಅವರು ಯಾರನ್ನು ಇಷ್ಟಪಡುತ್ತಿದ್ದರೋ ಅವರಿಗೆ ಭಕ್ಷೀಷಾಗಿ ನೀಡುತ್ತಿದ್ದರು. ಆದರೆ ಇದು ಬ್ರಾಹ್ಮಣರ ಹುಂಬತನವನ್ನು (ಕುಪ್ರಸಿದ್ಧಿಯನ್ನು) ಕಡಿಮೆ ಮಾಡುತ್ತಿರಲಿಲ್ಲ. ಸಾಮಾಜಿಕ ಪದ್ಧತಿಯಲ್ಲಿ ಅವರ ಕ್ರಿಯಾಶೀಲ ಪಾತ್ರವು ಟಾವರ್‌ನಿಯರ್‌ನನ್ನು ಇದರ ಬಗ್ಗೆ ಬಹಳ ಹೇಳುವಂತೆ ಮಾಡಿದೆ. *"ಕೇವಲ ಬ್ರಾಹ್ಮಣರ ಹಿತಾಸಕ್ತಿಯಿಂದ ಮಾತ್ರವಾಗಿ ಈ ಅಸಹಾಯಕ ಜೀವಗಳು ಅವರ ಸಂಕಲ್ಪವನ್ನು ಮುಂದುವರೆಸುತ್ತಿದ್ದರು."* ಟಾವೆರ್ನಿಯರ್‌ನು ಎಷ್ಟು ಕುಪಿತಗೊಂಡನೆಂದರೆ ಪುರೋಹಿತರ ವರ್ಗವನ್ನು ಕರುಣೆಯಿಲ್ಲದ ಬ್ರಾಹ್ಮಣರೆಂದು ಉಲ್ಲೇಖಿಸಿದನು ಹಾಗೂ ರಾಕ್ಷಸರು ಮೊದಲೇ ಬೆದರಿದ ಬಲಿಗಳನ್ನು ಉದ್ರೇಕಿಸುತ್ತಿದ್ದರು ಅಥವಾ ಗಾಬರಿಗೊಳಿಸುತ್ತಿದ್ದರು ಎಂದು ಬರೆದನು.

ಸಾಮಾನ್ಯವಾಗಿ ಮಾಸ್ತಿಕಲ್ಲುಗಳು ಸ್ತ್ರೀಯೊಬ್ಬಳು ಎತ್ತಿದಕೈ ಹಾಗೂ ಅವಳು ಹಿಂದೆ ಉರಿಯುತ್ತಿರುವ ಜ್ವಾಲೆಗಳ ಚಿತ್ರಗಳನ್ನು ಹೊಂದಿರುತ್ತವೆ. ಕೆಲವು ಕಲ್ಲುಗಳು ಕೇವಲ ಎತ್ತಿದ ಕೈಯನ್ನು ಮಾತ್ರ ತೋರಿಸುತ್ತವೆ. ಚಿತೆಯನ್ನು ಏರುವುದಕ್ಕೆ ಮುನ್ನ ಸತಿಯರು ತಮ್ಮ ಕೈ ಬೆರಳನ್ನು ಕುಂಕುಮದಲ್ಲಿ ಅದ್ದುತ್ತಿದ್ದರು. ನಂತರ ಬಾಗಿಲಿನ ಮೇಲೆ ಬೆರಳಿನ ಗುರುತುಗಳನ್ನು ಹಾಕುತ್ತಿದ್ದರು. ಬಹುಶಃ ಇವುಗಳ ಮೇಲೆ ಕೆತ್ತಲಾದ ಶಿಲ್ಪಗಳಿಗೆ ನಂತರ ಒಂದು ಕೈಯನ್ನು ಕೊಡಲಾಗಿದೆ. ಈಗ ಮಾಸ್ತಿಕಲ್ಲುಗಳ ಮೇಲೆ ಕಾಣಸಿಗುವ ಕೈಬೆರಳುಗಳು ಮಹಾಸತಿಯರ ಬೆರಳಚ್ಚುಗಳ ತದ್ರೂಪ ನಕಲುಗಳಾಗಿವೆ. ಕೆಲವು ಮಾಸ್ತಿಕಲ್ಲುಗಳ ಮೇಲೆ ಗಂಡ ಹೆಂಡತಿಯರ ಅಥವಾ ಕೇವಲ ಹೆಂಡತಿಯ ಚಿತ್ರವು ಮಾತ್ರ ಕಂಡುಬರುತ್ತದೆ. ಮಹಾಸತಿಯ ಕೈಯಲ್ಲಿ ತೋರುಬೆರಳು ಹಾಗೂ ಹೆಬ್ಬೆರಳಿನ ನಡುವೆ ಸುಣ್ಣವಿರುವುದು ಕಂಡುಬಂದಿದೆ. ಜನಗಳು ಇವುಗಳಿಗೆ ಪೂಜೆಯನ್ನು ಸಲ್ಲಿಸುತ್ತಿದ್ದರು. ಈ ರೀತಿಯಾಗಿ ಸ್ತ್ರೀಯರು ತಾವೊಂದು ಕೆಚ್ಚೆದೆಯ ಹಾಗೂ ಶ್ರೇಷ್ಠವಾದ ಶಕ್ತಿಗಳೆಂಬುದನ್ನು ತೋರಿಸಿಕೊಂಡರು. ಬಹುತೇಕ ಎಲ್ಲ ಸ್ತ್ರೀಯರು ಬಹಳ ಸಂತೋಷವಾಗಿ ತಮ್ಮ ಸತ್ತ ಗಂಡಂದಿರೊಂದಿಗೆ ಉರಿಯುತ್ತಿರುವಬೆಂಕಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡುತ್ತಿದ್ದರು.

ಕಲೆ ಹಾಗೂ ಶಿಲ್ಪದ ದೃಷ್ಟಿಯಿಂದ ಸ್ಮಾರಕಕಲ್ಲುಗಳು ಅತ್ಯಂತ ಪ್ರಶಂಸನೀಯವಾದ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಇವುಗಳು ಆ ಕಾಲದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಗೋವುಗಳ ರಕ್ಷಣೆಯಲ್ಲಿ ಮಡಿದ ವೀರರ ಸ್ಮರಣಾರ್ಥ ಪ್ರತಿಷ್ಠಾಪಿಸಿದ ವೀರಗಲ್ಲುಗಳು ಸ್ವ-ವಿವರಣಾತ್ಮಕವಾಗಿವೆ. ವೀರಗಲ್ಲುಗಳು, ಶಾಸನಗಳು ಆಗಾಗ ಕದನಗಳು, ವೀರರ ಮೂರ್ತಿಗಳು ರಂಗಭೂಮಿಯ ವರ್ಣನೆ ಹಾಗೂ ಬಳಸಿದ ಯುದ್ಧ ಸಾಮಗ್ರಿಗಳ ಉಲ್ಲೇಖವನ್ನು ನೀಡುತ್ತವೆ. ಇವುಗಳು ಆ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಯುದ್ಧತಂತ್ರ ಕಲೆಯ ಬಗ್ಗೆಯೂ ಒಂದು ಸುಳಿವನ್ನು ನೀಡುತ್ತದೆ. ವೀರಗಲ್ಲೊಂದು ಉದಾಹರಣೆಗೆ ಮೂರು ವಲಯಗಳ ಕೆತ್ತನೆಯನ್ನೊಳಗೊಂಡಿರುತ್ತದೆ. ಕೆಳಭಾಗದಲ್ಲಿ ಹೋರಾಡುತ್ತಿರುವ ವೀರನು ಸಾವನ್ನಪ್ಪಿದ್ದಾನೆ. ಮಧ್ಯದಲ್ಲಿ ಅವನನ್ನು ಅಪ್ಸರೆಯರು ಸ್ವರ್ಗಕ್ಕೊಯ್ಯುತ್ತಿದ್ದಾರೆ. ಈ ರೀತಿಯಾದ ವರ್ಣನೆಯ ಹಿಂದೆ ಅಡಗಿದ್ದ ವಾಸ್ತವಾಂಶವೇನೆಂದರೆ, ಶೌರ್ಯ, ಪರಾಕ್ರಮ ಹಾಗೂ ಅಭಿಲಾಷೆಯನ್ನು ಪ್ರದರ್ಶಿಸುವ ಇವುಗಳು ಪ್ರತಿಯೊಬ್ಬ ಬಿಸಿರಕ್ತದ ಯುವಕನು ಹೋರಾಡಲು ತನಗೊಂದು ಅವಕಾಶ ಸಿಗುವುದನ್ನು ಎದುರುನೋಡುವಂತೆ ಮಾಡುತ್ತಿದ್ದವು. ಎರಡನೆಯದಾಗಿ ಅವನ ಪ್ರಖ್ಯಾತಿಯ ಮಹದಾಸೆಯು ಸೂರ್ಯಚಂದ್ರರು ಬೆಳಗುವವರೆಗೂ ಸ್ಮರಿಸಲ್ಪಡುವುದು ಎಂಬ ಅಂಶವೂ ಮುಂದಿನ ಜನಾಂಗಕ್ಕೆ ಒಂದು ಆದರ್ಶ ಉದಾಹರಣೆಯಾಗಿ ಸಂಭವಿಸುತ್ತದೆ. ನಿರ್ಭೀತವಾಗಿ, ದೃಢಸಂಕಲ್ಪದಿಂದ ತಮ್ಮ ಗಂಡಂದಿರ ಚಿತೆಯನ್ನು ಪ್ರವೇಶಿಸಿದ ಮಹಿಳೆಯರ ಸ್ಮರಣಾರ್ಥವಾಗಿ ಪ್ರತಿಷ್ಠಾಪಿಸಲಾದ ಕಲ್ಲುಗಳನ್ನು ಮಾಸ್ತಿಕಲ್ಲುಗಳೆಂದು ಕರೆಯಲಾಗುತ್ತದೆ. ಸತಿಕಲ್ಲುಗಳು ಅಥವಾ ಮಾಸ್ತಿಕಲ್ಲುಗಳು ಆ ಕಾಲದ ಸಾಮಾಜಿಕ ಪದ್ಧತಿಗಳನ್ನು ನಮ್ಮ ಮುಂದೆ ತಂದುತೋರಿಸುತ್ತವೆ. ಇವುಗಳನ್ನು ಸತ್ತ ಸ್ತ್ರೀಯು ತನ್ನ ಎಡ ಕೈಯನ್ನು ಎತ್ತಿ ಹಿಡಿದಿರುವಂತೆ ಕೆತ್ತಲಾಗಿದೆ ಹಾಗೂ ಹಸ್ತವನ್ನು ಚಾಚಿರುವಂತೆ ಕಂಡುಬರುತ್ತದೆ. ಸತಿ ಕಲ್ಲುಗಳು ಭಾರತೀಯ ಸ್ತ್ರೀಯರು ತಮ್ಮ ಗಂಡನಿಗೋಸ್ಕರ ಏನು ಮಾಡುವರು ಎಂಬ ಉದಾಹರಣೆಯನ್ನು ನೀಡುತ್ತವೆ. ಗಂಡನು ಬದುಕಿದ್ದಾಗ ಅವನ ಬೇಕು-ಬೇಡಗಳನ್ನು ಈಡೇರಿಸುವ ಸ್ತ್ರೀಯು ಕೊನೆಯಲ್ಲಿ ಅವನೊಂದಿಗೇ ಮುಂದಿನ ಪ್ರಪಂಚಕ್ಕೆ ತೆರಳುತ್ತಾಳೆ. ಇದು ಸತಿಯರ ದೊಡ್ಡತನ, ಇವರನ್ನು ಈಗಲೂ ಕೆಲವು ವಿಶೇಷ ಸಂದರ್ಭಗಳಲ್ಲಿ ಮನೆಯಲ್ಲಿ ಪೂಜಿಸಲಾಗುತ್ತದೆ.

ಈ ರೀತಿಯಾಗಿ ಸತಿಕಲ್ಲುಗಳು ಈ ರಾಷ್ಟ್ರದ ಆಧಾರವಾಗಿದ್ದು, ಸಾಮಾನ್ಯ ಜನರ ಸಂಸ್ಕೃತಿಯನ್ನು ಪ್ರದರ್ಶಿಸುತ್ತವೆ. ಹಾಗೂ ಸಾಂಸ್ಕೃತಿಕ ಸಂಪ್ರದಾಯದ ಪಾಲಕವೂ ಕೂಡ ಆಗಿವೆ.

ಯುದ್ಧ ಮಾಡುತ್ತಿರುವ ಸಂದರ್ಭದಲ್ಲಿ ಪಶುಗಳ ಆಕ್ರಮಣದ ಬಗ್ಗೆಯೂ ಕೆಲವು ಶಾಸನಗಳಿವೆ, ಐಚ್ಛಿಕ ಮರಣದ ಹಿನ್ನೆಲೆಯಲ್ಲಿದ್ದ ಸತ್ಯವೇನೆಂದರೆ ಹಳ್ಳಿಗಳ ಕ್ಷೇಮದ ಉದ್ದೇಶದಿಂದ ನೆರೆಹೊರೆಯವರ ಮೇಲಿನ ಕರುಣೆಯಿಂದ, ಪಶುಗಳನ್ನು ಸಂರಕ್ಷಿಸುವ ಉದ್ದೇಶದಿಂದ ಹಾಗೂ ಹಿತದ ಉದ್ದೇಶದಿಂದ ಈ ರೀತಿಯಾದ ಇಚ್ಛಾಮರಣವನ್ನು ಅನುಸರಿಸಲಾಗುತ್ತಿತ್ತು. ಕ್ಲಿಷ್ಟ ಸಂದರ್ಭಗಳೊಂದಿಗೆ ಹೋರಾಡುವ ವ್ಯಕ್ತಿಗೆ ತನ್ನ ಪ್ರಾಣದ ಮೇಲೆ ಆಸೆಯಿರುತ್ತಿರಲಿಲ್ಲ ಹಾಗೂ ಬಹುಪಾಲು ಸಂದರ್ಭಗಳಲ್ಲಿ ಯುದ್ಧದಲ್ಲಿ ಸಾವನ್ನಪ್ಪುತ್ತಿದ್ದನು. ವೀರರ ಹೆಸರನ್ನು ಎತ್ತಿಹಿಡಿಯಲಾಗುತ್ತಿತ್ತು ಹಾಗೂ ಶಾಸನಗಳು ಮತ್ತು ವೀರಗಲ್ಲುಗಳು ಆತನ ಹೆಸರನ್ನು ಸ್ಮರಿಸುತ್ತಿದ್ದವು.

ಸಲ್ಲೇಖನ ವ್ರತವಾಚರಣೆಯು ಪುಣ್ಯವನ್ನು ತರುವ ಆಚರಣೆ ಎಂದು ತಿಳಿಯಲಾಗಿತ್ತು. ಸಮಾಜದಲ್ಲಿ ಅವುಗಳನ್ನು ಹೆಚ್ಚು ಗೌರವಿಸಲಾಗುತ್ತಿತ್ತು. ಸಲ್ಲೇಖನ ವ್ರತದಿಂದ ತೀರಿಕೊಂಡವರ ಸ್ಮರಣಾರ್ಥವಾಗಿ ಪ್ರತಿಷ್ಠಾಪಿಸಿದ ಸ್ಮಾರಕಗಳು ಹಾಗೂ ಕಲ್ಲುಗಳನ್ನು 'ನಿಶಿಗಲ್ಲುಗಳು' ನಿಶಿಧಿ ಎಂದು ಕರೆಯಲಾಗುತ್ತಿತ್ತು. ಮಹಾಮಂಡಲೇಶ್ವರ ಹರಿಯಪ್ಪ ಒಡೆಯರ್‌ನ ಆಳ್ವಿಕೆಯ ಒಂದು ಶಾಸನವು ದಾಖಲಿಸುವಂತೆ ಚೆನ್ನಕ್ಕನೆಂಬುವಳು ಕ್ರಿ.ಶ. 1354ರಲ್ಲಿ ಅವಳ ಪತಿ ಮಾಲೇಗೌಡ ಸೊರಬದಲ್ಲಿ ತೀರಿಕೊಂಡಾಗ ಸಹಗಮನವನ್ನು ಆಚರಿಸಿದಳು.[150]

ಕ್ರಿ.ಶ. 1362ರ ಶಾಸನವೊಂದು ದಾಖಲಿಸುವಂತೆ ದೇವಪ್ಪ ಹಾಗೂ ಅವನ ಪತ್ನಿ ಬಾಯಿಚಕ್ಕ ಇವರಿಬ್ಬರು ಸತಿಯನ್ನು ಆಚರಿಸಿದರು.[151] ಕ್ರಿ.ಶ. 1369ರ ಶಾಸನವೊಂದು ಹೇಳುವಂತೆ ಅರೂಹನಹಳ್ಳಿಯ ಮುಖ್ಯಸ್ಥನಾದ ಕೀರ್ತಿಯರಸನ ಮಗನಾದ ನಾಗರಸನ ಸ್ಮರಣಾರ್ಥವಾಗಿ ವೀರಗಲ್ಲೊಂದನ್ನು ಪ್ರತಿಷ್ಠಾಪಿಸಲಾಯಿತು. ಅವನ ಮೂವರು ಹೆಂಡತಿಯರಾದ ಬಾಯಿಚಕ್ಕ, ಬಾಯಿದೇವಿ ಮತ್ತು ಮಾದರಗೌಡಿ ಇವರು ಅವನೊಂದಿಗೆ ಸತ್ತಿರುವುದಾಗಿ ತಿಳಿದುಬಂದಿದೆ.[152] ನಾವುಕಗೌಡನ ಹೆಂಡತಿಯಾದ ದೇಮಾಯಿಯು ಅವಳ ಗಂಡ ನಾವುಕಗೌಡನ ಮರಣದ ಸಲುವಾಗಿ ಕ್ರಿ.ಶ. 1383ರಲ್ಲಿ ದಾವಣಗೆರೆಯ ಬಳಿ ಸತಿಪದ್ಧತಿಯನ್ನು ಆಚರಿಸುವುದರ ಮೂಲಕ ಮಹಾಸತಿಯಾದಳು.[153]

ಕ್ರಿ.ಶ.1384ರ ಶಾಸನವೊಂದರ ಪ್ರಕಾರ ಮಲ್ಲಪ್ಪನ ಪತ್ನಿಯು ಸತಿಪದ್ಧತಿಯನ್ನು ಆಚರಿಸಿದಳು.[154] ಕ್ರಿ.ಶ.1386ರಲ್ಲಿ ಹರಿಹರನ ಆಳ್ವಿಕೆಯಲ್ಲಿ ಬೋಮ್ಮಕ್ಕಳು ತನ್ನ ಪತಿ ಮಲೆಯಂದೂರಿನ ಜಾದವರ ಚೇಲಿ ಬಯಾಚಿಶೆಟ್ಟಿಯ ಸಾವಿನೊಂದಿಗೆ ಮಹಾಸತಿಯಾದಳು ಎಂದು ಒಂದು ಶಾಸನವು ಉಲ್ಲೇಖಿಸುತ್ತದೆ.[155] ಕ್ರಿ.ಶ. 1388ರ ಒಂದು ಶಾಸನವು ಮುತ್ತುಗ ಕುಪ್ಪೆಯ ಚಿಕ್ಕಗೌಡನ ಮಗನಾದ ಕೋವಿಕರ ದೇವಯ್ಯ ನಾಯಕನು ಹಾವು ಕಚ್ಚಿ ಸತ್ತಾಗ ಆತನ ಹೆಂಡತಿ ಮುದ್ದನಕೇತಿಯು ಸೊರಬದಲ್ಲಿ ಸಹಗಮನವನ್ನು ಆಚರಿಸಿದಳೆಂದು ವಿವರಿಸುತ್ತದೆ.

ಬೈಚಿ-ನಾಯಕನ ಮಗನು ತೀರಿಕೊಂಡಾಗ ಆತನ ಹೆಂಡತಿಯು ಅವನ ಶವದೊಂದಿಗೆ ಕ್ರಿ.ಶ. 1393ರಲ್ಲಿ ತಾನೂ ಬೆಂಕಿಗೆ ಆಹುತಿಯಾದಳು ಎಂದು ಒಂದು ಶಾಸನವು ತಿಳಿಸುತ್ತದೆ.[156] ಕ್ರಿ.ಶ. 1397ರಲ್ಲಿ ಒಂದು ಶಾಸನವು ಉಲ್ಲೇಖಿಸುವಂತೆ ಹರಿಯಗೌಡನು ಹರಿಹರ ದೇವಾಲಯದ ದಕ್ಷಿಣದ ಬಾಗಿಲಿನಲ್ಲಿ [157] ಕೇಶವದೇವರ ಸಮ್ಮುಖದಲ್ಲಿ ಲೋಘದ ಬಳಿ ಸೂರ್ಯಾಸ್ತದ ನಂತರ ಸರ್ಗಕ್ಕೆ (ಸ್ವರ್ಗಸ್ತನಾದನು) ಹೋದನು. ಅವನ ಹೆಂಡತಿಯಾದ ಲಕ್ಷ್ಮಣಾಯಿಯು ಚಿತೆಯನ್ನು ಪ್ರವೇಶಿಸಿದಳು ಹಾಗೂ ದೇವಲೋಕವನ್ನು ತಲುಪಿದಳು. ಹನ್ನೊಂದನೆಯ ದಿವಸದಂದು ಓಸಣ ಹರಿಯಗೌಡನ ತಮ್ಮ ಹಾಗೂ ಮಗ ಇಬ್ಬರು ಒಂದು ಕಲ್ಲನ್ನು ನೆರವೇರಿಸಿದರು.[158] ಕೊಂಗುವ ಚಿಲಾದರ್ ಬೊಮ್ಮಯ್ಯನು ಕಲಾಯೂರು

ಹಳ್ಳಿಯಲ್ಲಿ ಗೋವುಗಳ ಆಕ್ರಮಣದಲ್ಲಿ ಹೋರಾಡಿ ಮಡಿದನು. ಆತನ ಪತ್ನಿ ಚಿಯಕ್ಕಳು ಅವನೊಂದಿಗೆ ಕ್ರಿ.ಶ. 1399ರಲ್ಲಿ ಹೋದಳೆಂದು ಒಂದು ಶಾಸನವು ತಿಳಿಸುತ್ತದೆ.[159]

ಕ್ರಿ.ಶ. 1410ರ ಶಾಸನವೊಂದು ದಾಖಲಿಸುವಂತೆ ಜಕ್ಕ-ಗೌಡನ ಮಗ ನಾಗಪ್ಪನು ಸ್ವರ್ಗಸ್ತನಾದನು. ಆತನ ಹೆಂಡತಿ ತರಗಿಗೌಡಿಯು ಸಹಗಮನವನ್ನು ಆಚರಿಸಿದಳು.[160] ಕ್ರಿ.ಶ. 1403ರ ಶಾಸನವೊಂದು ಹೇಳುವಂತೆ ಮಂದೆ ಗಮುಂಡನು ಸತ್ತನು. ಸೋಯನ ಮಗನಾದ ವೀರ, ನಾರ, ಉರಿವಣ, ಬೊಮ್ಮನಾಯಕನ ಮಗಳಾದ ಕಾಳದೇವಿ ಇವರು ಸಹಗಮನವನ್ನು ಆಚರಿಸಿದರು.[161] ಕ್ರಿ.ಶ. 1403ರ ಶಾಸನವೊಂದು ಉಲ್ಲೇಖವನ್ನು ನೀಡುವಂತೆ ಕುರನಿವಕನ ಮಗನಾದ ಸಾಕಣ್ಣ ಹಾಗೂ ಅವನ ಹೆಂಡತಿ ದೇವನಕಿತ್ತಿಯರಿಬ್ಬರು ಸ್ವರ್ಗಸ್ತರಾದರು.[162] ಮೇಚಿಗೌಡಿಯು ಕ್ರಿ.ಶ. 1404ರಲ್ಲಿ ತನ್ನ ಗಂಡ ಗುಟ್ಟಿಯ ಕುಂದನಾಡು ಜಿಲ್ಲೆಯ ಕೇಳಡಿಯ ಹರಿಯಗೌಡನೊಂದಿಗೆ ಚಿತೆಯನ್ನೇರುವುದರೊಂದಿಗೆ ಮಹಾಸತಿಯಾದಳು.[163]

ಒಂದು ಶಾಸನವು ಹೇಳುವಂತೆ ಕ್ರಿ.ಶ. 1404ರಲ್ಲಿ ಪಾಮಿಡಿಯಾದ ಬಾಯಿರ್ಲ ಶೆಟ್ಟಿಯ ಮಗಳು ಹಾಗೂ ಕದ್ರಿಯ ಖೇಯೀದೇವನಾಯಕನ ಮಗನಾದ ರಾಯದೇವನಾಯಕನ ಪತ್ನಿಯಾದ ಗಂಗಸಾನಿಯು ತನ್ನ ಗಂಡ ಸತ್ತ ಸ್ಥಳವಾದ ಪೆನುಗೊಂಡದಲ್ಲಿ ಅವನ ಶವದೊಂದಿಗೆ ಇವಳೂ ಚಿತೆಯೇರಿದಳು.[164] ಒಂದು ಶಾಸನವು ಹೇಳುವಂತೆ ಕ್ರಿ.ಶ. 1408ರಲ್ಲಿ ಹೈವಭೂಪನ ಮಗನಾದ ಮಹಾಮಂಡಲೇಶ್ವರ ಸಂಗೀರಾಯ ಹಾಗೂ ಹಾಡವಳ್ಳಿಯ ಭೈರದೇವಿಯರು ಭೈರವದೇವಿಯ ಮರಣದ ಸ್ಮರಣಾರ್ಥವಾಗಿ ನಿಶಿಧಿಯನ್ನು ಪ್ರತಿಪಾದಿಸಿದರು.[165] ಕ್ರಿ.ಶ. 1409ರ ಶಾಸನವು ದಾಖಲಿಸುವಂತೆ ಕಿಕರಿಸಾಯಿ ನಾಯಕನ ಮಗನಾದ ದೇವನಾಯಕನ ಮರಣದಿಂದ ಆತನ ಇಬ್ಬರು ಪತ್ನಿಯರಾದ ನಾಗಾಯಿ ಹಾಗೂ ರಾಮಾಯಿಯರೂ ತಮ್ಮ ಜೀವಗಳನ್ನು ತ್ಯಜಿಸಿ ಮಹಾಸತಿಗಳಾದರು.[166]

ಶಿವಮೊಗ್ಗ ಜಿಲ್ಲೆಯ ಜಾಂಬವಿ ಗ್ರಾಮದಲ್ಲಿನ ಮಾರಿಗುಡಿಯ ಮುಂಭಾಗದಲ್ಲಿ ಪ್ರತಿಷ್ಠಾಪಿಸಿರುವ ಒಂದು ಮಾಸ್ತಿಚಿತ್ರವು ಕ್ರಿ.ಶ.1410ರಲ್ಲಿ ಸ್ತ್ರೀಯೊಬ್ಬಳು ಸಂಪೂರ್ಣವಾಗಿ ಆತ್ಮಾಹುತಿ ಮಾಡಿಕೊಳ್ಳುತ್ತಿರುವ ಪೂರ್ಣಮೂರ್ತಿಯನ್ನು ಹೊಂದಿದೆ. ಇದು ಬಾಯಿಕುಂದದ ಚಿಲಿಯ ಬೇಗೂಡಿನ ಬಾಯಿಚಯನ ಹೆಂಡತಿ ನಾಯಕ್ಕ ಸತಿ ಎಂದು ದಾಖಲಿಸಿದೆ.[167] ಅಮಿಗೌಡಿ ಎಂಬುವವಳು ತನ್ನ ಗಂಡ ಮಾನವನೆ ವಿಠ್ಠಾರಕನೊಂದಿಗೆ ಸೊರಬದಲ್ಲಿ ಕ್ರಿ.ಶ. 1411 ರಲ್ಲಿ ಸತಿಯಾಗಿ ಸತ್ತಳು.[168]

ದೇವರಾಯನ ಆಳ್ವಿಕೆಯಲ್ಲಿ ಮೇಗರವಳ್ಳಿ ಗ್ರಾಮಕ್ಕೆ ಸೇರಿದ ನಾನಕ್ಕನೆಂಬುವಳು ಆಗಸ್ಟ್ 17 ಕ್ರಿ.ಶ. 1416 ರಂದು ಸತಿಯನ್ನು ಆಚರಿಸಿದಳು.[169] ಒಂದು ಶಾಸನವು ಹೇಳುವಂತೆ ಕ್ರಿ.ಶ. 1417ರಲ್ಲಿ ದೇವರಾಯನ ಆಜ್ಞೆಯಂತೆ ಗವೆಗುತ್ತಿ ರಾಜ್ಯವು ವಿರೂಪ ದಂಡನಾಯಕನಡಿಯಲ್ಲಿತ್ತು. ಹಾಗೂ ಇವನು ಚಂದ್ರಗುತ್ತಿಯಲ್ಲಿದ್ದನು. ರಾಮಗೌಡನು ಇವನ ಸಮ್ಮುಖದಲ್ಲಿ ದೇವತೆಗಳ ಪಾದವನ್ನು ಸೇರಿದನು. ಗುಟ್ಟಿಯಿಂದ ಹರಿಕನಿಗೆ ಕಳುಹಿಸಿದ ಈ ಸ್ಥಿತಿಯನ್ನು ಅರಿತ ಇರುಗಪ ಒಡೆಯ ರಾಮಗೌಡನ ಬೊಮ್ಮಗೌಡಿ ಐಕ್ಯವಾದರು ಹಾಗೂ ರಾಮಗೌಡ ಮತ್ತು ಬೊಮ್ಮಕ್ಕರಿಬ್ಬರು ಬಲವಂತವಾಗಿ ಸ್ವರ್ಗಸ್ಥರಾದರು. ಈ ಸಂಬಂಧ ಒಂದು ಶಿಲಾಶಾಸನವನ್ನು ಕಡೆಯಲಾಗಿದೆ.[170] ಕಾಲಡಿ ಕರಿಯ ತಿಮ್ಮೇಗೌಡನು ಕ್ರಿ.ಶ. 1419ರಲ್ಲಿ ನಗರದಲ್ಲಿ ಸಾವನ್ನಪ್ಪಿದಾಗ ರಾಮಕ್ಕಳು ಮಹಾಸತಿಯಾದಳು.[171] ಕ್ರಿ.ಶ. 1423ರ ಶಾಸನವೊಂದು ಹೇಳುವಂತೆ ಕುಂಬಾರ ಮಹಾಬಲ್ಲನ ಮಗ ಬೊಮ್ಮದಿರನು ಶಿರಿಕೊಂಡಾಗ ಅವನ ಪತ್ನಿ ಚಂಡಾವೆಯು ಸಾಗರದಲ್ಲಿ ಸತಿಯಾದಳು.[172] ಒಂದುಶಾಸನವು ಉಲ್ಲೇಖಿಸುವಂತೆ ಕ್ರಿ.ಶ. 1426ರಲ್ಲಿ ಕಪ್ಪರಹಳ್ಳಿ ಯುದ್ಧದಲ್ಲಿ ನಾಚಯ್ಯನು ತೀರಿಕೊಂಡಾಗ ಆತನ ಹೆಂಡತಿ ಬೀರಬ್ಬೆಯು ಚಿತೆಯನ್ನೇರಿದಳು ಹಾಗೂ ಮಹಾಸತಿ ಕಲ್ಲನ್ನು ಜಕೋಜನು ಪ್ರತಿಷ್ಠಾಪಿಸಿದನು.[173] ಕ್ರಿ.ಶ. 1427ರ ಶಾಸನದ ಪ್ರಕಾರ ತಿರ್ರೆಗೌಡನು ಯುದ್ಧದಲ್ಲಿ ಮಡಿದಾಗ ಅವನ ಪತ್ನಿ ಅವನೊಂದಿಗೆ ನಗರದಲ್ಲಿ ಸತಿಯನ್ನು ಆಚರಿಸಿದಳು.[174] ಕ್ರಿ.ಶ.1429ರ ಶಾಸನದ ಪ್ರಕಾರ ಮಾನವನೆ ಮಾದಿಗನು ಸ್ವರ್ಗಸ್ತನಾದನು ಹಾಗೂ ಆತನ ಹೆಂಡತಿಯು ಸೊರಬದಲ್ಲಿ ಸತಿಯನ್ನು ಚಿತೆ ಪ್ರವೇಶಿಸುವುದರ ಮೂಲಕ ಆಚರಿಸಿದಳು.[175] ಕ್ರಿ.ಶ. 1430ರ ಶಾಸನವೊಂದು ದಾಖಲೆಯನ್ನು ನೀಡುವಂತೆ ಪ್ರಭುಗೌಡನು ಮರಣಹೊಂದಿದಾಗ ಆತನ ಮಡದಿ ಮಲ್ಲಬಳು ಸತಿಯಾದಳು. ಅವಳ ಮಗ ಬಸಪ್ಪನು ಮಳವಳ್ಳಿಯಲ್ಲಿ ಮಹಾಸತಿ ಕಲ್ಲೊಂದನ್ನು ಪ್ರತಿಷ್ಠಾಪಿಸಿದನು.[176] ಹರಿಗೇನಾಯಕನು ಮಗ ಜಂಚಿ ನಾಯಕನು ಯುದ್ಧದಲ್ಲಿ ಕಾಲವಾದಾಗ ಆತನ ಇಬ್ಬರು ಪತ್ನಿಯರಾದ ಕಾಮವ್ವನಾಯಕಿತಿ ಹಾಗೂ ಲಕ್ಕವ್ವ ನಾಯಕಿತಿಯರು ಕ್ರಿ.ಶ. 1430ರಲ್ಲಿ ಅವನೊಂದಿಗೆ ಪ್ರಾಣತ್ಯಾಗ ಮಾಡಿದರು.[177]

ಕ್ರಿ.ಶ. 1432ರಲ್ಲಿ ಕುಂಬತಿ ರಾವಯನಾಯಕನು ಅಸುನೀಗಿದನು ಹಾಗೂ ಆತನ ಅರ್ಧಾಂಗಿಯಾದ ಚಂಡಿನಾಯಕಿಯು ಸೊರಬದಲ್ಲಿ ಸಹಗಮನವನ್ನು ಆಚರಿಸಿದಳು.[178] ಕ್ರಿ.ಶ. 1432ರ ಶಾಸನವು ಉಲ್ಲೇಖಿಸುವಂತೆ ಹೇಮವಲ್ಲಿ ವಿದಾರಿಕಾರಿ ಬೊಮ್ಮನಾಯಕನು ತೀರಿಕೊಂಡನು ಹಾಗೂ ಆತನ ಪತ್ನಿ ಕಾಮೇಯಿನಾಯಕಿತಿಯು ಸೊರಬದಲ್ಲಿ ಮಹಾಸತಿಯಾದಳು.[179] ಕ್ರಿ.ಶ.1432ರ ಶಾಸನವೊಂದು ಹೇಳುವಂತೆ ಕಂಬಲೇಯ ರಾಮಣ್ಣನಾಯಕನು ಕೊನೆಯುಸಿರೆಳೆದಾಗ ಆತನ ಪತ್ನಿ ಚಂಡನಾಯಕಿಯು ಸೊರಬದಲ್ಲಿ ಸತಿಯಾದಳು.[180] ಕ್ರಿ.ಶ.1447ರ ಒಂದು ಶಾಸನವು

ಶಿಕಾರಿಪುರದಲ್ಲಿ ಸತಿಯ ಉಲ್ಲೇಖವನ್ನು ನೀಡುತ್ತದೆ.[181] ಸತಿಕಲ್ಲುಗಳನ್ನು ಅವರ ಮಕ್ಕಳು, ತಂದೆ, ಸಹೋದರರು ಹಾಗೂ ಸಂಬಂಧಿಕರು ಅವರ ಮೇಲೆ ಹೊಂದಿದ್ದ ಅಪಾರ ಪ್ರೇಮ ಹಾಗೂ ನಂಬಿಕೆಯ ಪ್ರತೀಕವಾಗಿ ಪ್ರತಿಷ್ಠಾಪಿಸುತ್ತಿದ್ದರು. ಸತಿ ಕಲ್ಲುಗಳು, ವೀರಗಲ್ಲುಗಳು ಅಥವಾ ನಿಶಿದ್‌ಗಲ್ಲುಗಳನ್ನು ಸ್ಥಾಪಿಸಿದಾಗ ಅದರ ಕಾಲ, ದಿವಸ, ವಾರ ಹಾಗೂ ನಕ್ಷತ್ರವನ್ನೆಲ್ಲ ದಾಖಲಿಸುತ್ತಿದ್ದರು. ಉದಾ: ಹರಿಯಕ್ಕನು ಹೋರಾಡುತ್ತಾ ಸತ್ತಾಗ ಅವಳ ಚಿಕ್ಕಪ್ಪನಾದ (ಮಾವ) ಮಾದೇಗೌಡನು ಶಿಖಾರಿಪುರದ ಬಳಿ ಕ್ರಿ.ಶ. 1449ರಲ್ಲಿ ಒಂದು ವೀರಗಲ್ಲನ್ನು ಸ್ಥಾಪಿಸಿದನು.[182]

ಕ್ರಿ.ಶ. 1450ರ ಸರಿಸುಮಾರಿನ ಮೂಲ ಮಲ್ಲಿಕಾರ್ಜುನ ದೇವಾಲಯದ ಹತ್ತಿರ ನಿಡುಗಲ್ಲಿನ ಕಲ್ಲೊಂದರ ಮೇಲೆ ಪತ್ತೆ ಮಾಡಲಾದ ಒಂದು ಶಾಸನವು ಸೊರಬದಲ್ಲಿ ಮುಳ-ಸಂಘದ ವೃಶಭಸೇನ ಭಟರ ಶಿಷ್ಯನಾದ ವೈಶ್ಯ ರಾಮಶೆಟ್ಟಿಯ ಮಗ ಭೀಮಶೆಟ್ಟಿಯ ಹೆಂಡತಿ ಚಂಡಾವೆಯ ಸ್ಮಾರಕವನ್ನು ಉಲ್ಲೇಖಿಸುತ್ತದೆ.[183] ಸೊರಬದಲ್ಲಿನ ಕ್ರಿ.ಶ. 1451ರ ಶಾಸನವೊಂದು ಚಂದ್ರಗುತ್ತಿ ಪ್ರಾಂತ್ಯದಲ್ಲಿನ ಸತಿಯೊಬ್ಬಳ ಉಲ್ಲೇಖವನ್ನು ನೀಡುತ್ತದೆ.[184] ಕ್ರಿ.ಶ. 1452ನೇ ವರ್ಷದಲ್ಲಿ ಚೌಡನಾಯಕನ ಮಗನಾದ ಕರಿಯ ನಾಯಕನು ಪಶು ಆಕ್ರಮಣಕಾರರ ಒಂದು ಗುಂಪನ್ನು ನೋಡಿದನು ಹಾಗೂ ಅವರನ್ನು ಓಡಿಸುತ್ತಾ ಆ ಕಾಳಗದಲ್ಲಿ ಸ್ವರ್ಗಸ್ತನಾದನು. ಆತನ ಹೆಂಡತಿ ತೆಂಬಯಾಮಳು ಅವನೊಂದಿಗೆ ಸ್ವರ್ಗ ಸೇರಿದಳು.[185]

ಸತಿಪದ್ಧತಿಯನ್ನು ಆಚರಿಸಿದ ನಂತರ ಆ ನಿರ್ದಿಷ್ಟ ಕುಟುಂಬದವರು ಸತಿಯಾದವಳು ಸ್ವರ್ಗ ಸೇರಲೆಂದು ದೇವಾಲಯಕ್ಕೆ ಹಣ ಅಥವಾ ಭೂದಾನವನ್ನು ಮಾಡುತ್ತಿದ್ದರು. ಉದಾ: ಕ್ರಿ.ಶ. 1490ರಲ್ಲಿ ಹೊನ್ನಾವೆ ನಾಯಕಿತಿಯು ತೀರಿಕೊಂಡಾಗ ಅವಳ ಕುಟುಂಬದವರು ದೇವಾಲಯಕ್ಕೆ ಭೂಮಿಯೊಂದನ್ನು ದಾನ ಮಾಡಿದರು ಎಂದು ಚಿಕ್ಕನಾಯಕನಹಳ್ಳಿಯ ಒಂದು ಶಾಸನವು ತಿಳಿಸುತ್ತದೆ.[186] ಹಾಡುವಳ್ಳಿಯ ಹೊನ್ನದೇವಿ-ಅಮ್ಮನ್‌ಳು ಕ್ರಿ.ಶ. 1547ರಲ್ಲಿ ಸತಿಯನ್ನು ಆಚರಿಸಿದಳು. ವೆಂಕಟನ ಮರಣದೊಂದಿಗೆ ಆತನ ರಾಣಿಯರೂ ಸತಿಪದ್ಧತಿಯನ್ನು ಆಚರಿಸಿದರು. ನಮಗೆ ದೊರೆತಿರುವ ಒಂದು ಶಾಸನದಂತೆ ಎರಡನೇ ದೇವರಾಯನು ಸತ್ತ ನಂತರ ಚಂದ್ರಗುತ್ತಿಯ ಶೆಟ್ಟಿಗಳು ಆತ್ಮಾಹುತಿ ಮಾಡಿಕೊಂಡರು.[187]

ಈ ರೀತಿಯಾಗಿ ಮೇಲಿನ ಉಲ್ಲೇಖಗಳು ಸತಿಯ ಬಗ್ಗೆ ನಮಗೆ ಕೆಲವು ಮಾಹಿತಿಗಳನ್ನು ನೀಡುತ್ತವೆ. ಇದು ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಅತ್ಯಂತ ಅನಿಷ್ಠ ಪದ್ಧತಿಯಾಗಿತ್ತು.

ಕೆಲವೊಮ್ಮೆ ಸತಿಪದ್ಧತಿಯನ್ನು ಬಲವಂತದಿಂದ ಆಚರಿಸಲಾಗುತ್ತಿತ್ತು ಆದರೆ ಇನ್ನು ಕೆಲವು ಸಮಯ ಸ್ತ್ರೀಯರು ಸ್ವತಃ ತಮ್ಮ ಇಚ್ಛೆಯಿಂದ ಆಚರಿಸುತ್ತಿದ್ದರು. ವಿಜಯನಗರ ಕಾಲದಲ್ಲಿ ಸತಿ ಪದ್ಧತಿಯು ಪ್ರಸಿದ್ಧಿಯನ್ನು ಗಳಿಸಿತ್ತು. ಏಕೆಂದರೆ ಮುಸ್ಲಿಂರ ಆಕ್ರಮಣದಿಂದ ಹೆಚ್ಚು ಸಂದರ್ಭಗಳಲ್ಲಿ ಸ್ತ್ರೀಯರನ್ನು ಅವರ ಹತ್ತಿರದ ಸಂಬಂಧಿಕರು ಪುರಾತನ ಸಂಪ್ರದಾಯವನ್ನು ಕಾಪಾಡಿಕೊಂಡು ಹೋಗುವಂತೆ ಬಲವಂತವಾಗಿ ಈ ಪದ್ಧತಿಯನ್ನು ಆಚರಿಸುವಂತೆ ಪ್ರೇರೇಪಿಸುತ್ತಿದ್ದರು. ಸಂಭಂದಿಕರ

ಜೊತೆಗೆ ಬ್ರಾಹ್ಮಣರೂ ಈ ಪದ್ಧತಿಯು ಬಹಳ ಕ್ಲಿಷ್ಟ ಹಾಗೂ ಕಡ್ಡಾಯವಾಗುವಲ್ಲಿ ಕಾರಣಕರ್ತರಾಗುತ್ತಿದ್ದರು.ವಿದೇಶೀ ಆಕ್ರಮಣಕಾರರ ಒಳಹರಿವು ಹಾಗೂ ಬ್ರಾಹ್ಮಣರ ಕಠಿಣ ನಿಯಮಗಳು ಈ ದುಸ್ಥಿತಿಯ ಕಾರಣಗಳಾಗಿದ್ದವು. ಈ ಭಯಂಕರ ಪದ್ಧತಿಯನ್ನು ಹೆಚ್ಚು ಹೆಸರುವಾಸಿಯಾಗಲು ಪ್ರಸಾರಗೊಳಿಸಲು ಇದಕ್ಕೆ ಸಂಭಂದಿಸಿದ ಸ್ತೋತ್ರಗಳನ್ನು ಪಂಡಿತರು ತಪ್ಪಾಗಿ ಅರ್ಥೈಸಿದರು.

10. ವೇಶ್ಯಾವಾಟಿಕೆ:

ವೇಶ್ಯಾವೃತ್ತಿಯು ಬಹಳ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿದೆ. ವೇಶ್ಯಾವೃತ್ತಿ ಸಂಸ್ಥೆಯನ್ನು ಸಮಾಜವು ಪ್ರೋತ್ಸಾಹಿಸಿತು. ಸಾವಿರಾರು ಮಹಿಳೆಯರು ಈ ವೃತ್ತಿಯನ್ನು ತಮ್ಮ ಜೀವನಾದಾರವಾಗಿ ಸ್ವೀಕರಿಸಿದ್ದಾರೆ. ವಿಜಯನಗರ ಕಾಲದಲ್ಲಿ ವೇಶ್ಯಾವೃತ್ತಿ ಸಂಸ್ಥೆಯು ಅಸ್ತಿತ್ವದಲ್ಲಿತ್ತು. ವೇಶ್ಯಾವೃತ್ತಿಯು ಒಂದು ಸಂಸ್ಥೆಯಾಗಿ ಇದೊಂದು ನಗರ ಪ್ರವೃತ್ತಿ ಎಂದು ಹೇಳಬಹುದು. ವಿಜಯ ನಗರಕ್ಕೆ ಭೇಟಿ ಇಟ್ಟ ವಿದೇಶೀ ಪ್ರವಾಸಿಗರು ಇದನ್ನು ಉಲ್ಲೇಖಿಸಿದ್ದಾರೆ.

ವೈಶ್ಯೆಯರು ನೃತ್ಯ, ಹಾಡುಗಾರಿಕೆ ಹಾಗೂ ಪುರುಷರನ್ನು ರಂಜಿಸುವಲ್ಲಿ ಅವರಲ್ಲಿದ್ದ ಕಲಾ ನೈಪುಣ್ಯತೆಯಿಂದಾಗಿ ಸಮಾಜದಲ್ಲಿ ಅವರನ್ನು ಗೌರವಪೂರ್ವಕವಾಗಿ ನೋಡುತ್ತಿದ್ದರು. ಸ್ತ್ರೀಯರು ಹಾಗೂ ದೇವದಾಸಿಯರ ಉಪಸ್ಥಿತಿಯು ಆಸ್ಥಾನ ಆಚರಣೆಗಳಲ್ಲಿ ಅವಶ್ಯಕ ಅಂಶವಾಗಿತ್ತು. ವೇಶ್ಯೆಯರನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.(ಎ)ವೇಶ್ಯೆಯರು ಅಥವಾ ಜನರನ್ನು ಮುಕ್ತವಾಗಿ ರಂಜಿಸುತ್ತಿದ್ದ ಸಾರ್ವಜನಿಕ ಮಹಿಳೆಯರು (ಬಿ)ದಾಸಿಯರು ಅಂತವರ ಉಪಪತ್ನಿಯರಾಗಿ ಒಬ್ಬ ಪುರುಷನ ಮನೆಯಲ್ಲಿ ವಾಸಿಸುವವರು (ಸಿ)ಗಣಿಕರು ಅಥವಾ ವಾರಾಂಗನೆಯರು ವೇಶ್ಯೆಯರು 'ಸೊಳೆಯಗೇರಿ'ಎಂಬ ಬೀದಿಗಳಲ್ಲಿ ವಾಸಿಸುತ್ತದ್ದರು.

ಕನ್ನಡಿಗಳನ್ನು ಇಡುತ್ತಿದ್ದಕ್ಕಾಗಿ ತೆರಿಗೆಯನ್ನು ನೀಡಬೇಕಾಗಿತ್ತು. ಅವರು 'ಸೊಳೆದೆರೆ'ಎಂಬ ತೆರಿಗೆಯನ್ನು ನೀಡಬೇಕಾಗಿತ್ತು. ವೇಶ್ಯೆಯರ ಮೇಲಿನ ಈ ತೆರಿಗೆ ಭಾರವು ವಿಜಯನಗರ ಸಾಮ್ರಾಜ್ಯವು ವೇಶ್ಯಾವಾಟಿಕೆಯನ್ನು ವೃತ್ತಿಯೆಂದು ಪರಿಗಣಿಸಿತ್ತು ಎಂಬುದನ್ನು ತೋರಿಸುತ್ತದೆ.[189] ಅಬ್ದುಲ್‌ರಜಾಕ್‌ನು ಹೇಳುವಂತೆ ಅಚ್ಯುತರಾಯನ ಆಳ್ವಿಕೆಯಲ್ಲಿ 12.000ಸೈನಿಕರ ಸಂಬಳವನ್ನು ಪ್ರತ್ಯೇಕ -ತೆರಿಗೆ ಎಂದು ವೇಶ್ಯೆಯರಿಂದಲೇ ಸಂಗ್ರಹಿಸಬಹುದಾಗಿತ್ತು.ವೇಶ್ಯೆಯರಿಂದ ವಿಜಯನಗರವು ಹೆಚ್ಚು ಕಂದಾಯವನ್ನು ಪಡೆಯುತ್ತಿತ್ತು ವೇಶ್ಯಾಗೃಹಗಳಿಂದ ಪಡೆದ ಮೊತ್ತದಿಂದ ಒಂದು ದೊಡ್ಡ ಆರಕ್ಷಕ ಬಲವನ್ನೇ ಇಟ್ಟುಕೊಳ್ಳಲಾಗಿತ್ತು.[190] ಅವರ ಹಣದ ಶ್ರೀಮಂತಿಕೆ ಹಾಗೂ ಸೌಂದರ್ಯದ ಶ್ರೀಮಂತಿಕೆಯನ್ನು ಅಬ್ದುಲ್ ರಜಾಕ್‌ನು ಈ ರೀತಿ ವಿವರಿಸುತ್ತಾನೆ. ಏಳು ಕೋಟೆಗಳಲ್ಲಿ ಪ್ರತಿಯೊಂದು ಸಮಾನಾಗಿವೇಶ್ಯಾವೃತ್ತಿಯು ಸ್ಥಳಗಳನ್ನು ಬೃಹತ್ ಸಂಖ್ಯೆಯಲ್ಲಿ ಹೊಂದಿವೆ.[191] ಎಲ್ಲಾ ವರ್ಗದ ಮಹಿಳೆಯರಿಗೂ ವೇಶ್ಯಾವೃತ್ತಿಯು ಮುಕ್ತವಾಗಿತ್ತು. ಸಮಕಾಲೀನ ಆಧಾರಗಳು ಎಲ್ಲಾ ವರ್ಗಗಳ ವೇಶ್ಯೆಯರಿಗೆ ಉಲ್ಲೇಖವನ್ನು ನೀಡುತ್ತದೆ.

ವೇಶ್ಯೆಯರಲ್ಲಿ 'ಮುದುರಾದಿಕೊತ್ಸವಂ'(ಕನ್ನಡಿಯನ್ನು ತೋರಿಸುವುದು)ದಿನಗಳಲ್ಲಿ ಅಸ್ತಿತ್ವದಲ್ಲಿತ್ತು. ಈ ಆಚರಣೆಯು ಒಬ್ಬ ಕನ್ಯೆಯು ವೇಶ್ಯಾವೃತ್ತಿಯನ್ನು ಆರಂಭಿಸಲು ಒಂದು ಆರಂಭದ ಹಂತವಾಗುತ್ತಿತ್ತು. ಇದನ್ನು ಚೈತ್ರಮಾಸದ ಪೌರ್ಣಿಮೆಯ ದಿನದಂದು ಆಚರಿಸಲಾಗುತ್ತಿತ್ತು. ಆ ದಿವಸದಂದು ಅವರಿಗೆ ಸೇರಿದ ಎಲ್ಲಸಂಬಂಧಿಕರನ್ನು ಆಹ್ವಾನಿಸಲಾಗುತ್ತಿತ್ತು. ಹುಡುಗಿಯನ್ನು ತಾಯಿಯ ತೊಡೆಯ ಮೇಲೆ ಕುಳ್ಳರಿಸಿ ಅನಂತರ ಕನ್ನಡಿಯನ್ನು ತೋರಿಸಲಾಗುತ್ತಿತ್ತು. ಕನ್ನಡಿಯನ್ನು ವೇಶ್ಯೆಯರು ಮಹಾಲಕ್ಷ್ಮಿ ಎಂದು ಪರಿಗಣಿಸಿದ್ದರು. ತಂದೆಯು ಮಂತ್ರವನ್ನು ಹೇಳುತ್ತಿದ್ದನು. ಇದು ಅವನು ಆಶೀರ್ವಾದಗಳನ್ನು ನೀಡುತ್ತಿದ್ದುದ್ದನು ಸೂಚಿಸುತ್ತದೆ. ಈ ಆಶೀರ್ವಾದಗಳು ಉತ್ತಮ ಪಾಂಡಿತ್ಯ ಹಾಗೂ ಸಂಪತ್ತು ಪ್ರಾಪ್ತವಾಗಲೆಂದು ಹರಸುತ್ತಿದ್ದವು.[192] ಈ ಆಚರಣೆಯನ್ನು ಪ್ರತೀವೇಶ್ಯೆಯ ಹುಡುಗಿಯು ತನ್ನ ಪ್ರಾಯಕ್ಕೆ ಬಂದಾಗ ಅನುಸರಿಸಲಾಗುತ್ತಿತ್ತು.

ಸಂದರ್ಶಕರು ವೇಶ್ಯೆಯರಿಗೆ 'ರೊವತ್ತ'ನ್ನು (ಹಣ ಸಂದಾಯ)ಕೊಡಬೇಕಾಗಿತ್ತು. ಈ ದುಷ್ಟ ಚಟಕ್ಕೆ ಬಲಿಬಿದ್ದು ಬಹಳ ಮಂದಿ ಹಾಳಾದರು. ವೇಶ್ಯೆಯರ ಮುಖ್ಯ ಉದ್ದೇಶವು ಹಣ ಮಾಡುವುದಾಗಿದ್ದರಿಂದ ಅವರು ಪುರುಷರನ್ನು ತಮ್ಮ ಮೋಹಕ ಬಲೆಗೆ ಬೀಳಿಸುತ್ತಿದ್ದರು.[194] ವೇಶ್ಯೆಯರು ಕೇವಲ ಮನೋರಂಜನೆಯನ್ನು ಬಯಸುತ್ತಿದ್ದರಲ್ಲದೆ ಜೂಜುಗಾರರು, ಕುಡುಕರು ಹಾಗೂ ಮೋಸಗಾರರಾಗಿದ್ದರು. ಅವರಲ್ಲಿ ಅನೇಕರು ಕುಡಿತಕ್ಕೆ ಬಲಿಬಿದ್ದರು.

ವೇಶ್ಯೆಯೊಬ್ಬಳು ವೃದ್ಧಳಾದಾಗ ತನ್ನ ವೃತ್ತಿಯಿಂದ ನಿವೃತ್ತಿಯನ್ನು ಹೊಂದುತ್ತಿದ್ದಳು ಆದರೆ ವ್ಯವಹಾರವನ್ನು ವರ್ಜಿಸುತ್ತಿರಲಿಲ್ಲ. ಯಾಕೆಂದರೆ ಇದೊಂದು ಲಾಭದಾಯಕವಾದ ವೃತ್ತಿಯಾಗಿತ್ತು. ಅಸಭ್ಯ ಗಿರಾಕಿಗಳಿಂದ ತನ್ನ ಮಗಳನ್ನು ರಕ್ಷಿಸುವ ಹೊಣೆಯನ್ನು ಹೊರುತ್ತಿದ್ದಳು. ಆದ್ದರಿಂದ ಈ ಕಾಲದಲ್ಲಿ ವೇಶ್ಯಾವಾಟಿಕೆಯು ಬಹಳ ಸಮೃದ್ಧಿಯಾಗಿತ್ತು. ರಾಜರು ಸೇನಾದಂಡನಾಯಕರು ಹಾಗೂ ಶ್ರೀಮಂತ ನಾಗರೀಕರು ಪ್ರೋತ್ಸಾಹಿಸುತ್ತಿದ್ದರು. ವೇಶ್ಯಾವಾಟಿಕೆಯನ್ನು ಸಮಾಜದ ಅತ್ಯಂತ ದುಷ್ಟ ವೃತ್ತಿಗಳಲ್ಲಿ ಒಂದು ಎಂದು ಪರಿಗಣಿಸಲಾಗಿತ್ತು.

11. ವಾರಾಂಗನೆಯರು:-

ವಾರಾಂಗನೆಯರು ಸಮಾಜದ ಹೆಸರುವಾಸಿಯಾದ ಸದಸ್ಯೆಯರಾಗಿದ್ದರು. ವಾರಾಂಗನೆಯರು ವೈಯಕ್ತಿಕವಾಗಿ ಅವರ ಅರ್ಹತೆ ಹಾಗೂ ಪಾಂಡಿತ್ಯದ ಆಧಾರದ ಮೇಲೆ ಗೌರವ ಮನ್ನಣೆಯನ್ನು ಪಡೆಯುತ್ತಿದ್ದರು. ಈ ವಾರಾಂಗನೆಯರನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು.(ಎ) ದೇವಾಲಯ ಹಾಗೂ ರಾಜಾಸ್ಥಾನಗಳಿಗೆ ಹೊಂದಿಕೊಂಡವರು (ಬಿ) ಸ್ವತಂತ್ರವಾಗಿ ಜೀವಿಸುತ್ತಿದ್ದವರು. ವಾರಾಂಗನೆಯು ಯಾವ ವರ್ಗಕ್ಕೆ ಸೇರಿದವಳಾದರೂ ಆ ವೃತ್ತಿಯನ್ನು ನಿರಂತರವಾಗಿ ನೆಡೆಸುತ್ತಿದ್ದಳು. ಪ್ರತ್ಯೇಕವಾಗಿ ವಾಸಿಸುತ್ತಿದ್ದ ವಾರಾಂಗನೆಯರ ಗುಂಪುಗಳನ್ನು ಹಲವಾರು ಹೆಸರುಗಳಿಂದ ಕರೆಯಲಾಗುತ್ತಿತ್ತು. ಅವುಗಳೆಂದರೆ, ವೇಶ್ಯೆಯರು, ಸನ್ನಲು, ಮತ್ತು ವಾರಕಂಟಲು ಎಂಬ ಹೆಸರುಗಳಿಂದ ಅವರನ್ನು ಕರೆಯಲಾಗುತ್ತಿತ್ತು. ಈ ವೇಶ್ಯೆಯರ ಒಂದು ಸಣ್ಣ ಗುಂಪು ಬಹಳ ಶ್ರೀಮಂತವೂ ಹಾಗೂ ವಿದ್ಯಾವಂತ ಭಾಗವಾಗಿತ್ತು. ರಾಜರು, ಮಂತ್ರಿಗಳು ಹಾಗೂ ಶ್ರೀಮಂತ

ನಾಗರೀಕರು ಇವರನ್ನು ಪ್ರೋತ್ಸಾಹಿಸುತ್ತಿದ್ದರು. ಅವರಲ್ಲಿ ಕೆಲವರನ್ನು ರಾಜರು ಹಾಗೂ ಮಂತ್ರಿಗಳು ತಮ್ಮ ಉಪಹೆಂಡತಿಯರಾಗಿ ತೆಗೆದುಕೊಂಡಿದ್ದರು.[195]

ವಾರಾಂಗನೆಯರು ದೇವಾಲಯದ ಮುಂದೆ ಹಾಗೂ ಮೂರ್ತಿಯ ಮುಂದೆ ಮಹಾನವಮಿ ಹಬ್ಬದ ಒಂಬತ್ತು ದಿವಸಗಳ ಪ್ರತೀ ಮುಂಜಾನೆಯಂದು ಬಹಳ ಧೀರ್ಘಕಾಲದವರೆಗೂ ನರ್ತನ ಮಾಡುತ್ತಿದ್ದರು. ಅಬ್ದುಲ್ ರಾಜಾಕ್‌ನು ಹೃದಯ ಕಳ್ಳಿಯರ ಚೆಲುವು ಬೆಡಗು ಬಿನ್ನಾಣಗಳನ್ನು ನೋಡಿ ಬೆರಗಾಗಿದ್ದನು ಅವರಲ್ಲಿ ಪ್ರತಿಯೊಬ್ಬರೂ ಮುತ್ತು, ಬೆಲೆ ಬಾಳುವ ಹರಳುಗಳು ಹಾಗೂ ಅತ್ಯಂತ ದುಬಾರಿಯಾದ ಉಡುಪನ್ನು ತೊಡುತ್ತಿದ್ದರು ಮತ್ತು ಅವರ ಮುಂದೆ ಒಬ್ಬಳು ಅಥವಾ ಇಬ್ಬರು ಸೇವಕಿಯರು ಸಂತೋಷದ ಸವಿಯನ್ನು ಸವಿಯಲು ಆಕರ್ಷಣೆಯನ್ನು ಮಾಡುತ್ತಿದ್ದರು. ಈ ರೀತಿಯಾದ ವೇಶ್ಯಾಗೃಹಗಳು ರಾಜಧಾನಿಯ ಹಲವು ಕೋಟೆಗಳಲ್ಲಿ ನಡೆಯುತ್ತಿದ್ದವು.[196]

ಅನೇಕ ವಾರಾಂಗನೆಯರು ಅಪಾರವಾದ ಸಂಪತ್ತನ್ನು ಸಂಗ್ರಹಿಸಿದ್ದರು. ಬಾರ್ಬೋಸನು ಒಬ್ಬ ನಿರ್ದಿಷ್ಟ ಮಹಿಳೆಯ ಸಂಪತ್ತಿನ ಬಗ್ಗೆ ಲೆಕ್ಕಾಚಾರವನ್ನು ಹಾಕುತ್ತಾ ಹೇಳುತ್ತಾನೆ. *"ಅವರಲ್ಲಿ ಕೆಲವರು ಎಷ್ಟು ಶ್ರೀಮಂತರಾಗಿದ್ದರೆಂದರೆ ಅವರಲ್ಲಿ ಒಬ್ಬಳು ಯಾವುದೇ ಸಂತಾನವಿಲ್ಲದೆ ತೀರಿಕೊಂಡಾಗ ಅವಳ ಇಡೀ ಸಮಸ್ತ ಆಸ್ತಿಗೆ ರಾಜನನ್ನು ಉತ್ತರಾಧಿಕಾರಿಯನ್ನಾಗಿ ಮಾಡಲಾಯಿತು. ಅವಳು ಏನು ಬಿಟ್ಟಿದ್ದಳು ಎಂಬುದನ್ನು ಸಂಗ್ರಹಿಸಲು ಅವನು ಕಳುಹಿಸಿದಾಗ ಎಪ್ಪತ್ತು ಸಾವಿರ ಪಾರಾಡೊಗಳ ಮೊತ್ತವು ಸಿಕ್ಕಿತು. ಹಾಗೂ ಅವಳ ಸಖಿಯೊಬ್ಬಳಿಗಾಗೀ (ದಾಸಿಗಾಗಿ) ಹನ್ನೆರಡುಸಾವಿರ ಪಾರಾಡೊಗಳನ್ನು ಒಂದೆಡೆಇಟ್ಟಿದ್ದಳು. ಆ ದಾಸಿಯನ್ನು ಚಿಕ್ಕಂದಿನಿಂದಲೂ ಅವಳು ಸಾಕಿ ಸಲಹಿದ್ದಳು. ಇದರಲ್ಲಿ ಯಾವುದೇ ಆಶ್ಚರ್ಯವಿರಲಾರದು. ಏಕೆಂದರೆ ಈ ರೀತಿಯಾದ ವ್ಯಾಪಾರ ವಸ್ತುವು ಪ್ರಪಂಚದಲ್ಲಿ ಸಿಗಬಹುದಾದ ಶ್ರೇಷ್ಠ ಹಾಗೂ ಅತ್ಯಂತ ಶ್ರೀಮಂತ ವಸ್ತುವಾಗಿದೆ."*[197] ಪಯೆಸ್‌ನೂ ಕೂಡ ಅವರ ಬಳಿ ಅಡಗಿದ್ದ ಅಪಾರ ಸಂಪತ್ತನ್ನು ಕಂಡು ಬಹಳ ಆಶ್ಚರ್ಯಗೊಂಡಿದ್ದನು. ಅವನ ಬರವಣಿಗೆಯ ಪ್ರಕಾರ ಅವರಲ್ಲಿನ ಕೆಲವು ಸ್ತ್ರೀಯರು ಭೂಮಿಯನ್ನು ಹೊಂದಿದ್ದರು ಈ ಭೂಮಿಯ ಜೊತೆ ಪಲ್ಲಕಿ ಹಾಗೂ ಸೇವಕಿಯರನ್ನೂ ಕೊಡಲಾಗಿತ್ತು. ಅವನು ಹೇಳುವಂತೆ ರಾಜಧಾನಿಯಲ್ಲಿ ಒಬ್ಬಳು ಮಹಿಳೆಯಿದ್ದಳು ಅವಳು ನೂರು ಸಾವಿರ ಪಗೋಡಾಗಳನ್ನು ಹೊಂದಿದ್ದಳೆಂದು ಹೇಳಲಾಗಿದೆ.[198]

ಅಬ್ದುಲ್‌ರಜಾಕ್ ಹಾಗೂ ಪಯಸ್‌ರ ಬರವಣಿಗೆಯಂತೆ ವಾರಾಂಗನೆಯರು ನಗರದ ಉತ್ತಮ ಬೀದಿಗಳಲ್ಲಿ ವಾಸಿಸುತ್ತಿದ್ದರು ಹಾಗೂ ಅವರು ಕೆಳದರ್ಜೆಯ ಚಾರಿತ್ರ್ಯವನ್ನು ಹೊಂದಿದ್ದರು. ಅವರ ಬೀದಿಗಳು ಅತ್ಯುತ್ತಮ ಮನೆಯ ಸಾಲುಗಳನ್ನು ಹೊಂದಿದ್ದವು. ಇವುಗಳ ಬಗ್ಗೆ ಪರ್ಷಿಯನ್ ರಾಯಭಾರಿಯು ಹೀಗೆ ಹೇಳುತ್ತಾನೆ. *"ಮಧ್ಯಾಹ್ನದ ಪ್ರಾರ್ಥನೆಯ ನಂತರ ಈ ಮನೆಗಳ ಬಾಗಿಲಿನ ಬಳಿ ನಿಲ್ಲುತ್ತಾರೆ. ಮನೆಗಳನ್ನು ಸುಂದರವಾಗಿ ಅಲಂಕರಿಸಲಾಗಿರುತ್ತದೆ. ಮನೆಯ ಮುಂದೆ ಇರುವ ಕುರ್ಚಿಗಳಲ್ಲಿ ವಾರಾಂಗನೆಯರು ಕುಳಿತಿರುತ್ತಾರೆ. ಈ ಸ್ಥಳದ ಮೂಲಕ ಸಂಚರಿಸುವ ಪ್ರತೀ ವ್ಯಕ್ತಿಯು ತನಗೆ ಬೇಕಾದ ಆಯ್ಕೆಯನ್ನು ಮಾಡುತ್ತಾನೆ."*[199] ಪಯೆಸ್ ಕೂಡ ಹೇಳುತ್ತಾನೆ "ಇವರು ಬಹಳ

ಮರ್ಯಾದಸ್ಥೆಯರು ಹಾಗೂ ಸೇನಾದಂಡ ನಾಯಕರುಗಳ ಪತ್ನಿಯರೊಂದಿಗೆ ಸಮಾನ ಗೌರವವನ್ನು ಹೊಂದಿದವರಾಗಿದ್ದಾರೆ. ಗೌರವಸ್ಥ ಪುರುಷರು ಯಾವುದೇ ತಪ್ಪಿಲ್ಲದೆ ಇವರ ಮನೆಗಳಿಗೆ ಭೇಟಿ ನೀಡ ಬಹುದು." [200]

ಈ ಸ್ತ್ರೀಯರು ಕೆಲವು ವಿಶೇಷ ಹಕ್ಕುಗಳನ್ನು ಹೊಂದಿದ್ದರು ರಾಜರ ಪತ್ನಿಯರ ಉಪಸ್ಥಿತಿಯಲ್ಲಿ ಅವರೊಂದಿಗೆ ಹೋಗಿ ಅವರ ಜೊತೆ ಇದ್ದು ವೀಳ್ಯದೆಲೆಯನ್ನು ಜಗಿಯುತ್ತಿದ್ದರು. [201] ಬಾರ್ಬೋಸಾನು ಅವರು ರಾಜನನ್ನು ಹೇಗೆ ರಂಜಿಸುತ್ತಿದ್ದರೆಂಬುದನ್ನು ವಿವರಿಸುತ್ತಾನೆ.*"ಅವರು (ವಾರಾಂಗನೆಯರು)ಹಾಡುತ್ತಾರೆ ಮತ್ತು ನರ್ತಿಸುತ್ತಾರೆ. ಹಾಗೂ ರಾಜನಿಗೆ ಸಾವಿರ ರಸಾನುಭವವನ್ನು ನೀಡುತ್ತಾರೆ. ಪ್ರತಿನಿತ್ಯವೂ ಅವರಿಗಾಗಿಯೇ ಪ್ರತ್ಯೇಕವಾಗಿರುವ ಸ್ನಾನಘಟ್ಟಗಳಲ್ಲಿ ಅವರು ಜಳಕ ಮಾಡುತ್ತಾರೆ. ರಾಜನು ಅವರು ಸ್ನಾನ ಮಾಡುತ್ತಿರುವುದನ್ನು ನೋಡಲು ಹೋಗುತ್ತಿದ್ದನು. ಹಾಗೂಅಲ್ಲಿ ಯಾರು ರಾಜನ ಮನಸ್ಸನ್ನು ಆಕರ್ಷಿಸುತ್ತಿದ್ದರೋ ಅವರು ರಾಜನ ಅಂತಃಪುರಕ್ಕೆ ಹೋಗುತ್ತಿದ್ದರು."* [202] ಈ ಸ್ತ್ರೀಯರು ಸ್ನಾನ ಮಾಡುತ್ತಿರುವಾಗ ರಾಜನು ಅಲ್ಲಿಗೆ ಭೇಟಿ ನೀಡುತ್ತಿದ್ದನ್ನು ಮಧುರಾವಿಜಯಂ ನೊಂದಿಗೆ ಹೋಲಿಸಬಹುದು. ಇದರಲ್ಲಿ ಗಂಗಾದೇವಿಯು ತನ್ನ ಗಂಡನಾದ ಕಂಪಣನು ವಾರಾಂಗನೆಯರು ಹಾಗೂ ಇತರೆ ಸ್ತ್ರೀಯರು ಸ್ನಾನ ಮಾಡುವಾಗ ಅವರ ಜೊತೆ ಯಾವ ರೀತಿ ಚಕ್ಕಂದವಾಡಿದ್ದನೆಂಬುದನ್ನು ವರ್ಣಿಸುತ್ತಾಳೆ. ಅವರು ಸ್ನಾನಮಾಡುತ್ತಿರುವ ಗುಂಪಿನಲ್ಲಿ ಗಂಗಾದೇವಿಯೂ ಒಬ್ಬಳಾಗಿರುತ್ತಾಳೆ. [203]

ವಾರಾಂಗನೆಯರು ರಾಜ ಅಂತಃಪುರವನ್ನು ಪ್ರವೇಶಿಸುವ ಅವಕಾಶವನ್ನು ಹೊಂದಿದ್ದರು ಅಂತಪುರದಲ್ಲಿ ರಾಣಿಯರೊಂದಿಗೆ ಇವರು ಸೇರಬಹುದಿತ್ತು. ಹಾಗೆಯೇ ಅವರೊಂದಿಗೆ ವೀಳ್ಯವನ್ನು ಮೆಲ್ಲಬಹುದಾಗಿತ್ತು. ಇವರು ರಾಜರ ಸೇನಾದಂಡಯಾತ್ರೆಗಳಲ್ಲಿ ಅವರನ್ನು ಅನುಸರಿಸುತ್ತಿದ್ದರು. ಸೇನಾ ಡೇರೆಗಳಲ್ಲಿ ಇವರನ್ನು ಕಾಣಬಹುದಾಗಿತ್ತು ಹಾಗೂ ಬಿಡಾರದಲ್ಲಿ ರಾಜಕುಮಾರಿ ಹಾಗೂ ಮಂತ್ರಿಗಳ ಡೇರೆಗಳಲ್ಲಿ ಇವರನ್ನು ನೋಡಬಹುದಾಗಿತ್ತು. ಇವರಿಗೆ ಹಣವನ್ನು ನೀಡಿ ರಾಜನು ಇಟ್ಟುಕೊಳ್ಳುತ್ತಿದ್ದನು. ಏಕೆಂದರೆ ಕಡೆಯ ಪಕ್ಷ ಇವರು ಇರುವುದರಿಂದಲಾದರೂ ತನ್ನ ಸೈನಿಕರು ಉತ್ತಮವಾಗಿ ಹೋರಾಡುವರೆಂಬ ಸಕಾರಾತ್ಮಕ ಲೆಕ್ಕಚಾರ ಅವನದಾಗಿರರುತ್ತಿತ್ತು. [204]

ನಂಬೂರಿ ಕೇಶವಾಚಾರ್ಯರು ಬರೆದಿರುವ ಆಚಾರ್ಯಸೂಕ್ತಿ ಮುಕ್ತಾವಳಿಯು ತೆಲುಗಿನಲ್ಲಿ ಶ್ರೀವೈಷ್ಣವಿಯಂ ಇತಿಹಾಸವನ್ನು ನಮಗೆ ತಿಳಿಸಿಕೊಂಡುತ್ತದೆ. ಇದು ಶ್ರೀರಂಗಂನ ಲೂಟಿಯ ಘಟನೆಯನ್ನು ವಿವರಿಸುತ್ತದೆ ಹಾಗೂ ಶ್ರೀರಂಗಂನ ದೇವಸ್ಥಾನಕ್ಕೆ ಮರಳಿ ತರುವವರೆಗೆ ಶ್ರೀರಂಗನಾಥನ ಮೂರ್ತಿಯು ಯಾವ ಬದಲಾವಣೆಯನ್ನು ಕಂಡಿತು ಎಂಬ ಅಂಶಗಳನ್ನು ಸ್ಮರಿಸುತ್ತದೆ. ಇದರ ಜೊತೆಗೆ ಶ್ರೀರಂಗಂನ ದೇವದಾಸಿಯೊಬ್ಬಳು ತನ್ನೆಡೆಗೆ ಸೆಳೆಯಲ್ಪಟ್ಟ ಮಹಮ್ಮದೀಯ ದಂಡನಾಯಕನೊಬ್ಬನನ್ನು ಮೋಸದ ಬಲೆಗೆ ಬೀಳಿಸಿ ನಂತರ ಅವನನ್ನು ಆ ದೇವಸ್ಥಾನ ಗೋಪುರಗಳ ಒಂದರ ಮೇಲಿಂದ ತಳ್ಳಿ ಮೋಸದಿಂದ ಹೇಗೆ ಸಾಯಿಸಿದಳು ಹಾಗೂ ಈ ಮೂಲಕ ಹೇಗೆ ಆ ದೇವಾಲಯದ ಸಂಪೂರ್ಣ ವಿನಾಶವನ್ನು ಪಡೆದಳು ಎಂಬ ದುರಂತ ಸಂಗತಿಯನ್ನು ನಮಗೆ ಹೇಳುತ್ತದೆ. ಅವಳೂ ಕೂಡ ತಕ್ಷಣವೇ ಅದೇ ಗೋಪುರದಿಂದ ಬಿದ್ದು ಸತ್ತಳೆಂದು

ಹೇಳಲಾಗಿದೆ. ತಮ್ಮ ಪೂರ್ವಜಳೊಬ್ಬಳ ಈ ಶ್ರೇಷ್ಠ ಕಾರ್ಯಕ್ಕಾಗಿ ಇಂದಿನ ದಿವಸವೂ ಇವಳ ವಂಶಸ್ಥರು ಶ್ರೀರಂಗಂ ದೇವಾಲಯದಲ್ಲಿ ವಿಶೇಷ ಗೌರವವನ್ನು ಹಾಗೂ ಹಕ್ಕುಗಳನ್ನು ಪಡೆದಿದ್ದಾರೆ.[205]

12. ಅಂತಃಪುರ:

ಈ ರಾಜನ ವಾಸಸ್ಥಾನ ಹಾಗೂ ಅಂತಃಪುರಗಳು ಅವುಗಳೇ ಒಂದು ನಗರದಂತಿದ್ದವು. ವಿದೇಶೀ ವಾಣಿಜ್ಯದಿಂದ ಗಳಿಸಿದ ಸಂಪತ್ತು ದೆಹಲಿಯ ಸುಲ್ತಾನರ ಜಗಜಗಿಸುವ ಅರಮನೆಯಂತಹ ವೈಭವವನ್ನು ಇವರ ಅರಮನೆಗಳಲ್ಲಿ ಕಾಣುವಂತೆ ಮಾಡಿತು. ಸಾಮಾನ್ಯ ಸ್ತ್ರೀಯರಾಗಲಿ ಅಥವಾ ರಾಣಿಯರೇ ಆಗಲಿ ರಾಜನ ಅಂತಃಪುರದಲ್ಲಿನ ಜೀವನವು ಸಂಪೂರ್ಣ ಸುಖವುಳ್ಳದ್ದು ಎಂದು ಪರಿಗಣಿಸಿರುವ ಸಾಧ್ಯತೆ ಇಲ್ಲ. ಈ ಸಂಬಂಧ ಒಂದು ಹುಡುಗಿಯನ್ನು ರಾಜನನ್ನು ಮದುವೆಯಾಗುವಂತೆ ರಾಜನ ದೂತರು ಪ್ರಸ್ತಾಪ ಮಾಡಿದಾಗ ಆ ಧೈರ್ಯವಂತ ಹುಡುಗಿ ಅವರ ಪ್ರಸ್ತಾಪವನ್ನು ನಿರಾಕರಿಸಿದಳು. ಏಕೆಂದರೆ ಅವಳು ರಾಜನೊಂದಿಗೆ ಅವನ ಅಂತಃಪುರದಲ್ಲಿ ಕೊಳೆಯುವುದು ಅವಳಿಗೆ ಇಷ್ಟವಿರಲಿಲ್ಲ. ಬದಲಾಗಿ ಅವಳಿಗೆ ಸಮನಾದ ವ್ಯಕ್ತಿಯನ್ನು ವಿವಾಹವಾಗಿ ಸ್ವಚ್ಛಂದ ಜೀವನ ನಡೆಸಬಹುದಾಗಿತ್ತು ಮತ್ತು ಅವಳಿಗೆ ಬೇಕೆಂದಾಗ ತನ್ನ ಪೋಷಕರನ್ನು ಸಂಬಂಧಿಕರನ್ನು ಭೇಟಿ ಮಾಡುವ ಅವಕಾಶ ಅವಳಿಗಿರುತ್ತಿತ್ತು. ಈ ರೀತಿಯ ನಕಾರಗಳಿಗೆ ಒಗ್ಗಿರದ ರಾಜನು ಉದ್ರಿಕ್ತಗೊಂಡು ಇದು ರಾಜಾಜ್ಞೆಯ ಉಲ್ಲಂಘನೆಯೆಂದು ಆ ಹುಡುಗಿಯನ್ನು ವಶಪಡಿಸಿಕೊಳ್ಳಲು ಮುಂದಾದನು. ಆದರೆ ಆ ಹುಡುಗಿಯು ವಿಜಯನಗರವನ್ನು ದ್ವೇಷಿಸುತ್ತಿದ್ದ ಆ ಗಡಿಯಾಚೆಯ ಪ್ರದೇಶಕ್ಕೆ ಸೇರಿದವಳಾಗಿದ್ದರಿಂದ ಅಲ್ಲಿ ಯುದ್ಧವು ಸಹಜವಾಗಿ ಉದ್ಭವಿಸಿತು. ವಿಜಯನಗರದ ಅರಸರು ಅಂತಃಪುರದಲ್ಲಿ ಹೆಚ್ಚು ಸಂಖ್ಯೆಯ ಸ್ತ್ರೀಯರನ್ನು ಇಟ್ಟುಕೊಂಡಿದ್ದರು. ಇವರನ್ನು ಗೌರವಸಖಿಯರು ಅಥವಾ ದಾಸಿಯರು ಎಂದು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಹಾಗೂ ಇಡೀ ಅಂತಃಪುರದ ಮೇಲ್ವಿಚಾರಣೆಯು ಇವರ ಕೈಯಲ್ಲಿತ್ತು. ಅವರನ್ನು ಆಯ್ಕೆ ಮಾಡುವಾಗ ಅವರ ಅನುಪಮ ಸೌಂದರ್ಯಕ್ಕೆ ಮೊದಲ ಆದ್ಯತೆ ನೀಡಲಾಗುತ್ತಿತ್ತು. ಅವರು ಬಹಳ ಶ್ರೀಮಂತರಾಗಿದ್ದರು ಹಾಗೂ ಬಹಳ ಬೆಲೆಬಾಳುವ ಆಭರಣಗಳನ್ನು ತೊಡುತ್ತಿದ್ದರು. ಅವರಲ್ಲಿ ಕೆಲವರು ಭೂಉಂಬಳಿಯನ್ನು ಪಡೆಯುತ್ತಿದ್ದರು. ಬಹಳಷ್ಟು ಮಂದಿ ಅವರ ನಿಷ್ಠ ಹಾಗೂ ಸ್ವಾರ್ಥವಿಲ್ಲದ ಸೇವೆಗಾಗಿ ರಾಜನಿಂದ ಹಲವಾರು ಕಾಣಿಕೆಗಳನ್ನು ಪಡೆಯುತ್ತಿದ್ದರು.[206] ಅವರು ಸಂಗೀತ ಕಲೆಯಲ್ಲಿ ಬಹಳ ನಿಷ್ಣಾತರಾಗಿದ್ದರು. ಮಹಾನವಮಿಯಂತಹ ಪ್ರಮುಖ ಹಬ್ಬಗಳಲ್ಲಿ ಅವರು ರಾಜನನ್ನು ರಂಜಿಸುತ್ತಿದ್ದರು. ಬುಕ್ಕನ ಮಗನಾದ ಕಂಪಣನನ್ನು ಅಂತಃಪುರದ ಸ್ತ್ರೀಯರು ನರ್ತಿಸುತ್ತ ಎಲ್ಲ ವಿಧದಲ್ಲೂ ಪರಿಪೂರ್ಣವಾಗಿ ಅಭಿನಯವನ್ನು ನೀಡುತ್ತ ವಿವಿಧ ಹಾವಭಾವಗಳ ಪ್ರದರ್ಶನವನ್ನು ನೀಡುತ್ತ ತಣಿಸಿದರು.[207]

13. ಗುಲಾಮಗಿರಿ:

ವಿಜಯನಗರ ಕಾಲದಲ್ಲಿ ಗುಲಾಮಗಿರಿ ಸಾಮಾಜಿಕ ಸಂಸ್ಥೆಯು ಮುಂದುವರೆಯಿತು. ವಿದೇಶೀ ಪ್ರವಾಸಿಗರಾದ ಅಬ್ದುಲ್‌ರಜಾಕ್. ನಿಕೊಲೋಡಿ-ಕೊಂಟಿ, ಮತ್ತು ಬಾರ್ಬೋಸಾನಂತಹವರು ಈ ಗುಲಾಮಗಿರಿಯು ಆ ಕಾಲದಲ್ಲಿ ಅಸ್ತಿತ್ವದಲ್ಲತ್ತೆಂಬುದಕ್ಕೆ ಸಾಕ್ಷಿಗಳನ್ನು ನೀಡುತ್ತಾರೆ. ಕ್ರಿ.ಶ.1470ರ ಕುಪ್ಪತ್ತೂರು ಅಗ್ರಹಾರಕ್ಕೆ ಸೇರಿದ ಒಂದು ಶಾಸನವು ಬಸವಗ ಎಂಬ ಜೀತದಾಳುವಿನ ಬಗ್ಗೆ ಬರೆಯುತ್ತದೆ.[208] ಕ್ರಿ.ಶ. 1382ರ ಇನ್ನೊಂದು ಶಾಸನವು ಸ್ತ್ರೀ ಗುಲಾಮರ ಬಗ್ಗೆ ಬರೆಯುತ್ತದೆ.[209]

ಸಮಯಾಚಾರ್ಯರು ಅಥವಾ ಧಾರ್ಮಿಕ ನಾಯಕರು ಯಾವ ಮಹಿಳೆಯರನ್ನು ಚಂಚಲಚಿತ್ತರು ಎಂದು ಘೋಷಿಸುತ್ತಿದ್ದರೋ ಅವರನ್ನು ಸಾರ್ವಜನಿಕವಾಗಿ ಮಾರಾಟಮಾಡಲಾಗುತ್ತಿತ್ತು. ವಿಲ್ಕ್ಸ್ ಹೇಳುವಂತೆ ಅಪಾದಿತಳ ಜಾತಿಯ ಆಧಾರದ ಮೇಲೆ ಈ ಪದ್ಧತಿಯ ನಿಯಮಗಳೂ ಭಿನ್ನವಾಗಿರುತ್ತಿದ್ದವು. "ಬ್ರಾಹ್ಮಣ ಹಾಗೂ ಕೋಮಟಿ ಸ್ತ್ರೀಯರನ್ನು ಜಾತಿ ಬಹಿಷ್ಕಾರ ಮಾಡಿ ಓಡಿಸಲಾಗುತ್ತಿತ್ತು. ಹಾಗೂ ಅವರ ತೋಳಮೇಲೆ ಸೂಳೆಯರೆಂಬ ಹೆಚ್ಚೆಯನ್ನು ಹಾಕಲಾಗುತ್ತಿತ್ತು. ಇತರೆ ಹಿಂದೂ ಜಾತಿಯ ಮಹಿಳೆಯರನ್ನು ಯಾವುದೇ ದಾಕ್ಷಿಣ್ಯವಿಲ್ಲದೇ ಮಾರಲಾಗುತ್ತಿತ್ತು.[210] ಗುಲಾಮರು ಮದುವೆ ಮುಂಜಿ ಹಾಗೂ ಹಬ್ಬ ಹರಿದಿನಗಳಂತಹ ಆಚರಣೆಗಳಂದು ಬಟ್ಟೆ ಹಾಗೂ ಹಣದ ರೂಪದಲ್ಲಿ ಉಡುಗೊರೆಗಳನ್ನು ನೀಡುತ್ತಿದ್ದರು. ಗುಲಾಮರನ್ನು ಉತ್ತಮ ರೀತಿಯಲ್ಲಿ ಸತ್ಕರಿಸಲಾಗುತ್ತಿತ್ತು.

ಅಡಿ ಟಿಪ್ಪಣಿಗಳು

1. ಎ.ಇಂ. ಸಂ.13 ಪುಟ 30
2. ಅದೇ,
3. ಆರ್.ಕೆ. ಕ್ರಿ. 3, ಪುಟ 18-19
4. ಫ.ಎಂ. ಪುಟ 55
5. ಆರ್.ಕೆ. ಕ್ರಿ. 3 ಪುಟ 18
6. ಆಂಧ್ರ ಹಿಸ್ಟಾರಿಕಲ್ ರೀಸರ್ಚ್ ಸೊಸೈಟಿ ನಂ. 11 ಭಾಗ 3 ಮತ್ತು 4
7. ಸೋರ್ಸಸ್ ಪುಟ 23
8. ಮ.ವಿ. ಕಾನ್ಟೊ 1 ಶ್ಲೋಕ 7

9. ಅದೇ ಶ್ಲೋಕ 8

10. ಅದೇ ಶ್ಲೋಕ 13-16

11. ಅದೇ, ಶ್ಲೋಕ 11

12. ಅದೇ ಶ್ಲೋಕ 11, 16

13. ಗ್ರೇಟ್ ಹಿಂದೂ ವುಮೆನ್ ಇನ್ ಸೌತ್ ಇಂಡಿಯಾ ಪುಟ 333

14. ವುಮನ್ ಆಫ್ ಇಂಡಿಯಾ ಪುಟ 111

15. ಎ.ಕ. 5 ಶಾ. ಸಂ. 256

16. ಎ.ಕ. 5 ಶಾ. ಸಂ. 31

17. ಅಯ್ಯಂಗಾರ್ ಎಸ್.ಕೆ. ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ಪುಟ 31

18. ಇ.ಅಂ. 27 ಪುಟ 325

19. ಸೋರ್ಸಸ್ ಪುಟ 170

20. ಅದೇ, ಪುಟ 170

21. ಮೈ. ಗೋ. ಸಂ. 2 ಭಾಗ 3 ಪುಟ 2000-10

22. ಕ್ಯೂ.ಜೆ.ಎಂ.ಎಸ್. 25 ಪುಟ 66

23. ಅಚ್ಯುತಾರಾಯಾಭ್ಯುದಯಮು ಪುಟ 8

24. ಕ್ಯೂ.ಜೆ.ಎಂ.ಎಸ್. 25 ಪುಟ 66

25. ಎ.ಇಂ. 24, ಪುಟ 288, 289

26. ಎಸ್.ಐ.ಐ. 9 ಶಾ. ಸಂ. 557

27. ಆ.ರಿ.ಇಂ.ಎ, 1950-60 ಪುಟ 37-38

28. ಕ್ಯೂ.ಜೆ.ಎಂ.ಎಸ್. 25 ಪುಟ 66

29. ಎಸ್.ಐ.ಐ. 4, ನಂ. 702

30. ಮ್ಯಾಕ್‌ಮಾಸ್ ಭಾಗ 5 ಪುಟ 31-40

31. ತಿ.ತಿ.ಎ.ರಿ. 2. ನಂ. 135

32. ಅದೇ, 4 ನಂ. 1379

33. ಅದೇ,

34. ಎಸ್.ಐ.ಐ. 5, ನಂ. 955

35. ಅದೇ, ನಂ. 818

36. ಅದೇ, ನಂ. 1099

37. ಅದೇ,

38. ತಿ.ತಿ.ಎ.ರಿ. ಪುಟ 259

39. ಎಸ್.ಐ.ಐ. 5 ಪುಟ 1

40. ರಾಮಚಂದ್ರರಾವ್. ಸಿವಿ. ಅಡ್‌ಮಿನಿಸ್ಟ್ರೇಷನ್ ಅಂಡ್ ಸೊಸೈಟಿ ಇನ್ ಮೆಡಿವಲ್ ಆಂಧ್ರ (1038-1538 ಎ.ಡಿ) ಪುಟ 303

41. ಟಿ.ಕೆ.ಟಿ. ವೀರರಾಘುವಚಾರ್ಯ, ಹಿಸ್ಟರಿ ಆಫ್ ತಿರುಪತಿ (1976) ಪುಟ 25

42. ಎಸ್.ಐ.ಐ. 7 ನಂ. 387

43. ಎ.ಕ. 2 ನಂ. 237

44. ಅದೇ, 12 ಗು. 56

45. ಎಸ್.ಐ.ಐ. 9 ಭಾಗ 2 ಪುಟ 421

46. ಅದೇ, ಶಾ. ಸಂ. 352

47. ಅ.ರಿ.ಸೌ.ಇಂ.ಎ. 1907 ನಂ. 501

48. ಅದೇ ನಂ. 202

49. ಎಂ.ಎ.ಆರ್. 1933 ಪುಟ 162-172

50. ಎಸ್.ಐ.ಐ. 9 ಭಾಗ 2 ಪುಟ 470

51. ತಿ.ತಿ.ಇ. 2 ಪುಟ 27

52. ಎ.ಕ. 4 ಮ.ಗಿ.50

53. ಅ.ರಿ.ಸೌ. ಇಂ.ಎ. 1964-65 ನಂ. 398

54. ತಿ.ತಿ.ಇ. ಸಂ. 3 ಪುಟ 136

55. ಅದೇ ಪುಟ 168-171

56. ಇ.ಅಂ.ಪ್ರ. ಪುಟ 72

57. ಎ.ಕ. ಸಂ. 4 ಮ.ಗಿ. 59

58. ಅ.ರಿ.ಸೌ.ಇಂ.ಎ. 1911, ಪುಟ 397

59. ಎ.ಕ.ಸಂ.8 ಸಾ. 55

60. ಅದೇ,

61. ಕ.ಇ. ಸಂ. 3 ಭಾಗ 1 ನಂ. 15

62. ಅದೇ,

63. ಅ.ರಿ.ಸೌ.ಇಂ.ಎ. ಮತ್ತು ಕೆ.ಪಿ. ನಂ. 47

64. ಎ.ಕ. 7 ನಂ. 63

65. ಎಸ್.ಐ.ಐ. 7 ನಂ. 360

66. ಅದೇ,

67. ರಾಮರಾವ್.ಎಂ. "ವಾದಿರಾಜ ಸ್ವಾಮಿಗಳ ಕೀರ್ತನ" ಪುಟ 3-8

68. ಇಂ.ಆಂ. 23 ಪುಟ 184

69. ಹೂಟನ್.ಐ.ಎಚ್. 'ಕಾಸ್ಟ್ ಇನ್ ಇಂಡಿಯಾ' ಪುಟ 762

70. ಅದೇ,

71. ಎ.ಕ.ಸಂ. 8, ಶಿ. 9

72. ವಿ. ಶಿವರಾಂ ಅಪ್ಟೆ, ದಿ ಸ್ಯಾನ್‌ಸ್ಕ್ರಿಟ್-ಇಂಗ್ಲೀಷ್ ಡಿಕ್ಸನರಿ, ದೆಹಲಿ-1975, ಪುಟ 510

73. ಅದೇ ಪುಟ 495-509

74. ದಿ ಪೊಸಿಷನ್ ಆಫ್ ವುಮನ್ ಇನ್ ಹಿಂದೂ ಸಿವಿಲೈಜೇಷನ್, 2ನೇ ಆವೃತ್ತಿ, ಪೂನಾ 1969, ಪುಟ 183

75. ಅದೇ, ಪುಟ 209-13

76. ಜನರಲ್ ಆಫ್ ದಿ ಓರಿಯಂಟಲ್ ಇನ್‌ಸ್ಟಿಟ್ಯೂಟ್, ಬರೋಡ 13, ನಂ. 2, 1963

77. ಕಪಿಲ ವತ್ಸಾಯ 'ಡ್ಯಾನ್ಸಿಂಗ್ ಇನ್ ಇಂಡಿಯನ್ ಪೇಂಟಿಂಗ್ಸ್' ದೆಹಲಿ, 1982, ಪುಟ 169

78. ದೇಸಾಯಿ, ಪೂರ್ವೋಕ್ತ, 1975 ಪುಟ 155

79. ಎಂ.ಎ.ಆರ್. 1913-14, ಪ್ಯಾರಾ 3

80. ಎ.ಕ.ಸಂ. 5, ಅ.ಕೆ. 134, ಪುಟ 173

81. ಎ.ಕ.ಸಂ. 10 ಮಾಲೂರು 24, ಪುಟ 161

82. ಅದೇ, ಮಾಲೂರು 21, ಪುಟ 161

83. ಅದೇ, ಮಾಲೂರು ಪುಟ 47

84. ಅದೇ, 4, ಗುಂ. ಪೇ. 1 ಪುಟ 41

85. ಅದೇ,

86. ಅದೇ,

87. ತಿ.ತಿ.ಇ. ನಂ. 101

88. ಅ.ರಿ.ಸೌ.ಇಂ.ಎ. 1939, ನಂ. 426

89. ಎಸ್.ಐ.ಐ. 9 ಭಾಗ-2, ನಂ. 495, ಪುಟ 511-12

90. ತಿ.ತಿ.ಇ. 2 ಪುಟ 39

91. ಅದೇ, ಪುಟ 18

92. ಅದೇ, 5 ಪುಟ 25

93. ಅದೇ, 2 ಪುಟ 83

94. ಅದೇ, ಪುಟ 90

95. ಅದೇ, ಪುಟ 192

96. ಅದೇ,

97. ಅದೇ, 5 ಪುಟ 315

98. ಅದೇ, ಪುಟ 458

99. ಅದೇ, ನಂ. 44

100. ಅದೇ, ನಂ. 39

101. ಎಸ್.ಐ.ಐ. 16, ನಂ. 201

102. ಎ.ಕ. 11, ದಾ.ಗೆ. 133

103. ಅದೇ, 7 ಶಿ. ಪು. 295

104. ಫ.ಎಂ. ಪುಟ 241

105. ಹಂಪಿ ರುಯಿನ್ಸ್, ಪುಟ 57-70

106. ಸಾಲತೊರೆ.ಬಿ.ಎ. "ಸೋಷಿಯಲ್ ಅಂಡ್ ಪೊಲಿಟಿಕಲ್ ಲೈಫ್" ಸಂ. 2 ಪುಟ 372

107. ಫ.ಎಂ. ಪುಟ 264

108. ಅದೇ, ಪುಟ 92

109. ಅದೇ, ಪುಟ 85

110. ಅದೇ, ಪುಟ 86

111. ಮೇಜರ್ ಇಂಡಿಯಾ ಪುಟ 28-29

112. ಫ.ಎಂ. ಪುಟ 82

113. ಎ.ಕ.8, ಶಿ.ಪು. 246

114. ಬಾರ್ಬೋಸ, ಪುಟ 220-22

115. ಫ.ಎಂ. ಪುಟ 82-83

116. ಅದೇ,

117. ಬಾರ್ಬೋಸ, 1 ಪುಟ 116

118. ಪರ್ಚಾಸ್ 10 ಪುಟ 256

119. ಬ್ರಿಗ್ಸ್, ಫೆರಿಸ್ತಾ, 2 ಪುಟ 380

120. ಬಾರ್ಬೋಸ 1 ಪುಟ 116

121. ಅದೇ, ಪುಟ 219

122. ಎ.ಕ.ಸಂ. 5 ಅ. ಗೂ. 44

123. ಅದೇ, ಸಂ. 6, ಮ.ಗಿ.62

124. ಎಸ್.ಐ.ಐ. 92 ಪುಟ 666

125. ಅದೇ, ನಂ. 480

126. ಎಂ.ಎ.ಆರ್. 1943, ನಂ. 22

127. ಎ.ಕ. 9, ಮಾಗಡಿ 17

128. ಅದೇ,

129. ಎ.ಕ.ಸಂ. 11, ಹೊ.ಕೆ. 17

130. ಅದೇ, ಹೊ.ಕೆ. 62

131. ಅದೇ, ಹೊ.ಕೆ. 111

132. ಎ.ಕ.ಸಂ. 10 ಗೌ.ಬಿ. 17

133. ಅದೇ,

134. ಪ್ರರ್ಚಾಸ್ 10 ಪುಟ 256

135. ಮನು-3 51-53 ಪುಟ 84

136. ಎ.ಕ.ಸಂ. 9, ಹೊ.ಕೋ. 108

137. ಎ.ಕ.ಸಂ. 11 ಹೊ.ಕೋ. 108

138. ಅದೇ, ಪುಟ 199

139. ಎ.ಕ.ಸಂ. 11 ಹೊ.ಕೋ. 108

140. ಎಸ್.ಐ.ಐ. ನಂ. 52

141. ಎಂ.ಎ.ಆರ್ (1908) ನಂ. 354

142. ಎ.ಇಂ.ಸಂ. 19 ಪುಟ 215

143. ಬಾರ್ಬೋಸ-1 ಪುಟ 213-16

144. ಮೇಜರ್ ಇಂಡಿಯಾ ಪುಟ 23

145. ಫ.ಎಂ. ಪುಟ 372-73

146. ಫರ್ಚಾಸ್-10 ಪುಟ 94-95

147. ಬಾಬೋಸ-1 ಪುಟ 216

148. ಫ.ಎಂ. ಪುಟ 392-93

149. ಸತ್ಯನಾಥ ಅಯ್ಯರ್, ಹಿಸ್ಟರಿ ಆಫ್ ಇಂಡಿಯಾ, ಪುಟ 354

150. ಎ.ಕ.ಸಂ. 8, ಶ್ರ.ಬೆ. 104 ಪುಟ 15

151. ಎಂ.ಎ.ಆರ್. 1947-58, ಪುಟ 87

152. ಅದೇ, ಪುಟ 86

153. ಎ.ಕ.ಸಂ. 11 ದಾ.ಗೆ. 117, ಪುಟ 73

154. ಅದೇ, ಸಂ. 8, ಸೊ-134

155. ಎಂ.ಎ.ಆರ್. 1941 ಪುಟ 195

156. ಎ.ಕ.ಸಂ. 8, ಸೊ. 433

157. ಎಸ್.ಐ.ಐ. 15, ಪುಟ 165

158. ಎ.ಕ. ಸಂ. 2 ಪುಟ 73

159. ಎಂ.ಎ.ಆರ್. 1923 ಪುಟ 85

160. ಎ.ಕ. ಸಂ. 7 ಭಾಗ 1 ಪುಟ 152

161. ಅದೇ, ಪುಟ 95

161. ಅದೇ,

162. ಅದೇ,

163. ಎಂ.ಎ.ಆರ್. 1933 ಪುಟ 211-212

164. ಇ.ಅಂ.ಪ್ರ. ಪುಟ 21

165. ಎಂ.ಎ.ಆರ್.1939-40 ಪುಟ 90

166. ಎಸ್.ಐ.ಐ. ಸಂ. 9, ನಂ. 276

167. ಎಂ.ಎ.ಆರ್. 1933, ಪುಟ 210-211

168. ಎ.ಕ.ಸಂ. 7, ಸೊ. 26, ಪುಟ 5

169. ಎಂ.ಎ.ಆರ್. 1934, ಪುಟ 888

170. ಎ.ಕ. ಸಂ. 7, ಪುಟ 46

171. ಎ.ಕ.ಸಂ. 8 ಸಾ. 35, ಪುಟ 97

172. ಅದೇ, ಸೊ. ನಂ. 461

173. ಎ.ಎ.ಆರ್. 1927 ನಂ. 126, ಪುಟ 119

174. ಎ.ಕ.ಸಂ.8 ನಗರ 29

175. ಎ.ಕ. ಸಂ. 7 ಸೊ. 24

176. ಎಂ.ಎ.ಆರ್. 1920 ಪುಟ 21

177. ಎಂ.ಇ.ಆರ್. ನಂ. 88 (1950-51)

178. ಎ.ಕ. ಸಂ. 7, ಸೊ. 497

179. ಅದೇ, ಸೊ. 163

180. ಅದೇ, ಸಂ. 8 ಸೊ. 497

181. ಅದೇ, ಸಂ. 7 ನಂ.1

182. ಅದೇ, ಶಿ. ಪು. 2

183. ಅದೇ, ಸಂ. 12 ಪುಟ 126

184. ಅದೇ, ಸಂ. 8 ಪುಟ 126

185. ಎಂ.ಎ.ಆರ್. 1923 ಪುಟ 86

186. ಎ.ಕ.ಸಂ. 2. ಚಿ. ನಾ. 30

187. ಆ.ರಿ.ಸೌ.ಇಂ.ಎ. 1930-31 ಪುಟ 32

188. ಎ.ಕ. ಸಂ. 8 ಸೊ. 18

189. ಇಲಿಯಟ್ ಹಿಸ್ಟರಿ ಆಫ್ ಇಂಡಿಯಾ-4, ಪ್ರ ಭಾ 8

190. ಅದೇ,

191. ಮೇಜರ್ ಇಂಡಿಯಾ ಪುಟ 30

192. ಕೃ. ರಾ. ಪುಟ 194

193. ಅದೇ, ಪುಟ 240

194. ಅದೇ, ಪುಟ 251

195. ಎಸ್.ಐ.ಐ. ಸಂ. 10 ನಂ. 151

196. ಇಲಿಯಟ್ ಪುಟ 111-112

197. ಬಾರ್ಬೋಸ-1 ಪುಟ 226

198. ಫ.ಎಂ. ಪುಟ 270

199. ಇಲಿಯಟ್ ಪುಟ 111

200. ಫ.ಎಂ. ಪುಟ 242

201. ಅದೇ,

202. ಅದೇ, ಪುಟ 269

203. ಬಾರ್ಬೋಸ-1 ಪುಟ 208

204. ಅದೇ, ಪುಟ 41-45

205. ಸೋರ್ಸಸ್ ಪುಟ 41-45

206. ಪಯಸ್, ಪುಟ 270

207. ಹ.ವಿ. ಶ್ಲೋಕ 13 ಕಾನಟೊ 5

208. ಎ.ಕ. ಸಂ. 8 ಸೊ. 258 ಪುಟ 40

209. ಅದೇ, ಸಂ. 5, ಬೇ 75 ಪುಟ 62-63

210. ಅದೇ

ಅಧ್ಯಾಯ 4

ಸಾಂಸ್ಕೃತಿಕ ಜೀವನದಲ್ಲಿ ಮಹಿಳೆಯರು

1. ನೃತ್ಯ:

ನೃತ್ಯ ಹಾಗೂ ಸಂಗೀತಗಳೆರಡೂ ಅವಳ ಕಲೆಗಳಾಗಿದ್ದು, ಒಂದನ್ನೊಂದು ಪರಸ್ಪರ ಪ್ರೋತ್ಸಾಹಿಸುತ್ತವೆ. ನೃತ್ಯವು ಭಾವನೆಗಳ ದೈಹಿಕ ಅಭಿವ್ಯಕ್ತಿ, ಕವಿತೆಯಲ್ಲಿ ಪದಗಳು ಭಾವನೆಗಳ ಸಂವಾಹಿನಿಯಾಗುವಂತೆ ನೃತ್ಯದಲ್ಲಿ ದೇಹವನ್ನು ಅಭಿವ್ಯಕ್ತಿಯ ಸಾಧನವನ್ನಾಗಿ ಬಳಸಲಾಗುತ್ತದೆ. ಈ ಕಾಲದಲ್ಲಿ ನೃತ್ಯ ಹಾಗೂ ಸಂಗೀತಗಳೆರಡೂ ಕಲೆಯ ಪರಾಕಾಷ್ಠತೆಯನ್ನು ತಲುಪಿದವು. ನೃತ್ಯವು ವಿಜಯನಗರದ ಅರಸರು ಹಾಗೂ ಜನತೆಯಿಂದ ಹೆಚ್ಚಿನ ಆಶ್ರಯವನ್ನು ಪಡೆಯಿತು. ಶಿಲ್ಪಕಲೆಗಳಲ್ಲಿ ಶಾಸನಗಳಲ್ಲಿ ಹಾಗೂ ಸಾಮಾನ್ಯರೂ ಈ ಕಲೆಯನ್ನು ಅಭ್ಯಾಸಮಾಡುತ್ತಿದ್ದರು. ಇದು ಕೇವಲ ಸಾಮಾನ್ಯ ಮಟ್ಟದ ಅಭ್ಯುದಯವನ್ನು ತೋರಿಸುವುದಿಲ್ಲ ಬದಲಾಗಿ ಅದರ ಕಲಾತ್ಮಕ ಸಿದ್ಧಿಯನ್ನೂ ಕೂಡ ಪ್ರದರ್ಶಿಸುತ್ತದೆ. ಹಂಪೆಯಲ್ಲಿನ ವಾಸ್ತುಶಿಲ್ಪವು ಅಲ್ಲಿನ ಕೋಲಾಟದ ಒಂದು ಭಂಗಿಯಲ್ಲಿಪ್ರದರ್ಶಿಸಿರುವ ಕಲೆಯು ಅಗಿನ ಜನರಲ್ಲಿ ಈ ನೃತ್ಯ ಕಲೆಯು ಎಷ್ಟು ಜನಪ್ರಿಯವಾಗಿತ್ತೆಂಬುದನ್ನು ತಿಳಿಸುತ್ತವೆ. ನರ್ತಕಿಯರು ಮೃದಂಗ, ಮದ್ದಳೆ ಅಥವಾ ಇನ್ನಿತರ ಸಂಗೀತ ಸಾಧನಗಳನ್ನು ನುಡಿಸುವ ಪುರುಷರೊಂದಿಗೆ ಹೆಜ್ಜೆಹಾಕುತ್ತಿದ್ದರು. ಈ ಸಂಬಂಧ ಪ್ರಖ್ಯಾತ ವಿಠಲಸ್ವಾಮಿ ದೇವಾಲಯವನ್ನು ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಒಂದು ದೊಡ್ಡ ಕಲ್ಲುಸ್ತಂಭದ ಭಾಗವಾಗಿರುವ ನೀಳ ಕಂಬಗಳಿಂದ ಹರಿದುಬರುವ ಸಪ್ತಸ್ವರಗಳು ಶಾಶ್ವತ ಆಶ್ಚರ್ಯವನ್ನು ಉಂಟುಮಾಡುತ್ತವೆ. ಹಜಾರ ರಾಮದೇವಾಲಯದ ಗೋಡೆಗಳು ಹಲವಾರು ಆಸ್ಥಾನ ನರ್ತಕಿಯರ ಚಿತ್ರಗಳನ್ನು ವರ್ಣಿಸುತ್ತವೆ. ಇಲ್ಲನ ನರ್ತಕಿಯರು ಕರಿಹಸ್ತ ಹಾಗೂ ಸ್ವಸ್ತಿಕಹಸ್ತ ಮಾದರಿಯಲ್ಲಿ ಅವರ ಕೋಲುಗಳನ್ನು ಅಡಿಸುತ್ತಿದ್ದರು. ಮೇಲಿನ ಚೌಕಟ್ಟು ಈ ಜೋಡಿಗಳು ಹೇಗೆ ಸ್ವಾವಲಂಬಿಗಳಾಗಿದ್ದರು ಹಾಗೂ ಗುಂಪು ರಚನೆಯನ್ನು ಹೇಗೆ ಮಾಡಿದರು ಎಂಬುದನ್ನು ತಿಳಿಸುತ್ತದೆ. ಹಂಪೆಯ ವಿರೂಪಾಕ್ಷ ದೇವಾಲಯದ ಸಭಾಮಂಟಪದಲ್ಲಿರುವ ಕಂಬಗಳ ಪಟ್ಟಿಗಳ ಒಂದರಲ್ಲಿ ನರ್ತಿಸುತ್ತಿರುವ ಕನ್ಯೆಯ ದೇವಾಲಯದ ಪವಿತ್ರ ನೃತ್ಯವನ್ನು ಸೂಚಿಸುತ್ತದೆ. ವಿಜಯನಗರ ಚಿತ್ರಕಲೆಯೂ ಕೆಲವು ನೃತ್ಯ ಭಂಗಿಗಳನ್ನು ಹೊಂದಿದೆ. ಇವುಗಳು ಆ ಕಾಲದಲ್ಲಿ ನೃತ್ಯವನ್ನು ಹೆಚ್ಚು ಗೌರವಪೂರ್ವಕವಾಗಿ ಕಾಣಲಾಗುತ್ತಿತ್ತು ಎಂಬುದನ್ನು ಸೂಚಿಸುತ್ತದೆ.

ನೃತ್ಯ ಹಾಗೂ ಸಂಗೀತಗಳೆರಡೂ ಎಲ್ಲ ಪ್ರಮುಖ ಸಾರ್ವಜನಿಕ ಸಮಾರಂಭಗಳಲ್ಲಿ ಅತ್ಯಾವಶ್ಯಕ ವಸ್ತುಗಳಾದವು. ಇವುಗಳು ಧಾರ್ಮಿಕ ವಿಧಿಗಳಲ್ಲಿ ಮತ್ತು ಆಚರಣೆಗಳಲ್ಲಿ ಹಬ್ಬಗಳಲ್ಲಿ ಪರುಸೆಗಳಲ್ಲಿ ಆಸ್ಥಾನ ಹಾಗೂ ಸಭೆಗಳಲ್ಲಿ ಅವಶ್ಯಕವಾದ ಕಲಾವಿಧಾನಗಳಾದವು. ಈ ಎರಡು ಅವಳಿ ಕಲೆಗಳನ್ನು ಪ್ರೋತ್ಸಾಹಿಸುವಲ್ಲಿ ದೇವಾಲಯಗಳೂ ಮಹತ್ತರವಾದ ಪಾತ್ರವನ್ನು ವಹಿಸಿದವು. ದೊಡ್ಡ ಅಥವಾ ಚಿಕ್ಕ ದೇವಾಲಯಗಳೆಲ್ಲವೂ ದೇವಾಲಯದ ನರ್ತಕಿಯರನ್ನು ಹೊಂದಿದ್ದುವು. ರಾಜರು ಮಂತ್ರಿಗಳು ಹಾಗೂ ಶ್ರೀಮಂತ ನಾಗರೀಕರು ದಾನನೀಡಿದ ಭೂದತ್ತಿಗಳಿಂದ ಬಹಳಷ್ಟು ಸಂಗೀತಗಾರರು ಜೀವನ ಸಾಗಿಸುತ್ತಿದ್ದರು.

ಸಂಗೀತ ಸೂರ್ಯೋದಯ (ಕ್ರಿ.ಶ. 1520)ಇದರ ಲೇಖಕನಾದ ಭಂಡಂ ಲಕ್ಷ್ಮೀನಾರಾಯಣನು ಸಂಗೀತ ಮತ್ತು ನೃತ್ಯದ ವ್ಯವಸ್ಥಾಪನಾಕಣಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದನು. ಕೃಷ್ಣದೇವರಾಯನ ಸೆರಗಿಲೊನೊಂದಿಗೆ ಹೊಂದಿಕೊಂಡ ಸಂಗೀತಗಾರ ಹಾಗೂ ನೃತ್ಯ ಗುರುವಾಗಿದ್ದನು. ಇವನು ರಾಜಮನೆತನದ ಸ್ತ್ರೀಯರಿಗೆ ನೃತ್ಯತರಬೇತಿಯನ್ನು ನೀಡುತ್ತಿದ್ದನು.

ನರ್ತಕಿಯರು ಹಾಗೂ ನೃತ್ಯಕಲೆಯು ವಿಜಯನಗರದ ಸಾಂಸ್ಕೃತಿಕ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಡ್ಯೂರೇಟ್ ಬಾರ್ಬೋಸಾನು ಹೇಳುವಂತೆ ಹತ್ತನೇ ವಯಸ್ಸಿನಲ್ಲಿಯೇ ಎಳೆಯ ಹುಡುಗಿಯರನ್ನು ದೇವಾಲಯಕ್ಕೆ ಬಿಡಲಾಗುತ್ತಿತ್ತು. ಅವನು ಹೇಳುತ್ತಾನೆ "ಮೂರ್ತಿಗಾಗಿ ತಮ್ಮ ಮಗಳ ಶೀಲವನ್ನು ಅರ್ಪಿಸುವವರಿದ್ದಾರೆ. ಅವರು ಹತ್ತು ವರ್ಷತಲುಪುತ್ತಿದ್ದಂತೆಯೇ ಅವರು ಅವಳನ್ನು ಮಟಕ್ಕೆ ಕರೆದೊಯ್ದು ಆ ಮೂರ್ತಿಯ ಪ್ರರ್ಥಾನ ಕೊಠಡಿಗೆ ಬಿಡುತ್ತಾರೆ. ಅವರು ಅವಳನ್ನು ಮದುವಣಗಿತ್ತಿಯನ್ನು ಮದುವೆಮಾಡಲು ಕರೆದೊಯ್ಯುವಂತೆ ಬಹಳ ಗೌರವದಿಂದ ಸರ್ವಾಲಂಕಾರ ಭೂಷಿತಳಾಗಿ ಕರೆದೊಯ್ಯುತ್ತಾರೆ. ವಿಜಯನಗರ ಜನರು ದೇವರ ಹೆಸರಿನಲ್ಲಿ ಬಹಳ ಹಿಂಸೆಯಿಂದ ಹಾಗೂ ಅವಮಾನದಿಂದ ಕೂಡಿದ ಪದ್ಧತಿಯನ್ನು ಕುರುಡಾಗಿ ಆರಾಧಿಸುತ್ತಿದ್ದರು ಎಂಬುದನ್ನು ಇದು ತೋರಿಸುತ್ತದೆ. ಈ ಹಂತದಿಂದ ಪ್ರಾರಂಭವಾದ ನೃತ್ಯವು ಹಿಂದಿನ ಕಾಲದಿಂದಲೂ ಭಾರತದಲ್ಲಿ ರಾಜಮನೆತನದವರ ಮಹಿಳೆಯರಿಂದಲೂ ಶ್ರೇಷ್ಠ ಕಲೆಯಾಗಿ ಮುಂದುವರೆಯಿತು. ಮಗುವಿನಜನನವನ್ನಾಚರಿಸಲು ಬಯಸಿದ ವಸ್ತುವನ್ನು ಪಡೆಯಲು ಹಾಗೂ ಎಲ್ಲಾ ರಜಾದಿನಗಳಂದು ನೃತ್ಯವು ಅತ್ಯವಶ್ಯಕ ಅಂಗವಾಗಿ ಮಾರ್ಪಟ್ಟಿತು. ಮೋಹಕವೂ, ಮಂಗಳಕರವೂ ಆದ ನೃತ್ಯವನ್ನು ರಾಜರು ಹಾಗೂ ಪ್ರಜಾದಿಗಳಾಗಿ ಎಲ್ಲರೂ ಮೆಚ್ಚಿಕೊಂಡರು ಆದ್ದರಿಂದ ಅದನ್ನು ಪ್ರಶಂಸಿಸಲಾಗುತ್ತದೆ. ನೃತ್ಯವನ್ನು ಕಲಿಸಲು ಹಾಗೂ ಅಭ್ಯಸಿಸಲು ಪ್ರತೇಕವಾದ ಶಾಲೆಗಳು ಅಥವಾ ಸಭಾಮಂಟಪಗಳಿರುತ್ತಿದ್ದವು.

ಪಯೆಸ್‌ನು ನಾಟ್ಯಮಂದಿರದ ಸುಂದರ ಹಾಗೂ ಸ್ಪಷ್ಟ ಚಿತ್ರಣವನ್ನು ನೀಡುತ್ತಾನೆ. ಇದೊಂದು ಉದ್ದವಾದ ಹಾಗೂ ಕಿರಿದಾದ ಮಂದಿರವಾಗಿದ್ದು ಎಲ್ಲಾ ಕಡೆಗಳಿಂದಲೂ ಅನೇಕ ಪಾರ್ಶ್ವ ಆಧಾರಸ್ತಂಭಗಳಿದ್ದವು, ಹಾಗೂ ಚಿನ್ನದ ಹೊಳಪನ್ನು ನೀಡಲಾಗಿತ್ತು. ಪ್ರತೀ ಎರಡು ಕಂಬಗಳ ನಡುವೆ ಒಂದು ಚೌಕಟ್ಟು ಇರುತ್ತಿತ್ತು. ಅದರಲ್ಲಿ ಹಾಳೆಯಂತಿದ್ದ ಎಲೆಗಳ ವಿನ್ಯಾಸವಿರುತ್ತಿತ್ತು. ಅವುಗಳ ಎಲೆಗಳ ಭಾಗವನ್ನು ಕೆಂಪು ಹಾಗೂ ನೀಲಿ ಬಣ್ಣಗಳ ಲೇಪನಗಳಿಂದ ಹೊಳಪನ್ನು ನೀಡಲಾಗುತ್ತಿತ್ತು. ಇಲ್ಲಿನ ಮೂರ್ತಿಗಳೆಂದರೆ ಡೋಲನ್ನು ಹಿಡಿದು ನರ್ತಿಸುತ್ತಿರುವ ಸ್ತ್ರೀಯರು, ಚೌಕಟ್ಟಿಗಳ ವಿನ್ಯಾಸಗಳು ನೃತ್ಯವು ಮುಗಿದ ನಂತರದ ಅವಸ್ಥೆಯನ್ನು ತೋರಿಸಿದವು. ಒಂದು ವೇಳೆ ನರ್ತಕಿಯರು ನರ್ತಿಸಿದ ನಂತರ ತಾವು ಯಾವ ರೀತಿ ನಿಲ್ಲಬೇಕೆಂಬುದನ್ನು ಮರೆತುಕೊಂಡಾಗ ಅವರು ಈ ಚೌಕಟ್ಟುಗಳಲ್ಲಿ ಅವರು ಹೇಗೆ ಇರಬೇಕೆಂಬುದನ್ನು ನೋಡಿದಾಗ ಅವರಿಗೆ ಸಹಾಯಕವಾಗುವುದೆಂಬ ಉದ್ದೇಶ ಇವುಗಳದ್ದಾಗಿತ್ತು. ಇವುಗಳ ಸಹಾಯದಿಂದ ಅವರು ಏನು ಮಾಡಬೇಕೆಂಬುದನ್ನು ತಮ್ಮಮನಸ್ಸಿನಲ್ಲಿಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ಬಣ್ಣದಿಂದ ಲೇಪನಮಾಡಿದ ಒಂದು ಏಕಾಂತಸ್ಥಳವಿರುತ್ತಿತ್ತು. ಇಲ್ಲಿ *"ಸ್ತ್ರೀಯರು ತಮ್ಮ ದೇಹ ಹಾಗೂ ಕಾಲುಗಳನ್ನು ಒತ್ತಿಹಿಡಿದು ಕೂರುತ್ತಿದ್ದರು"* ಇಲ್ಲಿ ಅವರು ತಮ್ಮ ಇಡೀ ಶರೀರವು ಕೃಶವಾಗುವಂತೆ ನೋಡಿಕೊಳ್ಳುತ್ತಿದ್ದರು ಇದರಿಂದ ಅವರ ನೃತ್ಯವು ಅಮೋಘವಾಗುವುದೆಂಬ

ನಂಬಿಕೆ ಅವರದಾಗಿತ್ತು. ರಾಜನು ಈ ನೃತ್ಯಗಳನ್ನು ವೀಕ್ಷಿಸುತ್ತಿದ್ದನು. ಸಭಾಂಗಣದ ಹತ್ತಿರದ ಗೋಡೆಯ ಮಧ್ಯಭಾಗದಲ್ಲಿ ಹನ್ನೆರಡು ವರ್ಷಗಳ ವಯಸ್ಸಿನ ಒಬ್ಬಾಕೆಯ ಚಿನ್ನದ ಪ್ರತಿಮೆ ಇರುತ್ತಿತ್ತು ಹಾಗೂ ನೃತ್ಯದ ಮುಕ್ತಾಯದ ನಂತರ ಅವಳ ತೋಳಿನ ಭಂಗಿಯನ್ನು ಅನುಕರಿಸಲಾಗುತ್ತಿತ್ತು.[2]

ರಂಗಮಂಟಪವನ್ನು ನಾಟ್ಯಶಾಲೈ, ನೃತ್ಯಮಂಟಪ ಎಂದು ಹಲವಾರು ರೀತಿಯಲ್ಲಿ ಕರೆಯಲಾಗುತ್ತಿತ್ತು. ರಂಗಮಂಟಪವೆಂದರೆ ಸಂಗೀತ ಅಥವಾ ನೃತ್ಯದ ಪ್ರದರ್ಶನದ ಉದ್ದೇಶಕ್ಕಾಗಿ ಕಟ್ಟಲಾದ ರಂಗವೇದಿಕೆ ಅಥವಾ ರಂಗಮಂಟಪ ಎಂದಾಗುತ್ತದೆ. ರಂಗಮಂಟಪವು ದೇವಾಲಯದ ಕಟ್ಟಡದ ಭಾಗವೇ ಆಗಿತ್ತು. ಕೆಲವೊಮ್ಮೆ ಇದನ್ನು ದೇವಾಲಯದ ಬಳಿ ನಿರ್ಮಿಸಲಾಗುತ್ತಿತ್ತು. ಈ ಕಟ್ಟಡದ ನಿರ್ಮಾಣವು ಆಕಾಲದಲ್ಲಿನ ದೇವಾಲಯದ ಆಚರಣೆಗಳ ಭಾಗವಾಗಿ ಅಸ್ತಿತ್ವದಲ್ಲಿದ್ದ ನೃತ್ಯ ಹಾಗೂ ಸಂಗೀತದ ಒಂದು ಊಹೆಯನ್ನು ನೀಡುತ್ತದೆ.

ಗೋಪತಿಪ್ಪನೆಂಬುವನ್ನು ನೃತ್ಯದ ಮೇಲೆ ಒಂದು ಗ್ರಂಥವನ್ನು ಬರೆದನು. ಕಲೆಯು ಎಷ್ಟು ಪರಿಪೂರ್ಣವಾಗಿತ್ತೆಂಬುದನ್ನು ಅಬ್ದುಲ್‌ರಜಾಕ್‌ನ ಕಣ್ಣುಗಳಿಂದ ನೋಡಿದಾಗ ಮಹಾನವಮಿ ಹಬ್ಬದಂದು ದೇವರ ಮೂರ್ತಿಯ ಮುಂದೆ ನೃತ್ಯವನ್ನು ಪ್ರದರ್ಶಿಸಲಾಯಿತು. ಅದನ್ನು ನೋಡಿ ಅವನು ಎಷ್ಟು ತನ್ಮಯನಾದನೆಂದರೆ ಅವನು ಹೇಳುತ್ತಾನೆ.[3] "ಬಾಲೆಯರು ತಮ್ಮ ಹೆಜ್ಜೆಗಳನ್ನು ಎಷ್ಟು ಅಮೋಘವಾಗಿ ಹಾಕುತ್ತಿದ್ದರೆಂದರೆ ಜ್ಞಾನವು ತನ್ನ ಇಂದ್ರಿಯಗಳನ್ನು ಕಳೆದುಕೊಂಡಿತು ಹಾಗೂ ಆತ್ಮವು ಸಂತೋಷದ ಅಮಲಿನಲ್ಲಿ ತೇಲಿತು.[4]

ದೇವದಾಸಿಯರೆಂದು ಕರೆಯಲ್ಪಡುತ್ತಿದ್ದ ಈ ನರ್ತಕಿಯರು ದೇವಾಲಯಕ್ಕೆ ಸೇರಿದವರಾಗಿದ್ದರು. ದೇವರಿಗೆ ನೈವೇದ್ಯವನ್ನು ಅರ್ಪಿಸುತ್ತಿದ್ದಾಗ ವಿಗ್ರಹದ ಮುಂದೆ ನರ್ತಿಸುತ್ತಿದ್ದರು ಹಾಗೂ ದೇವರಿಗೆ ಆಹಾರ ಹಾಗೂ ಏನೇನು ಬೇಕಾಗಿತ್ತು ಎಲ್ಲವನ್ನೂ ನೀಡುತ್ತಿದ್ದರು.[5] ನ್ಯುನಿಜ್‌ನ ಪ್ರಕಾರ ಪ್ರತೀ ಶನಿವಾರದಂದು ಅರಮನೆಯ ಒಳಭಾಗದಲ್ಲಿ ಇಡಲಾಗುತ್ತಿದ್ದ ರಾಜನ ಪ್ರತಿಮೆಯ ಮುಂದೆ ಆಸ್ಥಾನನರ್ತಕಿಯರು ನರ್ತಿಸಬೇಕಾಗಿತ್ತು ಹಾಗೂ ನೃತ್ಯದ ಭಂಗಿಗಳನ್ನು ಪ್ರದರ್ಶಿಸಬೇಕಾಗಿತ್ತು.

ಕೃಷ್ಣದೇವರಾಯನು ಹಜಾರರಾಮಸ್ವಾಮಿ ದೇವಾಲಯದ ದೇವತೆಯ ಗೌರವಾರ್ಥವಾಗಿ ಒಂದು ವಿಶೇಷ ಉತ್ಸವವನ್ನು ಆಚರಿಸಿದನು, ಆಸ್ಥಾನ ಕವಿಯಿಂದ ರಚಿಸಲ್ಪಟ್ಟ ಪಾರಿಜಾತಾಪಹರಣಂ ಕವಿತೆಯನ್ನಾಧರಿಸಿದ ಒಂದು ನೃತ್ಯಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ದುರ್ಗಾವತಿಯು ಒಬ್ಬ ವಾರಾಂಗನೆಯಾಗಿದ್ದಳು ಇವಳು ಸತ್ಯಭಾಮಳ ಪಾತ್ರವನ್ನು ನಿರ್ವಹಿಸಿದ್ದಳು. ಕೃಷ್ಣದೇವರಾಯನು ಬಹಳ ದುಭಾರಿಯಾದ ವಜ್ರಗಳಿಂದ ಅಲಂಕರಿಸಿದ ಚಿನ್ನದ ಸೊಂಟದಪಟ್ಟಿಯನ್ನು ಕೊಡುಗೆಯಾಗಿ ನೀಡಿದನು.

ದೇವಾಲಯದಲ್ಲಿ ಬಹಳಷ್ಟು ಸಂಖ್ಯೆಯ ನರ್ತಕಿಯರಿದ್ದರು. ದೇವದಾಸಿಯರಿಗೆ ದೇವಾಲಯಗಳಲ್ಲಿ ಭೂಮಿಯನ್ನು ನೀಡಲಾಗುತ್ತಿತ್ತು. ಅವರಲ್ಲಿ ಕೆಲವರು ವಂಶಪಾರಂಪರ್ಯ ಹಕ್ಕುಗಳ ಆಧಾರದ ಮೇಲೆ ತಮ್ಮ ಸ್ಥಾನವನ್ನು ಕಾಯ್ದುಕೊಂಡರು. ಇವುಗಳನ್ನು 'ಸಂಪ್ರದಾಯ ವೃತ್ತಿ'ಎಂದು ಕರೆಯಲಾಗುತ್ತಿತ್ತು. ಇನ್ನು ಕೆಲವರು ತಮ್ಮ ಪ್ರತಿಭೆ ಅಥವಾ ಅರ್ಹತೆಯಿಂದ

ಸ್ಥಾನ ಪಡೆಯುತ್ತಿದ್ದರು.[6] ಕ್ರಿ.ಶ. 1366ರಲ್ಲಿ ಹೊಂಗನೂರುಗೌಡ ಕಾಳಪ್ಪನನ್ನು ಮಹಾಜನರು ಭೇಟಿಯಾದಾಗ ಅವನು ಅಂಕನಾಥ ದೇವಾಲಯದ ದೇವದಾಸಿಯರನ್ನು ನೋಡಿಕೊಳ್ಳುವುದಕ್ಕಾಗಿ ಭೂಮಿ ಹಾಗೂ ತೆರಿಗೆಗಳನ್ನು ನೀಡಿದುದಾಗಿ ಹೇಳಲಾಗಿದೆ. ಕ್ರಿ.ಶ. 1545ರ ಶಾಸನವು ತಿಮ್ಮರಾಜುನೆಂಬುವನು ತನ್ನ ಪೋಷಕರಾದ ವಲ್ಲಭರಾಜು ಹಾಗೂ ವೆಂಗಲಮ್ಮರ ಶ್ರೇಯಸ್ಸಿಗೋಸ್ಕರವಾಗಿ ವಿದ್ಯಾನಗರದ ಮಹಾದೇವ ದೇವಾಲಯದಲ್ಲಿ ನೃತ್ಯ ಗಾಯನ ಹಾಗೂ ವಾದ್ಯ ಸಂಗೀತ ಮೇಳಗಳನ್ನು ನಡೆಸಲು ಕಟ್ಟಲಾದ ರಂಗಮಟ್ಟಪದ ಬಗ್ಗೆ ಉಲ್ಲೇಖವನ್ನು ನೀಡುತ್ತದೆ.[8]

ಕ್ರಿ.ಶ.1317ರ ಒಂದು ಶಾಸನವು ದಾಖಲಿಸುವಂತೆ ಹಳ್ಳಿ ಹಿರಿವೂರು ಇವನ (ಸಹೋದರನಾದ)ಜಕ್ಕಣ್ಣನು ರಾಮನಾಥ ದೇವರಿಗೆ ಪೂಜೆ ಹಾಗೂ ನೈವೇದ್ಯಗಳನ್ನು ಏರ್ಪಡಿಸಲು ಹಾಗೂ ದೇವದಾಸಿಯರು ಮತ್ತು ದೇವೀವೃಂದದ ಬ್ರಾಹ್ಮಣರನ್ನು ನೋಡಿಕೊಳ್ಳಲು ದಾನವನ್ನು ನೀಡಿದನು. ತಿಪ್ಪಣ್ಣ ಒಡೆಯನು ಗೌಡರಿಗೆ ಹಾಗೂ ದೇವಾಲಯದ ಅರ್ಚಕರಿಗೆ ದಾನವನ್ನು ಮಂಜೂರು ಮಾಡಿದನು.[9] ಕ್ರಿ.ಶ.1527ಒಂದು ಶಾಸನವು ಉಲ್ಲೇಖಿಸುವಂತೆ ಪ್ರಧಾನನಾದ ಇಮ್ಮಡಿ ಎಲ್ಲಪ್ಪ ಒಡೆಯನು ಚಿಕ್ಕಮಾದಾಪುರ ಗ್ರಾಮವನ್ನು ನರ್ತಕೀ (ಪಾತ್ರದ) ನಿಲಯಿಗೆ ಉಂಬಳಿಯಾಗಿ ನೀಡಿದನು.[10]

ದೇವದಾಸಿಯರು ಸೇವೆ ಸಲ್ಲಿಸಿದುದರ ಜೊತೆಗೆ ಧರ್ಮದ ಬೆಳವಣಿಗೆಯಲ್ಲಿ ಕಾರಣವಾಗಲು ಅಚ್ಯುತರಾಯನು ತನ್ನ ವಿಜಯನಗರ ರಾಜಧಾನಿಯಿಂದ ತಿರುಪತಿಗೆ ಹಲವಾರು ಸ್ತ್ರೀಯರನ್ನು ಕಳುಹಿಸಿದನು. ಅವರನ್ನು ತಿರುಪತಿಗೆ ಕಳುಹಿಸಿ ಅವರು ತಮ್ಮ ಕೈಲಾದ ಕನಿಷ್ಟ ಸೇವೆಯನ್ನು ಸಲ್ಲಿಸಿ ದೇವಾಲಯಗಳಲ್ಲಿ ನೀಡುತ್ತಿದ್ದ ಪ್ರಸಾದದಿಂದ ಬದುಕುವಂತೆ ನಿರೀಕ್ಷಿಸಲಾಗಿತ್ತು. ಕ್ರಿ.ಶ. 1531ರ ತಿರುಪತಿಯ ಗೋವಿಂದರಾಜುಸ್ವಾಮಿ ದೇವಾಲಯದ ಒಂದು ಶಾಸನವು ವಿದ್ವಾತಸಭಾರಾಯ ರಾಜಕಂ ಕುಪ್ಪಸಾನಿಯ ಮಗಳಾದ ಮುದ್ದುಕುಪ್ಪಾಯಿಯ ಬಗ್ಗೆ ಉಲ್ಲೇಖವನ್ನು ನೀಡುತ್ತದೆ. ಈ ಶಾಸನವು ಹೇಳುವಂತೆ ಅಚ್ಯುತರಾಯನು ತಿರುಮಲೈನ ವೆಂಕಟೇಶ್ವರ ದೇವಾಲಯದಲ್ಲಿಮುದ್ದುಕುಪ್ಪಾಯಿ[11] ಯನ್ನು ನರ್ತಕಿಯಾಗಿ ಸೇವೆ ಸಲ್ಲಿಸುವಂತೆ ಆಜ್ಞೆ ಮಾಡಿದನು. ಮುಂದೆ ಇವಳು ತಿರುಪತಿಯಲ್ಲಿ ಶಾಸ್ವತವಾಗಿರುವ ಅವಕಾಶವನ್ನು ಪಡೆದಳು.[12] ಹಾಗೂ ಶ್ರೀಗೋವಿಂದರಾಜ ದೇವಾಲಯದಿಂದ ಕೊಡಲಾಗುತ್ತಿದ್ದ ಒಂದು ತಟ್ಟೆ ಅನ್ನದಿಂದ ತನ್ನ ಜೀವನವನ್ನು ಸಾಗಿಸುತ್ತಿದ್ದಳು. ಈ ವಿಚಿತ್ರ ಸೇವೆಯನ್ನು ಅವಳ ವಂಶಸ್ಥರೂ ಮುಂದುವರಿಸಿಕೊಂಡು ಹೋಗುವಂತೆ ಇವಳು ನೋಡಿಕೊಳ್ಳಬೇಕಾಗಿತ್ತು. ಕಮಲಾಪುರದ ಬಳಿಯಲ್ಲಿ ಸುಂದರವಾಗಿ ನಿರ್ಮಿಸಲಾಗಿರುವ ಸೋಪಾನ ಕಟ್ಟೆಯಿಂದ ಇದರ ಮೆಟ್ಟಿಲುಗಳು ನೀರು ಸಿಗುವವರೆಗೂ ಇದ್ದು ವ್ಯವಸ್ಥಿತವಾಗಿ ಕಟ್ಟಲಾಗಿದೆ. ಇದನ್ನು 'ಸೂಳೆಬಾವಿ'ಎಂದು ಕರೆಯಲಾಗಿದ್ದು ಈ ದಾರಿಯಲ್ಲಿ ಸಂಚರಿಸುವ ಪ್ರಯಾಣಿಕರ ದಾಹವನ್ನು ತಣಿಸಲೆಂದು ಒಬ್ಬ ದೇವದಾಸಿಯು ಇದನ್ನು ಕಟ್ಟಿಸಿದಳೆಂದು ಹೇಳಲಾಗಿದೆ.[13]

ಸಾಮಾನ್ಯವಾಗಿ ವಾರಾಂಗನೆ ವರ್ಗಕ್ಕೆ ಸೇರಿದ ಸ್ತ್ರೀಯರು ಅನಾದಿಕಾಲದಿಂದಲೂ ಅವಳಿ ಕಲೆಗಳಾದ ನೃತ್ಯ ಹಾಗೂ ಸಂಗೀತವನ್ನು ಪೋಷಿಸಿಕೊಂಡು ಬಂದಿದ್ದರು. ತಮ್ಮ ಬಾಲ್ಯದಲ್ಲಿಯೇ ಈ ಕಲೆಗಳನ್ನು ಆಚಾರ್ಯರಿಂದ ಕಲಿತು ಕರಗತ ಮಾಡಿಕೊಂಡ ಮೇಲೆ ಕೆಲವರು ದೇವಾಲಯಗಳು ಅಥವಾ ಆಸ್ಥಾನಗಳ ಸೇವೆಯನ್ನು ಸೇರುವುದರ ಮೂಲಕ ತಮ್ಮ ಕಲೆಯ ಮೇಲೆ ಜೀವನವನ್ನು ನಡೆಸಿದರು. ಆದರೆ ಇನ್ನು ಕೆಲವರು ರಾಜರು, ಮಂತ್ರಿಗಳು, ಆಸ್ಥಾನಿಕರು, ಸೇನಾಧಿಪತಿಗಳು ಹಾಗೂ ಶ್ರೀಮಂತ ಪ್ರಜೆಗಳ ಆಶ್ರಯವನ್ನು ಹೊಂದಿದ್ದರು ಹಾಗೂ ಈ ಕಲೆಗಳನ್ನು ಅಭ್ಯಸಿಸುತ್ತಾ ಸಾಗಿದರು.

ಕ್ರಿ.ಶ.1431ರ ಒಂದು ಶಾಸನವು ಹೇಳುವಂತೆ ಮಂಗಪ್ಪ ಡಣ್ಣಾಯಕನ ಮಗನಾದ ಮಹಾಪ್ರಧಾನ ಪ್ರತಾಪರಾಯನು ಸಂಕನಸಮುದ್ರದ ಸೋಮದೇವರ ಸೇವೆಗಾಗಿ ಅವನ ನಾಯಕಪರಿಧಿಗೆ ಸೇರಿದ ಶಿವಸಮುದ್ರದ ಒಂದು ಸಣ್ಣ ಹಳ್ಳಿಯಾದ ವಿಜಯದೇವರಾಯಪುರ ಎಂದು ಪುನರ್‌ನಾಮಕರಣವಾದವಿರೂಪಾಕ್ಷಪುರವನ್ನು (ಇದರ ಕಂದಾಯ ಹಾಗೂ ತೆರಿಗೆಗಳಿಂದ ಬಂದ ಆದಾಯ ಹಾಗೂ ಪೂರ್ವಾಯವು 20 ವರಾಹ ಗದ್ಯಾಣಗಳು)ನೀಡಿದನು ಹಾಗೂ ದೇವಸಮುದ್ರದ ಹಳೆಯ ಕೆರೆಯ ಕೆಳಗಿನ ಐದು ಖಂಡುಗ ಬೆಳೆಯಲು ಹಾಗೂ ಪೂಜೆಗಳಿಗಾಗಿ ಹಾಗೂ 2ಪತ್ರದ ಜನ, ಒಬ್ಬ ನಟ್ಟುವ (ನರ್ತಕಿ) ಒಬ್ಬ ಡೋಲು ಬಡಿಯುವವನು(ಮದ್ದಲಕಾರ) ಸಿತಾರವಾಜುರಿ (ಸಿತಾರ್ ಬಾರಿಸುವವನು)ಒಬ್ಬ ದೇವರಿಗೆ ಪೂಜೆಸಲ್ಲಿಸಲು ಏಳು ಜನ ಕಲಾವಿದರನ್ನು ಇಟ್ಟು ಕೊಳ್ಳುವುದಕ್ಕಾಗಿ ವಿನಿಯೋಗಿಸಲಾಗುತ್ತಿತ್ತು. ಈ ದಾನವನ್ನು ಶ್ರಾವಣ ತಿಂಗಳ ಸೂರ್ಯಗ್ರಹಣ ದಿನದಂದು ನೀಡಲಾಗುತ್ತಿತ್ತು.[14]

ಶಿಷ್ಯೆಯ ಅರ್ಹತೆಗಳು:-

ಕಾಕತೀಯ ಸೇನಾ ದಂಡನಾಯಕನಾದ ಜಯಪ್ಪನು ನೃತ್ಯವನ್ನು ಕಲಿಯಲು ಶಿಷ್ಯಳೊಬ್ಬಳಿಗೆ ಯಾವಅರ್ಹತೆಗಳು ಇರಬೇಕೆಂಬುದನ್ನು ವಿವರಿಸುತ್ತಾನೆ. ಅವನು ಹೇಳುವಂತೆ, ಅವಳ ವಯಸ್ಸಿಗೆ ತಕ್ಕಂತಹ ಮೈಮಾಟವನ್ನು ಹೊಂದಿರಬೇಕು. ವಿಷ್ಣುವಿನ ಭಕ್ತೆಯಾಗಿರಬೇಕು. ನೀಳವಾದ ಕಾಯವನ್ನು ಹೊಂದಿರಬೇಕು. ಯಾವುದೇ ದೋಷಗಳೂ ದೇಹಸೌಂದರ್ಯವನ್ನು ಕಡಿಮೆಗೊಳಿಸಬಾರದು ಹಾಗೂ ಸುಂದರ ಚೆಲುವೆಯಾಗಿರಬೇಕು. ಸಾಮಾಜಿಕವಾಗಿ ಹೆಣ್ಣುತನವನ್ನು ಗೌರವಿಸುವ ಸಪ್ತಸಿದ್ಧಿಗಳನ್ನು ಹೊಂದಿರಬೇಕು. ಶಿಷ್ಯೆಯು ಸ್ಥಾನಕರಿನಲ್ಲಿ ಗಣನೀಯವಾದ ಮಟ್ಟವನ್ನು ತಲುಪಿದಾಗ ಅಂದರೆ ಕೈ ತಿರುಗಿಸುವುದು ಪಾದಗಳನ್ನು ಆಡಿಸುವುದು. ಗುರುಗಳು ಇವುಗಳ ನೃತ್ಯದ ಸಣ್ಣ ಸಣ್ಣ ಘಟ್ಟಗಳನ್ನು ಒದುಗೂಡಿಸಿ ಕಂಸಾಳೆ ಮತ್ತು ಹಾಡುಗಳೊಂದಿಗೆ ವಾದ್ಯ ಹಾಗೂ ಗಾಯನ ಸಂಗೀತವೆರಡನ್ನೂ ಸೇರಿಸಿ ಒಂದು ಸಂಯುಕ್ತ ವಿಧಾನವನ್ನು ಮಾಡಬೇಕಿತ್ತು.[15]

ಮಹಿಳಾ ನರ್ತಕಿಯ ಅರ್ಹತೆಗಳು:-

ಸಮತೋಲನವಾದ ಶರೀರ ಯೌವನ ಮತ್ತು ಸೌಂದರ್ಯಗಳ ಪರಿಪೂರ್ಣ ಮಿಶ್ರಣವನ್ನು ಹೊಂದಿರುವ ಮಹಿಳೆಯು ನರ್ತಕಿಯಾಗಲು ಸೂಕ್ತಳಾಗಿರುತ್ತಾಳೆ. ಅವಳಿಗೆ ಉತ್ತಮ ಸಾಮಾಜಿಕ ಸ್ಥಾನಮಾನಗಳಿರಬೇಕು. ಪ್ರಶಂಸನಾಯೋಗ್ಯಳಾಗಿರಬೇಕು. ಏನನ್ನು ತಾನು ಕಲಿಯುವಳೋ ಅದನ್ನು ಗ್ರಹಿಸಿ ಮೈಗೂಡಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರಬೇಕು. ಅವಳು ಎಲ್ಲಾ ಭಾವಗಳನ್ನು ಅಭಿವ್ಯಕ್ತಗೊಳಿಸುವ ಕಲಾನೈಪುಣ್ಯತೆಯನ್ನು ಹೊಂದಿರಬೇಕು. ಇವಳು ಬಹಳ ಆಸಕ್ತಿವಂತಳಾಗಿರಬೇಕು. ಕಲೆಗಳ ಎಲ್ಲಾ ಗ್ರಂಥಗಳ ಹಾಗೂ ಪ್ರತಿಪಾದನೆಗಳ ಮೇಲೆ ಉತ್ತಮ ಪಾಂಡಿತ್ಯವನ್ನು ಹೊಂದಿರಬೇಕು. ಅವಳ ದೇಹದ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿರಬೇಕು, ಶಕ್ತಿವಂತಳಾಗಿರಬೇಕು.ಸುಮಧುರ ಕಂಠವನ್ನು ಹೊಂದಿರಬೇಕು. ಅವಳ ಮೊಗದ ಮೇಲೆ ಯಾವಾಗಲೂ ನಗುವು ಲಾಸ್ಯವಾಡುತ್ತಿರಬೇಕು. ವಿದ್ವಾಂಸಳಾಗಿರಬೇಕು. ಶೀಲವಂತಳೂ ಹಾಗೂ ಆರೋಗ್ಯವಂತಳೂ ಆಗಿರಬೇಕು. ಜೊತೆಗೆ ಅವಳು ಗೌರವವರ್ಣದ ಅಥವಾ ಕಂದುಬಣ್ಣದ ದೇಹಕಾಂತಿಯನ್ನು ಹೊಂದಿರಬೇಕು. ಆಯಾಸವಾಗಬಾರದು ಹಾಗೂ ಸಭಾಮಂಟಪದಲ್ಲಿದ್ದಾಗ ಬಹಳ ಉತ್ಸಾಹಿಯೂ ಹಾಗೂ ದಕ್ಷಳಾಗಿಯೂ ಇರಬೇಕು. ಅವಳು ಗಾಯನ ಹಾಗೂ ವಾದ್ಯ ಸಂಗೀತಗಳೆರಡರಲ್ಲೂ ಪಾಂಡಿತ್ಯವನ್ನು ಹೊಂದಿರಬೇಕು. ಅವಳು ಹೆಚ್ಚು ದಪ್ಪವಿರಬಾರದು ಅಥವಾ ಹೆಚ್ಚು ಎತ್ತರವಿರಬಾರದು ಅಥವಾ ಕುಳ್ಳಿಯೂ ಆಗಿರಬಾರದು. ಅವಳು ಸಭ್ಯಳೂ, ಉದಾರಿಯೂ ಹಾಗೂ ಲಜ್ಜೆವುಳ್ಳವಳೂ ಆಗಿರಬೇಕು. ಹಾಗೂ ಪ್ರತ್ಯಾಂಗ ಉಪಾಂಗ ಹಾಗೂ ನೃತ್ಯ ಪದ್ಧತಿಗಳಾದ ಮಂಡಲು, ಪಟ್ಟ, ಅಂಗಹಾನ, ತಸ್ಸಂಗಭ್ರಮರಿ ಹಾಗೂ ಕರಣಗಳು ಚೆನ್ನಾಗಿ ತಿಳಿದಿರಬೇಕು. ಅವಳು ಸ್ಥಿತಪ್ರಜ್ಞಳಾಗಿರಬೇಕು. ಉಲ್ಲಾಸವು ಅವಳಲ್ಲಿ ತುಂಬಿರಬೇಕು. ಈ ರೀತಿಯಾದ ರ್ನಕಿಯನ್ನು 'ಪ್ರವರ'ಎಂದು ಕರೆಯಲಾಗುತ್ತಿತ್ತು.[16] ನೃತ್ಯವನ್ನು ಪ್ರಾಥಮಿಕವಾಗಿ ಎರಡು ನಿರ್ದಿಷ್ಟ ವರ್ಗಗಳಾಗಿ ವಿಂಗಡಿಸಲಾಗಿತ್ತು.-ಸಂಪ್ರದಾಯ ಶೈಲಿ ಇದನ್ನು ಭರತನ ನಾಟ್ಯಶಾಸ್ತ್ರದಲ್ಲಿ ಪ್ರತಿಪಾದಿಸಲಾಗಿದೆ. ಈ ನೃತ್ಯವಿಧಾನವನ್ನು ರಾಜರು, ಮಂತ್ರಿಗಳು ಹಾಗೂ ವಿದ್ಯಾವಂತರು ಪೋಷಿಸುತ್ತಿದ್ದರು. ಈ ಕಾಲದಲ್ಲಿ ಕೋಲಾಟವು ಬಹಳ ಪ್ರಸಿದ್ಧಿಯಾದ ಜಾನಪದ ನೃತ್ಯವಾಗಿತ್ತು. ಈ ಕಾಲದ ದೇವಾಲಯಗಳು ಕೋಲಾಟದ ಸುಂದರ ಶಿಲ್ಪಕಲೆಯನ್ನು ಹೊಂದಿವೆ. ಉದಾಹರಣೆಗೆ ನೃತ್ಯ ಶಿಲ್ಪಗಳ ಒಂದು ಸುಂದರ ಉದಾಹರಣೆಯು ಹಜಾರರಾಮಸ್ವಾಮಿಯ ದೇವಾಲಯದ ಮೇಲಿದೆ. ದೇವಾಲಯದ ಎಡಭಾಗಕ್ಕೆ ವೇಣುಗೋಪಾಲನ ಹಿಂಬದಿಯಲ್ಲಿ 1/4 ಅಳತೆಯಲ್ಲಿ ಪ್ರಭಾವಲಯದಂತಿರುವ ಭಾಗದ ಮೇಲೆ ಹದಿನಾರು ಚಿತ್ರಗಳಿವೆ. ಈ ಮಾಹಿತಿಗಳು 'ವಿಜಯನಗರದ ಕಾಲಕ್ಕಿಂತ ಹಿಂದೆ ದಕ್ಷಿಣ ಭಾರತದ ಇತಿಹಾಸದಲ್ಲಿ ಯಾವ ಕಾಲದಲ್ಲೂ ನೃತ್ಯವನ್ನು ಇಷ್ಟೊಂದು ಉಚ್ಛ್ರಾಯ ಸ್ಥಿತಿಗೆ ಏರಿಸಿರಲಿಲ್ಲ'ಎಂಬ ಪ್ರಶಂಸನಾ ನುಡಿಗಳನ್ನು ಸಮರ್ಥಿಸುತ್ತವೆ. ಕೋಲಾಟದ ಪಟ್ಟಿಗಳಲ್ಲಿರುವ ನರ್ತಕಿಯರು ಉದ್ದನೆಯ ಹೆಣೆದ ಕೂದಲನ್ನು ಹೊಂದಿದ್ದಾರೆ. ಭಾರವಾದ ಕುಚ್ಚು ಅದಕ್ಕಿದೆ ಹಾಗೂ ಅಥೊರ್ವಕಗಳು, ಕುಂಡಲಗಳು, ಹಾರಗಳು ವಲಯಗಳು ಮತ್ತು ನೂಪುರಗಳನ್ನು ಧರಿಸಿದ್ದಾರೆ. ಕೋಲಾಟವು ಅಷ್ಟೇನು ದುಬಾರಿಯಲ್ಲದ

ನೃತ್ಯ ಅದನ್ನು ಸಾಮಾನ್ಯ ಸ್ತ್ರೀಯರು ಕಲಿಯುತ್ತಿದ್ದರು. ಕೇವಲ ಎರಡು ಕೋಲುಗಳು ಮಾತ್ರ ಅವಶ್ಯಕವಾಗಿದ್ದವು ಹಾಗೂ ಈ ನೃತ್ಯವು ಈ ಕಾಲದ ಪ್ರಸಿದ್ಧ ಜಾನಪದ ನೃತ್ಯಗಳಲ್ಲಿ ಒಂದಾಗಿದೆ.

1502 ರಲ್ಲಿ ಕೂಚುಪುಡಿಯು ಅತ್ಯಂತ ಜನಪ್ರಿಯವಾದ ನೃತ್ಯವಾಗಿತ್ತು. ಪ್ರತಾಪರುದ್ರನ ಕಾಲದಲ್ಲಿ ಒಡಿಸ್ಸಿ ನೃತ್ಯವು ಬಹಳ ಪ್ರಸಿದ್ಧವಾದ ನಾಟ್ಯವಾಗಿತ್ತು. ಕೃಷ್ಣದೇವರಾಯನ ಕಿರಿಯ ರಾಣಿಯಾದ ಚಿನ್ನಾದೇವಿಯು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಪ್ರಸಿದ್ಧಿಯಾದ ನರ್ತಕಿಯಾಗಿದ್ದಳು. ಭರತನಾಟ್ಯ ಬಹಳ ಹೆಸರುವಾಸಿಯಾದ ನೃತ್ಯ ವಿಧಾನವಾಗಿತ್ತು. ಶಾಸ್ತ್ರೀಯ ನರ್ತಕಿಯು ಸುಂದರವಾಗಿ ಅಲಂಕರಿಸಲಾದ ಮಡಿಕೆಗಳಿಂದ ಕೂಡಿದ ಧರ್ಮಿಳ ಅರ್ಥೋರುಕ. ಆಭರಣಯುತ ಕಂಠೀಹಾರಗಳು, ಕುಂಡಲಗಳು, ಹಾರಗಳು, ವಲಯಗಳು ಹಾಗೂ ನೂಪುರಗಳನ್ನು ಹೊಂದಿದ ಉಡುಪುಗಳನ್ನು ತೊಡುತ್ತಿದ್ದಳು. ಈ ಕಾಲದಲ್ಲಿ ಹೋಳಿಯೂ ಕೂಡ ಪ್ರಸಿದ್ಧ ನೃತ್ಯಗಳಲ್ಲಿ ಒಂದಾಗಿತ್ತು. ಹಬ್ಬಗಳ ದಿನದಂದು ಹೋಳಿಯಾಡಲಾಗುತ್ತಿತ್ತು.

ಕೊರವಂಜಿಯೂ ಕೂಡ ನೃತ್ಯದ ಒಂದು ಪ್ರಕಾರವಾಗಿತ್ತು. ಇವಳು ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ಶಾಸ್ತ್ರವನ್ನು ಹೇಳುತ್ತಾ ಹಣವನ್ನು ಬೇಡುತ್ತಿದ್ದಳು. ಕೊರವಂಜಿಯ ಕಸುಬುಗಳೆಂದರೆ, ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು, ಬೇಟೆಯಾಡುವುದು ಹಾಗೂ ವಿವಿಧ ಸ್ಥಳಗಳಲ್ಲಿ ನೃತ್ಯಪ್ರದರ್ಶನಗಳನ್ನು ನೀಡುವುದು ಇವರ ಕಸುಬುಗಳಾಗಿದ್ದವು. ಇದು ಇವರ ಕಲೆಯಾಗಿತ್ತು. ಬಹಳ ಹಿಂದಿನ ಕಾಲದಿಂದಲೂ ಇದು ಅಸ್ತಿತ್ವದಲ್ಲಿತ್ತು.

2.ಸಂಗೀತ:-

ವಿಜಯನಗರ ಕಾಲದಲ್ಲಿ ಸಂಗೀತ ಹಾಗೂ ಇತರೆ ಪ್ರದರ್ಶನಾತ್ಮಕ ಕಲೆಗಳಲ್ಲಿ ದಕ್ಷಿಣ ಭಾರತದ ಸಾಧನೆಗಳು ವೈವಿಧ್ಯವೂ ಅಪ್ರತಿಮವೂ ಹಾಗೂ ಬಹುಕಾಲ ಬಾಳುವಂತದ್ದವುಗಳಾಗಿವೆ. ಸುಮಧುರವಾದ ಗಾಯನ ಹಾಗೂ ವಾದ್ಯಸಂಗೀತಕ್ಕೆ ಸಮ್ಮಿಳತವಾಗುವಂತೆ ಸಮರ್ಪಕವಾದ ಭಾವಾಭಿನಯವನ್ನು ಸನ್ನೆಗಳ ಮೂಲಕ ಬಹಳ ಶ್ರದ್ಧೆಯನ್ನು ವಹಿಸುವುದರೊಂದಿಗೆ ಅಭ್ಯಾಸಮಾಡಲಾಗಿತ್ತು. ಸಂಗೀತ ಕಲೆಯು ಮುಂದೆ ಕರ್ನಾಟಕದೊಂದಿಗೆ ಗುರುತಿಸಿಕೊಂಡು ಕರ್ನಾಟಕ ಸಂಗೀತ ಎಂದು ಹೆಸರಾಯಿತು. ಇದು ವಿಜಯನಗರ ಕಾಲದಲ್ಲಿ ಎಲ್ಲೆಡೆಯೂ ವ್ಯಾಪಕವಾಗಿ ಪಸರಿಸಿತು.

ಸಂಗೀತದ ಮೇಲಿನ ಗ್ರಂಥಗಳಾದ ತಿಪ್ಪನ ತಾಳದೀಪಿಕ, ಚತುರಕಲ್ಲಿನಾಥನ ಶಾದ್ರಗಚಂದ್ರೋದಯ, ರಾಗ ಮಂಜರಿ, ರಾಗಮಾಲಿ, ನಟನಾನಿರ್ಣಯ, ಲಕ್ಷ್ಮೀನಾರಾಯಣನ ಸಂಗೀತಶ್ಯೋದಯ, ರಾಮಮಾತ್ಯನ ಶರಮೇಳಕಲಾನಿಧಿ ಇವುಗಳಲ್ಲಿನ ದಾಖಲೆಯಂತೆ ಈ ಕಾಲದಲ್ಲಿಸಂಗೀತದ ಸಿದ್ಧಾಂತ ಹಾಗೂ ಅಭ್ಯಾಸವು ಬಹಳ ಪ್ರಾಮುಖ್ಯತೆಯನ್ನು ಪಡೆಯಿತು. ಇವುಗಳಲ್ಲವೂ ಕ್ರಿ.ಶ.1510-1560ರ ನಡುವಿನ ಅವಧಿಯಲ್ಲಿ ರಚಿಸಲ್ಪಟ್ಟವಾಗಿವೆ. ಈ ಕಾಲದಲ್ಲಿನ ಸಂಗೀತದ ಹೆಸರುವಾಸಿಯು ಎಷ್ಟಿತ್ತೆಂಬುದನ್ನು ಸಮಕಾಲೀನ ಸಾಹಿತ್ಯದಿಂದ ನಮಗೆ ತಿಳಿದು ಬರುತ್ತದೆ. ಅರಸರು ತೋರಿದ ಅತೀವ ಆಸಕ್ತಿ ಹಾಗೂ ಅವರ ಆಶ್ರಯದ ಸಲುವಾಗಿ ಸಂಗೀತ ಶಾಸ್ತ್ರವು ಗಣನೀಯವಾದ ಅಭ್ಯುದಯವನ್ನು ಸಾಧಿಸಿತು.

ನಮಗೆಲ್ಲಾ ತಿಳಿದಿರುವಂತೆ ವಿಜಯನಗರದ ಸಾಮ್ರಾಟನು ಹಿಂದೂ ಸಂಸ್ಕೃತಿಯ ಬೆಳವಣಿಗೆಯ ಪ್ರತೀ ಅಂಗಕ್ಕೂ ಬೆಲೆಕಟ್ಟಲಾಗದಂತಹ ಅಮೋಘ ಸೇವೆಯನ್ನು ಸಲ್ಲಿಸಿದ್ದಾನೆ. ಸಂಗೀತಗಾರರು ಸಂಗೀತದ ತತ್ವಗಳು, ರಾಗಗಳು ಹಾಗೂ ತಾಳಗಳ ಮೇಲೆ ಅಪ್ರತಿಮವಾದ ಪಾಂಡಿತ್ಯವನ್ನು ಹೊಂದಿರಬೇಕಾಗಿತ್ತು. ಈ ರೀತಿಯಾಗಿ ಸಂಗೀತ ಪ್ರತಿಭೆಯು ಬೆಳೆಯುವ ಉತ್ತಮ ಪರಿಸರವನ್ನು ಸೃಷ್ಟಿಸಲಾಯಿತು. ಬೇರೆ ಯಾವ ಲಲಿತಕಲೆಗಳಾಗಲಿ ಅಥವಾ ಪ್ರದರ್ಶನ ಕಲೆಗಳಿಗಾಗಲಿ ಕೊಡಲಾಗದ ವಿಶೇಷ ಮನ್ನಣೆಯನ್ನು ವಿಜಯನಗರ ಆಸ್ಥಾನವು ಸಂಗೀತಕ್ಕೆ ನೀಡಿತ್ತು. ವಿದ್ಯಾರಣ್ಯನೂ ಕೂಡ ಸಂಗೀತಗಾರನಾಗಿ ಬಹಳ ಹೆಸರುವಾಸಿಯಾಗಿದ್ದನು. ಹಾಗೂ ಇವನ ಸಂಗೀತಸಾರವಿದ್ಯಾರಣ್ಯದಲ್ಲಿ ತನ್ನೆಲ್ಲಾ ಸಂಗೀತದ ಮೇಲಿನ ಚಿಂತನೆಗಳನ್ನು ನೀಡಿದ್ದಾನೆ.

ಎರಡನೇ ದೇವರಾಯನ ಆಳ್ವಿಕೆಯಲ್ಲಿ "ರಾಯವಗ್ಗೇಕರ" (ಉಪ ಹೆಸರು ರಾಯವಯಾಕರ)ಚತುರಕಲ್ಲಿನಾಥನು ಸಂಗದೇವನ ಸಂಗೀತರತ್ನಾಕರ ಮೇಲೆ ಒಂದು ವಿವರಣೆಯನ್ನು ಬರೆದನು ಇದು ಸಂಕ್ಷಿಪ್ತವಾದ ಒಂದು ಸಂಗೀತ ವಿಶ್ವಕೋಶದ ಶೈಲಿಯಲ್ಲಿತ್ತು ಎಂದು ಹೇಳಬಹುದು. ಅವನು ನರ್ತಿಸುವುದರಲ್ಲಿ ಹಾಡುವುದರಲ್ಲಿ ಹಾಗೂ ರಚನೆಯಲ್ಲಿ ಪಾರಂಗತನಾಗಿದ್ದನು. ಗ್ರಾಮ ಸಂಗೀತವು ಈ ಸಮಯದಲ್ಲಿ ನಶಿಸುತ್ತಾಹೋಗುತ್ತಿತ್ತು. ಹಾಗೂ ಒಂದು ಹೊಸ ಹುಟ್ಟು ಆರಂಭದಲ್ಲಿತ್ತು. ಸರ್ವಜ್ಞ ಸಂಗಮನ ಸಂಗೀತಸುಧಾಕರವು ಗಣನೀಯಯೋಗ್ಯವಾಗಿದೆ. ಈ ಕಾಲದಲ್ಲಿ ತಲ್ಲಪಕ್ಕಮ್ ಸಂಗೀತ ಕವಿಗಳ ಕುಟುಂಬವು ಸಂಗೀತದ ಮೇಲೆ ಬರೆದ ಗ್ರಂಥಗಳಿಗಾಗಿ ಬಹಳ ಪ್ರಸಿದ್ಧಿಯಾಗಿದ್ದಿತು. ಸಂಗೀತವು ದೈನಂದಿನ ಜೀವನದಲ್ಲಿ ಅತ್ಯಾವಶ್ಯಕವಾದ ಅಂಗವಾಗಿತ್ತು.

ಈ ಕಾಲದಲ್ಲಿ ಅತ್ಯಂತ ಪ್ರಮುಖ ಕೃತಿಯೆಂದರೆ ರಾಮಮಾತ್ಯನ ಸ್ವರಮಾಲಕಲಾನಿಧಿ, ಇವನಿಗೆ ಅಭಿನವ ಭಟ್ಟಾಚಾರ್ಯ ಎಂಬ ಬಿರುದಿತ್ತು. ಇವನು ಕಲ್ಲಿನಾಥನ ಮೊಮ್ಮಗನಾಗಿದ್ದನು.ಕೃಷ್ಣದೇವರಾಯನ ಇಬ್ಬರು ರಾಣಿಯರಾದ ಚಿನ್ನಾದೇವಿ ಹಾಗೂ ತಿರುಮಲಾದೇವಿಯರಿಬ್ಬರು ಗಾಯನದಲ್ಲಿ ಬಹಳ ಪ್ರಖ್ಯಾತರಾಗಿದ್ದರು. ಅವರು ತುಂಬ ಸುಮಧುರವಾದ ಕಂಠವನ್ನು ಹೊಂದಿದ್ದರು. ವಿಜಯನಗರದ ನಂತರದ ಕಾಲದಲ್ಲಿ ಅಳಿಯ ರಾಮರಾಯನು ವೀಣೆಯ ಸಂಗೀತ ಹಾಗೂ ಹಾಡುಗಾರಿಕೆಯಲ್ಲಿ[17] ಅತೀವ ಆಸಕ್ತಿಯನ್ನು ಹೊಂದಿದ್ದನು. ತಾಳಿಕೋಟೆಯ ಯುದ್ಧದ (ಕ್ರಿ.ಶ. 1565) ನಂತರ ಕರ್ನಾಟಕ ಸಂಗೀತದ ದೃಷ್ಟಿಯಿಂದ ಗೋವಿಂದ ದೀಕ್ಷಿತನು ಬಹಳ ಪ್ರಮುಖವಾದ ವ್ಯಕ್ತಿಯಾಗಿದ್ದನು. ಪ್ರಸಿದ್ಧ ಸಂಗೀತವಿದ್ವಾನ್ ಲಕ್ಷ್ಮೀನಾರಾಯಣನು ಕೃಷ್ಣದೇವರಾಯನ ಅಂತಃಪುರದ ಸ್ತ್ರೀಯರಿಗೆ ನೃತ್ಯ ಹಾಗೂ ಸಂಗೀತವನ್ನು ಹೇಳಿಕೊಡುತ್ತಿದ್ದನು.

ವಿಜಯನಗರ ಕಾಲದಲ್ಲಿ ಸ್ತ್ರೀಯರು ಕರ್ನಾಟಕ ಹಾಗೂ ದೇಶೀ ಸಂಗೀತವೆರಡರಲ್ಲೂ ಪ್ರೌಢಿಮೆಯನ್ನು ಗಳಿಸಿದ್ದರು. ಸಾಮಾನ್ಯ ಜನರೂ ಆ ಸಂಗೀತದಲ್ಲಿ ಆಸಕ್ತಿಯನ್ನು ವಹಿಸಿದ್ದರು. ಇದು ಹಿಂದಿನಿಂದಲೂ ಭಾರತದ ಸಾಮಾಜಿಕ ಜೀವನದಲ್ಲಿ ಒಂದು ವಿಶಿಷ್ಟ ಅಂಶವಾಗಿದೆ. ವಿಜಯನಂದಿ ವಿಕ್ರಮವರ್ಮನ್‌ನ ಒಂದು ಶಾಸನವು ದಾಖಲಿಸುವಂತೆ ಅವನು ಗಾಯಕಿಯರಿಗೆ ಹಾಗೂ ಇತರೆ ಜನಗಳಿಗಾಗಿ 400 ಕಾಡಲ್ ಭತ್ತವನ್ನು ನೀಡಿದನು. ದೇವಾಲಯಗಳಲ್ಲಿ ಸಂಗೀತವು ಅತ್ಯಂತ ಅವಶ್ಯಕವಾಗಿತ್ತು. ದೇವದಾಸಿಯರು ದೇವಾಲಯಗಳಲ್ಲಿ ಹಾಡುತ್ತಿದ್ದರು ಹಾಗೂ ನರ್ತಿಸುತ್ತಿದ್ದರು.

ವಿಜಯನಗರದ ಸಾಂಸ್ಕೃತಿಕ ಜೀವನದಲ್ಲಿ ಸಂಗೀತವು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿತು. ಹಬ್ಬಹರಿದಿನಗಳಲ್ಲಿ ವಿನೋದ ಚೆಲ್ಲಾಟಗಳ ಸಂದರ್ಭಗಳಲ್ಲಿ, ಭಯಂಕರವಾದ ಸತಿಪದ್ಧತಿಯ ಆಚರಣೆಯ ಸಂದರ್ಭದಲ್ಲಿ ಯುದ್ಧನಡೆಯುತ್ತಿರುವಾಗ ಹಾಗೂ ಸಂಗೀತಗಾರರ ನಿಜವಾದ ಸಂಗೀತ ಪ್ರದರ್ಶನಗಳಲ್ಲಿ ಸಂಗೀತದ ಉಪಸ್ಥಿತಿಯನ್ನು ಘೋಷಿಸಲಾಗುತ್ತಿತ್ತು.

ಮಹಾನವಮಿ ಹಬ್ಬದಂದು ಸಂಗೀತವು ಬಹಳವಾಗಿ ಬೆಳಕಿಗೆ ಬರುತ್ತಿತ್ತು. ಮಹಾನವಮಿ ಹಬ್ಬದಂದು ಸಂಗೀತ ಮನೋರಂಜನೆಯು ಕಾರ್ಯಕ್ರಮ ಉತ್ಸವಗಳಲ್ಲಿ ಸಿಂಹಪಾಲನ್ನು ಪಡೆಯುತ್ತಿತ್ತು.[18] ಪ್ರಾಣಿಗಳ ಸಾಹಸ ಪ್ರದರ್ಶನಗಳ ಸಮಯದಲ್ಲೂ ಸಂಗೀತವನ್ನು ಅಳವಡಿಸಿಕೊಳ್ಳಲಾಗುತ್ತಿತ್ತು. ಈಗಿನ ಸರ್ಕಸ್ಸುಗಳಲ್ಲಿನ ಸಾಹಸಗಳಂತೆ ಆಗ ಆನೆಗಳು ಬಯಲು ಮನೋರಂಜನೆಯನ್ನು ನೀಡುತ್ತಿದ್ದವು.ನಿಕೊಲೋಕೊಂಟಿಯು (1420-21) ಸಂಗೀತವು ಹೇಗೆ ಸಾಮಾಜಿಕ ಕಾರ್ಯಗಳೊಂದಿಗೆ ಸಂಬಂಧವನ್ನು ಹೊಂದಿತ್ತು ಎಂಬುದನ್ನು ದಾಖಲಿಸುತ್ತಾನೆ. ಅವನ ಪ್ರಕಾರ *"ಅವರ ಮದುವೆಗಳಲ್ಲಿ ಹಾಡುವುದು, ಭೋಜನ ಸವಿಯುವುದು ಹಾಗೂ ಕಹಳೆ ಮತ್ತು ಕೊಳಲಿನ ನಾದಗಳೊಂದಿಗೆ ಆಚರಿಸಲಾಗುತ್ತಿದೆ. ಅವರು ಹಾಡಲು ಹಾಗೂ ನುಡಿಸಲು ಉಪಯೋಗಿಸುತ್ತಿದ್ದ ಎಲ್ಲ ರೀತಿಯ ವಾದ್ಯಗಳು ನಮ್ಮ ರೀತಿಯವಾಗಿವೆ".*

ಅಂತಃಪುರ ಸ್ತ್ರೀಯರು ರಾಜನನ್ನು ತಣಿಸಲು ಸಂಗೀತವನ್ನು ಉಪಯೋಗಿಸುತ್ತಿದ್ದರು. ಸತಿಪದ್ಧತಿಯನ್ನು ಆಚರಿಸುವಾಗಲೂ ಸಂಗೀತವನ್ನು ಮರೆತಿರಲಿಲ್ಲ. ಬಾರ್ಬೋಸಾನು ಪುನಹ ಹೇಳುತ್ತಾನೆ ಏನೆಂದರೆ: ಸತಿಯನ್ನು ಅನುಸರಿಸಬೇಕಾದ ವಿಧವೆಯೊಬ್ಬಳು ತಾನು ಅಂತ್ಯವಾಗುವ ಮುನ್ನ ಒಂದೆರಡು ದಿವಸಗಳನ್ನು ಕಳೆಯುತ್ತಿದ್ದಳು. ಅವಳು ಹತ್ತಿರವಿದ್ದ ಎಲ್ಲ ಸಂಪತ್ತನ್ನೂ ಹಂಚುತ್ತಿದ್ದಳು ಹಾಗೂ ಭೋಜನವನ್ನೇರ್ಪಡಿಸುವುದರಲ್ಲಿ, ಹಾಡುವುದರಲ್ಲಿ, ನೃತ್ಯವನ್ನೇರ್ಪಡಿಸುವುದರಲ್ಲಿ, ವಾದ್ಯ ಸಂಗೀತಗಳನ್ನು ನುಡಿಸಲು ಹಾಗೂ ಜಾದೂಗಾರ ಪ್ರದರ್ಶನಗಳನ್ನು ಏರ್ಪಡಿಸಲು ವ್ಯಯಮಾಡುತ್ತಿದ್ದಳು.[19]

ಪಯಸ್‌ನಂತೆಯೇ ಪ್ರತ್ಯಕ್ಷಸಾಕ್ಷಿಯಾದ ನ್ಯುನಿಜ್‌ನು ಸತಿಯನ್ನು ಆಚರಿಸುವಾಗ ಸಂಗೀತವನ್ನು ಬಳಸುತ್ತಿದ್ದ ಬಗ್ಗೆ ಒಂದು ವಿವರಣೆಯನ್ನು ನೀಡುತ್ತಾನೆ. ಅವನು ಹೇಳುತ್ತಾನೆ: *"ಸತಿಯಾಗಲು ಹೊರಟ ಸ್ತ್ರೀಯು ಹಲವಾರು ರೀತಿಯ ಸಂಗೀತವಾದ್ಯಗಳೊಂದಿಗೆ ರಸ್ತೆಯಲ್ಲಿ ನಡೆದು ಹೋಗುತ್ತಿದ್ದಳು. ಅವಳು ಬಹಳ ಸಂತೋಷವಾಗಿರುತ್ತಿದ್ದಳು. ಒಬ್ಬನು ಒಂದು ಸಣ್ಣ ಡೋಲನ್ನು ಬಾರಿಸುತ್ತಾ ಹೋಗುತ್ತಾನೆ. ಅನಂತರ ಅವಳಿಗೆ ಒಂದು ಹಾಡನ್ನು ಹಾಡುತ್ತಾನೆ. ಅದರಂತೆ ಅವಳು ತನ್ನ ಗಂಡನನ್ನು ಸಂಧಿಸಲು ಹೋಗುತ್ತಿರುವಳೆಂದು ಹೇಳುತ್ತಾನೆ. ಇದಕ್ಕೆ ಪ್ರತಿಯಾಗಿ ಅವಳೂ ಹಾಡಿನ ಮೂಲಕವಾಗಿ ಸಮ್ಮತಿಯ ಉತ್ತರವನ್ನು ನೀಡುತ್ತಾಳೆ"* ನಂತರ 1567ರಲ್ಲಿ ಸೀಸರ್ ಫ್ರೆಡ್ರಿಕ್‌ನು ವಿಜಯನಗರವನ್ನು ಭೇಟಿ ಮಾಡಿದಾಗ ಸತಿ ಪದ್ಧತಿಯ ಆಚರಣೆಯಲ್ಲಿ ನೃತ್ಯ ಹಾಗೂ ಸಂಗೀತವೆರಡೂ ಇರುವುದನ್ನು ನೋಡಿದನು.[20]

ಇನ್ನೊಂದು ಭಯಂಕರವಾದ ಪದ್ಧತಿಯಾದ ಸಿಡಿಯನ್ನು ಆಡುವಾಗಲೂ ಸಂಗೀತವನ್ನು ಬಳಸಲಾಗುತ್ತಿತ್ತು. ಯಾವ ವ್ಯಕ್ತಿಯು ಇದರ ಹರಕೆಯನ್ನು ಹೊರುತ್ತಿದ್ದನೋ ಅವನನ್ನು ಸಿಡಿಗೆ ಕಟ್ಟಿಎತ್ತಲಾಗುತ್ತಿತ್ತು. ಆ ಸಿಡಿಗೆ ಕೊಂಡಿಗಳಿರುತ್ತಿದ್ದವು. ಆ ಕೊಂಡಿಗಳನ್ನು ಸಂಬಂಧಪಟ್ಟ ಪುರುಷ ಅಥವಾ ಮಹಿಳೆಯರ ದೇಹಕ್ಕೆ ಸಿಕ್ಕಿಸಲಾಗುತ್ತಿತ್ತು. ಪ್ರತ್ಯಕ್ಷ ಸಾಕ್ಷಿಯಾದ ಬಾರ್ಬೋಸನು ಪುನಹ ಜನಗಳು ಹೇಗೆ ಕೂಗಾಟದಿಂದ, ಕಿರುಚಾಟದಿಂದ, ಸಂಗೀತ ಸಾಧನೆಗಳ ಶಬ್ದದಿಂದ, ತುಫಾಕಿ ಮದ್ದುಗಳ ಸದ್ದಿನಿಂದ ಹಾಗೂ ಇತರೆ ಸಂತೋಷದ ಅಬ್ಬರದಿಂದ ಸಿಡಿಯನ್ನು ಎತ್ತುತ್ತಿದ್ದರು ಎಂಬುದನ್ನು ಕಣ್ಣಾರೆ ಕಂಡನು. [21]

ವಿಜಯನಗರ ಇತಿಹಾಸದ ಮೂಲಗಳು ಅದರ ಪ್ರಜೆಗಳ ಬಳಿ ಇದ್ದ ಸಂಗೀತ ಸಾಧನಗಳ ಬಗ್ಗೆ ಉಲ್ಲೇಖವನ್ನು ನೀಡುತ್ತವೆ. ವೀಣೆಯು ಈ ಕಾಲದ ಸಂಗೀತ ಸಾಧನೆಗಳಲ್ಲಿ ಅತ್ಯಂತ ಹೆಚ್ಚು ಜನಪ್ರಿಯವಾದ ಸಂಗೀತ ಸಾಧನವಾಗಿತ್ತು.[22] ವೀಣೆಯನ್ನು ನುಡಿಸುವ ಸಾಮರ್ಥ್ಯವು ಸಂಸ್ಕೃತಿಯ ಒಂದು ವಿಶೇಷ ಸಾಧನೆ ಎಂದು ತಿಳಿಯಲಾಗಿತ್ತು. ಆಸ್ಥಾನದ ಸ್ತ್ರೀಯರು ತಮ್ಮ ಕೈಬೆರಳುಗಳಿಂದ ವೀಣೆಯನ್ನು ನುಡಿಸುತ್ತಿದ್ದರು. ಹಾಡನ್ನು ಹಾಡುತ್ತಿದ್ದರು. ಈ ಹಾಡುಗಳು ರಾಜನ ಅದ್ಭುತ ಸಾಹಸ ಕಾರ್ಯಗಳನ್ನು ಇವುಗಳು ಗುಣಗಾನ ಮಾಡುತ್ತಿದ್ದವು.[23] ಗಮಕದ ಸುಮಧುರ ಸ್ವರಗಳು ಸಂಗೀತದಿಂದ ಪಸರಿಸಿ ಸಂಗೀತವು ಬಹಳ ರಮಣೀಯವಾಗಿ ಕಂಡುಬರುವಂತೆ ಮಾಡಿದ್ದವು. ಕೃಷ್ಣದೇವರಾಯನು ಪ್ರಖ್ಯಾತ ಸಂಗೀತ ವಿದ್ವಾನ್‌ನಾದ ಕೃಷ್ಣನಿಂದ ವೀಣೆಯನ್ನು ನುಡಿಸುವುದನ್ನು ಕಲಿತನು. ಚಿನ್ನಾದೇವಿ ಹಾಗೂ ತಿರುಮಲದೇವಿಯರಿಬ್ಬರೂ ವೀಣೆಯನ್ನು ನುಡಿಸುವುದರಲ್ಲಿ ಬಹಳ ಹೆಸರುವಾಸಿಯಾಗಿದ್ದರು. ಕೃಷ್ಣಾಪುರ ಶಾಸನದಲ್ಲಿ ಕೃಷ್ಣರಾಯನನ್ನು ಸಂಗೀತದ ಅನಭಿಷಕ್ತ ದೊರೆ ಎಂದು ಹೊಗಳಲಾಗಿದೆ. ಅರಸರು ಸಂಗೀತದಲ್ಲಿ ಇಷ್ಟೊಂದು ಆಸಕ್ತಿಯನ್ನು ತೋರಿಸಿದರೆ ಅವರ ಪತ್ನಿಯರೇನು ಕಡಿಮೆ ಇರಲಿಲ್ಲ. ಪೋರ್ಚುಗೀಸ್ ಪ್ರವಾಸಿಯಾದ ನ್ಯುನಿಜ್‌ನು ಅಚ್ಯುತರಾಯನ ಪತ್ನಿಯರು ಹೇಗೆ ಸಂಗೀತ ಪ್ರವೀಣೆಯಾಗಿದ್ದರೆಂಬುದನ್ನು ಹೇಳುತ್ತಾನೆ. ಅವನು ಹೇಳುವಂತೆ ಅಚ್ಯುತರಾಯನು ತನ್ನ ಆಸ್ಥಾನದಲ್ಲಿ ಗಾಯನ ಹಾಗೂ ವಾದ್ಯ ಸಂಗೀತವೆರಡರಲ್ಲೂ ಉತ್ತಮ ಪ್ರೌಢಿಮೆಯನ್ನು ಹೊಂದಿದ ಸ್ತ್ರೀ ಸಂಗೀತಗಾರರನ್ನು ಹೊಂದಿದ್ದನು. ರಾಮರಾಯನ ಆಳ್ವಿಕೆಯಲ್ಲಿ[25] ವಿದ್ಯಾಧರಿ ಸ್ತ್ರೀಯರನ್ನು ಸಾಳುವ ತಿಮ್ಮನನ್ನು ಸೋಲಿಸಿ ಸುಲಿದು ಹಾಕಿದ ರಾಜಪ್ರತಿನಿಧಿಯನ್ನು ಹೊಗಳುತ್ತಾ ಅವರು ಬೆರಳಿನಿಂದ ಕೊಳಲನ್ನು ನುಡಿಸುತ್ತ ಸುಮಧುರ ಮಂಜುಳ ಸಂಗೀತ ನಿನಾದವನ್ನು ಹೊರಡಿಸಿದರು ಎಂಬುದಾಗಿ ವರ್ಣಿಸಲಾಗಿದೆ. ಎರಡನೇ ವೆಂಕಟನ ಆಳ್ವಿಕೆಯಲ್ಲಿ ಸಂಗೀತಗಾರರಿದ್ದರು. ವಿಜಯನಗರ ಕಾಲದಲ್ಲಿ ವೀಣೆಯು ಅದರ ಈಗಿನ ಆಕಾರವನ್ನು ಪಡೆಯಿತು. ಆದರೆ ತಂತಿಗಳನ್ನು ಅಳವಡಿಸಿಕೊಳ್ಳುವಮಾದರಿಯು ಸ್ವಲ್ಪ ಬದಲಾವಣೆಯನ್ನು ಹೊಂದಿತು. ಹಾಗೂ ಅದರ ಅಲಂಕಾರ ಪಟ್ಟಿಗಳಲ್ಲೂ ಮಾರ್ಪಾಡನ್ನು ಹೊಂದಿತ್ತು. ಸರೂಗದೇವನು ವೀಣೆಗಳಿಗೆ ಒಂದು, ಎರಡು, ಮೂರು, ಏಳು ಹಾಗೂ ಒಂಬತ್ತು ತಂತಿಗಳಿದ್ದವು ಎಂದು ವಿವರಿಸುತ್ತಾನೆ. ಇಪ್ಪತ್ತೊಂದು ತಂತಿಗಳನ್ನು ಒಳಗೊಂಡ ಮಾಲ್ತ ಕೋಕಿಲಾ ವೀಣೆಯು ಎಲ್ಲಾ ರುದ್ರ ವೀಣೆಗಿಂತ ಹೆಚ್ಚು ಪ್ರಸಿದ್ಧಿಯನ್ನು ಹೊಂದಿತ್ತು. ಕಿನ್ನರ ವೀಣೆಯೂ ಬಹಳ ಹೆಸರುವಾಸಿಯನ್ನು

ಗಳಿಸಿತ್ತು. ಶುದ್ಧ ಮೇಳ, ಮದ್ಯ-ಮೇಳ ಮತ್ತು ರಾಜೇಂದ್ರ ಮೇಳಗಳು ಪ್ರಮುಖವಾದ ಸಾಧನೆಗಳಾಗಿದ್ದವು. ವೀಣೆರಾಮಪ್ಪನು ಆಸ್ಥಾನ ಸಂಗೀತಗಾರನಾಗಿದ್ದನು.

ವಿಜಯನಗರ ಸಾಮ್ರಾಟನ ಸಾಮಂತನಾದ ಕನಾಯನಾಯಕನ ಅಕ್ಕಲಪಂದಿ ಕೊಡುಗೆಯು ಶೃಂಗಾರ ಭಂಗಿಯಲ್ಲಿ ಬಹಳ ಆಸಕ್ತಿಯನ್ನು ಹೊಂದಿತ್ತು. ಯಾವಾಗಲೂ ಇವನು ವೀಣೆಯನ್ನು ನುಡಿಸುತ್ತಿದ್ದುದಾಗಿ ಹೇಳಲಾಗಿದೆ. ವೀಣೆಯ ಸ್ವರಗಳ ಲಯಮಾಧುರ್ಯದಿಂದ ಬಹಳ ಮೋಹಿತನಾಗಿದ್ದನು. ಇವನು ಸಂಸ್ಕೃತಿಯ ವೈಣಿಕರನ್ನು ನಿಯಂತ್ರಿಸುವ ನಿಯಮಾವಳಿಗಳನ್ನು ಅನುಸರಿಸಿದನು.[26] ಈ ಶಾಸನದಿಂದ ಈ ಕಾಲದಲ್ಲಿ ವಿಜಯನಗರ ನರ್ತಕರು ಹೇಗೆ ಕೇವಲ ಹಾಡುವುದಲ್ಲದೆ ಶಾಸ್ತ್ರೀಯ ನಿಯಮಾವಳಿಗಳಿಗೆ ತಕ್ಕಂತೆ ವೀಣೆಯನ್ನು ನುಡಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ.

ಕ್ರಿ.ಶ. 1386ರಲ್ಲಿ ಕಂಪಣ ಒಡೆಯನು ಆಳುತ್ತಿದ್ದಾಗ ಅವನ ಅರಮನೆಯ ನಿರ್ವಾಹಕನಾದ ದುಗ್ಗಣ್ಣನು ಇತರೆ ವಸ್ತುಗಳೊಂದಿಗೆ ನೃತ್ಯಕ್ಕೆ ಗಾಯನ ಹಾಗೂ ವಾದ್ಯಸಂಗೀತಕ್ಕೆ ಭೂದಾನ ಮಾಡಿದನು. ಕ್ರಿ.ಶ. 1400ರ ಹೊತ್ತಿಗೆ ಭೇರಿ, ದುಂದುಬಿ ಮತ್ತು ಮಹಾನುರಾಜ ಎಂಬ ಮೂರು ರೀತಿಯಾದ ಮದ್ದಳೆಗಳನ್ನು ಉಪಯೋಗಿಸಲಾಯಿತು. ತಂಬೂರ, ಕೋಡು, ಕಹಳೆ, ಮದ್ದಳೆ, ಕೋಲಾಟದ ಕೋಲುಗಳು ಹಾಗೂ ಕಂಸಾಳೆಗಳನ್ನು ಉಪಯೋಗಿಸಲಾಗುತ್ತಿತ್ತು. ವಿಜಯನಗರದಲ್ಲಿ ಇನ್ನೊಂದು ಅಸ್ತಿತ್ವದಲ್ಲಿದ್ದ ಸಂಗೀತ ಸಾಧನವೆಂದರೆ ಕೊಂಬು ಪಂಚಮಹಾಶಬ್ಧಗಳನ್ನು ಹೊರಡಿಸಲು ಈ ಸಂಗೀತ ಸಾಧನವನ್ನು ಉಪಯೋಗಿಸಲಾಗುತ್ತಿತ್ತು. ಮೃದಂಗವು ಇನ್ನೊಂದು ವಿಧವಾದ ಸಂಗೀತ ಸಾಧನವಾಗಿತ್ತು. ನೃತ್ಯವನ್ನು ನಡೆಸುವಾಗ ಇದರ ಅವಶ್ಯಕತೆ ಬಹಳ ಇತ್ತು. ಕ್ರಿ.ಶ. 1450ರ ಎರಡನೇ ದೇವರಾಯನ ಆಳ್ವಿಕೆಯಲ್ಲಿ ಕಂಸಾಳೆಗಳು, ಶಂಖಗಳು, ಚಕ್ರಗಳು ಬಳಕೆಯಲ್ಲಿದ್ದವು.

ದಂಡಿಗೆ, ಸ್ವರಮಂಡಲ, ಕಿನ್ನರಿ, ವೇಣು, ಪಲ್ಲಕಿ, ಪಿಪಾಚಿ, ದಂಡಿಕ, ಶಂಖು, ಶೃಂಗ, ಒಟ್ಟು, ಕರಡೆ, ಮೃದಂಗ ಅವುಜ, ದುಂದುಬಿ, ಪನವ, ವಿಶಾಲ, ಢಮರು, ರಾವಳಿ, ಘಂಟೆ, ಕಿಂಕಿಣಿ, ಹಲ್ಲರಿಹಾಗೂ ಕಂಸಾಳೆಯಂತಹ ಸಂಗೀತ ಸಾಧನಗಳಿದ್ದವು. ಪಯಸ್ ಹೇಳುತ್ತಾನೆ "ಕಹಳೆ, ಓಲಗಗಳು ಹಾಗೂ ಇತರೆ ಸಾಧನಗಳನ್ನು ನುಡಿಸುವ ಮಹಿಳೆಯರಿದ್ದಾರೆ" ಕ್ರಿ.ಶ. 1533ರ ಶಾಸನವೊಂದು ದಾಖಲೆಯನ್ನು ನೀಡುವಂತೆ ತಂಬೂರಿಯ ಬಳಕೆಯೂ ಕೂಡ ಅಸ್ತಿತ್ವದಲ್ಲಿತ್ತು. ಇದು ಹುರುವಳ್ಳಿಯ[27] ಹನುಮಂತ ದೇವಾಲಯದ ತಂಬೂರಿ ವಾದಕರಿಗೆ ಒಂದು ಭೂಉಂಬಳಿಯನ್ನು ಮಾಡಿದುದರ ಬಗ್ಗೆ ದಾಖಲೆಯನ್ನು ನೀಡುತ್ತದೆ. ದಸರ ಪಡೆಗಳು ಎಂಬ ವಿಶಾಲವಾದ ಸಂಗೀತ ಸಾಹಿತ್ಯವು ಅಸ್ತಿತ್ವದಲ್ಲಿವೆ. ಇವುಗಳು ನಿರ್ದಿಷ್ಟ ಸಂಗೀತ ಸ್ವರಗಳನ್ನೊಳಗೊಂಡ ಕೀರ್ತನೆಗಳು. ಪುರಂದರ ದಾಸರು, ಕನಕದಾಸರು ಹಾಗೂ ಇತರರು ಈ ಕಾಲದ "ಸಂಗೀತ ಸಂಸ್ಕೃತಿ"ಯ ಮೇಲೆ ಪ್ರಭಾವವನ್ನು ಬೀರಿದರು. ಅಚ್ಯುತರಾಯನ ರಾಣಿಯಾದ ತಿರುಮಲಾಂಬಳು (ಆಸ್ಥಾನದಲ್ಲಿ ವಾಚಕಳಾಗಿದ್ದಳು) ಬಹಳ ಇಂಪಾದ ಮಧುರ ಕಂಠವನ್ನು ಹೊಂದಿದ್ದಳು. ಇದು ಇವಳು ಉತ್ತಮ ಸಂಗೀತಗಾರಳಾಗಿದ್ದಳೆಂಬುದನು ಸೂಚಿಸುತ್ತದೆ.

ಸಂಗೀತವು ಮಾನವನ ಭಾವನೆಗಳ ಅಭಿವ್ಯಕ್ತಿ ಹಾಗೂ ಮಾನವನ ಮನೋಧರ್ಮದ ಅವಿಭಾಜ್ಯ ಅಂಗ, ಸಂಗೀತವನ್ನು ಹವ್ಯಾಸಿ ಕಲಾವಿದರು ಹಾಗೂ ವೃತ್ತಿಪರ ಕಲಾವಿದರಿಬ್ಬರೂ ಅಭ್ಯಸಿಸುತ್ತಿದ್ದರು. ಸಂಗೀತಕ್ಕಾಗಿ ಪ್ರತ್ಯೇಕವಾದ ನೃತ್ಯಗೃಹಗಳಿರುತ್ತಿದ್ದವು. ವ್ಯಾಸರಾಯನು ಒಬ್ಬ ಉತ್ತಮ ಸಂಗೀತಗಾರನಾಗಿದ್ದನು. ಜೈನ ಕವಿಯಾದ ರತ್ನಾಕರವರ್ಣಿಯು ಸಂಗೀತದಲ್ಲಿ ಒಬ್ಬ ಶ್ರೇಷ್ಠ ವಿದ್ವಾಂಸನಾಗಿದ್ದನು. ಅವನ ಗ್ರಂಥವು 'ಭರತೇಶ ವೈಭವ'. ಈ ರೀತಿಯಾಗಿ ಸಂಗೀತವು ಜನರಸಾಮಾಜಿಕ, ಧಾರ್ಮಿಕ ಹಾಗೂ ದಾರ್ಶನಿಕ ಆದರ್ಶಗಳನ್ನು ಎತ್ತಿ ಹಿಡಿಯುವ ಆನಂದದಾಯಕ ಸಾಧನವಾಯಿತು. ಶ್ರೀಪಾದರಾಯರು ಒಬ್ಬ ಉತ್ತಮ ಸಂಗೀತಗಾರರಾಗಿದ್ದರು. ಹಾಡುವಿಕೆ ಹಾಗೂ ಸಂಗೀತವೆರಡರಲ್ಲೂ ಗೌರಾಂಬಿಕೆಯು ಅಪ್ಸರೆಯರನ್ನು ಮೀರಿಸಿದಳು ಇವಳು ಹರಿಹರನ ಪಟ್ಟದ ರಾಣಿಯಾಗಿದ್ದಳು.[28] ಗಂಗಾದೇವಿಯು ತನ್ನ ಗ್ರಂಥವಾದ ಮಧುರಾವಿಜಯಂನಲ್ಲಿ ವೀಣೆಯನ್ನು ನುಡಿಸುವುದರ ಉಲ್ಲೇಖವನ್ನು ನೀಡಿದ್ದಾಳೆ.

ಸಮಕಾಲೀನ ಸಾಹಿತ್ಯ ಕೃತಿಗಳು ರೂಢಿಯಲ್ಲಿದ್ದ ಅನೇಕ ರಾಗಗಳು ಹಾಗೂ ತಾಳಗಳನ್ನು ಉಲ್ಲೇಖಿಸುತ್ತವೆ. ಉದಾ: ಹಿಂದೂಲಮು, ದೇವಕ್ರಿಯಾ, ಮಧ್ಯಮಾವತಿ ಇತ್ಯಾದಿಗಳು ಹಂದಿತರಾಧ್ಯಚರಿತವು 108 ರಾಗಗಳು ಹಾಗೂ ತಾಳಗಳನ್ನು ಉಲ್ಲೇಖಿಸುತ್ತದೆ.[29]

ಅಡಿ ಟಿಪ್ಪಣಿಗಳು

1. ಮೇಜರ್ ಇಂಡಿಯಾ ಪುಟ 28-29
2. ಫ.ಎಂ. ಪುಟ 82
3. ಎ.ಕ.8, ಶಿ.ಪು. 246
4. ಬಾರ್ಬೋಸ, ಪುಟ 220-22
5. ಫ.ಎಂ. ಪುಟ 82-83
6. ಅದೇ,
7. ಬಾರ್ಬೋಸ, 1 ಪುಟ 116
8. ಪರ್ಚಾಸ್ 10 ಪುಟ 256
9. ಬ್ರಿಗ್ಸ್, ಪೆರಿಸ್ತಾ, 2 ಪುಟ 380
10. ಬಾರ್ಬೋಸ 1 ಪುಟ 116
11. ಅದೇ, ಪುಟ 219

12. ಎ.ಕ.ಸಂ. 5 ಅ. ಗೂ. 44

13. ಅದೇ, ಸಂ. 6, ಮ.ಗಿ.62

14. ಎಸ್.ಐ.ಐ. 92 ಪುಟ 666

15. ಅದೇ, ನಂ. 480

16. ಎಂ.ಎ.ಆರ್. 1943, ನಂ. 22

17. ಎ.ಕ. 9, ಮಾಗಡಿ 17

18. ಅದೇ,

19. ಎ.ಕ.ಸಂ. 11, ಹೊ.ಕೆ. 17

20. ಅದೇ, ಹೊ.ಕೆ. 62

21. ಅದೇ, ಹೊ.ಕೆ. 111

22. ಎ.ಕ.ಸಂ. 10 ಗೌ.ಬಿ. 17

23. ಅದೇ,

24. ಪ್ರರ್ಚಾಸ್ 10 ಪುಟ 256

25. ಮನು-3 51-53 ಪುಟ 84

26. ಎ.ಕ.ಸಂ. 9, ಹೊ.ಕೋ. 108

27. ಎ.ಕ.ಸಂ. 11 ಹೊ.ಕೋ. 108

28. ಅದೇ, ಪುಟ 199

29. ಎ.ಕ.ಸಂ. 11 ಹೊ.ಕೋ. 108

30. ಎಸ್.ಐ.ಐ. ನಂ. 52

31. ಎಂ.ಎ.ಆರ್ (1908) ನಂ. 354

32. ಎ.ಇಂ.ಸಂ. 19 ಪುಟ 215

33. ಬಾರ್ಬೋಸ-1 ಪುಟ 213-16

34. ಮೇಜರ್ ಇಂಡಿಯಾ ಪುಟ 23

35. ಫ.ಎಂ. ಪುಟ 372-73

36. ಫರ್ಬ್ಸ್-10 ಪುಟ 94-95

37. ಬಾಬೋಸ-1 ಪುಟ 216

38. ಫ.ಎಂ. ಪುಟ 392-93

39. ಸತ್ಯನಾಥ ಅಯ್ಯರ್, ಹಿಸ್ಟರಿ ಆಫ್ ಇಂಡಿಯಾ, ಪುಟ 354

40. ಎ.ಕ.ಸಂ. 8, ಶ್ರ.ಬೆ. 104 ಪುಟ 15

41. ಎಂ.ಎ.ಆರ್. 1947-58, ಪುಟ 87

42. ಅದೇ, ಪುಟ 86

43. ಎ.ಕ.ಸಂ. 11 ದಾ.ಗೆ. 117, ಪುಟ 73

44. ಅದೇ, ಸಂ. 8, ಸೊ-134

45. ಎಂ.ಎ.ಆರ್. 1941 ಪುಟ 195

46. ಎ.ಕ.ಸಂ. 8, ಸೊ. 433

47. ಎಸ್.ಐ.ಐ. 15, ಪುಟ 165

48. ಎ.ಕ. ಸಂ. 2 ಪುಟ 73

49. ಎಂ.ಎ.ಆರ್. 1923 ಪುಟ 85

50. ಎ.ಕ. ಸಂ. 7 ಭಾಗ 1 ಪುಟ 152

51. ಅದೇ, ಪುಟ 95

51. ಅದೇ,

52. ಅದೇ,

53. ಎಂ.ಎ.ಆರ್. 1933 ಪುಟ 211-212

54. ಇ.ಅಂ.ಪ್ರ. ಪುಟ 21

55. ಎಂ.ಎ.ಆರ್.1939-40 ಪುಟ 90

56. ಎಸ್.ಐ.ಐ. ಸಂ. 9, ನಂ. 276

57. ಎಂ.ಎ.ಆರ್. 1933, ಪುಟ 210-211

58. ಎ.ಕ.ಸಂ. 7, ಸೊ. 26, ಪುಟ 5

59. ಎಂ.ಎ.ಆರ್. 1934, ಪುಟ 888

60. ಎ.ಕ. ಸಂ. 7, ಪುಟ 46

61. ಎ.ಕ.ಸಂ. 8 ಸಾ. 35, ಪುಟ 97

62. ಅದೇ, ಸೊ. ನಂ. 461

63. ಎ.ಎ.ಆರ್. 1927 ನಂ. 126, ಪುಟ 119

64. ಎ.ಕ.ಸಂ.8 ನಗರ 29

65. ಎ.ಕ. ಸಂ. 7 ಸೊ. 24

66. ಎಂ.ಎ.ಆರ್. 1920 ಪುಟ 21

67. ಎಂ.ಇ.ಆರ್. ನಂ. 88 (1950-51)

68. ಎ.ಕ. ಸಂ. 7, ಸೊ. 497

69. ಅದೇ, ಸೊ. 163

70. ಅದೇ, ಸಂ. 8 ಸೊ. 497

71. ಅದೇ, ಸಂ. 7 ನಂ.1

72. ಅದೇ, ಶಿ. ಪು. 2

73. ಅದೇ, ಸಂ. 12 ಪುಟ 126

74. ಅದೇ, ಸಂ. 8 ಪುಟ 126

75. ಎಂ.ಎ.ಆರ್. 1923 ಪುಟ 86

76. ಎ.ಕ.ಸಂ. 2. ಚಿ. ನಾ. 30

77. ಆ.ರಿ.ಸೌ.ಇಂ.ಎ. 1930-31 ಪುಟ 32

78. ಎ.ಕ. ಸಂ. 8 ಸೊ. 18

79. ಇಲಿಯಟ್ ಹಿಸ್ಟರಿ ಆಫ್ ಇಂಡಿಯಾ-4, ಪ್ರ ಭಾ 8

80. ಅದೇ,

81. ಮೇಜರ್ ಇಂಡಿಯಾ ಪುಟ 30

82. ಕೃ. ರಾ. ಪುಟ 194

83. ಅದೇ, ಪುಟ 240

84. ಅದೇ, ಪುಟ 251

85. ಎಸ್.ಐ.ಐ. ಸಂ. 10 ನಂ. 151

86. ಇಲಿಯಟ್ ಪುಟ 111-112

87. ಬಾರ್ಬೊಸ-1 ಪುಟ 226

88. ಫ.ಎಂ. ಪುಟ 270

89. ಇಲಿಯಟ್ ಪುಟ 111

90. ಫ.ಎಂ. ಪುಟ 242

91. ಅದೇ,

92. ಅದೇ, ಪುಟ 269

93. ಬಾರ್ಬೋಸ-1 ಪುಟ 208

94. ಅದೇ, ಪುಟ 41-45

95. ಸೋರ್ಸಸ್ ಪುಟ 41-45

96. ಪಯಸ್, ಪುಟ 270

97. ಹ.ವಿ. ಶ್ಲೋಕ 13 ಕಾನಟೊ 5

98. ಎ.ಕ. ಸಂ. 8 ಸೊ. 258 ಪುಟ 40

99. ಅದೇ, ಸಂ. 5, ಬೇ 75 ಪುಟ 62-63

100. ಅದೇ,

101. ಎಸ್.ಐ.ಐ. ಸಂ. 6, ನಂ. 797

102. ಫ.ಎ. ಪುಟ 288-89

103. ಸೋರ್ಸಸ್ ಪುಟ 63

104. ಇಲಿಯಟ್ ಪುಟ 118

105. ಫ.ಎಂ. ಪುಟ 241-241

106. ಎಸ್.ಐ.ಐ. ಸಂ. 5 ನಂ. 1188

107. ಎ.ಕ.ಸಂ. 7 ಶ್ರೀ ರಂ. ಪ. 20

108. ಎಸ್.ಐ.ಐ. ಸಂ. 4, ನಂ. 248, ಹಂಪಿ

109. ಎ.ಕ. ಸಂ. 6 ಮ.ಗಿ. 25

110. ಎಸ್.ಐ.ಐ. ಸಂ. 18 ನಂ. 281

111. ತಿ.ತಿ.ಇಂ. ಸಂ. 4 ಪುಟ 23

112. ತಿ.ತಿ.ಎ.ರಿ. ಪುಟ 225

114. ಎ.ಕ. ಸಂ. 9, ಬೆಂ. 127

115. ಕೃಷ್ಣಮೂರ್ತಿ ವೈದೇಹಿ 'ಸೋಷಿಯಲ್ ಅಂಡ್ ಎಕನಾಮಿಕ್ ಕಂಡೀಷನ್ಸ್ ಇನ್ ಈಸ್ಟರ್ನ್ ಡೆಕ್ಕನ್' ಪುಟ 185.

116. ಅದೇ, ಪುಟ 184

117. ಎ.ಕ.ಸಂ. 12.ಚಿ.ಮ. 39

118. ಇಲಿಯಟ್ ಪುಟ 115

119. ಬಾರ್ಬೋಸ ಟ್ರಾವಲ್ಸ್ ಪುಟ 92

120. ಫ.ಎ. ಪುಟ 372

121. ಬಾರ್ಬೋಸ, ಟ್ರಾವಲ್ಸ್ ಪುಟ 92

122. ಮ.ವಿ. ಶ್ಲೋಕ 12 ಕಾನಟೋ 5

123. ಎ.ಇಂ. ಸಂ. 12 ಪುಟ 334

124. ಎ.ಇಂ. ಪುಟ 363

125. ಅದೇ,

126. ಇಲಿಯಟ್ ನಂ. 24 ಪುಟ 273

127. ಎ.ಕ.ಸಂ.7, ಸೊ. 379

128. ರೈಸ್.ಬಿ.ಎಲ್. ಮೈಸೂರು ಅಂಡ್ ಕೂರ್ಗ್ ಇನ್‌ಸ್ಕ್ರಿಪ್‌ಷನ್ಸ್, ಪುಟ 278

129. ಕೃ.ರಾ. ಪುಟ 37

130. ರಾಮರಾವ್ ಅಂಡ್ ಶಾಸ್ತ್ರಿ ಅಯ್ಯರ್ "ಶಿವತತ್ವರತ್ನಾಕರ" ಪುಟ 168

131. ಸೋರ್ಸಸ್ ಪುಟ 265

132. ಅದೇ, ಪುಟ 53

133. ತಿ.ತಿ.ಇಂ. ಸಂ.1 ಪುಟ 10

134. ಅ.ರಿ.ಸೌ.ಇ. ಎ. 1924-25 ಪ್ಲೀಟ್-2 ಪುಟ 82

135. ಮ.ವಿ. ಕಾನಟೋ-3, 5-28

136. ಅದೇ

137. ಫ.ಎಂ. ಪುಟ 268

138. ಕೃ.ರಾ. 5, 144 ಪುಟ 379

139. ಫ.ಎಂ. ಪುಟ 201

130. ಇಂ.ಆಂ. 27 ಪುಟ 299

ಅಧ್ಯಾಯ ೬

ಉಪಸಂಹಾರ

ನಾವು ಆಯ್ಕೆ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಪುರಾತತ್ವಶಾಸನ ಹಾಗೂ ಸಮಕಾಲೀನ ಮೂಲಗಳನ್ನು ಉಪಯೋಗಿಸಿಕೊಂಡು ಮಾಡಿದ ನಮ್ಮ ವ್ಯಾಪಕವಾದ ಐತಿಹಾಸಿಕ ಪರಿಶೀಲನೆಯಿಂದ ನಾವು ಈಗ ನಿರ್ದಿಷ್ಟವಾಗಿ ಕೆಲವು ಗಣನೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿದ್ದೇವೆ. ಇವುಗಳು ಮಧ್ಯಕಾಲೀನ ದಕ್ಷಿಣ ಭಾರತದ ಸಾಮಾಜಿಕ ಇತಿಹಾಸದ ಸ್ಥಿತಿಯಲ್ಲಿ ಬಹಳ ಕುತೂಹಲಕಾರಿಯಾಗಿವೆ. ಅದರಲ್ಲೂ ವಿಶೇಷವಾಗಿ ಕರ್ನಾಟದಲ್ಲಿ ಸಮಾಜದ ಹಲವಾರು ಕ್ಷೇತ್ರಗಳಲ್ಲಿ ಪುರುಷನೊಂದಿಗೆ ಸರಿಸಮವಾಗಿ ನಿಲ್ಲಲು ಸಾಮಾಜಿಕ ಸ್ಥಾನಮಾನ ಹಾಗೂ ಗೌರವವನ್ನು ಹೊಂದಲು ಭಾರತೀಯ ಸ್ತ್ರೀಯರು ಮಾಡಿದ ಘೋರ ಯುದ್ಧಗಳ ವಾಸನೆಯನ್ನು ನಾವು ಈಗಲೂ ಸವಿಯುತ್ತಿದ್ದೇವೆ. ಸ್ತ್ರೀಯರ ಏಳಿಗೆಗೆ ಶಿಕ್ಷಣವು ರಾಮಬಾಣ ಎಂದು ಪರಿಗಣಿಸಲಾಗಿದೆ. ಆದರೂ ಕೂಡ ನಾಡಿನ ಹಲವಾರು ಭಾಗಗಳಲ್ಲಿ ಇಂದಿಗೂ ಸತಿ ಹಾಗೂ ವರದಕ್ಷಿಣೆ ಸಾವುಗಳು ಅವ್ಯವಾಹಿತವಾಗಿ ನಡೆಯುತ್ತಿರುವುದನ್ನು ಮೂಕರಾಗಿ ನೋಡುತ್ತಲೇ ಇದ್ದೇವೆ. ಈ ರೀತಿಯ ಒಂದು ಅಸಹನೀಯ ಪರಿಸ್ಥಿತಿಯಲ್ಲಿ ನಾವು ಒಂದು ಕ್ಷಣ ಭೂತಕಾಲದವನ್ನು ಇಣುಕಿನೋಡಿದಾಗ ನಮಗೆ ಸಮಾಜದ ಏಣಿ ಶ್ರೇಣಿಯಲ್ಲಿ ಹಲವಾರು ವರ್ಗಗಳಿಗೆ ಸೇರಿದ ಅಸಂಖ್ಯ ಮಹಿಳೆಯರ ಜನಜೀವನವು ನಮ್ಮ ಕಣ್ಮುಂದೆ ಎಳೆಎಳೆಯಾಗಿ ಮೂಡಿಬರುತ್ತದೆ. ನಮ್ಮ ಪ್ರಸ್ತುತದ ಈ ಅಧ್ಯಯನವು ಸಂಪೂರ್ಣವಾಗಿ ಶಾಸನ ಆಧಾರಗಳ ಮೇಲೆ ಅವಲಂಬಿತವಾಗಬೇಕಾಯಿತು. ಆದರೆ ವಾಸ್ತವಾಂಶಗಳನ್ನು ವಸ್ತುನಿಷ್ಠವಾಗಿ ಅರ್ಥೈಸಲು ಕಾಳಜಿಯನ್ನು ವಹಿಸಲಾಗಿದೆ ಹಾಗೂ ಪವಿತ್ರಗ್ರಂಥಗಳ ಆದರ್ಶಗಳನ್ನು ಕೇವಲ ಸಾಮಾಜಿಕ ನೈಜತೆಯಾಗಿ ಪರಿಗಣಿಸಿಲ್ಲ, ಅದರ ಬದಲಾಗಿ ಒಂದು ಆದರ್ಶ ಸಮಾಜದ ಗೊತ್ತುವಳಿ ಅಥವಾ ಗುರಿಯಾಗಿ ಪರಿಗಣಿಸಲಾಗಿದೆ.

ಯಾವುದೇ ಗಂಭೀರ ವಿಶ್ಲೇಷಿತ ಅಧ್ಯಯನಕ್ಕೆ ವರ್ಗೀಕರಣವು ಅತ್ಯಗತ್ಯವಾಗಿರುತ್ತದೆ. ಇಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ ಹಾಗೂ ಹೆಚ್ಚಿನ ಸಮಯೋಜಿತೆಗಾಗಿ ಸ್ತ್ರೀಬಳಗವನ್ನು ಎರಡು ವರ್ಗಗಳಿಗೆ ವಿಂಗಡಿಸಿದ್ದೇವೆ. ಅವುಗಳೆಂದರೆ ಮೇಲ್ವರ್ಗದ ಸ್ತ್ರೀಯರು ಹಾಗೂ ಕೆಳವರ್ಗದ ಸ್ತ್ರೀಯರುಈ ನಮ್ಮ ವರ್ಗೀಕರಣದಲ್ಲಿ ನಾವು ಜಾತಿಯ ಅಂಶಗಳನ್ನು ಯಾವುದೇ ವಿಧದಲ್ಲೂ ನಿರ್ಲಕ್ಷಿಸಿಲ್ಲ. ಇವುಗಳು ಮೇಲ್ವರ್ಗ ಹಾಗೂ ದುಡಿಮೆಯ ವರ್ಗವೆರಡನ್ನೂ ಭೇದಿಸಿ ಸಾಗುತ್ತವೆ. ನಾವು ಅಧ್ಯಯನಕ್ಕೆ ತೆಗೆದುಕೊಂಡಿರುವ ಕಾಲವು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಕಾರಣವೇನೆಂದರೆ ದೊರೆತಿರುವ ದಾಖಲೆ ಆಧಾರಗಳಿಂದ ಸ್ತ್ರೀಯರಿಗೆ ಆರ್ಥಿಕ ದಕ್ಷತೆಯನ್ನು ಒದಗಿಸಲು ಸಾಕಷ್ಟು ಗಂಬೀರವಾದ ಹಾಗೂ ಮಹತ್ವವಾದ ಪ್ರಯತ್ನವನ್ನು ಈ ಕಾಲದಲ್ಲಿ ಮಾಡಲಾಯಿತು ಎಂಬ ಅಂತಿಮ ನಿರ್ಧಾರಕ್ಕೆ ನಾವು ನಿಸ್ಸಂದೇಹವಾಗಿ ಬರಬಹುದು. ಆ ಕಾಲದ ಸ್ತ್ರೀಯರು ಗಳಿಸಿದ್ದ ಚಿನ್ನ ಹಾಗೂ ಬೆಳ್ಳಿಯ ಆಭರಣಗಳು, ಪಾತ್ರೆಗಳು, ಭೂಆಸ್ತಿ ಇತ್ಯಾದಿಗಳು ಈ ದಿಸೆಯಲ್ಲಿ ಮಾಡಲಾದ ಒಂದು ಪ್ರಯತ್ನ ಎಂದು ಹೇಳಬಹುದು.

ಈ ಕಾಲದಲ್ಲಿ ಪ್ರಥಮ ಬಾರಿಗೆ ಸ್ತ್ರೀಯರಿಗೆ ಆರ್ಥಿಕ ಸುಭದ್ರತೆಯನ್ನು ನೀಡುವ ಮಹೋನ್ನತ ಪ್ರಯತ್ನವು ನಡೆಯಿತು ಎಂಬುದು ಗಣನೀಯ ಅಂಶವಾಗಿದೆ. ಚಿನ್ನದ ಆಭರಣಗಳು ಹಾಗೂ ಭೂಮಿ ಮತ್ತಿತರ ವಸ್ತುಗಳನ್ನು ಸ್ತ್ರೀಗೆ

ಮದುವೆಯ ಸಮಯದಲ್ಲಿ ಅವಳ ಪೋಷಕರು ಹಾಗೂ ಪತಿಯು ಉಡುಗೊರೆಯೆಂದು ನೀಡುತ್ತಿದ್ದರು. ಇದನ್ನು ಸ್ತ್ರೀದಾನ ಎಂದು ಕರೆಯಲಾಗುತ್ತಿತ್ತು. ಇವುಗಳ ಮೇಲೆ ಅವಳಿಗೆ ಸಂಪೂರ್ಣವಾದ ಹಕ್ಕುಗಳು ಇರುತ್ತಿದ್ದವು. ಅವಳ 'ಸ್ತ್ರೀದಾನ' ದ ಮೇಲೆ ಅವಳ ಗಂಡನಿಗೂ ಯಾವ ಅಧಿಕಾರವಿರುತ್ತಿರಲಿಲ್ಲ. ಈ ನಿಟ್ಟಿನಲ್ಲಿ ಈ ಕಾಲವು ಸ್ತ್ರೀಯರ ಸ್ಥಾನಮಾನದ ಬೆಳವಣಿಗೆಗೆ ತುಂಬು ಸಹಾಯಕಾರಿಯಾದ ಅಂಶವಾಗಿದೆ. ಕೆಲವು ವಿದ್ವಾಂಸರು ಸ್ತ್ರೀಯರು ಭೋಗದ ವಸ್ತುವೆಂದು ಅಭಿಪ್ರಾಯಪಟ್ಟರು. ಸಾಹಿತ್ಯಿಕ ಗ್ರಂಥಗಳು ಕೇವಲ ರಾಜಮನೆತನದ ವೈಭವವನ್ನು ದಿವ್ಯೀಕರಿಸುತ್ತವೆ ಹಾಗೂ ಅಧಿಕಾರವರ್ಗದವರು ಮತ್ತು ಶ್ರೀಮಂತರ ವಿಲಾಸಿ ಜೀವನದ ಬಗ್ಗೆ ಹೆಚ್ಚು ಮಹತ್ವವನ್ನು ನೀಡಿವೆ.

ಬರ್ಟನ್ ಸ್ಟೀನ್ ಹೇಳುವಂತೆ ವಿಜಯನಗರ ಕಾಲದಲ್ಲಿ ಅಮ್ಮನ್ ಗುಡಿಗೋಪುರಗಳು ಅಭ್ಯುದಯಕ್ಕೆ ಬಂದವು.[1] ಈ ಅಮ್ಮನ್ ಗುಡಿಗಳ ಸ್ಥಾಪನೆಯಿಂದ ರಾಜರು ಹಾಗೂ ಜನಗಳು ಸ್ತ್ರೀಯರಿಗೆ ಸಮನಾದ ಸ್ಥಾನಮಾನವನ್ನು ನೀಡಿದರು. ಅವರು ಹೋದೆಡೆಯೆಲ್ಲೆಲ್ಲಾ ಸ್ತ್ರೀಯರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಯುದ್ಧಕ್ಕೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು.

ಮೇಲ್ವರ್ಗದ ಸ್ತ್ರೀಯರಿಗೆ ಸಂಬಂಧಿಸಿದಂತೆ ಅವರು ತಮ್ಮ ವ್ಯಕ್ತಿತ್ವದ ಸಂಪೂರ್ಣ ಬೆಳವಣಿಗೆಯ ಅವಕಾಶವನ್ನು ಹೊಂದಿದ್ದರು. ಏಕೆಂದರೆ ಅವರು ತಮಗೆ ಬೇಕಾದ ಶಿಕ್ಷಣ ಹಾಗೂ ಕಲೆಯ ಹಲವಾರು ಕ್ಷೇತ್ರಗಳಲ್ಲಿ ತರಬೇತಿಯನ್ನು ಪಡೆಯಬಹುದಾಗಿತ್ತು. ಬಿಲ್ಲುಗಾರಿಕೆಯಲ್ಲೂ ತರಬೇತಿಯನ್ನು ಪಡೆಯಬಹುದಾಗಿತ್ತು. ಈ ಕಾಲದ ಸ್ತ್ರೀಯರು ದೇವಾಲಯಗಳಿಗೆ, ಬ್ರಾಹ್ಮಣರಿಗೆ, ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಮಾಡುತ್ತಿದ್ದ ಉದಾರದಾನದ ಬಗ್ಗೆ ಬೆಳಕನ್ನು ಚೆಲ್ಲುವ ಅಸಂಖ್ಯೆ ಸಂಖ್ಯೆಯ ಶಾಸನಗಳನ್ನು ಹೊಂದಿದ್ದೇವೆ. ದಾನಿಗಳ ಪಟ್ಟಿಯಲ್ಲಿ ಕೇವಲ ಶ್ರೀಮಂತ ವರ್ಗದವರು ಹಾಗೂ ಮೇಲ್ವರ್ಗದ ಸ್ತ್ರೀಯರ ಹೆಸರೂ ಇರುವುದು ಬಹಳ ಕುತೂಹಲವನ್ನು ಉಂಟುಮಾಡುತ್ತದೆ. ನಾವು ಈಗಾಗಲೇ ಕೋಲಾರ ಪ್ರದೇಶದ ಬಳಿಯ ತಿರುಮನಿಯ ಹತ್ತಿರ ಕ್ರಿ.ಶ. 1397ರಲ್ಲಿ[2] ಬುಕ್ಕರಾಯನ ಮಗಳಾದ ಜೊನ್ನದೇವಿಯು ಒಂದು ನೀರಾವರಿ ಕಾಲುವೆಯನ್ನು ಕಟ್ಟಿಸಿದ ದೃಷ್ಟಾಂತವನ್ನು ನೀಡಿದ್ದೇವೆ. ಇನ್ನೊಂದು ಕ್ರಿ.ಶ.1417ರ ಅನಂತಪುರ ಪ್ರದೇಶದ ಶಾಸನವು ಅಂಬರಾಜನ ಮಗಳು ಹಾಗೂ ರಾಮಚಂದ್ರನ ಪತ್ನಿಯಾದ ಬುಕ್ಕಾಂಬಳು ಎಂಟು ಜನ ಬ್ರಾಹ್ಮಣರಿಗೆ ಹಳ್ಳಿಯನ್ನು ದಾನಮಾಡಿದುದರ ಬಗ್ಗೆ ಉಲ್ಲೇಖವನ್ನು ನೀಡುತ್ತದೆ.[3] ಈ ದಾಖಲೆಯಿಂದ ಸ್ತ್ರೀಯರು ಸಂಪೂರ್ಣವಾದ ಆಸ್ತಿಯ ಹಕ್ಕನ್ನು ಹೊಂದಿದ್ದರು ಹಾಗೂ ಅದು ಕೇವಲ ಹಳ್ಳಿಗಳನ್ನೂ ಒಳಗೊಂಡಿತ್ತು ಎಂಬ ಅಂಶವು ನಮಗೆ ತಿಳಿಯುತ್ತದೆ.

ತಾಯಿಯಾಗಿ ಸ್ತ್ರೀಯು ಭಕ್ತಿಯ ವಸ್ತುವಾಗಿದ್ದಳು, ಕುಟುಂಬದ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತಿದ್ದಳು. ಹೆಚ್ಚು ಗೌರವವನ್ನು ಹೊಂದಿದ್ದಳು ಹಾಗೂ ಮಕ್ಕಳಿಂದ ಉತ್ತಮವಾದ ಉಪಚಾರವನ್ನು ಕಾಣುತ್ತಿದ್ದಳು. ತಮ್ಮ ತಾಯಂದಿರ ಸ್ಮರಣಾರ್ಥವಾಗಿ ಮಕ್ಕಳು ಬಸದಿಗಳು ಹಾಗೂ ದೇವಾಲಯಗಳನ್ನು ನಿರ್ಮಾಣ ಮಾಡಿರುವ ಬಗ್ಗೆ ಉಲ್ಲೇಖವನ್ನು ನೀಡುವ ಹಲವಾರು ಶಾಸನಗಳಿವೆ. ನಾಚಣಸೋಮನ "ಉತ್ತರ ಹರಿವಾಮ"ವು ಸ್ತ್ರೀಯರು ಹಲವಾರು

ಕ್ಷೇತ್ರಗಳಲ್ಲಿ ಅಸಮಾನ್ಯ ಪ್ರತಿಭೆಯನ್ನು ಹೊಂದಿದ್ದನ್ನು ಸ್ಪಷ್ಟವಾಗಿ ಹೇಳುತ್ತದೆ. ಉದಾಹರಣೆಗೆ ಬಂದಂಜನ ಮಗಳು ಕೇವಲ ಗಾಯಕಿ, ನರ್ತಕಿ, ನಾಟಕ ಕಲಾವಿದೆಯಲ್ಲದೆ ಸಾಹಿತ್ಯದಲ್ಲೂ ಉತ್ತಮ ಪ್ರತಿಭೆಯನ್ನು ಹೊಂದಿದ್ದಳು.

ಈ ಕಾಲದಲ್ಲಿ ದೇವಾಲಯ ಹಾಗೂ ಸ್ತ್ರೀಯರ ನಡುವೆ ಬಹಳ ನಿಕಟ ಸಂಬಂಧವಿತ್ತು. ದೇವಾಲಯಗಳು ಬಹಳ ಸಂಖ್ಯೆಯ ಸ್ತ್ರೀಯರನ್ನು ನೇಮಕಮಾಡಿಕೊಂಡಿದ್ದವು. ಅಲ್ಲಿ ಅವರು ನರ್ತಕಿಯರಾಗಿ, ಸಂಗೀತಗಾರರಾಗಿ, ಸೇವಕಿಯರಾಗಿ ಹಾಗೂ ಶ್ರೇಷ್ಠ ದಾನಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಜೀವನದ ಪ್ರತಿಯೊಂದು ಅಂಗದಲ್ಲೂ ಧರ್ಮವು ಸ್ತ್ರೀಯರ ಮೇಲೆ ಪ್ರಭಾವವನ್ನು ಬೀರಿತ್ತು. ಸ್ತ್ರೀಯರು ಅವರು ನಿರ್ವಹಿಸುತ್ತಿದ್ದ ಕೆಲಸದ ಮೇಲಿನ ಭಕ್ತಿಗಾಗಿ ದೇವಾಲಯದ ಅಧಿಕಾರಿಗಳು ಅವರನ್ನು ಗೌರವಿಸುತ್ತಿದ್ದರು.

ಈ ಕಾಲದಲ್ಲಿ ವೇಶ್ಯಾವಾಟಿಕೆಯು ಪವಿತ್ರ ಎಂದು ಪರಿಗಣಿಸಲ್ಪಟ್ಟಿತ್ತು ಹಾಗೂ ಸಮಾಜವು ಇದನ್ನು ಸಹಿಸಿಕೊಂಡಿತ್ತು. ದೇವಾಲಯಗಳಿಗೆ ಸಮರ್ಪಣೆಗೊಂಡಿದ್ದ ದೇವದಾಸಿಯರು ಸಮಾಜದಲ್ಲಿ ಗೌರವಯುತವಾದ ಸ್ಥಾನವನ್ನು ಹೊಂದಿದ್ದರು. ದೇವಾಲಯದಲ್ಲಿ ಹೆಚ್ಚು ಸಂಖ್ಯೆಯ ದೇವದಾಸಿಯರನ್ನು ನೇಮಿಸಿಕೊಳ್ಳುವುದು ದೇವಾಲಯದ ದೊಡ್ಡ ಗೌರವಕ್ಕೆ ಸಲ್ಲುವ ಹಿರಿಮೆ ಎಂದು ಪರಿಗಣಿಸಲಾಗಿತ್ತು.ಇವರು ದೇವರಿಗೆ ಮೀಸಲಾಗಿ ಬಿಟ್ಟ ದಾಸಿಯರಾಗಿದ್ದರು. ಆಗಿನ ಮೌಲ್ಯಧಾರಿತ ಪದ್ಧತಿಯು ಶಾಶ್ವತತೆ ಹಾಗೂ ಆಧ್ಯಾತ್ಮಿಕತೆಯ ನಡುವಿನ ಗಹನ ಸತ್ಯವನ್ನು ತಿಳಿಯಲಾರದೆ ಹೋದುದ್ದರಿಂದ ವೇಶ್ಯಾವಾಟಿಕೆಯನ್ನು ದೇವರ ಹೆಸರಿನಲ್ಲಿ ಸಂತೋಷವಾಗಿ ನೆಡೆಸಲಾಗುತ್ತಿತ್ತು. ಈ ದೇವದಾಸಿಯರಲ್ಲಿ ಅನೇಕರು ವಿದ್ಯಾವಂತರಾಗಿದ್ದರು. ಸಂಗೀತ, ನೃತ್ಯ ಹಾಗೂ ನಾಟಕದಲ್ಲಿ ಪ್ರತಿಭಾವಂತೆಯಾಗಿದ್ದರು. ಅವರು ಶ್ರೀಮಂತ ಭೂಮಿ ಹಾಗೂ ಇತರೆ ಉಂಬಳಿಗಳನ್ನು ಪಡೆಯುತ್ತಿದ್ದರು. ವೇಶ್ಯೆಯರಿಗೆ ಅವರ ಆಶ್ರಯದಾತರು ಪದ್ಧತಿಯಂತೆ "ರೊವತ್ತು"ಎಂಬ ಹಣದ ಬಟಾವಣೆಯನ್ನು ಮಾಡುತ್ತಿದ್ದರು. ಸಮಾಜವು ಜಾತಿ ಏಣಿಶ್ರೇಣಿಯಲ್ಲಿ ಅವರಿಗೊಂದು ಸ್ಥಾನವನ್ನು ನೀಡಿ ಸಮಾಜದಲ್ಲಿ ಸ್ವೀಕರಿಸಿತ್ತು. ದೇವದಾಸಿಯರು ಧಾರ್ಮಿಕವಾಗಿ, ನ್ಯಾಯಯುತವಾಗಿ ಹಾಗೂ ಆರ್ಥಿಕವಾಗಿ ಉತ್ತಮ ಸ್ಥಾನಮಾನವನ್ನು ಹೊಂದಿದ್ದರು. ಇವುಗಳ ಹೊರತಾಗಿ ದೇವದಾಸಿ ಪದ್ಧತಿಯು ಸಾಂಸ್ಥಿಕ ದಾಸ್ಯದ ಒಂದು ವಿಧಾನ ಹಾಗೂ ಸ್ತ್ರೀಯರ ಗೌರವ ಹಾಗೂ ಸ್ಥಾನಮಾನದ ಅಧಃಪತನ ಎಂಬುದನ್ನು ನಾವು ಮರೆಯುವಂತಿಲ್ಲ. ಈ ದೇವದಾಸಿಯರಲ್ಲಿ ಅನೇಕರು ಅವರ ವಿಧಾನ ಹಾಗೂ ಕಾರ್ಯಚರಣೆಯ ಸ್ಥಳವನ್ನಾಧರಿಸಿ ಶ್ರೀಮಂತರಾಗುವ ಅವಕಾಶವನ್ನು ಹೊಂದಿದ್ದರು. ಈ ರೀತಿಯಾಗಿ ಅನೈತಿಕವಾಗಿ ಸಂಪಾದಿಸಿದ ಹಣವನ್ನು ಅವರಲ್ಲಿ ಕೆವರು ಪುನಃ ದೇವಾಲಯಕ್ಕೆ ದಾನವಾಗಿ ನೀಡುತ್ತಿದ್ದರು. ದೇವದಾಸಿಯರು ರಾಜರು, ಮಂತ್ರಿಗಳು, ಬ್ರಾಹ್ಮಣ ಪುರೋಹಿತರು ಹಾಗೂ ವರ್ತಕರಿಂದಲೂ ಉತ್ತಮವಾದ ಪ್ರೋತ್ಸಾಹವನ್ನು ಪಡೆದರು, ಏಕೆಂದರೆ ಅವರು ಪ್ರತಿಯೊಬ್ಬರಿಗೂ ಭೋಗದ ವಸ್ತುವಾಗಿದ್ದರು.

ವಿವಾಹವು ಕಡ್ಡಾಯವಾಗಿತ್ತು ಹಾಗೂ ವರದಕ್ಷಿಣೆಯು ರೂಢಿಯಲ್ಲಿತ್ತು. ಸತಿಪದ್ಧತಿಯು ಹಿಂದೂ ಸಮಾಜದ ಮೇಲ್ವರ್ಗದಲ್ಲಿ ಮಾತ್ರ ಆಚರಣೆಯಲ್ಲಿತ್ತು. ಗಂಡಂದಿರ ಚಿತೆಯನ್ನೇರಿದ ಮಹಿಳೆಯರ ಸ್ಮರಣಾರ್ಥವಾಗಿ **'ಮಹಾಸತಿಕಲ್ಲು'**ಗಳನ್ನು ಸ್ಥಾಪಿಸಲಾಯಿತು. ಸತಿಕಲ್ಲುಗಳು ಭಾರತೀಯ ಮಹಿಳೆಯೊಬ್ಬಳು ತನ್ನ ಗಂಡನಿಗಾಗಿ ಏನನ್ನು ಮಾಡಬಲ್ಲಳು ಎಂಬುದನ್ನು ಪ್ರದರ್ಶಿಸುತ್ತವೆ. ಅವನ ಜೀವಿತ ಅವಧಿಯಲ್ಲಿ ಅವನ ಬೇಕು ಬೇಡಗಳನ್ನು ಈಡೇರಿಸುವ

ಇವಳು ಕೊನೆಯಲ್ಲಿ ಅವನ ಜೊತೆಯಲ್ಲಿಯೇ ನಂತರದ ಪ್ರಪಂಚಕ್ಕೆ ತೆರಳುತ್ತಾಳೆ. ಇದು ಸತಿಯರ ದೊಡ್ಡತನ. ಈ ಕಾಲದಲ್ಲಿ ಮುಸ್ಲಿಮರ ದಾಳಿಯಿಂದಾಗಿ ಸತಿಪದ್ಧತಿಯು ಬಹಳ ಹೆಸರುವಾಸಿಯಾಯಿತು. ಹೆಚ್ಚು ಸಂದರ್ಭಗಳಲ್ಲಿ ಹಿರಿಯರು ಸ್ತ್ರೀಯರನ್ನು ಅವರ ಜೊತೆ ಬ್ರಾಹ್ಮಣರೂ ಕೂಡ ಈ ಪದ್ಧತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಮಾಡುವಲ್ಲಿ ಕಾರಣರಾಗಿದ್ದರು. ವಿದೇಶೀದಾಳಿಕಾರರ ಆಕ್ರಮಣ ಹಾಗೂ ಬ್ರಾಹ್ಮಣರಉಕ್ಕಿನ ನೀತಿಗಳು ಈ ರೀತಿಯ ಅವಸಾನಕ್ಕೆ ಕಾರಣವಾಗಿದ್ದವು. ಸತಿಪದ್ಧತಿಯನ್ನು ಪ್ರಖ್ಯಾತಿಗೊಳಿಸುವ ಉದ್ದೇಶದಿಂದ ಪಂಡಿತರು ಅದಕ್ಕೆ ಸಂಬಂಧಿಸಿದ ಸ್ತೋತ್ರಗಳನ್ನು ತಪ್ಪಾಗಿ ಅರ್ಥೈಸಿದರು.

ಈ ಕಾಲದಲ್ಲಿ ಅನೇಕ ಸ್ತ್ರೀಯರು ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಅಪ್ರತಿಮ ಕೊಡುಗೆಯನ್ನು ನೀಡಿದ್ದಾರೆ. ಗಂಗಾದೇವಿ, ತಿರುಮಲಾಂಬ, ಮೋಹನಾಂಗಿ, ಮೊಲ್ಲಿ ಮತ್ತು ಜಗನ್ಮೋಹಿನಿಯರು ಈ ಕಾಲದ ಪ್ರಸಿದ್ಧ ಕವಿಯತ್ರಿಯರಾಗಿದ್ದಾರೆ.

ವಾರಾಂಗನೆಯರು ಲಲಿತಕಲೆಗಳ ವಿಧಗಳನ್ನು ಅಭ್ಯಾಸಮಾಡುತ್ತಿದ್ದರು. ಅವರು ಜೀವನ ಹಾಗೂ ಸಾದನಗಳಿಗೆ ಸಂಬಂಧವಾಗಿ ತಮ್ಮ ಶೈಲಿಯನ್ನು ಅಳವಡಿಸಿಕೊಂಡಿದ್ದರು. ಕಲೆಯ ಪ್ರವರ್ತಕರು ಹಾಗೂ ಕಲಾಶೈಲಿಯ ನಿಯೋಜಕರು ಜನರ ಪ್ರಶಂಸೆಗೆ ಪಾತ್ರರಾಗಬೇಕೆಂಬುದು ಸಹಜವಾದ ವಿಚಾರ. ಯಾವುದೇ ಉನ್ನತ ಪ್ರಜೆಯಾಗಲೀ ಅಥವಾ ಗೌರವಾನ್ವಿತ ವ್ಯಕ್ತಿಯಾಗಲೀ ವಾರಾಂಗನೆಯರ ಆಶ್ರಯದಾತನಾಗುವುದು ತನ್ನ ಗೌರವಸ್ಥಾನಮಾನಗಳಿಗೆ ದಕ್ಕೆಯುಂಟುಮಾಡುತ್ತದೆಂದು ತಿಳಿಯಲಿಲ್ಲ. ವಿಜಯನಗರದ ಅರಸರು ಬಹಳ ವಿಶಾಲವಾದ ಅಂತಃಪುರವನ್ನು ಹೊಂದಿದ್ದರು. ವಿಜಯನಗರಕ್ಕೆ ಭೇಟಿನೀಡಿದ ವಿದೇಶೀ ಪ್ರವಾಸಿಗರು ವಿಜಯನಗರದ ಅರಸರು ಹೊಂದಿದ್ದ ವಿಶಾಲವಾದ ಅಂತಃಪುರವನ್ನು ನೋಡಿ ದಂಗಾದರು.

ಈ ಕಾಲದಲ್ಲಿ ಶಿಕ್ಷಣವು ವಿಶಾಲವಾಗಿತ್ತು ಎನ್ನುವುದಕ್ಕಿಂತ ತೀವ್ರವಾಗಿತ್ತು ಎಂದು ಹೇಳಬಹುದು. ಮೇಲ್ವರ್ಗದ ಸ್ತ್ರೀಯರು ಹಾಗೂ ಅಧಿಕಾರಿಗಳ ಮನೆತನದ ಸ್ತ್ರೀಯರು ಹೆಚ್ಚಿನ ಶಿಕ್ಷಣವನ್ನು ಹೊಂದಿದ್ದರು. ಸಾಮಾನ್ಯವಾಗಿ ಶಿಕ್ಷಣದೊಂದಿಗೆ ಅವರ ಶಿಕ್ಷಣವು ಲಲಿತ ಕಲೆಗಳಾದ ಸಂಗೀತ ಹಾಗೂ ನೃತ್ಯವನ್ನು ಹೊಂದಿತ್ತು. ಅವಳ ಕಲೆಗಳಾದ ಸಂಗೀತ, ನೃತ್ಯವು ಎಲ್ಲ ರೀತಿಯ ಸಾರ್ವಜನಿಕ ಸಭೆ ಸಮಾರಂಭಗಳು, ಧಾರ್ಮಿಕ ಆಚರಣೆಗಳು, ಹಬ್ಬಹರಿದಿನಗಳು, ಉತ್ಸವಗಳು ಹಾಗೂ ಆಸ್ಥಾನದಲ್ಲಿ ಮತ್ತು ಸಭೆಗಳಲ್ಲಿ ಅವಶ್ಯಕವಾದ ಮನೋರಂಜನೆಯ ಸಾದನಗಳಾಗಿದ್ದವು. ಶಿಲಾಶಾಸನವು ನೃತ್ಯಕಲೆಯನ್ನು ಗೊತ್ತುವಳಿಪಡಿಸುವಲ್ಲಿ ಪ್ರಮುಖವಾದ ಆಧಾರವಾಗಿದೆ. ಈ ಶಾಸನ ಹಾಗೂ ಶಿಲಾಶಾಸನ ದಾಖಲೆಗಳು ನೇರವಾಗಿ ನೃತ್ಯದೊಂದಿಗೆ ಸಂಬಂಧವನ್ನು ಹೊಂದಿರುವ ಪಕ್ಷದಲ್ಲಿ ಕೆಲವು ಶಾಸನಗಳು ಅಂದರೆ ನರ್ತಕಿಯರಿಗೆ ಆಶ್ರಯ ನೀಡಿದ ಬಗ್ಗೆ, ಅವರಿಗೆ ದಾನಮಾಡಿದ ಬಗ್ಗೆ, ದೇವಾಲಯಗಳಲ್ಲಿ ಸೇವೆಯ ಸಲುವಾಗಿ ಅಭ್ಯಸಿಸುತ್ತಿದ್ದ ನೃತ್ಯ, ನೃತ್ಯಸಭಾಂಗಣದ ಅಸ್ತಿತ್ವ ಹಾಗೂ ನಿರ್ಮಾಣದ ಬಗ್ಗೆಮಾಹಿತಿಯನ್ನು ಒದಗಿಸುವ ಕೆಲವು ಶಾಸನಗಳು ಲಭ್ಯವಿದೆ. ಈ ಮಾಹಿತಿಗಳು ಈ ಕಾಲದಲ್ಲಿ ಈ ನೃತ್ಯಕಲೆಯು ಸಮಾಜದಲ್ಲಿ ಒಟ್ಟಾರೆ ಅನುಭವಿಸಿದ ಸ್ಥಾನಮಾನಗಳ ಬಗ್ಗೆ ವಿಶ್ಲೇಷಿಸಲು ನಮಗೆ ಸಹಾಯಕಾರಿಯಾಗಿವೆ. ಅನೇಕ ವಿಧವಾದ ಸಂಗೀತ ಸಾದನಗಳು ಅಸ್ತಿತ್ವದಲ್ಲಿದ್ದವು. ಈ ಕಾಲದಲ್ಲಿ ನೃತ್ಯ ಹಾಗೂ ಸಂಗೀತವೆರಡು ಕೀರ್ತಿಯ ಪರಾಕಾಷ್ಠತೆಯನ್ನು ತಲುಪಿದ್ದವು. ಸ್ತ್ರೀಯರನ್ನು ಸಾಮಾನ್ಯವಾಗಿ ಸೌಂದರ್ಯ ಹಾಗೂ ವೈಭವದ ಅವತರಣಿಕೆ ಎಂದು ಹೇಳಲಾಗುತ್ತದೆ ಹಾಗೂ ಇದು ಅವರ ಸಾಧನೆಗೆ ಪುಷ್ಠಿಯನ್ನು ನೀಡುತ್ತದೆ. ಅದ್ದರಿಂದ ಸ್ತ್ರೀಯರು

ನರ್ತಿಸಿದರೆ ಪುರುಷರು ಸಂಗೀತ ಸಾದನಗಳನ್ನು ನುಡಿಸುತ್ತಾರೆ. ಹಿಂದೂ ಪುರಾಣದಲ್ಲೂ ಇಂದ್ರನ ಆಸ್ಥಾನದಲ್ಲಿದ್ದ ಅನೇಕ ನರ್ತಕಿಯರ ಉಲ್ಲೇಖವನ್ನು ನಾವು ಹೊಂದಿದ್ದೇವೆ. ಸಂಗೀತದಲ್ಲಿ ಪುರುಷರಿಗಿಂತ ಅವರ ಧ್ವನಿಯು ಇಂಪು ಎಂದು ಪರಿಗಣಿಸಲ್ಪಟ್ಟಿದೆ. ಆದ್ದರಿಂದ ಸ್ತ್ರೀಯರು ಈ ರೀತಿಯ ಕಲೆಗಳ ಪ್ರದರ್ಶನದಲ್ಲಿ, ಅವುಗಳು ಜಾನಪದವಾಗಿರಲಿ ಅಥವಾ ಶಾಸ್ತ್ರೀಯವಾಗಿರಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿದರು.

ಈ ಹಿಂದಿನ ಪುಟಗಳನ್ನು ಜಾಗರೂಕವಾಗಿ ಅಧ್ಯಯನ ಮಾಡಿದ್ದಲ್ಲಿ ಈಗಿನ ಕಾಲದ ಸ್ತ್ರೀಯರ ಸಾಮಾನ್ಯ ಸ್ಥಾನಮಾನವು ಆಧುನಿಕ ಸಮಾಜದ ಹಲವಾರು ಪ್ರಭಾವೀ ಶಕ್ತಿಗಳ ಪ್ರಭಾವದಿಂದಾಗಿ ಬದಲಾವಣೆಯನ್ನು ಹೊಂದಿದ್ದರೂ ಆಗಿದ್ದ ಪರಿಸ್ಥಿತಿಗಿಂತ ಅಷ್ಟೇನು ಅಸಾಧಾರಣವಾದ ಬದಲಾವಣೆ ನಾವು ನೋಡುವುದಿಲ್ಲ ಎಂಬ ಸತ್ಯಾಂಶವು ನಮ್ಮ ಅರಿವಿಗೆ ಬರುತ್ತದೆ.

ಆಗಿನ ಶ್ರೀಮಂತವರ್ಗದ ಮಹಿಳೆಯರು ಸ್ತ್ರೀಸೌಂದರ್ಯಶಾಸ್ತ್ರ, ವಿಲಾಸಿ ಜೀವನ, ಆಡಂಭರ ಭವ್ಯತೆ ಹಾಗೂ ಅವರ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಾಧನೆಗಳಲ್ಲಿ ಮತ್ತು ಅವರ ಆಧುನಿಕತೆಯಸೋಗಿನಲ್ಲೂ ಈಗಿನ ಅವರ ಸಹೋದರಿಯರ ಮುಂದೆ ಒಂದು ದೊಡ್ಡ ಸವಾಲಾಗಿ ನಿಲ್ಲುತ್ತಾರೆ. ಅವರಲ್ಲಿ ಕೆಲವು ಅದೃಷ್ಟವಂತ ಸ್ತ್ರೀಯರು ಸಾದಾರಣವಾಗಿ ವಿದ್ಯಾವಂತೆಯಾರಾಗಿದ್ದು, ಪ್ರಸಿದ್ಧಿಯಾಗಿ, ಉತ್ತಮ ಮಟ್ಟದ ಜೀವನವನ್ನು ನಡೆಸಿದರೆ ಬಹುಸಂಖ್ಯೆಯ ಸ್ತ್ರೀಯರು ಅಂಧಕಾರದ ಮಹದಾನಂದದಲ್ಲೇ ಮುಂದುವರೆದರು. ರಾಜ್ಯದಿಂದಾಗಲೀ ಅಥವಾ ಸಮಾಜದಿಂದಾಗಲೀ ಸ್ತ್ರೀಯರ ಸಾಮಾನ್ಯ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಯಾವುದೇ ಯೋಜಿತ ಕಾರ್ಯಕ್ರಮವು ಇರಲಿಲ್ಲ. ಹಾಗೆಯೇ ಸ್ತ್ರೀಯರೂ ಕೂಡ ಅವರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವ ಯಾವುದೇ ಪ್ರಯತ್ನವನ್ನಾಗಲಿ ಮಾಡಲಿಲ್ಲ ಹಾಗೂ ಆ ಹೋರಾಟ ಪ್ರಜ್ಞೆಯನ್ನೂ ತೋರಲಿಲ್ಲ

ಅಡಿ ಟಿಪ್ಪಣಿಗಳು

1. ಸ್ಟೈನ್.ಬಿ. ಪೆಸೆಂಟ್‌ಸ್ಟೇಟ್ ಪುಟ 464
2. ಎ.ಕ. ಸಂ.10, ಭಾ.ಪ. 10
3. ಎ.ಇಂ. ಸಂ. 38. ಪ್ಲಿಟ್ 3. 1965-66 ಪುಟ 633
4. ಉತ್ತರಹರಿವಮ ಪುಟ 76
5. ಬಾಣಭಟ್ಟ "ದಿ ಹರ್ಷಚರಿತ" ಉಚ್ವಾಸ. 1 ಪುಟ 3

ಗ್ರಂಥ ಋಣ

ಪ್ರಾಥಮಿಕ ಆಕರಗಳುತಿ

ಇನ್‌ಸ್ಕ್ರಿಪ್ಸನ್ಸ್ : ಎಫಿಗ್ರಾಫಿಕಲ್ ಪಬ್ಲಿಕೇಷನ್

1. ಆಂಧ್ರಪ್ರದೇಶ ಗೌವರ್ನಮೆಂಟ್ ಆರ್ಕೀಲಾಜಿಕಲ್ ಸೀರಿಸ್, ಹೈದರಾಬಾದ್ 1961,1962

2. ಆರ್ಕೀಲಾಜಿಕಲ್ ಸರ್ವೇ ಆಫ್ ಸೌತ್ ಇಂಡಿಯಾ

3. ಆನ್ಯುಯೆಲ್ ರಿಪೋರ್ಟ್ಸ್ ಆಫ್ ದಿ ಆರ್ಕಿಯೋಲೋಜಿಕಲ್ ಸರ್ವೇ ಆಫ್ ಇಂಡಿಯಾ -1887 ಆನ್‌ವರ್ಡ್ಸ್

4. ಅನುಯಲ್ ರಿಪೋರ್ಟ್ಸ್ ಆನ್ ದಿ ಕನ್ನಡ ರಿಸರ್ಚ್ ಇನ್ ಬಾಂಬೆ ಪ್ರೋವಿಯನ್ಸ್ 1939-40

5.ಆನುಯಲ್ ರಿಪೋರ್ಟ್ಸ್ ಆಫ್ ದಿ ಮೈಸೂರ್ ಆರ್ಕಿಯೋಲಾಜಿಕಲ್ ಡಿಪಾರ್ಟ್‌ಮೆಂಟ್ 1908

6.ಆನುಯಲ್ ರಿಪೋರ್ಟ್ಸ್ ಆಫ್ ದಿ ಸೌತ್ ಇಂಡಿಯನ್ ಎಫಿಗ್ರಫಿ, ಮದ್ರಾಸ್ 1987-1951

7.ಇನ್‌ಸ್ಕ್ರಿಪ್ಸನ್ ಆಫ್ ಆಂಧ್ರ ಪ್ರದೇಶ

8.ಇನ್‌ಸ್ಕ್ರಿಪ್ಸನ್ ಆಫ್ ಡೆಕನ್, ನಾಯಕ್

9. ಎ ಟೋಪೋಗ್ರಾಫಿಕಲ್ ಲೀಸ್ಟ್ ಆಫ್ ಇನ್‌ಸ್ಕ್ರಿಪ್ಸನ್ ಆಫ್ ದಿ ಮದರಾಸ್ ಪ್ರೆಸಿಡೆನ್ಸಿ, ಸಂಪುಟ I, II ಮತ್ತು III, ಮದ್ರಾಸ್ 1919 ಸಂ. ರಂಗಾಚಾರ್ಯ

10.ಎಫಿಗ್ರಫಿಯ ಇಂಡಿಕಾ, 1892 ಆನ್‌ವರ್ಡ್ಸ್

11.ಎಫಿಗ್ರಾಫಿಯಾ ಕರ್ನಾಟಕ, ಸಂಪುಟಗಳು 1-16

12. ಎ ಕಾರ್ಪಸ್ ಆಫ್ ಇನ್‌ಸ್ಕ್ರಿಪ್ಸನ್ ಇನ್ ಕನ್ನಡ ಡಿಸ್ಟ್ರಿಕ್ಟ್ ಆಫ್ ಹೈದರಾಬಾದ್ ಸ್ಟೇಟ್. ದೇಸಾಯಿ.ಪಿ.ಬಿ.ಹೈದರಾಬಾದ್ 1958

13. ಕರ್ನಾಟಕ ಇನ್‌ಸ್ಕ್ರಿಪ್ಸನ್ಸ್ ಸಂಪುಟಗಳು 1-5

14. ಕ್ರೊನೋಲೋಜಿಕಲ್ ಲೀಸ್ಟ್ ಆಫ್ ಇನ್‌ಸ್ಕ್ರಿಪ್ಸನ್ಸ್ ಆಫ್ ದಿ ಪುದುಕೊಟ್ಟೈ ಸ್ಟೇಟ್, 1929

15. ಟ್ರಾವನ್‌ಕೂರ್ ಆರ್ಕಿಯೋಲಾಜಿಕಲ್ ಸೀರೀಸ್

16. ತಿರುಮಲೈ-ತಿರುಪತಿ ದೇವಸ್ಥಾನಂ ಇನ್‌ಸ್ಕ್ರಿಪ್ಸನ್ಸ್, ಆರು ಸಂಪುಟಗಳು, ಮದ್ರಾಸ್ 1939 -51

17.ಧಾರಾವಾಡ ತಾಲ್ಲೂಕು ಇನ್‌ಸ್ಕ್ರಿಪ್ಸನ್ಸ್,

18. ನೆಲ್ಲೂರ್ ಡಿಸ್ಟ್ರಿಕ್ಟ್ ಇನ್‌ಸ್ಕ್ರಿಪ್ಸನ್ಸ್, 3ಸಂಪುಟಗಳು, ಬಟರ್‌ವರ್ತ್, ಮದರಾಸು 1905

19. ಪುದುಕೋಟ್ಟೈ ಸ್ಟೇಟ್ ಇನ್ಸ್ಕ್ರಿಪ್ಸನ್ಸ್, ಪುದುಕೋಟ್ಟೈ, 1929

20. ಬಾಂಬೆ-ಕರ್ನಾಟಕ ಇನ್ಸ್ಕ್ರಿಪ್ಸನ್ಸ್, 5 ಸಂಪುಟಗಳು

21.ಬೀಜಾಪುರ ತಾಲ್ಲೂಕು ಇನ್ಸ್ಕ್ರಿಪ್ಸನ್ಸ್

22.ಮ್ಯಾನ್ಯುಯೆಲ್ ಆಫ್ ದಿ ಅಡ್ಮಿನಿಸ್ಟ್ರೇಷನ್ ಆಫ್ ದಿ ಮದರಾಸ್ ಪ್ರೆಸಿಡೆನ್ಸಿ, ಸಂ..1

23.ರಿಪೋರ್ಟ್ ಆನ್ ದಿ ಇನ್ಸ್ಕ್ರಿಪ್ಸನ್ಸ್ ಆಫ್ ತಿರುಮಲ-ತಿರುಪತಿ ದೇವಸ್ಥಾನಂ ಸಂ.:ಸುಬ್ರಹ್ಮಣ್ಯ ಶಾಸ್ತ್ರಿ. ಎಸ್. ಮದರಾಸ್-1930

24.ವಿಜಯನಗರ ಇನ್ಸ್ಕ್ರಿಪ್ಸನ್ ಸಂ.I ಮತ್ತು II ಸಂ.:ಗೋಪಾಲ್.ಬಿ.ಆರ್.

25. ಸಮರೀಸ್ ಆಫ್ ದಿ ಇನ್ಸ್ಕ್ರಿಪ್ಸನ್ಸ್, 1943-44, 1949-50. ದೇಸಾಯಿ. ಪಿ.ಬಿ. ಧಾರಾವಾಡ, 1966

26.ಸೌತ್ ಇಂಡಿಯನ್ ಇನ್ಸ್ಕ್ರಿಪ್ಸನ್ಸ್, 1890 ಆನ್‌ವರ್ಡ್ಸ್

27.ಹಿಸ್ಟೋರಿಕಲ್ ಇನ್ಸ್ಕ್ರಿಪ್ಸನ್ಸ್ ಆಫ್ ಸದರನ್ ಇಂಡಿಯಾ, ಸೆವೆಲ್ ಅಂಡ್ ಕೃಷ್ಣಸ್ವಾಮಿ ಅಯ್ಯಾಂಗಾರ್, ಮದ್ರಾಸ್-1932

28. ಹೈದರಾಬಾದ್ ಆರ್ಕಿಯೋಲಾಜಿಕಲ್ ಸೀರೀಸ್, 1915ಆನ್ ವರ್ಡ್ಸ್

i) ಸಂಸ್ಕೃತ ಕೃತಿಗಳು

1.ಕೌಟಿಲ್ಯ ಅರ್ಥಶಾಸ್ತ್ರ-ಶಾಮ ಶಾಸ್ತ್ರಿ. ಆರ್. ಮೈಸೂರು 1960

2.ಗಂಗಾದೇವಿ, 'ಮಧುರ ವಿಜಯಂ'ಸಂ : ತಿರು ವೆಂಕಟಚಾರಿ.ಎಸ್. ಅಣ್ಣಾಮಲೈ ನಗರ, 1957

3. ತುಕ್ಕ, ತುಕ್ಕ ಪಂಚಕಂ

4.ತಿರುಮಲಾಂಬ, ವರದಾಂಬಿಕ ಪರಿಣಯಂ

5.ಮನು, 'ಧರ್ಮಶಾಸ್ತ್ರ'

6.ಸೋಮೇಶ್ವರ 'ಮನಸೊಲ್ಲಾಸ' ಸಂ.I -III, ಶ್ರೀ.ಗೋಂದೇಕರ್.ಜಿ.ಕೆ. ಬರೋಡ 1961

ii) ತೆಲುಗು ಕೃತಿಗಳು

1.ಕೃಷ್ಣದೇವರಾಯ, ಅಮುಕ್ತಮೌಲ್ಯದ, ಸಂ.ವಾವಿಲ್ಲ ರಾಮಶಾಸ್ತ್ರಿ, ಮದ್ರಾಸ್ -1930

2.ಗೋಪರಾಜು ಕೊರಮ್ಮೆ-ಸಿಂಹಾಸನದ್ವತ್ರಿಂಶಿಕ

3.ಪಿಲ್ಲಾಲಮೊರ್‍ರೈ ಪಿನ ವೀರಭದ್ರ -ಶೃಂಗಾರ ಶಾಕುಂತಲಂ

4.ಮಲ್ಲಣ ಪ್ರೌಢ ಕವಿ -ನಿಮಕ್ಕಾಂಗದ ಚರಿತಮಂ

5.ರಾಜನಾಥ ಡಿಂಡಿಮ, ಅಚ್ಯುತರಾಮಭ್ಯುದಯ, ಸಂ.ಕೃಷ್ಣಯ್ಯಾಂಗಾರ್.ಎ.ಎನ್.ಮದ್ರಾಸ್-1945

6. ವಿನುಕೊಂಡ ವಲ್ಲಭ ಮಾತ್ಯ - ಕ್ರಿಡಾಭಿ ರಾಮಂ

7.ವಿಶ್ವನಾಥ ರಾಯಂ ಸ್ಥಾನಪತಿ - ರಾಯವ ಚಕಮು, 1933

iii) ಕನ್ನಡ ಕೃತಿಗಳು

1.ಕನಕದಾಸ, 'ಮೋಹನ ತರಂಗಿಣಿ' ಸಂ.ಹಿರೇಮಠ.ಆರ್.ಎಸ್.1973

2. ಪುರಂದರ ದಾಸ 'ಕೃಷ್ಣಲೀಲ'ಸಂ.ಬುರ್ಲೆ ಬಂದುಮಾಧವ. ಧಾರಾವಡ 1965

1.ಹಿಲಿಯಟ್ ಅಂಡ್ ದಾಸನ್, ಹಿಸ್ಟರಿ ಆಫ್ ಇಂಡಿಯಾ ಅಸ್ ಟೋಲ್ಡ್ ಬೈ ಇಟ್ಸ್ ಒನ್ ಹಿಸ್ಟೋರಿಯನ್ಸ್ . 5ಸಂಪುಟಗಳು. ಲಂಡನ್ 1871

2.ದ ಬುಕ್ ಆಫ್ ದುರತ್ತ, ಬಾರ್ಬೋಸ, 2ಸಂಪುಟಗಳು-ಟ್ರಾನ್ಸ್ಲೇಟೆಡ್ ವಿತ್ ನೋಟ್ಸ್ ಬೈ ಲಾಂಗ್ಸ್ ವರ್ಕ್ ಡ್ಯಾನ್ ಸನ್, ಲಂಡನ್ 1918

3.ದ ಟ್ರಾವೆಲ್ಸ್ ಆಫ್ ಇಬ್ನ ಬಟೂಟ - ಗಿಬ್ಬ.ಎಚ್.ಎ.ಆರ್.ಡೆಫ್ರೆಮರಿ. ಸೀ. ಮತ್ತು ಸಾಂಗ್ವ್ಯೂ ಸೆಟ್ಜ್ ಬೀ.ಅರ್ (ಸಂ)ಕೇಂಬ್ರಿಡ್ಜ್-1971

4. ಪ್ರವಾಸಿಕಂಡ ಇಂಡಿಯಾ -ನಾಗೇಗೌಡ.ಎಚ್.ಎಲ್.

5.ಪೆಟ್ರೋ ಡೆಲ್ಲಾವೆಲ್ಲಿ, ದ ಟ್ರಾವೆಲ್ಸ್ ಆಫ್ ಪೆಟ್ರೋಡೆಲ್ಲಾವೆಲ್ಲಿ ಟು ಇಂಡಿಯಾ, - ದಿ ಹಕ್ಲುಯತ್ ಸೊಸೈಟಿ

6.ಶಾಸ್ತ್ರಿ.ಕೆ.ಎ.ಎನ್., ಫಾರಿನ್ ನೋಟಿಸನ್ ಆಫ್ ಸೌತ್ ಇಂಡಿಯಾ, ಮದ್ರಾಸ್ 1939

7. ಇಸ್ ಪಿಲಿಗ್ರಿಮ್ಸ್ ಸಂ.3ಮತ್ತು 10 - ಪರ್ಚೇಸ್

ದ್ವಿತೀಯ ಆಕರಗಳು

1.ಅಚ್ಯುತ್‌ರಾವ್ - ಎ ಹಿಸ್ಟರಿ ಆಫ್ ಆಂಧ್ರ ಲಿಟರೇಚರ್ ಇನ್ ವಿಜಯನಗರ ಎಂಪೈರ್

2.ಅನ್ನೆಟ್ಟೆ ಸುಸಾನ್ನ ಬೆವರಿಡ್ಜ್ - 'ಬಾಬರ್ ನಾಮ', ನ್ಯೂಡೆಲ್ಲಿ-1970

3. ಅಪ್ಪಾದೊರೈ.ಎ.: ಎಕೊನಾಮಿಕ್ಸ್ ಕಂಡೀಷನ್ ಇನ್ ಸದರನ್ ಇಂಡಿಯಾ (1000-1500.ಕ್ರಿ.ಶ.)ಮದ್ರಾಸ್,1936.

4.ಅಬ್ಬೆದುಬ್ಬೆ : ಹಿಂದೂ ಮಾನರ್ಸ್, ಕಸ್ಟಂ ಟು ಸೆರೆಮನೀಸ್, ಲಂಡನ್ -1897

5. ಅಮನ್ನಾರ್ಲ, ಗೋಪಾಲರಾವ್: ಲೇಪಾಕ್ಷಿ, ಹೈದರಾಬಾದ್ -1969

6. ಆಯ್ಯಾಂಗಾರ್.ಎಸ್.ಕೆ.: ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ಮದ್ರಾಸ್ 1924

7.ಅಲ್ಟೆಕರ್.ಎ.ಎಸ್.: ಎಜುಕೇಷನ್ ಇನ್ ಏನ್ಶಿಯೆಂಟ್ ಇಂಡಿಯಾ, ಬನಾರಸ್ - 1929 ಮತ್ತು ಫ್ರಂ ಫ್ರೀ-ಹಿಸ್ಟೋರಿಕ್ ಟೈಮ್ಸ್ ಟು ದ ಪ್ರಸೆಂಟ್ ಡೇ , ಬನಾರಸ್ -1956

8.ಏಕಾಂಬರಂ.ಸಿ.ಎನ್. - 'ಕೃಷ್ಣದೇವರಾಯ ಇಸ್ ಲೈಫ್ ಅಂಡ್ ಟೈಂ' ಮದ್ರಾಸ್ - 1911

9.ಕರ್ಮರ್ಕರ್.ಎ.ಪಿ. 'ಎ ಕಲ್ಚರಲ್ ಹಿಸ್ಟರಿ ಆಫ್ ಕರ್ನಾಟಕ'ಧಾರವಾಡ -1947

10.ಕಾನೆ. ಪಿ.ವೀ. : 'ಹಿಸ್ಟರಿ ಆಫ್ ಧರ್ಮಶಾಸ್ತ್ರ.' ಸಂ.II ಪೂನಾ -1941

11.ಕಾಮೇಶ್ವರರಾವ್ : ಸೆಲೆಕ್ಟೆಡ್ ವಿಜಯನಗರ ಟೆಂಪಲ್ಸ್ ಆಫ್ ರಾಯಲಿಸಂ.1926

12. ಕಾಮತ್, ಜ್ಯೋತ್ಸ್ನಾ: ಸೋಸಿಯಲ್ ಲೈಫ್ ಇನ್ ಮೆಡಿವೆಲ್ ಕರ್ನಾಟಕ, ದೆಹಲಿ 1980

13. ಕೃಷ್ಣಮೂರ್ತಿ. ಕೆ. : 'ಹೇರ್ ಸ್ಟೈಲ್ಸ್ ಇನ್ ಏನ್ಶಿಯೆಂಟ್ ಇಂಡಿಯನ್ ಆರ್ಟ್' ದೆಹಲಿ-1982

14.ಕೃಷ್ಣರಾವ್.ಎಂ.ವಿ. 'ದಿ ಗಂಗಾಸ್ ಆಫ್ ತಲಕಾಡ್' ಮದ್ರಾಸ್-1941ಮತ್ತು 'ಸ್ಟಡೀಸ್ ಇನ್ ಕೌಟಿಲ್ಯ' ದೆಹಲಿ -1958

15.ಕೃಷ್ಣಸ್ವಾಮಿ.ಎ.ಎಸ್. : 'ಎ ಹಿಸ್ಟರಿ ಆಫ್ ತಿರುಪತಿ' ಮದ್ರಾಸ್-1941 ಮತ್ತು 'ದಿ ತಮಿಳ್ ಕಂಟ್ರಿ ಅಂಡರ್ ವಿಜಯನಗರ' ಅಣ್ಣಾಮಲೈ ನಗರ -1964

16.ಕೋಯಿಲೊ, ವಿಲಿಯಂ : 'ದ ಹೊಯ್ಸಳ ವಂಶ' ಬಾಂಬೆ - 1950

17. ಗುಪ್ತ.ಎಸ್.ಪಿ. : " ಕಾಸ್ಟುಮ್ಸ್, ಟೆಕ್ಸ್‌ಟೈಲ್ಸ್, ಕಾಸ್ಮೆಟಿಕ್ಸ್ ಇನ್ ಏನ್ಸಿಯಂಟ್ ಅಂಟ್ ಮೆಡಿವೆಲ್ ಇಂಡಿಯಾ " ದೆಹಲಿ 1973

18.ಗುರು ರಾಜಚಾರ್.ಎಸ್. : ಸಮ್ ಅಸ್ಪೆಕ್ಟ್ಸ್ ಆಫ್ ಸೋಸಿಯಲ್ ಅಂಡ್ ಎಕಾನಾಮಿಕ್ ಲೈಫ್ ಇನ್ ಕರ್ನಾಟಕ (1000-1300.A.D) ಮೈಸೂರು -1972

19.ಗುರುರಾಜ ಭಟ್ಟ.ಪಿ. : ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್ ಮಣಿಪಾಲ್ - 1975

20.ಚಾಂಬೆಲ್, ಜೋಸೆಫ್ : 'ದ ಆರ್ಟ್ಸ್ ಆಫ್ ಇಂಡಿಯನ್ ಏಷಿಯಾ' ನ್ಯೂಯಾರ್ಕ್ - 1960

21.ಚಿಟ್ನಿಸ್.ಕೆ.ಎನ್. : ಸೋಸಿಯೋ - ಎಕಾನಾಮಿಕ್ ಆಫ್ ಮೆಡಿವೆಲ್ ಇಂಡಿಯಾ, ಪೂನಾ 1979

22. ಜಗದೇಶ್ ಐಯ್ಯಾರ್.ಪಿ.ವಿ. : 'ಸೌತ್ ಇಂಡಿಯನ್ ಕಸ್ಟಂ',ಮದ್ರಾಸ್ - 1925

23. ಜವಹಾರ್‌ಲಾಲ್ ನೆಹರು : ಡಿಸ್ಕವರಿ ಆಫ್ ಇಂಡಿಯಾ, ಬಾಂಬೆ - 1961

24.ಜೀನ್ ನಂದನ್ : ಇಂಡಿಯನ್ ಟೆಂಪಲ್ಸ್ ಅಂಡ್ ಕಲ್ಚರಲ್, ಲಂಡನ್ : 1959

25. ಡೆರೆಟ್ಟ್ : 'ದ ಹೊಯ್ಸಳಾಸ್ ಆಕ್ಸ್‌ಫರ್ಡ್ 1957

26. ತಾಪರ್.ಡಿ.ಆರ್. : ಲೂನ್ಸ್ ಇನ್ ಬ್ರಾನ್ಸ್, ಬಾಂಬೆ-1961

27.ತಾರಾ ಆಲಿಬೇಗ್ : ಇಂಡಿಯನ್ ವಿಮೆನ್ ಪವರ್, ದೆಹಲಿ -1976

28.ಥಾಮಸ್.ಪಿ.: ಇಂಡಿಯನ್ ವಿಮೆನ್ ಥ್ರೂ ದಿ ಏಜೆಸ್, ನ್ಯೂಯಾರ್ಕ್ - 1964

29.ದಾಸ್.ಆರ್.ಎಂ. : ವಿಮೆನ್ ಇನ್ ಮನು ಅಂಡ್ ಹಿಸ್ ಸೆವೆನ್ ಕಾಮೆಂಟೇಟರ್ಸ್, ಬಿಹಾರ -1962

30.ದಿವಾಕರ್.ಆರ್.ಆರ್.: ಕರ್ನಾಟಕ ಥ್ರೂ ದಿ ಏಜೆಸ್, ಬೆಂಗಳೂರು - 1968

31.ದೇವಕೀ ಜೈನ್: ಇಂಡಿಯನ್ ವಿಮೆನ್, ನ್ಯೂಡೆಲ್ಲಿ - 1975

32.ದೇವಕುಂಜರಿ.ಡಿ. 'ಹಂಪಿ' ನ್ಯೂಡೆಲ್ಲಿ - 1970

33.ದೇಸಾಯಿ.ಪಿ.ಬಿ.: ಹಿಸ್ಟರಿ ಆಫ್ ಕರ್ನಾಟಕ, ಧಾರಾವಾಡ - 1970

34.ನರಸಿಂಹಮೂರ್ತಿ: 'ದ ಕಾಯ್ನ್ಸ್ ಆಫ್ ಕರ್ನಾಟಕ' ಮೈಸೂರು -1975

35.ನಾಗಸ್ವಾಮಿ.ಆರ್.: ಸೌತ್ ಇಂಡಿಯನ್ ಸ್ಟಡೀಸ್, ಸಂ.II, ಮದ್ರಾಸ್ - 1979

36.ನಿಗಂ.ಎಮ್.ಎಲ್.: ಸ್ಕಲ್ಚರಲ್ ಆರ್ಟ್ಸ್ ಆಫ್ ಆಂಧ್ರ, ದೆಹಲಿ -1980

37.ನೀಲಕಂಠ ಶಾಸ್ತ್ರೀ.ಕೆ.ಎ.: ಹಿಸ್ಟರಿ ಆಫ್ ಸೌತ್ ಇಂಡಿಯಾ, ಬನಾರಸ್ -1956 ಮತ್ತು ಫಾರೀನ್ ನೋಟೀಸಸ್ ಆಫ್ ಸೌತ್ ಇಂಡಿಯಾ, ಮದ್ರಾಸ್ - 1939

38.ನೋಬೋರು ಕರಸ್ಮೀಯ: ಸೌತ್ ಇಂಡಿಯನ್ ಹಿಸ್ಟರಿ ಅಂಡ್ ಸೋಸೈಟಿ, ಸ್ಟಡೀಸ್ ಫ್ರಂ ಇನ್‌ಸ್ಕ್ರಿಪ್ಷನ್ಸ್(550-1800.A.D)ದೆಹಲಿ

39.ಪಂಚಮುಖಿ.ಆರ್.ಎಸ್. : ಅರ್ಕಿಯೋಲಾಜಿ ಆಫ್ ಕರ್ನಾಟಕ, ಧಾರವಾಢ-1953

40.ಪ್ರಭಾತ್ ಮುಖರ್ಜಿ : ದಿ ಹಿಸ್ಟರಿ ಗಜಪತಿ, ದಿ ಕಿಂಗ್ಸ್ ಆಫ್ ಒರಿಸ್ಸಾ, ಕಟಕ್-1981

41ಪತಿ.ವೀ.ಪಿ. : ದಿ ಫಾಸ್ಟ್ ಗ್ಲೋರಿ ಆಫ್ ಹಂಪಿ, ಹಂಪಿ-1982

42.ಪರ್ಸಿಬ್ರೌನ್ : ಇಂಡಿಯನ್ ಆರ್ಕಿಟೆಕ್ಚರ್, ಬಾಂಬೆ-1971

43.ಫಣಿಕ್ಕರ್.ಕೆ.ಎಂ. : ಎ ಸರ್ವೇ ಆಫ್ ಇಂಡಿಯನ್ ಹಿಸ್ಟರಿ, ದೆಹಲಿ-1947

44.ಪಾಂಡೇ.ಎ.ಬಿ. : ಸೋಸೈಟಿ ಅಂಡ್ ಗೌರ್‍ನಮೆಂಟ್ ಇನ್ ಮೆಡಿವೆಲ್ ಇಂಡಿಯಾ, ಅಲಹಾಬಾದ್ - 1965.

45.ಬರ್ತ್.ಎ. : ರಿಲಿಜೀಯನ್ ಆಫ್ ಇಂಡಿಯಾ, ಲಂಡನ್-1906

46.ಬಸವರಾಜ.ಕೆ.ಆರ್. : ಹಿಸ್ಟರಿ ಅಂಡ್ ಕಲ್ಚರ್ ಆಫ್ ಕರ್ನಾಟಕ, ಧಾರಾವಾಡ-1984ಮತ್ತು ದಿ ವಿಜಯನಗರ ಅರ್ಬ್ಯಾನಿಸಿಟಿ ಹೊಸಪೇಟೆ - 1978

47.ಭಾಷ್ಯಂ.ಎ.ಎಲ್.: ದ ವಂಡರ್ ದಟ್ ವಾಸ್ ಇಂಡಿಯಾ, ನ್ಯೂಯಾರ್ಕ್ -1954

48.ಬಿಲ್ಲಿಂಗ್ಟನ್ ಮೇ ಬಿ ಫ್ರಾನ್ಸಿಸ್ : ವಿಮೆನ್ ಇನ್ ಇಂಡಿಯಾ, ನ್ಯೂಡೆಲ್ಲಿ -1973

49.ಬುಕನನ್: "ಎ ಜರ್ನೀ ಥ್ರೂ ಕಲ್ಕತ್ತಾ-ಮೈಸೂರು ಅಂಡ್ ಮಲಬಾರ್" ಲಂಡನ್ -1802

50.ಬ್ರೌನ್.ಸಿ.ಜೆ.: 'ದ ಕಾಯ್ನ್ಸ್ ಆಫ್ ಇಂಡಿಯಾ' ಲಂಡನ್-1922

51.ಮಹಾಲಿಂಗಂ.ಟಿ.ವಿ.: ಅಡ್‌ಮಿನಿಸ್ಟ್ರೇಷನ್ ಅಂಡ್ ಸೋಸಿಯಲ್ ಲೈಫ್ ಅಂಡರ್ ವಿಜಯನಗರ ಸಂಪುಟ Iಮತ್ತುII, ಮದ್ರಾಸ್ - 1975 ಮತ್ತು ಸೌತ್ ಇಂಡಿಯನ್ ಪಾಲಿಟಿಕ್ಸ್, ಮದ್ರಾಸ್ 1951

52.ಮಜುಂದಾರ್.ಆರ್.ಕೆ. : 'ಹಿಸ್ಟರಿ ಆಫ್ ಸೌತ್ ಇಂಡಿಯಾ' ದೆಹಲಿ-1980

53.ಮಜುಂದಾರ್.ಆರ್.ಸಿ. : "ಗ್ರೇಟ್ ವಿಮೆನ್ ಆಫ್ ಇಂಡಿಯಾ", ಕಲ್ಕತ್ತಾ -1953

54.ಮಾರ್ಕ್ ವಿಲ್ಕ್ಸ್ : ಹಿಸ್ಟರಿ ಆಫ್ ಮೈಸೂರು, ಮೈಸೂರು-1930

55.ಮಾರ್ಗರೇಟ್ ಕೋರಾಮ್ಯಾಕ್ : ದ ಹಿಂದೂ ವಿಮೆನ್, ಲಂಡನ್ -1953

56.ಮಾರ್ಗರೇಟ್ ಮ್ಯಾಕ್ನಿಕೋಲ್ : ದ ಹೆರಿಟೇಜ್ ಆಫ್ ಇಂಡಿಯನ್ ಪೋಯಮ್ಸ್, ಲಂಡನ್ 1953

57.ಮುಗಳಿ.ಆರ್.ಎನ್.: 'ದ ಹೆರಿಟೇಜ್ ಆಫ್ ಕರ್ನಾಟಕ' ಬೆಂಗಳೂರು -1946

58.ಮುತ್ತಣ್ಣ.ಪಿ.ಎಂ. : ಹಿಸ್ಟರಿ ಆಫ್ ಕರ್ನಾಟಕ, ಮೈಸೂರು -1962

59.ಮೇಜರ್.ಆರ್.ಎಚ್. : ಇಂಡಿಯಾ ಇನ್ ಫಿಫ್ಟೀನ್ತ್ ಸೆಂಚುರಿ, ಲಂಡನ್ -1925

60.ರಮೇಶ್.ಕೆ.ವಿ. : ಎ ಹಿಸ್ಟರಿ ಆಫ್ ಸೌತ್ ಕೆನರಾ. ಧಾರವಾಢ -1970

61.ರಮೇಶನ್.ಎನ್. : ಕ್ಯಾಟಲಾಗ್ ಆಫ್ ದಿ ವಿಜಯನಗರ ಕಾಯ್ನ್ಸ್ ಆಫ್ ಆಂಧ್ರ ಪ್ರದೇಶ, ಹೈದರಾಬಾದ್ -1962

62.ರಾಜಶೇಖರ.ಎಸ್. : "ಕರ್ನಾಟಕ ಆರ್ಕಿಟೆಕ್ಚರ್" ಧಾರವಾಡ-1985

63.ರಾಪ್ಸೆನ್.ಎ.ಜೆ. : 'ಇಂಡಿಯನ್ ಕಾಯ್ನ್ಸ್' ವಾರಾಣಾಸಿ-1969

64.ರಾಮಚಂದ್ರನ್ : ರಿಡಿರಿಂಗ್ಸ್ ಇನ್ ಸೌತ್ ಇಂಡಿಯನ್ ಹಿಸ್ಟರಿ, ನ್ಯೂಡೆಲ್ಲಿ-1977

65.ರಾಮಚಂದ್ರಯ್ಯ ಓರುಗೌಚಿ: ಸ್ಟಡೀಸ್ ಆನ್ ಕೃಷ್ಣದೇವರಾಯ ಆಫ್ ವಿಜಯನಗರ ಆಂಧ್ರ, ವಾಲ್ಟೈರ್-1953

66.ರಾಮ ಶರ್ಮ.ಎಮ್.ಎಚ್. : ದಿ ಹಿಸ್ಟರಿ ಆಫ್ ದ ವಿಜಯನಗರ ಎಂಪೈರ್, ಸಂ.I ಮತ್ತು II, ಬಾಂಬೆ.

67.ರೈಸ್.ಬಿ.ಎಲ್. : ಮೈಸೂರ್ ಅಂಡ್ ಕೂರ್ಗ್ ಫ್ರಂ ದಿ ಇನ್ಸ್ಕ್ರಿಪ್ಷನ್ಸ್ ಲಂಡನ್-1909

68.ರೋತ್ ಫೆಲ್ಡ್, ಒಟ್ಟೊ : ವಿಮೆನ್ ಇನ್ ಇಂಡಿಯಾ, ಬಾಂಬೆ -1929

69. ವೆಂಕಟರತ್ನಂ.ಎ.ವಿ. : ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ದಿ ವಿಜಯನಗರ ಎಂಪೈರ್, ಮೈಸೂರು-1972

70.ವೆಂಕಟರಮಣಪ್ಪ.ಎಂ.ಎನ್. : ಸೌತ್ ಇಂಡಿಯನ್ ಹಿಸ್ಟರಿ, ದೆಹಲಿ-1975

71.ವೆಂಕಟರಮಣಯ್ಯ. ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ಥರ್ಡ್ ಡೈನಾಸ್ಟಿ ಆಫ್ ವಿಜಯನಗರ, ಮದ್ರಾಸ್-1935.

72.ವಸುಂಧರ ಪಿಲಿಯೊ ಜಾಟ್ : ದ ಟೆಂಪಲ್ ಡಿ ತಿರುಮನ್ ಕೈಯಾಳ್‌ವರ್. ಎ. ಹಂಪಿ, ಪಾಂಡಿಚೇರಿ-1979 ಮತ್ತು ದಿ ವಿಜಯನಗರ ಎಂಪೈರ್, ನ್ಯೂಡೆಲ್ಲಿ-1977

73.ವಿಲ್ ಡ್ಯೂರಾಂಟ್ : ದಿ ಸ್ಟೋರಿ ಆಫ್ ಸಿವಿಲೈಜೇಷನ್ ಭಾಗ-I, ನ್ಯೂಯಾರ್ಕ್-1954

74.ವೈಟ್ ಇ.ಎಂ. : ವಿಮೆನ್ ಇನ್ ವರ್ಲ್ಡ್ ಹಿಸ್ಟರಿ, ಅರ್ ಪ್ಲೇಸ್ ಇನ್ ದಿ ಗ್ರೇಟ್ ರಿಲಿಜೀಯನ್-1924

75.ವೊಲ್‌ಸೇಲಿ ಐಗ್ : ದಿ ಕೇಂಬ್ರಿಡ್ಜ್ ಸಾರ್ಟರ್ ಹಿಸ್ಟರಿ ಆಫ್ ಇಂಡಿಯಾ-1934

76.ಶರ್ಮಾ.ಆರ್.ಎನ್. : 'ಏನ್ಸಿಯೆಂಟ್ ಇಂಡಿಯಾ ಆಕಾರ್ಡಿಂಗ್ ಟು ಮನು' ದೆಹಲಿ-1980

77.ಶರ್ಮಾ.ಎಸ್.ಪಿ. : ಜೈನಿಸಂ ಅಂಡ್ ಕರ್ನಾಟಕ ಕಲ್ಚರ್, ಧಾರಾವಾಡ-1940

78. ಶಿವಣ್ಣ.ಕೆ.ಎಸ್. : ಲ್ಯಾಂಡ್ ಪೆಸೆಂಟ್ಸ್ ಅಂಡ್ ಪೀಪಲ್ ಆಫ್ ಮೆಡಿವೆಲ್ ಕರ್ನಾಟಕ, ಬೆಂಗಳೂರು-1986

79.ಶಿವರಾಮ ಮೂರ್ತಿ.ಸಿ. : ದ ಇಂಡಿಯನ್ ಪೇಟಿಂಗ್ಸ್ , ದೆಹಲಿ - 1970

80.ಶ್ರೀದೇವಿ.ಎಸ್. : ಎ ಸೆಂಚುರಿ ಆಫ್ ಇಂಡಿಯನ್ ವಿಮೆನ್‌ಹುಡ್, ಮೈಸೂರು -1965

81.ಶ್ರೀಕಂಠಯ್ಯ.ಎಸ್. : ಫೌಂಡರ್ ಆಫ್ ವಿಜಯನಗರ, ಬೆಂಗಳೂರು-1938

82.ಶ್ರೀನಿವಾಸ ಚಾರಿ.ಎಸ್.ಎಸ್. : ದ ವಿಜಯನಗರ ಎಂಪೈರ್, ಮದ್ರಾಸ್-1943

83.ಶ್ರೀನಿವಾಸ್.ಪಿ.ಆರ್. : ದ ಇಂಡಿಯನ್ ಟೆಂಪಲ್ ಆರ್ಟ್ ಅಂಡ್ ಆರ್ಕಿಟೆಕ್ಚರ್, ಮೈಸೂರು - 1982 ಮತ್ತು ಬ್ರೋಂಜಸ್ ಆಫ್ ಸೌತ್ ಇಂಡಿಯಾ 3 ಸಂಪುಟಗಳು, ಮದ್ರಾಸ್-1963

84.ಶ್ರೀನಿವಾಸಮೂರ್ತಿ.ವೈ. : ಸ್ಟಡೀಸ್ ಇನ್ ದಿ ಹಿಸ್ಟರಿ ಆಫ್ ತೆಲುಗ ಕಂಟ್ರಿ ಡುರಿಂಗ್ ವಿಜಯನಗರ ಪಿರಿಯಡ್, ಧಾರವಾಡ -1973

85.ಶ್ರೀನಿವಾಸ ರಿತ್ತಿ : ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ ಅಂಡ್ ಕಲ್ಚರ್, ಧಾರವಾಡ -1971

86.ಶರ್ಮಾ, ಶ್ರೀರಾಮ.ಪಿ. : ಸಾಳ್ವ ಡೈನಾಸ್ಟಿ ಆಫ್ ವಿಜಯನಗರ, ಹೈದರಾಬಾದ್ -1979

87.ಷೇಕ್ ಅಲಿ.ಬಿ. : ವೆಸ್ಟರನ್ ಗಂಗಾಸ್ ಆಫ್ ತಲಕಾಡ್, ಮೈಸೂರು -1976

88.ಸರ್ಕಾರ್.ಡಿ.ಸಿ. : ಸ್ಟಡೀಸ್ ಇನ್ ಇಂಡಿಯನ್ ಕಾಯ್ನ್ಸ್, ದೆಹಲಿ -1968

89.ಸರ್ವೇಪಾಲ್ : ದಿ ಕಲ್ಚರಲ್ ಹೆರಿಟೇಜ್ ಆಫ್ ಇಂಡಿಯಾ, ಕಲ್ಕತ್ತಾ - 1937

90.ಸಾಲತೊರೆ : ಸೋಸಿಯಲ್ ಅಂಡ್ ಪೊಲಿಟಿಕಲ್ ಲೈಫ್

91.ಸಾಲತೊರೆ : ವಿಜಯನಗರ ಆರ್ಟ್ಸ್, ದೆಹಲಿ-1982

92.ಸ್ವಾಮಿನಾಥನ್ : ದ ನಾಯಕ್ಸ್ ಆಫ್ ಇಕ್ಕೇರಿ, ಮದರಾಸು -1957

93.ಸಿವೆಲ್ ಅಂಡ್ ಅಯ್ಯಾಂಗಾರ್: ಹಿಸ್ಟೋರಿಕಲ್ ಇನ್‌ಸ್ಕ್ರಿಪ್ಸನ್ಸ್ ಆಫ್ ಸದರನ್ ಇಂಡಿಯಾ-1932

94.ಸಿವೆಲ್, ರಾಬರ್ಟ್ : ಎ ಫರ್‌ಗಟನ್ ಎಂಪೈರ್, ನ್ಯೂಡೆಲ್ಲಿ - 1989

95.ಸುಬ್ರಹ್ಮಣಿಯನ್.ಎನ್. : ಹಿಸ್ಟರಿ ಆಫ್ ತಮಿಳುನಾಡು, ಮಧುರೈ - 1978

96.ಸ್ಮಿತ್.ವಿ.ಎ. : ಕಾಯ್ನ್ಸ್ ಆಫ್ ಏನ್ಸಿಯೆಂಟ್ ಇಂಡಿಯಾ, ಸಂ.I, ವಾರಾಣಾಸಿ -1972

97.ಸುಧಾಕರ್ ಚಟ್ಟೋಪಾಧ್ಯಾಯ : ಸೋಸಿಯೆಲ್ ಲೈಫ್ ಇನ್ ಏನ್ಸಿಯೆಂಟ್ ಇಂಡಿಯಾ, ಕಲ್ಕತ್ತ-1965

98.ಸುಬ್ರಹ್ಮಣ್ಯ ಅಯ್ಯಾರ್.ಕೆ.ವಿ. : ಹಿಸ್ಟೋರಿಕಲ್ ಸ್ಕೆಚಸ್ ಆಫ್ ಏನ್ಸಿಯೆಂಟ್ ಇಂಡಿಯಾ ಡೆಕನ್ 2 ಸಂಪುಟಗಳು, ಕೊಯಂಬತ್ತೂರು -1967

99.ಸೂರ್ಯನಾರಾಯಣ : ಎ ಹಿಸ್ಟರಿ ಆಫ್ ವಿಜಯನಗರ ದ ನೆವರ್ ಟು ಬಿ ಫರ್ಗಾಟನ್ ಎಂಪೈರ್, ಮದರಾಸು - 1905

100.ಸೆಟ್ಟರ್.ಎಸ್. : ಇನ್ವೈಟಿಂಗ್ ಡೆತ್, ಧಾರವಾಡ -1986

101. ಹೆರಾಸ್.ಹೆಚ್. : ಸೌತ್ ಇಂಡಿಯಾ ಅಂಡರ್ ದಿ ವಿಜಯನಗರ ಎಂಪೈರ್ - ದ ಅರವೀಡು ಡೈನಾಸ್ಟಿಸಂI & IIನ್ಯೂಡೆಲ್ಲಿ - 1980

1.ಆಲೂರು ವೆಂಕಟರಾಯ.ಡಿ. : ಕರ್ನಾಟಕ ಗತವೈಭವ, ಧಾರವಾಡ -1974

2.ಆಚಾರ್ಯ.ಎಸ್.ಎಸ್. : ಶ್ರೀ.ಕೃಷ್ಣದೇವರಾಯನ ದಿನಚರಿ, ಬೆಂಗಳೂರು -1983

3.ಇಳೇಗಾರ, ಚನ್ನಾಕ : 'ಮಾಸ್ತಿಕಲ್ಲು' ಧಾರವಾಡ -1977

4.ಕಲ್ಬುರ್ಗಿ.ಎಂ.ಎಂ. : 'ಸಮಾಧಿ - ಬಂಧನ',"ವೀರ ಮರಣ ಸ್ಮಾರಕಗಳು" ಧಾರವಾಡ -1980

5.ಕಾಮತ್, ಸೂರ್ಯನಾಥ : 'ವಿಜಯನಗರ ಸಾಮ್ರಾಜ್ಯ', ಬೆಂಗಳೂರು

6.ಕುವೆಂಪು 'ಸವಿನೆನಪು', ಮೈಸೂರು - 1970

7.ಕೃಷ್ಣರಾವ್.ಎಂ.ವಿ. : 'ಕರ್ನಾಟಕ ಇತಿಹಾಸ ದರ್ಶನ' ಬೆಂಗಳೂರು

8.ಕೃಷ್ಣರಾವ್.ಯು.ಎನ್. : 'ನೃತ್ಯಕಲೆ' ಬೆಂಗಳೂರು - 1980

9.ಕೃಷ್ಣಶಾಸ್ತ್ರಿ : 'ಅಭಿನಂದನೆ' ಮೈಸೂರು - 1957

10.ಕೋದಂಡ.ಎಸ್.ಬಿ. : ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ - ಮುಸ್ಲಿಂ ಬಾಂಧವ್ಯ, 1966

11. ಗುರುರಾಯರು, ಕಲಮನದೆ : ವಿಜಯನಗರ ಸಾಮ್ರಾಜ್ಯ, ಹುಬ್ಬಳ್ಳಿ - 1963

12.ಚಿದಾನಂದ ಮೂರ್ತಿ : 'ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಮೈಸೂರು - 1966

13.ತಿಮ್ಮಣ್ಣ ಕವಿ : ಕರ್ನಾಟಕ ಕೃಷ್ಣರಾಯ ಭಾರತ, ಬೆಂಗಳೂರು -1979

14.ದೇಸಾಯಿ.ಪಿ.ಬಿ. : ಕನ್ನಡ ನಾಡಿನ ಮಿಂಚಿದ ಮಹಿಳೆಯರು, ಧಾರವಾಡ -1938

15.ನರಸಿಂಹಾಚಾರ್ : ಕರ್ನಾಟಕ ಕವಿಚರಿತೆ ಸಂ I ಬೆಂಗಳೂರು - 1961

16.ನಿರುಪಮ : ಶ್ರೀಕೃಷ್ಣದೇವರಾಯನ ಅಮುಕ್ತಮೌಲ್ಯದ, ಬೆಂಗಳೂರು - 1979

17.ಪಂಚಮುಖಿ.ಆರ್.ಎಸ್. : ಕರ್ನಾಟಕ ಶಿಲಾಶಾಸನಗಳು, ಧಾರವಾಡ -1953

18.ಮುದ್ದಾಚಾರಿ.ಬಿ. : ದಕ್ಷಿಣ ಭಾರತದ ಇತಿಹಾಸ, ಮೈಸೂರು - 1974

19.ರಂಗಸ್ವಾಮಯ್ಯ.ಜಿ.ಆರ್. : ಕರ್ನಾಟಕದ ಸಂಕ್ಷಿಪ್ತ ಚರಿತ್ರೆ, ಮೈಸೂರು -1971

20.ರಘುನಾಥ ಭಟ್ಟ.ಎಚ್.ಆರ್. : ಕರ್ನಾಟಕ ಶಾಸನ ಕಲೆ, ಮೈಸೂರು -1977

21.ವಸುಂಧರಾ ಪಿಲಿಯೊ ಜಾಟ್ : 'ಅಳಿದುಳಿದ ಹಂಪೆ' ಬೆಂಗಳೂರು - 1982

22.ಶ್ರೀಕಂಠಯ್ಯ.ಬಿ.ಎಂ. : ಕನ್ನಡ ನಾಡಿನ ಚರಿತ್ರೆ, ಮೈಸೂರು -1941

23.ಶ್ರೀಕಂಠಯ್ಯ.ಕೆ. : ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚರಿತ್ರೆ, ಮೈಸೂರು - 1983

24.ಶೇಷ ಶಾಸ್ತ್ರೀ .ಆರ್. : 'ಕರ್ನಾಟಕದ ವೀರಗಲ್ಲುಗಳು ' ಬೆಂಗಳೂರು -1962

25.ಸರೋಜಿನಿ ಮಹರ್ಷಿ : 'ಕರ್ನಾಟಕದ ಕವಿಯತ್ರಿಯರು' ಧಾರವಾಡ - 1986

1. ಹೈದರಾಬಾದ್ ಗೆಜೆಟೀಯರ್
2. ಮದ್ರಾಸ್ ಗೆಜೆಟೀಯರ್
3. ಬಳ್ಳಾರಿ ಜಿಲ್ಲಾ ಗೆಜೆಟೀಯರ್
4. ಮೈಸೂರ್ ಗೆಜೆಟೀಯರ್
5. ರಾಯಚೂರ್ ಜಿಲ್ಲಾ ಗೆಜೆಟೀಯರ್
6. ಗುಲ್ಬರ್ಗ ಜಿಲ್ಲಾ ಗೆಜೆಟೀಯರ್
7. ಎನ್‌ಸೈಕ್ಲೋಪಾಡಿಯಾ ಬ್ರಿಟಾನಿಕಾ
8. ಎನ್‌ಸೈಕ್ಲೋಪಾಡಿಯಾ ಆಫ್ ದಿ ಸೋಷಿಯಲ್‌ಸೈನ್ಸ್‌ಷ್
9. ಎ. ಕೆನಾರಿಸ್ ಇಂಗ್ಲೀಷ್ ಡಿಕ್ಸ್‌ನರಿ 3 ಸಂಪುಟಗಳು(ಮಂಗಳೂರು1894)-ಕಿಟ್ಟೆಲ್ ರೆವರೆಂಡ್.
10. ಇಂಡಿಯನ್ ಎಪಿಗ್ರಾಫಿಕಲ್ ಗ್ಲೊಸರಿ (ಕಲ್ಕತ್ತಾ1966)-ಸರ್ಕಾರ್ ಡಿ.ಸಿ.
11. ಕರ್ನಾಟಕ ದರ್ಶನ ದಿವಾಕರ್.ಆರ್. ಆರ್. ಬಾಂಬೆ 1955
12. ವಿಜಯನಗರ ಸಿಕ್ಸ್ಟ್ ಸೆಂಚುರಿ ಕಮೆಮೊರೇಷನ್ ವಾಲ್ಯೂಮ್
13. ಆರ್. ಜಿ. ಭಂಡಾರ್ಕರ್ ಸ್ಮರಣ ಸಂಚಿಕೆ ಪೂನಾ 1917
14. ಪ್ರೋ. ಕೆ. ಎ. ನೀಲಕಂಠಶಾಸ್ತ್ರಿ ಅಭಿನಂದನಾ ಸಂಪುಟ ಮದ್ರಾಸ್ 1971
15. ಕೆ.ವಿ. ರಂಗಸ್ವಾಮಿ ಐಯ್ಯಂಗಾರ್ ಸ್ಮರಣ ಸಂಚಿಕೆ, ಮದ್ರಾಸ್1940
16. ಪ್ರೋ. ಪಿ. ಬಿ. ದೇಸಾಯಿ ಅಭಿನಂದನಾ ಸಂಪುಟ, ಧಾರವಾಡ1971
17. ಪ್ರೋ. ಎಸ್. ಶ್ರೀಕಂಠಶಾಸ್ತ್ರಿ ಅಭಿನಂದನಾ ಸಂಪುಟ. ಮೈಸೂರು1973

ಐತಿಹಾಸಿಕ ನಿಯತಕಾಲಿಕೆಗಳು

1. ಆಫ್ ಇಯರ್ಲಿ ಜರ್ನಲ್ಸ್ ಆಫ್ ದಿ ಯೂನಿವರ್ಸಿಟಿ. ಮೈಸೂರು
2. ಇಂಡಿಯನ್ ಅಂಟಿಕ್ವರಿ, ಬಾಂಬೆ

3. ಇಂಡಿಯನ್ ಹಿಸ್ಟಾರೀಕಲ್ ಕ್ವರ್ಟರ್ಲೀ, ಕಲ್ಕತ್ತಾ

4. ಜರ್ನಲ್ ಆಫ್ ದಿ ಬಾಂಬೆ ಬ್ರಾಂಚ್ ಆಫ್ ದಿ ರಾಯಲ್ ಏಷಿಯಾಟಿಕ್ ಸೊಸೈಟಿ. ಬಾಂಬೆ

5. ಜರ್ನಲ್ ಆಫ್ ದಿ ಕರ್ನಾಟಕ ಯೂನಿವರ್ಸಿಟಿ, ಧಾರವಾಡ

6. ಕ್ವಾರ್ಟರ್ಲೀ ಜರ್ನಲ್ ಆಫ್ ದಿ ಮಿಥಿಕ್ ಸೊಸೈಟಿ ಬೆಂಗಳೂರು.

7. ಜರ್ನಲ್ ಆಫ್ ದಿ ರಾಯಲ್ ಏಷಿಯಾಟಿಕ್ ಸೊಸೈಟಿ ಆಫ್ ಗ್ರೇಟ್ ಬ್ರಿಟನ್ ಅಂಡ್ ಐರ್ಲೆಂಡ್. ಲಂಡನ್. ಕನ್ನಡ ಸ್ಟಡೀಸ್, ಮೈಸೂರು.

8. ಅನಾಲ್ಸ್ ಆಫ್ ಓರಿಯಂಟಲ್ ರೀಸರ್ಚ್, ಮದ್ರಾಸ್ ಯೂನಿವರ್ಸಿಟಿ

9. ಜರ್ನಲ್ ಆಫ್ ಅಂಧ್ರ ಹಿಸ್ಟಾರೀಕಲ್ ರೀಸರ್ಚ್ ಸೊಸೈಟಿ

10. ಜರ್ನಲ್ ಆಫ್ ಇಂಡಿಯನ್ ಹಿಸ್ಟರೀ, ಮದ್ರಾಸ್

11. ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆ, ಬೆಂಗಳೂರು

12. ಪ್ರಬುದ್ಧ ಕರ್ನಾಟಕ, ಮೈಸೂರು

13. ಇಂಡೋ ಏಷಿಯನ್ ಕಲ್ಚರ್, ನ್ಯೂಡೆಲ್ಲಿ

14. ದಿ ಇಂಡಿಯನ್ ಎಕನಾಮಿಕ್ ಅಂಡ್ ಸೋಷಿಯಲ್ ಹಿಸ್ಟರಿ, ರಿವ್ಯೂ, ನ್ಯೂಡೆಲ್ಲಿ

15. ದಿ ಕ್ವಾರ್ಟರ್ಲೀ ರಿವ್ಯೂ ಆಫ್ ಹಿಸ್ಟಾರೀಕಲ್ ಸ್ಟಡೀಸ್. ಕಲ್ಕತ್ತಾ

16. ಇಸ್ಲಾಮಿಕ್ ಕಲ್ಚರ್ ಇನ್ ಇಂಗ್ಲೀಷ್ ಕ್ವಾರ್ಟರ್ಲಿ, ಹೈದರಾಬಾದ್.

ಅನುಬಂಧ

ಅ.ಗೂ.	ಅರಕಲಗೂಡು
ಅ.ಕೆ.	ಅರಸೀಕೆರೆ
ಅ	ಆನೇಕಲ್
ಭಾ	ಭಾಗೇಪಲ್ಲಿ
ಬೇ	ಬೇಲೂರು
ಬೆಂ	ಬೆಂಗಳೂರು

ಚಿ.ಬ	ಚಿಕ್ಕಬಳ್ಳಾಪುರ
ಬೌ	ಬೌರಿಂಗ್ ಪೇಟೆ
ಚಿ	ಚಿತ್ರದುರ್ಗ
ಕೂ	ಕೂರ್ಗ್
ಚಾ.ರಾ.ನ	ಚಾಮರಾಜನಗರ
ಚಿ.ಮ.	ಚಿಕ್ಕಮಗಳೂರು
ಚ.ಕೆ.	ಚಳ್ಳಕೆರೆ
ಚ.ರಾ.ಪ.	ಚನ್ನರಾಯಪಟ್ಟಣ
ಚಿಂ	ಚಿಂತಾಮಣಿ
ಚಿ.ನಾ	ಚಿಕ್ಕನಾಯಕನ ಹಳ್ಳಿ
ಚೆ	ಚೆನ್ನಗಿರಿ
ದೊ.ಬ	ದೊಡ್ಡಬಳ್ಳಾಪುರ
ದೇ	ದೇವಗಿರಿ
ದಾ.ಗೆ	ದಾವಣಗೆರೆ
ಕಂ	ಕಂಕನಹಳ್ಳಿ
ಕೊ	ಕೊಪ್ಪ
ಮಾ	ಮಾಗಡಿ
ಮು.ಬಾ	ಮುಳಬಾಗಿಲು
ಮಂ	ಮಂಡ್ಯ
ಮ.ಗಿ	ಮದುಗಿರಿ
ಮೊ.ಗಿ	ಮೊದ್ದಗಿರಿ
ಮ.ಬಾ	ಮಂಜರಾಬಾದ್
ಮೊ.ಕಾ	ಮೊಣಕಾಲ್ಮೂರ್
ಮಾಲೂರು	ಮಾಲೂರು
ನಾ.ಮಂ	ನಾಗಮಂಗಲ
ನಂ	ನಂಜನಗೂಡು
ನೆ.ಮಂ	ನೆಲಮಂಗಲ
ನ	ನಗರ

ಪಾ	ಪಾವಗಡ
ಸಾ	ಸಾಗರ
ಶ್ರ.ಬೆ	ಶ್ರವಣ ಬೆಳಗೊಳ
ದೇ	ದೇವನಹಳ್ಳಿ
ಗು	ಗುಬ್ಬಿ
ಗೌ.ಬಿ	ಗೌರಿ ಬಿದನೂರು
ಗುಂ.ಪೇ	ಗುಂಡ್ಲುಪೇಟೆ
ಹೆ.ದೇ.ಕೊ	ಹೆಗ್ಗಡದೇವನ ಕೋಟೆ
ಹೊ.ಕೆ.	ಹೊಳಲ್ಕೆರೆ
ಹೊ	ಹೊನ್ನಾಳಿ
ಹಾ	ಹಾಸನ
ಹಿ	ಹಿರಿಯೂರು
ಹ	ಹನೂರು
ಹೊ.ಕೊ	ಹೊಸಕೋಟೆ
ಜ	ಜಗಳೂರು
ಕ	ಕಡೂರು
ಕ.ಗಾ	ಕನ್ನೇಗಾಲ
ಕೋ	ಕೋಲಾರ
ಕೃ.ರಾ.ನ	ಕೃಷ್ಣರಾಜನಗರ
ಶ್ರೀ.ನ	ಶ್ರೀನಗರ
ಶಿ	ಶಿರಾ
ಶ್ರೀ.ವಾ.ಪು	ಶ್ರೀನಿವಾಸಪುರ
ಸೊ	ಸೊರಬ
ಶಿ.ಘ	ಶಿಡ್ಲಘಟ್ಟ
ಶಿ.ಪು.	ಶಿಕಾರಿಪುರ
ಶ್ರೀ.ರಂ.ಪ	ಶ್ರೀರಂಗಪಟ್ಟಣ
ತ.ಕೆ.	ತರಿಕರೆ
ತೀ.ಹ	ತೀರ್ಥಹಳ್ಳಿ

ತು	ತುಮಕೂರು
ತಿ	ತಿಪಟೂರು
ಶಿ.ಪು	ಶಿಕಾರಿಪುರ
ಶಿ.ಮೊ	ಶಿವಮೊಗ್ಗ
ಮೈ	ಮೈಸೂರು
ಹು	ಹುಣಸೂರು
ಕು.ಗ	ಕುಣಿಗಲ್
ಶೃಂ	ಶೃಂಗೇರಿ
ಯ	ಯಳಂದೂರು

ಅನುಬಂಧ

ಎ.ಕ.	ಎಪಿಗ್ರಾಫಿಕ್ ಕರ್ನಾಟಕ
ಎ.ಇಂ.	ಎಪಿಗ್ರಾಫಿಕ್ ಇಂಡಿಕಾ
ಇ.ಆಂ.	ಇಂಡಿಯನ್ ಆಂಟಿಕ್ವಾರಿ, ಬಾಂಬೆ
ಇ.ಆಂ.ಪ್ರ	ಇನ್‌ಸ್ಕ್ರಿಪ್‌ಷನ್ ಆಫ್ ಆಂಧ್ರ ಪ್ರದೇಶ
ಕ.ಇ.	ಕರ್ನಾಟಕ ಇನ್‌ಸ್ಕ್ರಿಪ್‌ಷನ್ಸ್
ಎಂ.ಆ.ಆರ್	ಮೈಸೂರು ಆರ್ಕಿಯಾಲಾಜಿಕಲ್ ರಿಪೋರ್ಟ್
ಎಂ.ಇ.ಆರ್	ಮೈಸೂರು ಎಪಿಗ್ರಾಫಿಕಲ್ ರಿಪೋರ್ಟ್
ಎಸ್.ಐ.ಐ.	ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್
ತಿ.ತಿ.ಇ.	ತಿರುಮಲ ತಿರುಪತಿ ದೇವಸ್ಥಾನಂ ಇನ್‌ಸ್ಕ್ರಿಪ್‌ಷನ್
ತಿ.ತಿ.ಎ.ರಿ.	ತಿರುಪತಿ ತಿರುಮಲೆ ಎಪಿಗ್ರಾಫಿಕಲ್ ರಿಪೋರ್ಟ್
ಮ.ವಿ.	ಮಧುರ ವಿಜಯಂ
ಆ.ರಿ.ಸೌ.ಇಂ.ಎ	ಆನ್ಯುಯಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಪಿಗ್ರಾಫಿ
ಆ.ರಿ.ಇಂ.ಎ.	ಆನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಏಪಿಗ್ರಾಫಿ
ಆ.ಸ.ಇಂ	ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾ
ಫ.ಎಂ.	ಫರ್‌ಗಾಟನ್ ಎಂಪೈರ್
ಮೈ.ಗೆ	ಮೈಸೂರು ಗೆಜೆಟೀಯರ್
ಇ.ಆಂ.ಪ್ರ	ಇನ್‌ಸ್ಕ್ರಿಪ್‌ಷನ್ ಆಫ್ ಆಂಧ್ರಪ್ರದೇಶ

ಆ.ರಿ.ಮ.ಪ್ರ	ಆನ್ಯುಯಲ್ ರಿಪೋರ್ಟ್ ಆಫ್ ಮದ್ರಾಸ್ ಪ್ರೆಸಿಡೆನ್ಸಿ
ಮೆ.ಮ್ಯಾ	ಮೆಕೆಂಜೀಸ್ ಮ್ಯಾನುಸ್ಕ್ರಿಪ್ಟ್ಸ
ಇ.ಕ.	ಇಸ್ಲಾಮಿಕ್ ಕಲ್ಚರ್, ಹೈದರಾಬಾದ್
ಕ್ಯೂ.ಜೆ.ಎಂ.ಎಸ್	ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಬೆಂಗಳೂರು
ಹೆರಾಸ್.ಎ.ಡಿ.ವಿ.	ಹೆರಾಸ್ ಹೆಚ್. ಅರವೀಡು ಡೈನಾಸ್ಟಿ, ವಿಜಯನಗರ
ಎ.ಎಸ್.ಐ.ಎ.ಆರ್.ಡಿ.ಜೆ.	ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ, ಆನ್ಯುಯಲ್ ರಿಪೋರ್ಟ್ ಆಫ್ ಡೈರಕ್ಟರ್ ಜನರಲ್
ಕೃ.ರಾ.	ಕೃದಾಭಿರಾಮಮ್
ಹ.ವಿ.	ಹರಿವಿಲಾಸಂ
ಶಿ.ಮ.	ಶಿವರಾತ್ರಿ ಮಹಾತ್ಮಂ
ಪ.ಪ್ರ	ಪರ್ವತ ಪ್ರಕರಣಂ
ಸೊ.ಕು.ಚ	ಸೊಡಸಕುಮಾರಿ ಚರಿತಮು
ರು.ಚ.	ರುಕ್ಮಾಂಗಧ ಚರಿತಮು
ಭೊ.ರಾ.	ಭೋಜರಾಜಯಮು
ಕಾ.ಕಾಂ	ಕಾಶಿಕಾಂತಮು
ಪಾ.ವೀ.ಚ	ಪಾಲನತೀ ವೀರ ಚರಿತಮು
ಸಿಂ.ದ್ವ	ಸಿಂಹಾಸನದ್ವತ್ರಿಂಶಿಕ
ಶ್ರೀ.ಶ	ಶ್ರೀರಂಗ ಶಕುಂತಲಮು
ಕ.ಕ.ಚ	ಕರ್ನಾಟಕ ಕವಿ ಚರಿತ್ರೆ
ಅ.ಮೌ	ಅಮುಕ್ತಮೌಲ್ಯದ
ಬಾರ್ಬೋಸ	ದಿ ಬಕ್‌ಆಫ್ ಡೆಕ್ರಿಟ್, ಬಾರ್ಬೋಸ, ಟಾರ್ಡ್ ವಿತ್ ನೋಟ್ಸ್, ಎಕ್ಸ್‌ಟ್ರಾ ಬೈ ಲಾಂಗವರ್ತೆ ಡ್ಯಾಂಮ್ಸ್- 2 ಸಂಪುಟಗಳು
ಫರ್ದರ್‌ಸೋರ್ಸಸ್	ಫರ್ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ
ಸೋರ್ಸಸ್	ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ ಬೈ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ಇಲಿಯಟ್	ಇಲಿಯಟ್, ಹೆಚ್.ಎಂ. ಅಂಡ್ ಡಾಸನ್, ಜಾನ್ ದಿ ಹಿಸ್ಟರಿ ಆಫ್ ಇಂಡಿಯಾ ಅನ್ ಟೋಲ್ಡ್ ಬೈ ಇಟ್ಸ್ ಹಿಸ್ಟಾರಿಯನ್ಸ್ - 8 ಸಂಪುಟಗಳು, ಲಂಡನ್ 1867-77

ಮೇಜರ್ ಇಂಡಿಯಾ	ಮೇಜರ್ ಇಂಡಿಯಾ ಇನ್ ದಿ ಫಿಫ್ಟಿಯತ್ ಸೆಂಚುರಿ
ಇಬನ್‌ಬಟೂಟ	ದಿ ರಹ್ಲಾ ಆಫ್ ಇಬನ್‌ಬಟೂಟ
ತಿರುಮಲದೇವಿ	ಕೃಷ್ಣದೇವರಾಯನ ಹಿರಿಯರಾಣಿ, ಅವಳನ್ನು ತಿರುಮಲದೇವಿ, ತಿರುಮಲದೇವಿ ಅಮ್ಮವರು ಎಂದು ಗುರುತಿಸಲಾಗಿದೆ
ಚಿನ್ನಾದೇವಿ	ಕೃಷ್ಣದೇವರಾಯನ ಕಿರಿಯರಾಣಿ, ಅವಳನ್ನು ಚಿನ್ನಾದೇವಿ, ಚಿನ್ನಾದೇವಿ ಅಮ್ಮನವರು ಎಂದು ಗುರುತಿಸಲಾಗಿದೆ.
ವರದಾಜಿದೇವಿ	ಅಚ್ಚುತರಾಯನ ರಾಣಿ, ಅವಳನ್ನು ವರದಾಜಿದೇವಿ ಅಮ್ಮನ್, ವರದಾಂಬ, ವರದಾಂಬಿಕಾ, ವರದಾದೇವಿ ಅಮ್ಮನ್ ಎಂದು ಗುರುತಿಸಲಾಗಿದೆ